# ಮಿಥಿಲೆಯನ್ನಾಳಿದ ಕರ್ನಾಟರು




ಮೂಲ
**ಸಿ.ಪಿ.ಎನ್. ಸಿನ್ಹಾ**

ಕನ್ನಡಾನುವಾದ
**ಸದಾನಂದ ಕನವಳ್ಳಿ**

## ಪ್ರೊ. ಸಿ.ಪಿ.ಎನ್. ಸಿನ್ಹಾ

ಇವರು ಭಾಗಲಪುರ ವಿಶ್ವವಿದ್ಯಾಲಯದ ಮಹತ್ವದ ವ್ಯಕ್ತಿ. ಅವರು ಭಾಗಲಪುರ ವಿಶ್ವವಿದ್ಯಾಲಯದಲ್ಲಿ ನಾಲ್ಕು ದಶಕಗಳ ಕಾಲ (೧೯೫೮-೧೯೯೮) ಇತಿಹಾಸವನ್ನು ಬೋಧಿಸಿದ್ದಾರೆ. ಅನೇಕ ಸಂಶೋಧನ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿದ್ದಾರೆ. ಅನೇಕ ವರ್ಷ 'ಇಂಡಿಯನ್ ಹಿಸ್ಟರಿ ಕಾಂಗ್ರೆಸ್'ನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರೊ. ಸಿ.ಪಿ.ಎನ್.ಸಿನ್ಹಾ ೧೯೯೮ರಲ್ಲಿ ಇಂಡಿಯನ್ ಹಿಸ್ಟರಿ ಕಾಂಗ್ರೆಸ್‌ನ ಅಲಿಗಢ ಅಧಿವೇಶನದಲ್ಲಿ 'ಪ್ರಾಚೀನ ಭಾರತ' ಗೋಷ್ಠಿಯ ಅಧ್ಯಕ್ಷರಾಗಿದ್ದರು. ವಿಶ್ವವಿದ್ಯಾಲಯದ ನಾನಾ ಶೈಕ್ಷಣಿಕ ಮತ್ತು ಆಡಳಿತ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಪ್ರೊ. ಸಿ.ಪಿ.ಎನ್.ಸಿನ್ಹಾ ವಿಶ್ವವಿದ್ಯಾಲಯ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಹಲವಾರು ವರ್ಷ ಶಿಕ್ಷಕರ ಆಂದೋಲನದ ಮುಖವಾಣಿಯಾಗಿದ್ದರು.

ಪ್ರೊ. ಸಿನ್ಹಾ ಅನೇಕ ಸಂಶೋಧನಾತ್ಮಕ ಪ್ರಕಟಣೆಗಳನ್ನು ಹೊರತಂದಿದ್ದಾರೆ. ಬಿಹಾರದ ಪ್ರಥಮ ಮುಖ್ಯಮಂತ್ರಿ ಡಾ. ಶ್ರೀಕೃಷ್ಣ ಸಿನ್ಹಾ ಅವರ ಜೀವನ ಮತ್ತು ಕಾಲ ಕುರಿತು ಪುಸ್ತಕ ಪ್ರಕಟಿಸಿದ್ದಾರೆ. ಇಷ್ಟರಲ್ಲೇ ಹೊರಬರಲಿರುವ Bihar Since Independence ವನ್ನು ಪೂರ್ತಿಗೊಳಿಸುವ ಸನ್ನಾಹದಲ್ಲಿದ್ದಾರೆ.

ಪ್ರೊ. ಸಿ.ಪಿ.ಎನ್.ಸಿನ್ಹಾ ಪ್ರಸಕ್ತ ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಬದಲಾವಣೆಗಳ ಬಗೆಗೆ ನಿಗಾ ಇರಿಸಿಕೊಂಡಿರುವವರು. ೧೯೭೪-೭೫ರಲ್ಲಿ ಬಿಹಾರದಲ್ಲಿ ನಡೆದ ಜೆ.ಪಿ. ಆಂದೋಲನದೊಂದಿಗೆ ನಿಕಟ ಸಂಬಂಧವನ್ನು ಇವರು ಹೊಂದಿದ್ದರು.

## ಪ್ರೊ. ಸದಾನಂದ ಕನವಳ್ಳಿ

ಇವರು ಲಕ್ಷ್ಮೇಶ್ವರ ಕಾಲೇಜಿನ ಪ್ರಾಚಾರ್ಯರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾಗಿ ನಿವೃತ್ತಿ ಹೊಂದಿದ್ದಾರೆ. ಇಂಗ್ಲಿಷ್ ಪ್ರಾಧ್ಯಾಪಕರು. ಕನ್ನಡ ಅವರ ಪ್ರಥಮ ಪ್ರೀತಿ. ಸಾಹಿತ್ಯ, ಸಂಗೀತ, ಶಿಕ್ಷಣ, ಪರಿಸರ, ಕ್ರೀಡೆ ಅವರ ಆಸಕ್ತಿವಲಯಗಳು. ಇವರು ೩೧ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಜೀವನಚರಿತ್ರೆಗಳು, ಸಂಪಾದನೆಗಳು, ಅನುವಾದಗಳು ಸೇರಿವೆ. ಸಂಗೀತ ದಿಗ್ಗಜರಾದ ಸವಾಯಿ *ಗಂಧರ್ವ*, ಪಂಚಾಕ್ಷರಿ ಗವಾಯಿ, ಮಲ್ಲಿಕಾರ್ಜುನ ಮನಸೂರ, ಜಾನಪದ ಹಾಡುಗಾರ ಹುಕ್ಕೇರಿ ಬಾಳಪ್ಪ, ನಾಟಕ ದಿಗ್ಗಜರಾದ ಶಿರಹಟ್ಟಿ ವೆಂಕೋಬರಾವ ಮತ್ತು ಗುಬ್ಬಿ ವೀರಣ್ಣ ಅವರ ಜೀವನಚರಿತ್ರೆ ರಚಿಸಿದ್ದಾರೆ.

ಪ್ರೊ. ಸ.ಸ.ಮಾಳವಾಡ ಅಭಿನಂದನ ಗ್ರಂಥ *ವ್ಯಾಸಂಗ* ಮತ್ತು ಡಾ. ಎಂ.ಎಂ.ಕಲಬುರ್ಗಿ ಅಭಿನಂದನ ಗ್ರಂಥ *ಮಹಾಮಾರ್ಗ* ಸೇರಿದಂತೆ ನಾಲ್ಕು ಗ್ರಂಥಗಳನ್ನು ಸಂಪಾದಿಸಿದ್ದಾರೆ. ಸದಾನಂದ ಕನವಳ್ಳಿ ಅನುವಾದ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿದ್ದಾರೆ. ರಾಬರ್ಟ್ ಸೆವೆಲ್‌ರ A Forgotten Empire, ರೊಮಿಲಾ ಥಾಪರ ಅವರ India, Vol.1, ಮೋಹನ ನಾಡಕರ್ಣಿ ರಚಿಸಿದ Bhimsen Joshi, The Man and His Music ಹಾಗೂ ರೆವರೆಂಡ್ ಎಚ್. ಹೆರಸ್‌ರ The Beginnigs of Vijayanagara Empire, ಡಾ. ಷ.ಶೆಟ್ಟರ್ ಅವರ Inviting Death ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಷ. ಶೆಟ್ಟರ್ ಅವರ Sravanabelgola ವನ್ನು ಇಂಗ್ಲಿಷ್‌ನಿಂದ ಹಿಂದಿಗೆ, ಎಂ.ಎಂ. ಕಲಬುರ್ಗಿ ಅವರ 'ಕನ್ನಡ ನಾಮವಿಜ್ಞಾನ'ವನ್ನು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಇವರು ಪತ್ರಿಕೆಗಳಿಗೆ ೧೫೦ ಕ್ಕೂ ಮಿಕ್ಕಿ ಲೇಖನಗಳನ್ನು ಬರೆದಿದ್ದಾರೆ. ಕಲಾವಿಮರ್ಶೆಗಾಗಿ *ಕರ್ನಾಟಕ ಕಲಾ ತಿಲಕ* ಬಿರುದಿನೊಂದಿಗೆ ಕರ್ನಾಟಕ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯ ೧೯೯೧-೯೨ರ ಪ್ರಶಸ್ತಿ ಸದಾನಂದ ಕನವಳ್ಳಿ ಅವರಿಗೆ ಸಂದಿದೆ.

ಹೊರನಾಡ ಕನ್ನಡ ಸಂಸ್ಕೃತಿ ಮಾಲೆ - ೧

# ಮಿಥಿಲೆಯನ್ನಾಳಿದ ಕರ್ನಾಟರು

ಮೂಲ

ಸಿ.ಪಿ.ಎನ್.ಸಿನ್ಹಾ

ಕನ್ನಡಾನುವಾದ

ಸದಾನಂದ ಕನವಳ್ಳಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಚಾಮರಾಜಪೇಟೆ

ಬೆಂಗಳೂರು ೫೬೦ ೦೧೮

**MITHILEYANNALIDA KARNATARU**

**Original**
**Dr. C.P.N.Sinha**

**Translated**
**Prof. SADANANDA KANAVALLI**
Savi, Jaladarshinipura
Dharwad - 580 003

**Publiser**
**Administrative Officer**
Kannada Pustaka Pradhikara
(Kannada Book Authority)
Pampa Mahakavi Road
Chamarajpet, Bangalore - 560 018

© Reserved

First Print : 2002
Pages : xviii+180 Price : Rs. 100-00

**DTP**
Rachana Graphics, Hospet
Ph: 0839 - 420005

# ಅಕ್ಷರಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ ಇದು. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯ ವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದಿಂದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅನ್ವಯಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಾವು ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ಇದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನವು ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ! ಅನೇಕ ತಳವರ್ಗದ ಜನಸ್ತಾನಗಳು ಮೊದಲಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಇಂದು ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ - ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೦೦ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ನಮಗೆ ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನಕೌಶಲ್ಯ, ಜ್ಞಾನ ಸಂಪತ್ತನ್ನು - ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೊ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೊ ತಿಳಿಯುವ ಕ್ಲೈಬ್ಯದಲ್ಲಿ ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. 'ಹೊರನಾಡ ಕನ್ನಡ ಸಂಸ್ಕೃತಿ ಮಾಲೆ' ಈಚೆಗೆ ಪ್ರಾರಂಭಿಸಿರುವ ಹೊಸ ಮಾಲೆಯಾಗಿದೆ. ಬೇರೆಬೇರೆ ರಾಜ್ಯಗಳಲ್ಲಿ ಕನ್ನಡ ಸಂಸ್ಕೃತಿಯ ಮೂಲನೆಲೆಗಳ ವ್ಯಾಸಂಗ ಹಾಗೂ ಕನ್ನಡದ ಜತೆ ಅದು ಪಡೆದ ಸಂಬಂಧಗಳನ್ನು ಕುರಿತ ಮಹತ್ವದ

ಗ್ರಂಥಗಳು ಈ ಮಾಲೆಯಲ್ಲಿ ಪ್ರಕಟವಾಗುತ್ತವೆ. ಈ ಮೂಲಕ ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳಲು ಸಾಧ್ಯವಾಗುತ್ತದೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ!

ಪ್ರೊ. ಸಿ.ಪಿ.ಎನ್. ಸಿನ್ಹಾ ಅವರ Mithila under the Karnatas ಒಂದು ವಿಶಿಷ್ಟ ಕೃತಿಯಾಗಿದೆ. ಸಿ.ಪಿ.ಎನ್.ಸಿನ್ಹಾ ಅವರು ಭಾಗಲಪುರ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ರಾಗಿ ನಾಲ್ಕು ದಶಕಗಳ ಕಾಲ ಇತಿಹಾಸ ಬೋಧಿಸಿದ್ದಾರೆ. ಅವರು ಪ್ರಾಚೀನ ಇತಿಹಾಸ ಹಾಗೂ ಆಧುನಿಕ ಇತಿಹಾಸ ಎರಡನ್ನೂ ಬಲ್ಲವರು. ಅವರ ಕೃತಿಯನ್ನು ನಮ್ಮ ನಡುವಿನ ಚಿಂತನಶೀಲ ಅನುವಾದಕರಾದ ಪ್ರೊ. ಸದಾನಂದ ಕನವಳ್ಳಿಯವರು ಅನುವಾದಿಸಿದ್ದಾರೆ. ಅವರು ಅನುವಾದದಲ್ಲಿ ಹೆಸರು ಮಾಡಿದವರು. ಚಾರಿತ್ರಿಕ ವಿಷಯವನ್ನುಳ್ಳ ಈ ಬಗೆಯ ಅನುವಾದದಲ್ಲಿ ಅವರು ಸಿದ್ಧಹಸ್ತರೆನಿಸಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರವು ಬಹು ಹೆಮ್ಮೆಯಿಂದ ಈ ಇಬ್ಬರು ವಿದ್ವಾಂಸರನ್ನು ಅಭಿನಂದಿಸುತ್ತದೆ.

*ಮಿಥಿಲೆಯನ್ನಾಳಿದ ಕರ್ನಾಟರು* ಪುಸ್ತಕವು ಕ್ರಿ.ಶ. ೧೦೯೭ ಮತ್ತು ೧೩೭೫ರ ಮಧ್ಯೆ ಕರ್ನಾಟರು ಆಳಿದ ಮಿಥಿಲೆಯ ರಾಜಕೀಯ, ಆಡಳಿತಾತ್ಮಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಪ್ರಮುಖ ಲಕ್ಷಣಗಳಿಗೆ ಪ್ರಾಶಸ್ತ್ಯ ನೀಡುತ್ತದೆ. ಈ ಕಾಲಘಟ್ಟವು ಮಿಥಿಲೆಯ ಇತಿಹಾಸವನ್ನು ರೂಪಿಸಿತೆಂದು ಪರಿಗಣಿಸಲಾಗಿದೆ. ಏಕೆಂದರೆ, ತಮ್ಮ ಹಿಂದಿನ ಕಾಲಘಟ್ಟದ ಜನಕರಂತೆಯೆ ಕರ್ನಾಟರೂ ಮಿಥಿಲೆಯನ್ನು ಭಾರತದ, ವಿಶೇಷತಃ ಉತ್ತರ ಭಾರತದ ಭಿತ್ತಿಯ ಮೇಲೆ ತಂದವರು. ಇದು ಕರ್ನಾಟರನ್ನು ಕುರಿತು ಪ್ರತ್ಯೇಕವಾಗಿ ಬರೆದ ಪ್ರಥಮ ಗ್ರಂಥವಾಗಿದ್ದು ಆ ರಾಜವಂಶದ ಸರಿಸುಮಾರು ಎಲ್ಲ ಅಂಶಗಳನ್ನು ಸವಿವರವಾಗಿ ಈ ಕೃತಿಯು ಚಿತ್ರಿಸುತ್ತದೆ.

ಇದು ಮಿಥಿಲೆಯ ರಾಜವಂಶೀಯ ಇತಿಹಾಸದ ಪಥದರ್ಶಕ ಪ್ರಯತ್ನ. ಹಾಗಾಗಿ, ಅಗಾಧ ರಾಜಕೀಯ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಪ್ರದೇಶವನ್ನು ನೋಡುವ ಕಿಡಕಿಯಾಗಿದೆ. ಕನ್ನಡಿಗರೆಲ್ಲರೂ ಈ ಗ್ರಂಥವನ್ನು ಅಗತ್ಯವಾಗಿ ಓದಲೆಂದು ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಸಿದ್ಧಿಸಿದೆ. ಈ ಕೃತಿಯ ಅನುವಾದಕ್ಕೆ ಒಪ್ಪಿಗೆಕೊಟ್ಟ ಪ್ರೊ. ಸಿ.ಪಿ.ಎನ್.ಸಿನ್ಹಾ ಅವರಿಗೂ ಅತ್ಯಂತ ಕುಶಲತೆಯಿಂದ ಅನುವಾದಿಸಿದ ಪ್ರೊ. ಸದಾನಂದ ಕನವಳ್ಳಿ ಅವರಿಗೂ ಈ ಕೃತಿ ಪ್ರಾಧಿಕಾರದ ಮೂಲಕ ಪ್ರಕಟಗೊಳ್ಳಬೇಕೆಂದು ಸೂಚಿಸಿದ ಡಾ. ಎಂ.ಎಂ.ಕಲಬುರ್ಗಿ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಪ್ರಾಧಿಕಾರದ ಸದಸ್ಯ ಮಿತ್ರರು ನನ್ನೊಡನೆ ಇದ್ದಾರೆ. ಹೀಗಾಗಿ ಒಳ್ಳೆಯ ಪ್ರಕಟಣೆಗಳು ಬರಲು ಸಾಧ್ಯವಾಗಿದೆ. ಡಿ.ಟಿ.ಪಿ. ಮಾಡಿಕೊಟ್ಟ ಗೆಳೆಯರಿಗೂ ಮುದ್ರಿಸಿದ ಮಿತ್ರರಿಗೂ ವಂದನೆಗಳು ಸಲ್ಲುತ್ತವೆ. ನಾಡ ಜನ ಈ ಕೃತಿಯನ್ನು ಆದರದಿಂದ ಬರಮಾಡಿಕೊಳ್ಳುವರೆಂಬ ವಿಶ್ವಾಸ ನನ್ನದು.

□□

# ಮೊದಲ ಮಾತು

ಮಿಥಿಲೆಯು ಪುರಾಣ, ಹಾಡು, ಪರಂಪರೆ ಮತ್ತು ಇತಿಹಾಸಗಳಲ್ಲಿ ಹುದುಗಿದ ಪ್ರದೇಶ. ಆಧುನಿಕ ಔದ್ಯೋಗಿಕ ಜೀವನದ ಬಹಿರ್ಮುಖತೆ ಎಲ್ಲೆಲ್ಲೂ ಇದ್ದುದೇ. ಹೀಗಿದ್ದೂ, ಇತಿಹಾಸದ ಸಂವೇದನಶೀಲ ವಿಶ್ಲೇಷಕನು ಸದ್ಯದ ವಾಸ್ತವಿಕತೆಯ ಧೂಳನ್ನು ಒರೆಸಿ, ಜೀವನದ ಮೇಲ್ಪದರಿನ ಕೆಳಗೆ ನೋಡುತ್ತಾನೆ. ಮಿಥಿಲೆಯು ಪಾಂಡಿತ್ಯದ, ನಾಗರಿಕತೆಯ, ವೀರ ಸಂಪ್ರದಾಯ ಮತ್ತು ರಾಜಕೀಯ ಮುತ್ಸದ್ದಿತನಗಳ ಆಗರವಾಗಿತ್ತೆಂಬುದನ್ನು ಅದರ ಅಂಸಖ್ಯ ದಾಖಲೆ - ಅವಶೇಷ - ಶಾಸನ ಇತ್ಯಾದಿಗಳು ಮೂಡಿಸಿರುವ ಅಳಿಸಲಾಗದ ರೇಖೆಗಳು ಸಾರುತ್ತವೆ. ಒಂದು ಕಾಲದಲ್ಲಿ ಪ್ರೌಢ ಪಾಂಡಿತ್ಯ, ಕಾವ್ಯಮೀಮಾಂಸೆ, ಸಂಸ್ಕೃತಿ ಮತ್ತು ರಾಜಕೀಯ ವಿಚಾರಮಂಥನಗಳ ಸಮೃದ್ಧ ಬೆಳವಣಿಗೆಯನ್ನು ಕಂಡ ಮಿಥಿಲಾ ರಾಜ್ಯವು ಈಗ ದುರ್ದೆಸೆ ಮತ್ತು ನಿರ್ಲಕ್ಷ್ಯಕ್ಕೀಡಾಗಿರುವುದು ಇತಿಹಾಸದ ಚೋದ್ಯಗಳಲ್ಲೊಂದು. ಚಾಂದೇಶ್ವರ ಮತ್ತು ವಿದ್ಯಾಪತಿಯರ ಸಂಹಿತೆ ಮತ್ತು ಬರವಣಿಗೆಗಳು, ಕೌಟಿಲ್ಯನ ಅಮರಕೃತಿ ಅರ್ಥಶಾಸ್ತ್ರದ ಗಹನತೆ, ವ್ಯಾಪ್ತಿ ಮತ್ತು ಶ್ರೀಮಂತಿಕೆಗಳನ್ನು ಹೊಂದಿವೆ. ಹೀಗಿದ್ದೂ ಮಿಥಿಲೆಯ ಭವ್ಯ ಮುಖದ ಮೇಲೆ ದಟ್ಟವಾಗಿ ಮುಸುಕಿದ ಕಾಲದ ಜೇಡಬಲೆಯನ್ನು ಹರಿದೊಗೆಯುವ ಪ್ರಯತ್ನ ಅಲ್ಪಪ್ರಮಾಣದಲ್ಲಿ ಮಾತ್ರ ನಡೆದಿರುವುದು ದುರುದೃಷ್ಟಕರ.

ಕಾಲಕಾಲಕ್ಕೆ ಜರುಗಿದ ಇತಿಹಾಸದ ಸ್ಮರಣಾರ್ಹ ವಿಪ್ಲವಗಳು, ಹಲವು ರಾಜ್ಯ ಮತ್ತು ರಾಜರುಗಳಿಗೆ ಸಂಬಂಧಿಸಿದ ಮಹತ್ವದ ಘಟನೆಗಳು ಮಿಥಿಲೆಗೆ ಮೆರಗು ನೀಡಿವೆ. ಇಂಥ ಘಟನೆಗಳು ಮಿಥಿಲೆಯ ಸೋಲು ಗೆಲುವುಗಳ ಮೇಲೆ ಬೆಳಕು ಚೆಲ್ಲುವುದಲ್ಲದೆ ಮಿಥಿಲೆಯು ಇತರ ರಾಜ್ಯಗಳೊಂದಿಗೆ ಹೊಂದಿದ್ದ ಸಂಪರ್ಕವನ್ನೂ ಬೆಳಗಿಸುತ್ತವೆ. ಅಂದರೆ, ಮಿಥಿಲೆಯ ಇತಿಹಾಸವು ಭಾರತದ ಒಟ್ಟು ಇತಿಹಾಸದ ಅಂಗವಾಗಿದೆ. ರಾಷ್ಟ್ರೀಯ ಇತಿಹಾಸವೆಂದರೆ ರಾಷ್ಟ್ರದ ಅಂಗಗಳಾದ ಪ್ರದೇಶಗಳ ಸಂಯುಕ್ತ ಇತಿಹಾಸಗಳಲ್ಲದೆ ಬೇರೇನೂ ಅಲ್ಲ. ಭಾರತೀಯ ಸಂದರ್ಭದಲ್ಲಿ ಪ್ರಾದೇಶಿಕ ಇತಿಹಾಸಕ್ಕೆ ಹೆಚ್ಚಿನ ಮಹತ್ವವಿದೆ. ಏಕೆಂದರೆ ಭಾರತವು ಎಂದಿಗೂ ಸಂಸ್ಕೃತಿಗಳ, ಧರ್ಮಗಳ ಮತ್ತು ಭಾಷೆಗಳ ವೈವಿಧ್ಯತೆಯಿಂದ ಭರಿತವಾದ ಉಪಖಂಡವಾಗಿದೆ, ವಿಶಾಲ ಭೂಪ್ರದೇಶವಾಗಿದೆ. ಈ ವಿಶಾಲ ದೇಶದ

ಭೂರಾಶಿಯ ಪ್ರತಿಯೊಂದು ಘಟಕವು ತನ್ನದೇ ಆದ ಅನನ್ಯ ಸಂಸ್ಕೃತಿಯನ್ನು ಪೋಷಿಸಿದೆ. ಇಂಥ ಒಂದು ಘಟಕದ ಮೇಲೆ ಗಮನ ಕೇಂದ್ರೀಕರಿಸುವ ಮೂಲಕ ಸ್ಥಳೀಯ ಮಹತ್ವದ ಘಟಕವನ್ನೂ ಮೀರಿದ ಸಂಗತಿಗಳನ್ನು ಹೊರತೆಗೆಯಬಹುದು. ಪ್ರಪಂಚದ ಯಾವುದೇ ದೇಶಕ್ಕಿಂತ ಭಾರತದ ಪ್ರಾದೇಶಿಕ ಇತಿಹಾಸ ಬಹಳಷ್ಟು ಸಂಕೀರ್ಣವೂ ಕುತೂಹಲಕರವೂ ಆಗಿದೆ. ಏಕೆಂದರೆ, ಆಗಾಗ್ಗೆ ಇಲ್ಲಿಯ ಯಾವುದೊಂದು ಪ್ರದೇಶದ ಮೇಲೆ ಆದ ಕಾಲದ ವಿಚಿತ್ರ ಒತ್ತಡಗಳು ಅದಕ್ಕೆ ತನ್ನದೇ ಅನನ್ಯತೆಯನ್ನು ಒದಗಿಸಿವೆ. 'ವಿವಿಧತೆಯಲ್ಲಿ ಏಕತೆ' ಎಂಬ ಕಲ್ಪನೆ ಬೇರೇನೂ ಅಲ್ಲ, ಅದು ಒಂದು ಕಲೈಡೊಸ್ಕೋಪ್ (Kaleidoscope) ಆಗಿದೆ. ಭಾರತೀಯ ಇತಿಹಾಸವು ಸಾವಯವ ಅಸ್ತಿತ್ವಕ್ಕೂ ಮಿಗಿಲಾಗಿ ಕಲೈಡೊಸ್ಕೋಪ್ (ಕ್ಷಣಕ್ಷಣಕ್ಕೂ ಬದಲಾಗುವ ಘಟನಾವಳಿಗಳ ಚಿತ್ರದರ್ಶಕ) ವಂತಿದೆ. ಕಲೈಡೊಸ್ಕೋಪ್‌ನಲ್ಲಿ ಬಹುವಿಧ ಗಾಜಿನ ಚೂರುಗಳು ಸುಂದರ ವರ್ಣವಿನ್ಯಾಸದಂತೆ ಸಂಯೋಜನೆಗೊಳ್ಳುತ್ತವೆ. ಭಾರತ ಇತಿಹಾಸದ ಕಲೈಡೊಸ್ಕೋಪ್‌ನಲ್ಲಿ ಮಿಥಿಲೆಯು ಇಂಥ ಒಂದು ಗಾಜಿನ ಚೂರು.

ವೈಯಕ್ತಿಕ ಆಕರ್ಷಣೆ, ವಿಶೇಷತಃ ನನ್ನದೇ ಊರಿನ ಸ್ವರೂಪದ ವೈವಿಧ್ಯತೆ ನೀಡಿದ ಆಕರ್ಷಣೆಯು ಇಂಥ ವಸ್ತುವನ್ನು ನಾನು ಆಯ್ದುಕೊಳ್ಳುವಲ್ಲಿ ಪ್ರಧಾನ ಭೂಮಿಕೆ ವಹಿಸಿದೆ. ಅಲ್ಲದೆ, ಭಾರತದ ಪ್ರಾಚೀನ ಇತಿಹಾಸವು ಯಾವಾಗಲೂ ನನ್ನ ಮೇಲೆ ತಡೆಯಲಾಗದ ಪ್ರಭಾವ ಬೀರಿದೆ. ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ಬೇರೆ ಬೇರೆ ಮಗ್ಗಲುಗಳನ್ನು ಕುರಿತು ಪ್ರೊ. ರಾಮಶರಣ ಶರ್ಮಾ ನೀಡಿದ ಪ್ರಭಾವಪೂರ್ಣ ಹಾಗೂ ಉಜ್ವಲ ಭಾಷಣಗಳೂ ಮಿಥಿಲೆಯನ್ನು ಪುರಾತನ ಕಾಲದ ಅಸ್ಪಷ್ಟ ಪರಿಪ್ರೇಕ್ಷೆಯಲ್ಲಿಟ್ಟು ಅಧ್ಯಯನ ಮಾಡುವ ನನ್ನ ಇಚ್ಛೆಯನ್ನು ರೂಪಿಸಿವೆ.

ಇಂದಿನ ಅಸಂಖ್ಯ ರೂಢಿ ಸಂಪ್ರದಾಯಗಳ ಮತ್ತು ನಾನಾವಿಧ ಜಾತಿಪದ್ಧತಿಗಳ ಬೇರುಗಳನ್ನು ಅಗೆದು ನೋಡುವುದು, ತನ್ಮೂಲಕ ಅವುಗಳ ಬೀಜಗಳನ್ನು ಬಿತ್ತಿದ ಪುರಾತನ ಕಾಲದ ಒಂದು ಸಂದರ್ಭವನ್ನು ತಲುಪುವುದು ನಿಜಕ್ಕೂ ಉದ್ದೀಪನಕಾರಿ ಕಾರ್ಯವಾಗಿದೆ. ಕರ್ನಾಟರು ಮಿಥಿಲೆಯ ಜೀವನ ಮತ್ತು ವ್ಯವಸ್ಥೆಗಳನ್ನು ರೂಪಿಸುವಂಥ ಸಮರ್ಥ ಆಳರಸರಾಗಿದ್ದರು. ಶಕ್ತಿಶಾಲಿಗಳೂ ಕಲ್ಪನಾಶಕ್ತಿಯುಳ್ಳ ಮುತ್ಸದ್ದಿಗಳೂ ಆಗಿದ್ದ ಕರ್ನಾಟರು ಮಿಥಿಲೆಯ ಜನಪದ, ಸಂಪ್ರದಾಯಗಳು ಮತ್ತು ಪ್ರಾದೇಶಿಕ ಸ್ವರೂಪಗಳ ಮೇಲೆ ತಮ್ಮ ಮುದ್ರೆಯೊತ್ತಿರುವರು. ಕರ್ನಾಟರು ಈಗಿಲ್ಲ, ಆದರೆ ಈಶಾನ್ಯ ಭಾರತದ ಒಟ್ಟು ಪ್ರದೇಶಕ್ಕೆ ಅವರು ಹೊಯ್ದ ಎರಕ ಇಂದಿಗೂ ಉಳಿದಿದೆ. ಮಿಥಿಲೆಯ ಇತಿಹಾಸದ ಮಹತ್ವದ ಘಟನೆಗಳ ಈ ಕಾಲಘಟ್ಟವು ಅನೇಕ ಹೆಸರಾಂತ ಇತಿಹಾಸಕಾರರ ಗಮನ ಸೆಳೆದಿದೆ. ಅವರು ಅದನ್ನು ವಿವಿಧ ಕೋನಗಳಿಂದ ಪರಿಶೀಲಿಸಿರುವರು. ತತ್ಪರಿಣಾಮವಾಗಿ, ಅಗಾಧ ಮತ್ತು ಪರಿಣಾಮಕಾರಿ ವಿದ್ವತ್ತಿನ ರಾಶಿ ಲಭ್ಯವಿದೆ. ಆರಂಭಿಕ ಸ್ವರೂಪದವುಗಳಾದ ಈ ಮೊದಲಿನ ಅಧ್ಯಯನಗಳ ಮಹತ್ವವನ್ನು ಕಡೆಗಣಿಸದೆ ನಾನು ವಿನಮ್ರತೆಯಿಂದ ಹೇಳುವುದೇನೆಂದರೆ, ಈ ಸಂಶೋಧನೆಗಳು ಈ ನಾಡಿನ ಪ್ರಥಮ ಪರಿಚಿತ ಇತಿಹಾಸವಾದ ಕರ್ನಾಟರ ಚರಿತೆಯನ್ನು

ಸವಿವರವಾಗಿ ವರ್ಣಿಸಿರುವುದಿಲ್ಲ. ಮಿಥಿಲೆಯ ಇತಿಹಾಸ ಕುರಿತಂತೆ ಕೆಲವು ಪುಸ್ತಕಗಳು ಮತ್ತು ಪುಸ್ತಿಕೆಗಳು ಮಾತ್ರ ಹೊರಬಂದಿವೆ. ಎಸ್.ಎನ್.ಸಿಂಗ್ ರ *ಹಿಸ್ಟರಿ ಆಫ್ ತಿರಹತ್* ಕೇವಲ ಸಮೀಕ್ಷೆಯಾಗಿದೆ; ಉಪೇಂದ್ರ ಠಾಕುರರ *ಹಿಸ್ಟರಿ ಆಫ್ ಮಿಥಿಲಾ* ಸಮೃದ್ಧ ಮತ್ತು ಸಂಕೀರ್ಣ ಇತಿಹಾಸದ ಕೆಲವು ಅಂಶಗಳನ್ನಷ್ಟೆ ವಿವರಿಸುತ್ತದೆ; ಆರ್.ಕೆ.ಚೌಧರಿಯವರ *ಹಿಸ್ಟರಿ ಆಫ್ ಬಿಹಾರ್* ದಲ್ಲಿ ಪ್ರಾಥಮಿಕ ಪ್ರಸ್ತಾಪಗಳಷ್ಟೆ ಇವೆ ಮತ್ತು ಹಸನ ನಿಸತ ಅನ್ಸಾರಿ ಅವರ ಸಂಪ್ರಬಂಧವೂ ಬಿಹಾರದ ತುರ್ಕೊ - ಅಫಘಾನ ಕಾಲಘಟ್ಟದ ಇತಿಹಾಸಕ್ಕೆ ಮಾತ್ರ ಸಂಬಂಧಿಸಿದೆ.

ಇತಿಹಾಸದ ಕುತೂಹಲಿ ಅಭ್ಯಾಸಿಯೆದುರು ವಿಪುಲ ಸಾಮಗ್ರಿಯಿದ್ದೂ ಅದು ಕರ್ನಾಟರ ವ್ಯಾಪಕ, ಸುಸಂಗತ ವೃತ್ತಾಂತವನ್ನು ನೀಡುವುದಿಲ್ಲ. ಲಭ್ಯ ಸಂಶೋಧನೆಗಳು ಆ ವಿಷಯ ಕುರಿತು ಹಿಮಬಂಡೆಯ ತುದಿಯನ್ನು ಮಾತ್ರ ತೋರಿಸುತ್ತವೆ. ಹಾಗಾಗಿ, ಅಸ್ಪಷ್ಟ ಊಹಾಪೋಹಗಳ ಕರಿನೀರಿನಲ್ಲಿ ಮುಳುಗಿರುವ ಬೃಹದ್ರಾಶಿಯನ್ನು ಪರಿಶೋಧಿಸುವುದು ನನ್ನ ಹೊಣೆ ಮತ್ತು ಸಂತೋಷಗಳಾಗಿವೆ. ನಾಣ್ಯಾಧಾರಿತ ಮತ್ತು ಶಾಸನಾಧಾರಿತ ಪ್ರಮಾಣದ ಅಭಾವ ಸಾಕಷ್ಟು ಎದ್ದು ಕಾಣುತ್ತದೆ. ಆ ಅಭಾವವು ಪ್ರಸ್ತುತ ಕಾಲಘಟ್ಟದ ಕಾಲಾನುಕ್ರಮದ ಬಗೆಗೆ ಅಪೂರ್ಣ ಚಿಂತನೆಗೆ ಎಡೆಮಾಡಿದೆ. ಮೇಲಾಗಿ, ಡಿ.ಆರ್.ರೇಗ್ಮಿಯಂಥ ಪ್ರಖ್ಯಾತ ವಿದ್ವಾಂಸರ ಪರಿಷ್ಕೃತ ಅಭಿಪ್ರಾಯಗಳು ಮತ್ತು *ಹಿಸ್ಟರಿ ಆಫ್ ಮಿಡೀವಲ್ ನೇಪಾಲ್* ಪ್ರಸ್ತುತ ವಿಷಯದ ಕೂಲಂಕುಷ ಮೌಲ್ಯಮಾಪನವನ್ನು ಬಯಸುತ್ತವೆ. ಅಂತೆಯೆ, ಮಿಥಿಲೆಯ ಮಹತ್ವಪೂರ್ಣ ಘಟನಾವಳಿಗಳ ಆ ಕಾಲಘಟ್ಟದ ಇತಿಹಾಸವನ್ನು ಆಳವಾಗಿ ಪರಿಶೋಧಿಸುವ ಸೆಳೆತವು ನನ್ನಲ್ಲಿ ತಡೆಯಲಾಗದ ಪ್ರೇರಣೆಯನ್ನುಂಟು ಮಾಡಿತು. ಈ ಆಕರ್ಷಕ, ಪರಿಶ್ರಮಪೂರ್ಣ ಕೆಲಸಕ್ಕೆ ಮತ್ತು ಅಸ್ಪಷ್ಟ ಮತ್ತು ಅಪೂರ್ಣ ಸಂಶೋಧನಾ ಕ್ಷೇತ್ರಕ್ಕೆ ಸುಸಾಂಗತ್ಯ, ನಿಖರತೆ ಮತ್ತು ಪರಿಪೂರ್ಣತೆಗಳನ್ನು ಒದಗಿಸಬೇಕೆಂಬ ಆಕಾಂಕ್ಷೆ ನನ್ನನ್ನು ಉದ್ದಕ್ಕೂ ಕೈಹಿಡಿದು ನಡೆಸಿದೆ. ವಿಷಯ ಕುರಿತು ಲಭ್ಯವಿರುವ ವಿದ್ವದ್ರಾಶಿಯನ್ನು ನವೀಕರಿಸುವ ಮತ್ತು ಕ್ರಮಬದ್ಧಗೊಳಿಸುವ ಕಾಳಜಿಯನ್ನೂ ವಹಿಸಲಾಗಿದೆ. ನನ್ನ ಕೃತಿಯು ಅಧ್ಯಯನಕ್ಕೊಳಪಟ್ಟ ವಸ್ತುವಿನ ವ್ಯವಸ್ಥಿತ ವಿಶ್ಲೇಷಣೆ, ಚರ್ಚೆ ಮತ್ತು ವರ್ಗೀಕರಣವನ್ನು ಹತ್ತು ಅಧ್ಯಾಯಗಳಲ್ಲಿ ನೀಡುತ್ತದೆ. ಮೊದಲೆರಡು ಅಧ್ಯಾಯಗಳು ಸಾಮಾನ್ಯ ಸ್ವರೂಪದವು ಗಳಾಗಿವೆ. ಕಾರಣವೇನೆಂದರೆ, ಇವು ನಂತರದ ಅಧ್ಯಾಯಗಳಲ್ಲಿಯ ತೀವ್ರ ಚರ್ಚೆಗೆ ಪೀಠಿಕೆಯಾಗಿರುವುದಲ್ಲದೆ ಇವುಗಳಿಗಾಗಿ ನಾನು ಬಹುಮಟ್ಟಿಗೆ ಅಪ್ರಾಥಮಿಕ ಆಕರಗಳನ್ನು ಅವಲಂಬಿಸಬೇಕಾಗಿ ಬಂತು. ಮಿಕ್ಕ ಅಧ್ಯಾಯಗಳಲ್ಲಿ ಏನಾದರೂ ತಾರ್ಕಿಕತೆ ಮತ್ತು ಒಲವು ಇದ್ದರೆ ಅವು ನನ್ನ ವಿಶ್ಲೇಷಣೆ ಮತ್ತು ತೀರ್ಮಾನಗಳಿಂದ ಬಂದವುಗಳು. ಈ ಕ್ಷೇತ್ರದ ಪ್ರತಿಭಾವಂತ ಪೂರ್ವಸೂರಿಗಳೊಂದಿಗೆ ನಾನು ಮತಭೇದ ಹೊಂದುವ ಸಂದರ್ಭಗಳಿದ್ದವು. ಹಾಗಂತ, ಮತಭೇದಗಳು ಅವಶ್ಯಕವಾಗಿಯೆ ತೀರ್ಪುಗಳಲ್ಲ. ಇವುಗಳು ಉತ್ಕೃಷ್ಟತೆಯನ್ನು ತಿರಸ್ಕರಿಸುವುದೂ ಇಲ್ಲ, ನಿರ್ಧರಿಸುವುದೂ ಇಲ್ಲ. ಇತ್ತೀಚಿನ ಸಂಶೋಧನೆಗಳು ಒದಗಿಸಿದ ಲಭ್ಯ ದತ್ತಾಂಶಗಳ ಹೊಸ ವಿಶ್ಲೇಷಣೆಯಿಂದ ನನ್ನ ಅಭಿಪ್ರಾಯಭೇದಗಳು ಉದ್ಭವಿಸಿವೆ.

ಇವುಗಳನ್ನು ನನ್ನವೇ ನಿರ್ಣಯಗಳು ಮತ್ತು ಮೌಲ್ಯಮಾಪನವು ಪ್ರಭಾವಿಸಿವೆ. ಇಂಥ ರಾಜಕೀಯ ಇತಿಹಾಸ ಬರೆಯುವಲ್ಲಿ ಲಭ್ಯ ಮಾಹಿತಿಯನ್ನು ಮತ್ತು ಅಭಿಪ್ರಾಯಗಳನ್ನು ಬೇರ್ಪಡಿಸುತ್ತ, ವಿಶ್ಲೇಷಿಸುತ್ತ ಮತ್ತು ಅದನ್ನೆಲ್ಲ ಒಂದು ಹೊಸ ರೂಪಿಕೆಯಲ್ಲಿ ಮರುಹೊಂದಿಸುತ್ತ ಹುಷಾರಾಗಿ ಹೆಜ್ಜೆ ಇಡಬೇಕಾಗುತ್ತದೆ. ಕರ್ನಾಟರ ಒಟ್ಟು ಇತಿಹಾಸಕ್ಕೆ ಈಗ್ಲೂ ನಿಗೂಢತೆ ಮತ್ತು ಅನಿಶ್ಚಿತತೆಯ ತೆಳು ಪರದೆ ಇದ್ದೇ ಇದೆ. ನಿರ್ಧಾರಕ ಮಾಹಿತಿಮೂಲಗಳ ಕೊರತೆ, ಊಹಾಪೋಹದ ಯಾ ಅಪ್ರಾಥಮಿಕ ಆಕರಗಳಿಂದ ಹೆಕ್ಕಿದ ತೇದಿಗಳು, ಪರಿಚಿತ ಮತ್ತು ಸುಸ್ಥಾಪಿತ ಸಂಗತಿಗಳ ಅಭಾವಗಳು ಎಲ್ಲಿಲ್ಲದ ಮಹತ್ವದ, ಮಹತ್ವವಿಲ್ಲದ ಆಕರಗಳನ್ನು ಬಳಸಿಕೊಳ್ಳುವಂತೆ ಸಂಶೋಧಕನನ್ನು ನಿರ್ಬಂಧಿಸುತ್ತವೆ. ಮಾತ್ರವಲ್ಲ, ನಿಖರವಾದ ಮತ್ತು ಗ್ರಾಹ್ಯವಾದ ಚಿತ್ರವನ್ನು ಪ್ರಸ್ತುತಪಡಿಸಲು ತನ್ನ ಬುದ್ಧಿಸಾಮರ್ಥ್ಯಗಳನ್ನು ದುಡಿಸಿಕೊಳ್ಳುವಂತೆಯೂ ನಿರ್ಬಂಧಿಸುತ್ತವೆ. ಮಿಥಿಲೆಯ ಕರ್ನಾಟರ ಆಳ್ವಿಕೆಯು ಈಶಾನ್ಯ ಭಾರತದ ಇತಿಹಾಸದಲ್ಲೊಂದು ಹೆಗ್ಗುರುತು. ಈ ಅದ್ಭುತ ಕತೆಯನ್ನು ಸುಸಂಗತವಾಗಿ ಹೆಣೆಯುವುದೇ ನನ್ನ ಕರ್ತವ್ಯಭಾರವಾಗಿದೆ.

ಪ್ರಸ್ತುತ ಕೃತಿಯ ಪ್ರತಿ ಅಧ್ಯಾಯವು ಈ ಕ್ಷೇತ್ರದಲ್ಲಿ ನಾನು ಕಂಡಕೊಂಡ ತೀರ್ಮಾನಗಳ ಅಂಶವೊಂದನ್ನು ಗರ್ಭೀಕರಿಸಿಕೊಂಡಿದೆ. ೧ನೆಯ ಅಧ್ಯಾಯದಲ್ಲಿ ಮಿಥಿಲೆಯ ಹೆಸರು, ಭೂಗೋಲ ಮತ್ತು ಇತಿಹಾಸದ ಆಕರಗಳ ಪ್ರಾಥಮಿಕ ವೃತ್ತಾಂತವನ್ನು ನೀಡಲಾಗಿದೆ. ೨ನೆಯ ಅಧ್ಯಾಯವನ್ನು ಕ್ರಿ.ಶ. ೧೦೯೭ರ ವರೆಗಿನ ಇತಿಹಾಸದ ಸಮೀಕ್ಷೆಗೆ ಮೀಸಲಿಟ್ಟಿರುವೆ. ಕ್ರಿ.ಶ. ೧೦೯೭ ಕರ್ನಾಟರ ಆಗಮನವನ್ನು ಗುರುತಿಸುತ್ತದೆ. ನಾನ್ಯದೇವನು ಈ ಭವ್ಯ ವಂಶದ ಸಂಸ್ಥಾಪಕನಾಗಿದ್ದ. ೩ನೆಯ ಅಧ್ಯಾಯವು ವಿಷಯವನ್ನು ವಿಸ್ತರಿಸುತ್ತ ಕರ್ನಾಟರ ಮೂಲದ ಬಗೆಗೆ ಲಭ್ಯವಿರುವ ಪರಸ್ಪರ ವಿರುದ್ಧವಾಗಿರುವ ಸಾಮಗ್ರಿಯನ್ನು ಒಂದು ಆಕಾರಕ್ಕೊಳಪಡಿಸಲು ಮತ್ತು ವಿಶ್ವಾಸಾರ್ಹಗೊಳಿಸಲು ಪ್ರಯತ್ನಿಸುತ್ತದೆ. ಕರ್ನಾಟರ ಮೂಲದ ಬಗೆಗಿನ ವಿವಿಧ ವಾದಗಳಿಂದ ಸಂಭವನೀಯವಾಗಿ ತೋರುವ ಕಥಾನಕವನ್ನು ಸೋಸಿ ತೆಗೆಯುವುದೆ ಈ ಅಧ್ಯಾಯದ ಪ್ರಮುಖ ಕಾರ್ಯವಾಗಿದೆ.

೪ನೆಯ ಅಧ್ಯಾಯವನ್ನು ಕರ್ನಾಟ ರಾಜವಂಶದ ಸಂಸ್ಥಾಪಕನಾದ ನಾನ್ಯದೇವನ ಜೀವನ ಸಾಧನೆಗಳನ್ನು ಪಟ್ಟಿಮಾಡಿ ಮೌಲ್ಯಮಾಪನ ಮಾಡಲು ಪೂರ್ತಿಯಾಗಿ ಮೀಸಲಿಡಲಾಗಿದೆ. ಮುಂದಿನ ಅಧ್ಯಾಯವು ವಂಶಾವಳಿಯನ್ನು ಅನುಸರಿಸುತ್ತದೆ. ಹಾಗಾಗಿ, ಮಿಥಿಲೆಯ ಮರೆತು ಹೋದ ಅರಸ ಮಲ್ಲದೇವನ ಮತ್ತು ನಾನ್ಯದೇವನ ಪಾರಂಪರಿಕ ಉತ್ತರಾಧಿಕಾರಿಯಾದ ಗಂಗದೇವನ ಜೀವನ ಸಾಧನೆಗಳ ವಿಶ್ಲೇಷಣೆಯ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಈ ಅಧ್ಯಾಯವು ಗಂಗದೇವನ ನಿಜವಾದ ವ್ಯಕ್ತಿತ್ವವನ್ನು ಸ್ಥಾಪಿಸುತ್ತದೆ. ಮತ್ತು ತಿರಭುಕ್ತಿಯ ಗಂಗದೇವನೂ ಮಿಥಿಲೆಯ ಗಾಂಗೇಯದೇವನೂ ಇಬ್ಬರೂ ಒಂದೇ ಎಂದು ತೋರಿಸುತ್ತದೆ. ಅದೇ ವಂಶದ ಜಾಡು ಹಿಡಿದು ೬ನೆಯ ಅಧ್ಯಾಯವು ಅನುಕ್ರಮವಾಗಿ ಬಂದ ಕರ್ನಾಟ ಅರಸರಾದ ನರಸಿಂಹದೇವ, ರಾಮಸಿಂಹದೇವ ಮತ್ತು ಶಕ್ತಿಸಿಂಹದೇವರು ನಿರ್ಮಿಸಿದ ಮಿಥಿಲೆಯ ರಾಜಕೀಯ ಇತಿಹಾಸವನ್ನು ಪರಿಶೀಲಿಸುತ್ತದೆ. ಶಕ್ತಿಸಿಂಹದೇವನು ಸಕ್ರಸಿಂಹ

ದೇವನೆಂದೂ ಪ್ರಸಿದ್ಧನಾಗಿರುವುದರಿಂದ ಅವನ ನಂತರದ ಉತ್ತರಾಧಿಕಾರಿಗಳ ಪರಂಪರೆಯ ಸಮಸ್ಯೆ ಮಿಥಿಲೆಯ ಆಧುನಿಕ ಸಂಶೋಧಕನಿಗೆ ಗಂಭೀರ ಅಡ್ಡಿಯೊಡ್ಡುತ್ತದೆ. ಅಧ್ಯಾಯ ೭ ಮಿಥಿಲೆಯ ಕೊನೆಯ ಶ್ರೇಷ್ಠ ಅರಸನಾದ ಹರಿಸಿಂಹದೇವನ ಜೀವನ ಸಾಧನೆಗಳನ್ನು ಪ್ರತ್ಯೇಕವಾಗಿ ವಿವರಿಸುತ್ತದೆ. ಅದು ಕರ್ನಾಟ ದಿಗ್ಗಜರಲ್ಲಿ ಕೊನೆಯವನ ಸಂಗತಿಗಳ ಪುನರ್ವಕ್ತವ್ಯವಾಗಿರದೆ ಮೌಲ್ಯಮಾಪನವಾಗಿದೆ. ೮ನೆಯ ಅಧ್ಯಾಯವು ಕರ್ನಾಟ ಪ್ರಾಬಲ್ಯವನ್ನು ಅಂತಿಮವಾಗಿ ಕುಗ್ಗಿಸಿದ ಒತ್ತಡಗಳನ್ನು ಸೂಚಿಸುತ್ತದೆ. ಅರ್ಥಾತ್, ಅದು ಕ್ರಿ.ಶ. ೧೩೨೪ರ ವರೆಗೆ ಮಿಥಿಲಾ ಮತ್ತು ಬಿಹಾರಗಳಲ್ಲಿ ಮುಸ್ಲಿಮ ಅಧಿಕಾರ ಕ್ರಮೇಣ ವಿಸ್ತರಿಸಿದ ಮಾರ್ಗವನ್ನು ಗುರುತಿಸುತ್ತದೆ. ಮಿಥಿಲೆಯ ಇತಿಹಾಸದ ಈ ಘಟ್ಟದ ಬಗೆಗೆ ಲಭ್ಯವಿರುವ ಇಡಿ ಸಾಮಗ್ರಿರಾಶಿಯನ್ನು ನಾನು ಬಳಸಿಕೊಂಡಿರುವೆ. ೯ನೆಯ ಅಧ್ಯಾಯದಲ್ಲಿ ಕರ್ನಾಟ ವಂಶವು ಅವನತಿಯ ಜಾರುಬಂಡೆಯಲ್ಲಿ ಸರಿಯುವುದನ್ನು ಕಾಣುತ್ತೇವೆ. ಸಹಜವಾಗಿಯೆ, ಈ ವಿಷಯದ ಮೇಲೆ ಯಾವುದೇ ನಿರ್ಧಾರಕ ಅಭಿಪ್ರಾಯ ಅಪಾಯಕರ ವಾದುದು. ಏಕೆಂದರೆ, ಕರ್ನಾಟರಿಗೆ ಹಿಡಿದ ಗ್ರಹಣದ ಬಗೆಗಿನ ಚರ್ಚೆ ಇನ್ನೂ ಹೊಸ ವ್ಯಾಖ್ಯಾನಕ್ಕೆ ತೆರೆದುಕೊಂಡಿದ್ದು ಅಪೂರ್ಣವಾಗಿದೆ.

ಅಧ್ಯಾಯ ೧೦ ಕರ್ನಾಟರ ಅಧೀನದಲ್ಲಿದ್ದ ಮಿಥಿಲೆಯ ರಾಜ್ಯವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಸುದೀರ್ಘವಾಗಿ ವಿಶ್ಲೇಷಿಸುತ್ತದೆ. ವಿಶೇಷ ಒತ್ತು ಆಡಳಿತಾತ್ಮಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿಗಳ ಮೇಲಿದೆ. ಉಪಸಂಹಾರವು ಈ ವಿಷಯದ ಬಗೆಗೆ ಲಭ್ಯವಿರುವ ಮಾಹಿತಿ ಮತ್ತು ಸಂಶೋಧನೆಗಳ ವಿಪುಲತೆಯನ್ನು ಓದುಗನಿಗೆ ಸಂಕ್ಷಿಪ್ತವಾಗಿ ಪರಿಚಯಿಸುತ್ತ ಅದನ್ನು ಇತ್ತೀಚಿನ ನಿರ್ಣಯಗಳ ಹಿನ್ನೆಲೆಯಲ್ಲಿ ಮೌಲ್ಯಮಾಪನ ಮಾಡುತ್ತದೆ. ಮತ್ತು ಅಖೈರುತನದ ಅಹಂಕಾರದ ಧ್ವನಿಯನ್ನು ಅಂಗೀಕರಿಸುವ ಬದಲು ಈ ಕ್ಷೇತ್ರವು ಹೆಚ್ಚಿನ ಸಂಶೋಧನೆಗೆ ತೆರೆದಿದೆ ಎಂಬ ಸೂಚನೆಯೊಂದಿಗೆ ಮುಕ್ತಾಯಗೊಳ್ಳುತ್ತದೆ.

ಕೊನೆಯಲ್ಲಿ ನೀಡಿರುವ ಸಮಗ್ರ ಗ್ರಂಥಸೂಚಿ ಪ್ರತಿಯೊಂದು ಸಂಶೋಧನಕೃತಿಯ ವಾಡಿಕೆಯ ಏರ್ಪಾಡಿನ ಭಾಗವಾಗಿದ್ದರೂ ವಿಶೇಷ ಕಾಳಜಿಯಿಂದ ಸಿದ್ಧಪಡಿಸಲಾಗಿದೆ. ಅಭ್ಯಾಸಿ ಮತ್ತು ವಿದ್ವಾಂಸ ಇಬ್ಬರೂ ಅದರಲ್ಲಿ ಮಿಥಿಲೆಯ ಪ್ರಾಚೀನ ಮತ್ತು ಆದಿಮಧ್ಯಕಾಲೀನ ಮಾರ್ಗದುದ್ದಕ್ಕೂ ನಿಶ್ಚಿತ ಕೈಮರಗಳನ್ನು ಕಾಣಬಹುದು.

ನನ್ನ ಅಧ್ಯಯನಾವಧಿಯಲ್ಲಿ ನಾನು ಹಲವಾರು ಗ್ರಂಥಾಲಯಗಳಿಗೆ ಭೇಟ್ಟಿ ನೀಡಿದ್ದಿದೆ. ಅವುಗಳಲ್ಲಿ ಕಲಕತ್ತೆಯ ರಾಷ್ಟ್ರೀಯ ಗ್ರಂಥಾಲಯ, ನೇಪಾಳದ ಕಾಠಮಂಡುವಿನ ದರಬಾರ ಗ್ರಂಥಾಲಯಗಳನ್ನು ಹೆಸರಿಸಬೇಕು. ಎಲ್ಲ ನೆರವು ನೀಡಿದ ಈ ಗ್ರಂಥಾಲಯಗಳ ಸಿಬ್ಬಂದಿ ವರ್ಗಕ್ಕೆ ನಾನು ಋಣಿಯಾಗಿರುವೆ.

ಸಮಗ್ರ ಮಾರ್ಗದರ್ಶನ ಮತ್ತು ಸ್ಫೂರ್ತಿ ಸಿಗದೆಹೋಗಿದ್ದರೆ ನಾನು ಮಿಥಿಲೆಯ ಕರ್ನಾಟರ ಇತಿಹಾಸದ ವ್ಯವಸ್ಥಿತ ಅಧ್ಯಯನವನ್ನು ಕೈಗೆತ್ತಿಕೊಳ್ಳುವ ಸಾಹಸ ಮಾಡುತ್ತಿರಲಿಲ್ಲ. ಪ್ರಿನ್ಸಿಪಾಲ್ ಆರ್.ಕೆ.ಚೌಧರಿ ದಾರಿ ತೋರಿದರು ಮತ್ತು ಅನೇಕ ಸಲ

ಅಸ್ಪಷ್ಟ ಹಾಗೂ ಗೋಜಲಾದ ಮಾಹಿತಿಯ ದಟ್ಟ ರಾಶಿಯೊಳಗಿಂದ ನನ್ನ ಗುರಿಯತ್ತ ವಸ್ತುತಃ ನಡೆಸಿದರು. ನನಗೆ ಸಂಶೋಧನ ಕ್ಷೇತ್ರದ ದೀಕ್ಷೆ ನೀಡಿದ ಅವರಿಗೆ ನಾನು ಋಣಿ. ನನ್ನ ಅಧ್ಯಯನ ಮಾರ್ಗದಲ್ಲಿ ಬಿಕ್ಕಟ್ಟು ಎದುರಾದಾಗಲೆಲ್ಲ ಅವರು ಹೊಸ ದಾರಿಗಳನ್ನು ತೋರಿದರು ಮತ್ತು ನನ್ನ ಹೆಜ್ಜೆ ತಡವರಿಸಿದಾಗಲೆಲ್ಲ ಅವರ ಬಲಶಾಲಿ ಬಾಹುಗಳು ನನಗೆ ಆಸರೆಯಿತ್ತಿವೆ. ಅವರಿಗಾಗಿ ನನ್ನ ಕೃತಜ್ಞತೆ ಶಬ್ದಗಳನ್ನು ಮೀರಿದ್ದು.

ಭಾಗಲಪುರದ ಭಾಗಲಪುರ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ಪ್ರವಾಚಕರಾದ ತಾರಕೇಶ್ವರ ಸಿನ್ಹಾ ಅವರನ್ನು ನಾನು ಮರೆಯುವಂತಿಲ್ಲ. ಈ ಸಂಶೋಧನೆ ಕೈಗೆತ್ತಿಕೊಳ್ಳಲು ಪ್ರೇರೇಪಿಸಿದವರು ಅವರೇ. ಅವರಿಗೆ ನನ್ನ ಕೃತಜ್ಞತೆಗಳು.

ನನ್ನ ಮಿತ್ರರೂ ಭಾಗಲಪುರ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮಾಜಿ ಮುಖ್ಯಸ್ಥರೂ ಆದ ಪ್ರೊ. ಅಜಿತಕುಮಾರ ಮಿಶ್ರ ಅವರಿಗೆ ನನ್ನ ಕೃತಜ್ಞತೆಗಳು. ಅವರು ಹಸ್ತಪ್ರತಿಯನ್ನು ಪರಿಶೀಲಿಸುವ ತೊಂದರೆ ತೆಗೆದುಕೊಂಡು ಅನೇಕ ಸುಧಾರಣೆಗಳನ್ನು ಸೂಚಿಸಿರುವರು. ಈ ಮುಂದೆ ಕಾಣಿಸಿದವರೆಲ್ಲರಿಗೂ ನನ್ನ ಧನ್ಯವಾದಗಳು: ಡಾ. ಅಜಯ ಕುಮಾರ ಸಿಂಗ್, ಇತಿಹಾಸ ಪ್ರಾಧ್ಯಾಪಕರು, ಪಾಟ್ನಾ ವಿಶ್ವವಿದ್ಯಾಲಯ; ಡಾ. ವಿಜಯಕುಮಾರ ಠಾಕೂರ, ಪ್ರೊ. ವೈಸ್‌ಚಾನ್ಸಲರ್, ವಿ.ಕೆ.ಎಸ್ . ವಿಶ್ವವಿದ್ಯಾಲಯ, ಅರಾ; ನನ್ನ ತಮ್ಮ ಪ್ರೊ. ಆರ್.ಪಿ.ಎನ್.ಸಿನ್ಹಾ, ಅರ್ಥಶಾಸ್ತ್ರ ಪ್ರವಾಚಕರು, ಬಿ.ಎಂ.ಡಿ. ಕಾಲೇಜ, ದಯಾಲ ಪುರ (ವೈಶಾಲಿ) ; ನನ್ನ ಪುತ್ರರಾದ ಡಾ. ಅಜಯ ಸಿನ್ಹಾ, ಸುಜಯ ಸಿನ್ಹಾ, ಪುತ್ರಿಯರಾದ ಡಾ. ಮಧು ಸಿನ್ಹಾ ಮತ್ತು ಡಾ. ಶ್ವೇತಸ್ ಸಿನ್ಹಾ, ನನ್ನ ಅಳಿಯ ಡಾ. ಅರವಿಂದಕುಮಾರ, ಭೌತಶಾಸ್ತ್ರ ಪ್ರಾಧ್ಯಾಪಕರು, ಆರ್.ಎನ್. ಕಾಲೇಜ್, ಹಾಜಿಪುರ ಮತ್ತು ನನ್ನ ಮಗಳು ಡಾ. ಉಷಾ ಸಿನ್ಹಾ; ಡಾ. ಡಿ.ಎನ್. ರಾಯ್, ಇತಿಹಾಸ ವಿಭಾಗ, ಭಾಗಲಪುರ ವಿಶ್ವವಿದ್ಯಾಲಯ; ಡಾ. (ಶ್ರೀಮತಿ) ದೀಪಾ ಸಿನ್ಹಾ, ಮಹಿಳಾ ಕಾಲೇಜ, ಬೊಕಾರೊ ಇವರೆಲ್ಲ ಪ್ರಸ್ತುತ ಕೃತಿಯಲ್ಲಿ ವೈಯಕ್ತಿಕ ಆಸಕ್ತಿ ವಹಿಸಿದ್ದರು.

ಭಾಗಲಪುರ ವಿಶ್ವವಿದ್ಯಾಲಯದ ಉಪಕುಲಸಚಿವರಾಗಿದ್ದ ದಿವಂಗತ ಜಿ.ಬಿ. ಅಂಬಸ್ಥಾ ಅಚ್ಚುಪ್ರತಿ ಸಿದ್ಧಪಡಿಸಿದ್ದರು. ಅವರಿಗೆ ಕೃತಜ್ಞತೆಗಳು. ಪ್ರಸ್ತುತ ಪುಸ್ತಕವನ್ನು ಸಕಾಲದಲ್ಲಿ ಹೊರತಂದ ಪಾಟ್ನಾದ ಜಾನಕಿ ಪ್ರಕಾಶನದ ದಿವಂಗತ ಆರ್.ಬಿ.ಸಿಂಗ್ ಅವರಿಗೆ ಕೃತಜ್ಞತೆಗಳು. ಪ್ರೋತ್ಸಾಹ, ಸಹಕಾರ ಮತ್ತು ನೆರವು ನೀಡಿದ ಸಹೋದ್ಯೋಗಿಗಳಿಗೆ, ಮಿತ್ರರಿಗೆ ಮತ್ತು ಹಿತೈಷಿಗಳಿಗೆ ನನ್ನ ಕೃತಜ್ಞತೆಗಳು.

ನನ್ನ ಕೃತಿ Mithila under the Karnatas ವನ್ನು ಕನ್ನಡಕ್ಕೆ ಅನುವಾದಿಸಿದ ಪ್ರೊ. ಸದಾನಂದ ಕನವಳ್ಳಿ ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡಾನುವಾದ ವನ್ನು ಪ್ರಕಟಿಸಿದ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನನ್ನ ಕೃತಜ್ಞತೆಗಳು.

ವಿಜಯದಶಮಿ ೨೦೦೨ — ಸಿ.ಪಿ.ಎನ್. ಸಿನ್ಹಾ

ಜುರಾನ ಚಪ್ರಾ

ಮುಝಫ್ಫರಪುರ

# ಅನುವಾದಕನ ನುಡಿ

ಭಾಷಾಂತರ ಎರಡು ಭಾಷೆಗಳ ನಡುವಣ ವ್ಯವಹಾರ. ಅದೊಂದು ಭಾಷಾಂತರ. ವೇಷ ಬೇರೆ. ವ್ಯಕ್ತಿ ಅದೇ. ದೇಶಾಂತರವೆಂದರೂ ಸಂದೀತು. ಅನುವಾದ ಒಂದು ದೇಶದ ಸಂಸ್ಕೃತಿಯನ್ನು ಇನ್ನೊಂದು ದೇಶದವರಿಗೆ ಪರಿಚಯಿಸುವ ಕ್ರಿಯೆ. ಬಿ.ಎಂ.ಶ್ರೀ ಅವರು ಹೇಳಿದಂತೆ "ಆವಳ ತೊಡುಗೆ ಇವಳಿಗಿಟ್ಟು ನೋಡಬಯಸುವ" ಪ್ರಯತ್ನ.

ಭಾಷಾಂತರದ ಮೂಲಕ ಅನೇಕ ರೀತಿಯ ಜ್ಞಾನ ಹರಿದುಬರುತ್ತದೆ. "ನನ್ನ ಮನೆಯ ಕಿಡಕಿಗಳನ್ನೆಲ್ಲ ತೆರೆದಿಟ್ಟಿರುತ್ತೇನೆ" ಎಂದು ಗಾಂಧೀಜಿ ಹೇಳಿದ್ದರ ಆಶಯವೂ ಇದೇ. ಹೊಸ ಗಾಳಿ, ಹೊಸ ಬೆಳಕಿಗೆ ಭಾಷಾಂತರವೆ ಮಾಧ್ಯಮ.

ಅನುವಾದ ಕ್ಲಿಷ್ಟ, ಕಷ್ಟಕರ ಕೃಷಿ. ಮೂಲ ಕೃತಿಯ ಮರ್ಮವನ್ನು ಭೇದಿಸಿ ಇನ್ನೊಂದು ಭಾಷೆಯಲ್ಲಿ ಹೇಳಬೇಕು. ಅದೊಂದು ಪರಕಾಯಪ್ರವೇಶವೇ. ಪ್ರತಿಯೊಂದು ಭಾಷೆಗೂ ತನ್ನದೇ ಜಾಯಮಾನ, ಸೊಗಡು ಇರುತ್ತದೆ. ಅವುಗಳನ್ನು ಸಂಪೂರ್ಣವಾಗಿ ಭಟ್ಟಿ ಇಳಿಸುವುದು ಸಾಧುವಲ್ಲ.

ಮೂಲಕೃತಿಗೆ ಅನುವಾದ ನಿಷ್ಠವಾಗಿರಬೇಕಾದುದು ಅಗತ್ಯ. ಆದರೆ, ತೀರಾ ನಿಷ್ಠವಾಗಿದ್ದರೆ ಮಕ್ಕೀ ಕಾ ಮಕ್ಕೀ ಭಾಷಾಂತರವಾಗಿಬಿಡುವ ಅಪಾಯವಿದೆ. ನಿಷ್ಠೆ ಕಡಿಮೆಗೊಂಡರೆ ಅನುವಾದ ತೀರಾ ಸಡಿಲಗೊಂಡು ಭಾವಾನುವಾದ ಆಗಿಬಿಡುವ ಅಪಾಯವಿದೆ. ಹೀಗಾಗಿ, ಅನುವಾದ ಒಂದು ರೀತಿ ತಂತಿಯ ಮೇಲೆ ನಡೆದಂತೆ. ಭಾಷಾಂತರ ಸ್ತ್ರೀ ಇದ್ದಂತೆ, ಸುಂದರ ಇದ್ದರೆ ನಿಷ್ಠಳಿರುವುದಿಲ್ಲ, ನಿಷ್ಠಳಿದ್ದರೆ ಸುಂದರಳಿರುವುದಿಲ್ಲ ಎನ್ನುವ ವಿನೋದೋಕ್ತಿಯಿದೆ. ಒಳ್ಳೆಯ ಭಾಷಾಂತರ ಇವೆರಡರ ಸಮನ್ವಯ.

ಪ್ರಸ್ತುತ ಅನುವಾದ, *ಮಿಥಿಲೆಯನ್ನಾಳಿದ ಕರ್ನಾಟರು*, ಕರ್ನಾಟರ ಸಾಹಸಗಾಥೆ. ನೇಪಾಳ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳಗಳ ಮಧ್ಯೆ ಇರುವ ಮಿಥಿಲೆಯೆಲ್ಲಿ, ಕರ್ನಾಟಕವೆಲ್ಲಿ? ಅಷ್ಟು ದೂರದ ಮಿಥಿಲೆಯನ್ನು ಕರ್ನಾಟರು ಸುಮಾರು ೨೫೦ ವರ್ಷ ಆಳಿದುದು ಕನ್ನಡಿಗರಿಗೆ ಸ್ಫೂರ್ತಿದಾಯಕ ಸಂಗತಿ. ಕರ್ನಾಟ ಅರಸರು ಸಾಹಿತ್ಯ, ಸಂಗೀತ ಕಲೆಗಳ ಪೋಷಕರಾಗಿದ್ದುದು ಇನ್ನೂ ಹೆಮ್ಮೆಯ ಸಂಗತಿ. ಪ್ರೊ. ಸಿ.ಪಿ.ಎನ್.ಸಿನ್ಹಾ ಅವರ Mithila under the Karnatas ಕರ್ನಾಟರ ಹಿರಿಮೆ ಗರಿಮೆಗಳಿಗೆ ಕನ್ನಡಿ ಹಿಡಿಯುವ ಕೃತಿ.

ಅದನ್ನು ಭಾಷಾಂತರಿಸುವುದು ಸುಲಭದ ಕೆಲಸವೇನಲ್ಲ. ಆದರೆ, ಪರಿಶ್ರಮದಲ್ಲೂ ಆನಂದವಿದೆ.

ಅದನ್ನು ಅನುವಾದಿಸಲು ಒತ್ತಾಯಿಸಿದ ಡಾ. ಎಂ.ಎಂ.ಕಲಬುರ್ಗಿ ಅವರಿಗೆ, ಅನುಮತಿಸಿದ ಪ್ರೊ. ಸಿ.ಪಿ.ಎನ್.ಸಿನ್ಹಾ ಅವರಿಗೆ, ಪ್ರಕಟಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಧಾರವಾಡ

ದೀಪಾವಳಿ ೨೦೦೨ ಸದಾನಂದ ಕನವಳ್ಳಿ

# ಪರಿವಿಡಿ


| | | |
|---|---|---|
| | *ಅಕ್ಷರ ಸೂರ್ಯನಿಗೆ ನಮನ* | i - iii |
| | *ಮೊದಲ ಮಾತು* | iv - ix |
| | *ಅನುವಾದಕರ ನುಡಿ* | x - xi |
| ೧. | ಪೀಠಿಕೆ ಮತ್ತು ಆಕರಗಳು | ೧ - ೧೧ |
| ೨. | ಕ್ರಿ.ಶ. ೧೦೯೭ರ ವರೆಗಿನ ಮಿಥಿಲಾ ಇತಿಹಾಸದ ಸಂಕ್ಷಿಪ್ತ ಅವಲೋಕನ | ೧೨ - ೨೪ |
| ೩. | ಮಿಥಿಲೆಯ ಕರ್ನಾಟರ ಮೂಲ | ೨೫ - ೩೩ |
| ೪. | ನಾನ್ಯದೇವನ ಜೀವನ, ಸಾಧನೆ | ೩೪ - ೫೫ |
| ೫. | ನಾನ್ಯದೇವನ ಉತ್ತರಾಧಿಕಾರಿಗಳು | ೫೬ - ೬೨ |
| ೬. | ಮಿಥಿಲೆಯ ರಾಜಕೀಯ ಇತಿಹಾಸ | ೬೩ - ೮೨ |
| ೭. | ಹರಿಸಿಂಹದೇವನ ಜೀವನ, ಸಾಧನೆಗಳು | ೮೩ - ೯೮ |
| ೮. | ಕ್ರಿ.ಶ. ೧೩೨೫ರವರೆಗಿನ ಮಿಥಿಲೆಯಲ್ಲಿ ಮುಸ್ಲಿಮ ಪ್ರಭುತ್ವ ವಿಸ್ತರಣೆ | ೯೯ - ೧೨೨ |
| ೯. | ಕರ್ನಾಟರ ಅವನತಿ | ೧೨೩ - ೧೨೯ |
| ೧೦. | ಕರ್ನಾಟರ ಆಳ್ವಿಕೆಯಲ್ಲಿ ಮಿಥಿಲೆಯ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆ | ೧೩೦ - ೧೬೧ |
| | ಉಪಸಂಹಾರ | ೧೬೨ - ೧೬೪ |
| | *ಗ್ರಂಥಋಣ* | ೧೬೫ - ೧೭೦ |

# ಮಿಥಿಲೆಯನ್ನಾಳಿದ ಕರ್ನಾಟರು

# 1

# ಪೀಠಿಕೆ ಮತ್ತು ಆಕರಗಳು

ಒಂದು ಕಾಲಕ್ಕೆ ಮಿಥಿಲೆಯು ಉನ್ನತ ನಾಗರಿಕತೆಯಿಂದಾಗಿ, ಸಂಸ್ಕೃತಿ ಮತ್ತು ದರ್ಶನಗಳ ಕೇಂದ್ರವಾಗಿ ಪ್ರಖ್ಯಾತವಾಗಿದ್ದರೂ ಅದರ ಇತಿಹಾಸವು ಸರಿಯಾಗಿ ವಿದ್ವಾಂಸರ ಗಮನ ಸೆಳೆದಿಲ್ಲ. ಅಲ್ಲೊಂದಿಲ್ಲೊಂದು ಕೃತಿಗಳು ಮತ್ತು ಪ್ರಯತ್ನಗಳು ಕೇವಲ ಸಾಮಾನ್ಯ ಐತಿಹಾಸಿಕ ಸ್ವರೂಪದವುಗಳಾಗಿದ್ದು ಮಿಥಿಲೆಯ ಇತಿಹಾಸ ಮತ್ತು ಸಂಸ್ಕೃತಿಯ ಕೆಲವು ಅಂಶಗಳನ್ನಷ್ಟೇ ಪ್ರಸ್ತಾಪಿಸುತ್ತವೆ. ಹಸನ ನಿಸತ ಅನ್ಸಾರಿ ಅವರು ಪಾಟ್ನಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದ ಸಂಪ್ರಬಂಧ *ಬಿಹಾರ್ ಡ್ಯುರಿಂಗ್* ದ *ತುರ್ಕೋ-ಅಫಘಾನ್ ಪೀರಿಯಡ್* ಕೂಡ ಬರಿ ಸಾಮಾನ್ಯ ರೂಪ ರೇಷೆಯನ್ನು ನಿರೂಪಿಸುತ್ತದೆ. ಆದರಲ್ಲಿ ಮಿಥಿಲೆಯ ಇತಿಹಾಸಕ್ಕೆ ತಕ್ಕ ಪ್ರಮಾಣದ ಸ್ಥಳಾವಕಾಶ ನೀಡಲಾಗಿಲ್ಲ. ಆ ವಿಷಯ ಕುರಿತು ಮನಮೋಹನ ಚಕ್ರವರ್ತಿ, ಕೆ.ಪಿ. ಜಸವಾಲ, ಎಸ್.ಎನ್. ಸಿಂಗ್, ಆರ್.ಸಿ. ಮಜುಮದಾರ,

ಜಿ.ಎ.ಗ್ರಿಯರ್ಸನ್, ಪರಮೇಶ್ವರ ಝಾ, ರಾಸ ಬಿಹಾರಿ ದಾಸ್, ಆರ್.ಕೆ.ಚೌಧರಿ, ಯು.ಠಾಕೂರ ಮತ್ತು ಇತರರು ಮಾಡಿದ ಆರಂಭಿಕ ಪ್ರಯತ್ನಗಳು ನಿಜಕ್ಕೂ ಬೆಲೆಯುಳ್ಳ ಕೊಡುಗೆಗಳು. ಆದರೆ ಅವು ಒಂದೊಮ್ಮೆ ನಾಗರಿಕತೆ, ಪಾಂಡಿತ್ಯಗಳ ನೆಲೆಯಾಗಿದ್ದ ನಾಡಿನ ಸುಸಂಗತ ಹಾಗೂ ಸುಸಂಬದ್ಧ ಇತಿಹಾಸವನ್ನು ಕೊಡುವುದಿಲ್ಲ. ಆರ್.ಕೆ. ಚೌಧರಿ ಅವರ *ಹಿಸ್ಟರಿ ಆಫ್ ಬಿಹಾರ್* ಮತ್ತು ಆರ್.ಆರ್. ದಿವಾಕರ ಸಂಪಾದಿಸಿದ *ಬಿಹಾರ್ ಥ್ರೂ ದಿ ಏಜೆಸ್* ಮಿಥಿಲೆಯ ಇತಿಹಾಸದ ಸ್ಥೂಲರೂಪದ ನಿರೂಪಣೆ ಮಾತ್ರ ಒದಗಿಸುವವು. ಉಪೇಂದ್ರ ಠಾಕೂರರ *ಹಿಸ್ಟರಿ ಆಫ್ ಮಿಥಿಲಾ* (ಸು. ಕ್ರಿ.ಪೂ. ೨೦೦೦ ದಿಂದ ಕ್ರಿ.ಶ. ೧೫೫೬ರವರೆಗೆ) ಪಥದರ್ಶಕ ಕೃತಿಯಾಗಿದ್ದು ವೈಜ್ಞಾನಿಕ ರೀತಿಯಲ್ಲಿ ಮಿಥಿಲೆಯ ಇತಿಹಾಸವನ್ನು ನಿರೂಪಿಸುವ ಎರಡನೆಯ ವ್ಯವಸ್ಥಿತ ಪ್ರಯತ್ನವಾಗಿದೆ. ಎಸ್.ಎನ್.ಸಿಂಗ್ ರ *ಹಿಸ್ಟರಿ ಆಫ್ ತಿರ್ಹತ್* ಗೆ ಬಹುಮಟ್ಟಿಗೆ ವೈಜ್ಞಾನಿಕವಾದ ಪ್ರಥಮ ಪ್ರಬಂಧ ಎಂಬ ಶ್ರೇಯಸ್ಸು ಸಲ್ಲುತ್ತದೆ. ಅವರ ಕೃತಿಯುದ್ದಕ್ಕೂ ಪರಿಮಿತಿಗಳಿದ್ದರೂ ಬಿಹಾರದ ನಾಗರಿಕ ಸೇವೆಗೆ ಸೇರಿದ ವ್ಯಕ್ತಿಯ ಪ್ರಯತ್ನವೆಂದು ಅದು ಶ್ಲಾಘನೀಯವಾಗಿದೆ. ಯು.ಠಾಕೂರರ ಭಿತ್ತಿ ಎಷ್ಟು ವಿಶಾಲವಾಗಿದೆಯೆಂದರೆ ಸದಿಚ್ಛೆಯಿದ್ದಾಗ್ಯೂ ಆ ಲೇಖಕನಿಗೆ ಮಿಥಿಲೆಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿಯ ಸುಸಂಗತ ಚಿತ್ರ ನೀಡಲು ಸಾಧ್ಯವಾಗಿಲ್ಲ. ಆ ಕೃತಿಯಲ್ಲಿ ವಿವಿಧ ಅಧ್ಯಾಯಗಳಿಗೆ ನಿಗದಿಪಡಿಸಿರುವ ಪುಟಸಂಖ್ಯೆಗಳು ನನ್ನ ಮತಿತಾರ್ಥವನ್ನು ಮನವರಿಕೆ ಮಾಡಿಕೊಡುತ್ತವೆ. ಅವರಿಗೆ ಕ್ರಿ.ಪೂ. ೭೨೬ ಮತ್ತು ಕ್ರಿ.ಶ. ೧೦೯೭ರ ಕಾಲಘಟ್ಟದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ರೂಪುರೇಷೆಯ ರೀತಿಯಲ್ಲೂ ನಿರೂಪಿಸಲಾಗಿಲ್ಲ. ಕ್ರಿ.ಶ. ೧೦೯೭ ಮತ್ತು ೧೩೨೬ರ ಕಾಲಘಟ್ಟದ ಪ್ರಸ್ತುತ ಅಂಶಗಳನ್ನು ಸುಮಾರು ೪೫ ಪುಟಗಳಲ್ಲಿ ಚರ್ಚಿಸಲಾಗಿದೆ. ಅವರು ೪೫೦೦ ವರ್ಷಗಳ ಸುದೀರ್ಘ ಕಾಲಘಟ್ಟದ ಇತಿಹಾಸವನ್ನು ಸುಮಾರು ೪೫೦ ಪುಟಗಳಲ್ಲಿ ಹೇಳಬೇಕಾಗಿರುವುದರಿಂದ ಇಂಥ ತೊಂದರೆ ಸಹಜವಾದುದೇ. ಈ ಕಥನವು ಸಾಂಪ್ರದಾಯಿಕ ಮೂಲಗಳನ್ನು ಆಧರಿಸಿದೆ. ಕರ್ನಾಟರ ಆಳ್ವಿಕೆಯಲ್ಲಿ ಮಿಥಿಲೆಯ ಇತಿಹಾಸದ ಮಹತ್ವವನ್ನು ಅನುಲಕ್ಷಿಸಿ ನಾನು ಸು.ಕ್ರಿ.ಶ. ೧೦೯೭ ರಿಂದ ೧೩೨೫ ರವರೆಗಿನ ಸು.೨೨೮ ವರ್ಷಗಳ ಚಿಕ್ಕ ಕಾಲಘಟ್ಟವನ್ನು ಕೈಗೆತ್ತಿಕೊಂಡಿರುವೆ. ಮಿಥಿಲೆಯ ಕರ್ನಾಟರು ಈಶಾನ್ಯ ಭಾರತದ ಇತಿಹಾಸದಲ್ಲಿ ಸಾಕಷ್ಟು ಕಾಲದವರೆಗೆ ಮಹತ್ವದ ಪಾತ್ರ ವಹಿಸಿರುವರು. ಹಾಗಾಗಿ, ಅವರು ಬಂಗಾಲದ ಪಾಲರು ಮತ್ತು ಸೇನರು, ಕನೌಜದ ಗಹಡವಾಲರು ಮತ್ತು ಇತರರಂತೆಯೆ ಪ್ರತ್ಯೇಕ ಪ್ರಬಂಧದಲ್ಲಿ ನಿರೂಪಿಸಲು ಅರ್ಹರಾಗಿರುವರು. ಕರ್ನಾಟರು ಮಿಥಿಲೆಯನ್ನು ಒಂದು ಸ್ವತಂತ್ರ ರಾಜ್ಯವಾಗಿಸಿ ಭಾರತೀಯ ನಕ್ಷೆಯಲ್ಲಿ ತಂದರು. ಆದ್ದರಿಂದ, ಇತರ ಸಮಕಾಲೀನ ರಾಜವಂಶಗಳೊಂದಿಗೆ ಸರಿಸಮವಾಗಿ ನಿರೂಪಣೆಗೊಳ್ಳಲು ಅವರು ಅರ್ಹರು. ಈಶಾನ್ಯ ಭಾರತದ ರಾಜಕೀಯ ಕ್ಷಿತಿಜದಲ್ಲಿ ನಾನ್ಯದೇವನ ಉದಯ ಮತ್ತು ತದನಂತರ ಮಿಥಿಲೆಯಲ್ಲಿ ಕರ್ನಾಟ ರಾಜವಂಶದ ಸ್ಥಾಪನೆ ಒಂದು ಅಗಾಧ ಐತಿಹಾಸಿಕ ಮಹತ್ವದ

ಘಟನೆ. ರಾಜಕೀಯ ಮತ್ತು ಆಡಳಿತ, ಕಲೆ ಮತ್ತು ಪಾಂಡಿತ್ಯ, ಸಮಾಜ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಮತ್ತು ಇನ್ನಿತರ ಸಂಬಂಧಿತ ಶಾಖೆಗಳಲ್ಲಿ ಈ ರಾಜವಂಶದ ಸಾಧನೆಗಳು ಅತ್ಯಂತ ಮನೋಹರವಾಗಿದ್ದು ಸಂಶೋಧನ ದೃಷ್ಟಿಯಿಂದ ಮನಸ್ಸೆಳೆಯುತ್ತವೆ. ನಾನು ಪ್ರಸ್ತುತ ಅಧ್ಯಯನ ಕೈಗೆತ್ತಿಕೊಂಡಿರುವುದು ಈ ಉದ್ದೇಶದಿಂದ.

## ಮಿಥಿಲಾ : ನಾಡು, ನಾಮ

ಮಿಥಿಲೆಗೆ ವಿದೇಹ, ತಿರಭುಕ್ತಿ ಮತ್ತು ತಿರಹತ್ ಎಂತಲೂ ಹೆಸರಿವೆ. *ದಿ ಇಂಪೀರಿಯಲ್ ಗ್ಯಾಜೆಟಿಯರ್ ಆಫ್ ಇಂಡಿಯಾದ* (ಸಂಪುಟ ೮, ಪುಟ ೧೮೭) ಪ್ರಕಾರ "೨೫° ೨೮' ಮತ್ತು ೨೬° ೫೨' ಉತ್ತರ ಅಕ್ಷಾಂಶಗಳ ಮಧ್ಯೆ, ಹಾಗೂ ೮೪° ೫೬' ಮತ್ತು ೮೬° ೪೬' ಪೂರ್ವ ರೇಖಾಂಶಗಳ ಮಧ್ಯೆ ಇರುವ ಪ್ರದೇಶಕ್ಕೆ ಮಿಥಿಲಾ ಎಂದು ಹೆಸರಿದೆ. ಮಿಥಿಲೆಯು ಉತ್ತರದಲ್ಲಿ ಹಿಮಾಲಯದಿಂದ, ದಕ್ಷಿಣದಲ್ಲಿ ಗಂಗಾ ನದಿಯಿಂದ, ಪಶ್ಚಿಮದಲ್ಲಿ ಗಂಡಕಿ ನದಿಯಿಂದ ಮತ್ತು ಪೂರ್ವದಲ್ಲಿ ಕೋಸಿ ನದಿಯಿಂದ ಬಂಧಿತವಾಗಿದೆ. *ಶಕ್ತಿಸಂಗಮತಂತ್ರದ* ಪ್ರಕಾರ, ವಿದೇಹ ಅಥವಾ ತಿರಭುಕ್ತಿಯು ಗಂಡಕಿಯ ತೀರಗಳಿಂದ ಚಂಪಾರಣ್ಯದ ವರೆಗೆ ಹಬ್ಬಿತ್ತು. ಡಿ.ಸಿ.ಸರ್ಕಾರರ ಅಭಿಪ್ರಾಯದಲ್ಲಿ, ಗಂಡಕಿತೀರವು ದಕ್ಷಿಣ ಮೇರೆಯಾಗಿದ್ದರೆ ಆಧುನಿಕ ಚಂಪಾರಣ ಜಿಲ್ಲೆ ತಿರಹತ್‌ನ ಉತ್ತರ ಮೇರೆಯಾಗಿತ್ತು. ವಿದೇಹ ಮತ್ತು ತಿರಹತ್ ಹೆಸರಿನ ಮೂಲವು ಶುದ್ಧ ಪೌರಾಣಿಕವಾಗಿದೆ. *ವಿಷ್ಣುಪುರಾಣವು* ಮಿಥಿಲೆಯ ಮೂಲದ ಬಗೆಗಿನ ಈ ಮುಂದಿನ ವಿವರವನ್ನು ನೀಡುತ್ತದೆ: ಇಕ್ಷ್ವಾಕುವಿನ ಮಗ ನಿಮಿ ಒಂದು ಯಜ್ಞವನ್ನು ಹೂಡಿ ಅದರ ಅಧ್ವರ್ಯನಾಗಲು ವಶಿಷ್ಠನನ್ನು ಕೇಳಿಕೊಂಡ. ಈಗಾಗಲೆ ಇಂದ್ರದೇವನ ಯಜ್ಞಕ್ಕೆ ತನ್ನನ್ನು ಕರೆದಾಗಿದೆಯೆಂದು ವಶಿಷ್ಠ ಉತ್ತರಿಸಿದ. ನಿಮಿ ಮರುಮಾತಾಡಲಿಲ್ಲ. ನಿಮಿ ಒಪ್ಪಿರುವನೆಂದು ಭಾವಿಸಿ ವಶಿಷ್ಠ ಹೊರಟುಹೋದ. ನಿಮಿಯು ಗೋತಮನನ್ನೂ ಇತರ ಋಷಿಗಳನ್ನೂ ತೊಡಗಿಸಿ ಯಜ್ಞವನ್ನಾರಂಭಿಸಿದ. ವಶಿಷ್ಠನು ತ್ವರೆಮಾಡಿ ನಿಮಿಯಲ್ಲಿಗೆ ಬಂದ. ಗೋತಮ ಮತ್ತು ಇತರ ಋಷಿಗಳನ್ನು ತೊಡಗಿಸಿದ್ದನ್ನು ಕಂಡು ಇನ್ನು ಮುಂದೆ ದೈಹಿಕ ರೂಪದಲ್ಲಿರಬಾರದಂತೆ ನಿಮಿಗೆ ಶಾಪ ಕೊಟ್ಟ. ಪ್ರತಿಯಾಗಿ, ನಿಮಿಯೂ ವಶಿಷ್ಠನಿಗೆ ಶಾಪ ಕೊಟ್ಟ. ಹಾಗಾಗಿ, ಇಬ್ಬರೂ ಮಾನವದೇಹ ತ್ಯಜಿಸಿದರು. ನಿಮಿಯ ಮರಣಾನಂತರ ಋಷಿಗಳು ಅವನ ದೇಹವನ್ನು ಅಲ್ಲಾಡಿಸಲಾಗಿ ಒಬ್ಬ ಬಾಲಕ ಹೊರಬಂದ. ಅವನನ್ನು ಮಿಥಿ - ಮಂಥನದಿಂದ ಹುಟ್ಟಿದವ -ಎಂದು ಕರೆದರು.

ಮಿಥಿ ತನ್ನ ತಂದೆಯ ನಂತರ ರಾಜ್ಯವಾಳಿದನು ಮತ್ತು ಅವನ ರಾಜ್ಯಕ್ಕೆ ಮಿಥಿಲಾ ಎಂದು ಹೆಸರು ಬಂತು. ಮಿಥಿಯು ಸ್ವಯಂಭು ಆಗಿದ್ದರಿಂದ ಅವನ ಉತ್ತರಾಧಿಕಾರಿಗಳನ್ನೂ ಜನಕ (ತನ್ನಿಂದ ತಾನೇ ಹುಟ್ಟಿದವ) ಎಂದು ಕರೆಯಲಾಯಿತು. *ಬೃಹದ್ ವಿಷ್ಣುಪುರಾಣ*ನ ಮಿಥಿಲಾಕಾಂಡದನ್ವಯ, 'ವಿದೇಹ' ಎಂದರೆ 'ಯಾವನು ದೇಹವಿಲ್ಲದಾಗಿರುವನೋ ಅವನು.' ಪಾಣಿನಿಯ ಅಭಿಪ್ರಾಯದಲ್ಲಿ, 'ಮಿಥಿಲಾ' ಎಂದರೆ 'ವೈರಿಗಳನ್ನು ಸದೆಬಡಿದ ನಗರ.' ಸರಸ್ವತಿ ನದೀತೀರದಿಂದ ಬಂದ ಅರಸನಾದ ವಿದೇಘ ಮಾಥವನಿಂದ ನಾಡಿಗೆ ಈ

ಹೆಸರು ಬಂದಿದೆಯೆಂದು ಹೇಳಲಾಗುತ್ತಿದೆ. *ಶತಪಥಬ್ರಾಹ್ಮಣ*ದ ಪ್ರಕಾರ, ಅಗ್ನಿವೈಶ್ವಾನರನು ಸರಸ್ವತಿ ನದಿಯಿಂದ ಭೂಮಿಯನ್ನು ಸುಡುತ್ತ - ಅವನನ್ನು ಮಾಧವ ಮತ್ತು ಪುರೋಹಿತನಾದ ಗೋತಮ ರಾಹುಗಣ ಹಿಂಬಾಲಿಸಿದರು - ಸದಾನೀರ (ಗಂಡಕ) ನದಿಯವರೆಗೆ ಸಾಗಿದ. ಆ ಕಾಲಕ್ಕೆ ಪೂರ್ವಕ್ಕಿದ್ದ ಭೂಮಿ ಜವುಗು ಮತ್ತು ಸಾಗುವಳಿಗೆ ಅಯೋಗ್ಯವಾಗಿತ್ತು. ಮಾಧವನ ಆಗಮನಾನಂತರ ಅಗ್ನಿದೇವತೆಯ ಸಹಾಯದಿಂದ ಅದನ್ನು ಸಾಗುವಳಿಗೆ ಯೋಗ್ಯಗೊಳಿಸಲಾಯಿತು. ಮಿಥಿಲಾ ಎಂಬ ಹೆಸರೂ ಸೇರಿದಂತೆ ವಿದೇಹಕ್ಕೆ ತಿರಭುಕ್ತಿ, ತಪೋಭೂಮಿ, ಶಾಂಭವಿ, ಸುವರ್ಣಕಣನ, ಮಂತಿಲಿ, ವೈಜಯಂತಿ, ಜನಕಪುರ ಎಂದೂ ಕರೆಯಲಾಗುತ್ತಿದೆ. ಮಿಥಿಲೆಗೆ ೧೨ ರಷ್ಟು ಹೆಸರುಗಳಿದ್ದವು.[1] ಮಿಥಿಲಾವು ವಿದೇಹದ ಅತಿ ಮಹತ್ವದ ಹೆಸರುಗಳಲ್ಲೊಂದು ಎಂದು ಪ್ರಾಕೃತ ಸಾಹಿತ್ಯ ವರ್ಣಿಸುತ್ತದೆ. ತಿರಭುಕ್ತಿಯು ಮಿಥಿಲೆಗೆ ತರುವಾಯದಲ್ಲಿ ಬಂದ ಹೆಸರು. ಅದನ್ನು ಪುರುಷೋತ್ತಮದೇವನ (ಸು.ಕ್ರಿ.ಶ. ೧೨ನೆಯ ಶತಮಾನ) *ತ್ರಿಖಂಡ ಶೇಷ*ದಲ್ಲಿ ಉಲ್ಲೇಖಿಸಲಾಗಿದೆ. ಅದನ್ನು ಮೂರು ದೊಡ್ಡ ನದಿಗಳ - ಗಂಗಾ, ಗಂಡಕಿ, ಕೋಸಿ - ತೀರದಗುಂಟ ನೆಲೆಸಿದ ಊರೆಂದು ವರ್ಣಿಸಲಾಗಿದೆ.

'ತೀರ' (ದಂಡೆ) ಮತ್ತು 'ಭುಕ್ತಿ' (ಪ್ರಾಂತ, ಪ್ರದೇಶ) ಎಂಬೆರಡು ಪದಗಳು ಸೇರಿ 'ತಿರಭುಕ್ತಿ' ಆಗಿದೆಯೆಂದು ಹೇಳಲಾಗುತ್ತದೆ. ಕನಿಂಗ್ಹಮ್‌ನ ಪ್ರಕಾರ, ತಿರಭುಕ್ತಿಯು ಚಿಕ್ಕ ಗಂಡಕ ಮತ್ತು ಬಾಗಮತಿ ನದಿಗಳ ಕೊಳ್ಳದಲ್ಲಿ ನೆಲೆಸಿತ್ತು. ವೈಶಾಲಿ ಉತ್ಖನನ (ಉತ್ಖನನ)ಗಳಿಂದ ಅನೇಕ ಮೊಹರುಗಳು ದೊರಕಿದವು. ಅದರಿಂದಾಗಿ, 'ತೀರ'ದ ಅಸ್ತಿತ್ವ ಬೆಳಕಿಗೆ ಬಂತು. ಈ 'ತೀರ'ವೆ 'ತೀರಭುಕ್ತಿ' ಎಂಬ ಹೆಸರನ್ನು ವ್ಯುತ್ಪತ್ತಿಸಿದ ತಾಣವಾಗಿರುವ ಸಾಧ್ಯತೆಯುಂಟು. 'ತೀರಭುಕ್ತೌ ವೈಶಾಲಿತರ' ಶಾಸನ ಮತ್ತು ಎರಡು ತಾಡೋಲೆಗಳ ಮೇಲಿರುವ ಚಿಕಣ ಚಿತ್ರಗಳು ಖಚಿತಪಡಿಸುವುದೇನೆಂದರೆ, ಕ್ರಿ.ಶ. ೧೨ನೆಯ ಶತಮಾನದಷ್ಟೊತ್ತಿಗೆ ಆ ಪ್ರದೇಶವನ್ನು ತೀರಭುಕ್ತಿ ಎಂಬ ಹೆಸರಿನಿಂದ ಗುರುತಿಸಲಾಗಿತ್ತು. ವಾಮನನು ತನ್ನ *ಲಿಂಗಾನುಶಾಸನ*ದಲ್ಲಿ ತೀರಭುಕ್ತಿಯನ್ನು ಹೆಸರಿಸಿದ್ದಾನೆ. ಅದನ್ನಾಧರಿಸಿ ತೀರಭುಕ್ತಿ ೮ನೆಯ ಶತಮಾನದಷ್ಟೊತ್ತಿಗೆ ಪ್ರಖ್ಯಾತವಾಗಿತ್ತೆಂದು ಹೇಳಬಹುದು. ಮಿಥಿಲಾ ಐತಿಹ್ಯ ದನ್ವಯ, 'ತೀರಭುಕ್ತಿ' ಎಂದರೆ ಮೂರು ಮಹಾಯಜ್ಞಗಳ ಹೋಮಗಳನ್ನು ನೆರವೇರಿಸಿದ ನಾಡು: (೧) ಸೀತಾಮರ್ಹಿ ಅಥವಾ ಸಮೀಪದಲ್ಲಿ ಸೀತೆಯ ಜನನ, (೨) ಹಿಮಾಲಯದಡಿಯಲ್ಲಿರುವ ಧಾಣುಖದಲ್ಲಿಯ ದಿವ್ಯ ಶಿವಧನುಸ್ಸನ್ನು ರಾಮನು ಮುರಿದ, (೩) ಸೀತಾ ಸ್ವಯಂವರದ ಸಂದರ್ಭ. ಹೀಗೆ, ಅದು 'ತ್ರಿಭುಕ್ತಿ' ಎಂದು ಕರೆಯಲ್ಪಟ್ಟಿತು. ಕಾಲಕ್ರಮೇಣ ಅದು 'ತಿರಭುಕ್ತಿ' ಎಂದಾಯಿತು.

ಆಧುನಿಕ 'ತಿರಹತ್' ಕೂಡ 'ತ್ರಿಹುತಮ'ದ - ಮೂರು ಯಜ್ಞಗಳ ನಾಡು - ಅಪಭ್ರಂಶವೆಂದು ಹೇಳಲಾಗುತ್ತದೆ. *ಎನ್‌ಸೈಕ್ಲೊಪೀಡಿಯಾ ಬ್ರಿಟಾನಿಕಾ*ದಲ್ಲಿ 'ತಿರಹತ್'ವು 'ತಿರಭುಕ್ತಿ'ಯ - ನದೀತೀರದ ನಾಡು - ಅಪಭ್ರಂಶವೆಂದು ಹೇಳಲಾಗಿದೆ.

## ಆಕರಗಳು

ದುರದೃಷ್ಟಕ್ಕೆ, ನಮ್ಮ ಅಧ್ಯಯನಕ್ಕೆ ಸಹಾಯಕನಾಗಬಲ್ಲ ಒಬ್ಬ ಥುಸಿಡೈಡಸ್‌ನಾಗಲಿ ಹಿರೊಡೊಟಸ್‌ನಾಗಲಿ ಅಥವಾ ಬಾಣನೆ ಆಗಲಿ ಕಲ್ಹಣನೆ ಆಗಲಿ ಅಥವಾ ಸುದ್ದಿಗಾರ ಅಥವಾ ವೃತ್ತಾಂತಕಾರರಾಗಲಿ ಇಲ್ಲ. ಮಿಥಿಲೆಯ ಇತಿಹಾಸದ ಅಧ್ಯಯನಕ್ಕೆ ಆಕರಗಳು ತೀರಾ ಕಡಿಮೆಯಿವೆ. ಆದ್ದರಿಂದ, ಅಲ್ಲಲ್ಲಿ ಚದುರಿಬಿದ್ದಿರುವ ತುಂಡುತುಂಡು ಮೂಲಗಳಿಂದ ಈ ಕಾಲಘಟ್ಟದ ವೈಜ್ಞಾನಿಕ ಇತಿಹಾಸವನ್ನು ರಚಿಸುವುದು ಕಡು ಕಷ್ಟಕರ. ತಿಬೇಟದ ಪ್ರವಾಸಿ ಧರ್ಮಸ್ವಾಮಿಯ ವೃತ್ತಾಂತವೊಂದನ್ನು ಬಿಟ್ಟರೆ ಬೇರಾವುದೆ ವಿದೇಶಿ ಪ್ರವಾಸಿಯ ಪ್ರಮಾಣವಿಲ್ಲ. ಪ್ರಾಕ್ತನ ಆಕರಗಳು ಇಲ್ಲದಿರುವುದಕ್ಕೆ ಕಾರಣವೇಂದರೆ ಮಿಥಿಲೆಯಲ್ಲಿ ಪ್ರಾಕ್ತನ ತಾಣಗಳ ಅಭಾವ ಇದೆಯೆಂದಲ್ಲ. ಅದಕ್ಕೆ ಕಾರಣವೇಂದರೆ ಆ ತಾಣಗಳನ್ನು ಪರಿಶೋಧಿಸದಿರುವುದು ಮತ್ತು ಉತ್ಖನನ ಕೈಗೊಳ್ಳದಿರುವುದು. ಯಾವುದೆ ಮಹತ್ವದ ನಾಣ್ಯಗಳು, ಮೊಹರುಗಳು ಮತ್ತು ಶಾಸನಗಳನ್ನು ಕಂಡುಹಿಡಿಯಲಾಗಿಲ್ಲ. ಮಿಥಿಲೆಯಲ್ಲಿ ವರ್ಷವರ್ಷವೂ ಸಂಭವಿಸುವ ನೆರೆ ಮತ್ತು ಅಗ್ನಿ ಅನಾಹುತಗಳು ಅಮೂಲ್ಯ ಆಕರಸಾಮಗ್ರಿಯ ಬಹುಪಾಲನ್ನು ಇಷ್ಟೊತ್ತಿಗಾಗಲೆ ಕೊಚ್ಚಿಹಾಕಿರಬಹುದು.

ಪ್ರಾಚೀನ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ವೇದೋಪನಿಷತ್ತುಗಳು, ರಾಮಾಯಣ ಮತ್ತು ಮಹಾಭಾರತ, ಪಾಣಿನಿ ಮತ್ತು ಪತಂಜಲಿಯರ ಕೃತಿಗಳು, ಬೌದ್ಧ ಮತ್ತು ಜೈನ ಸಾಹಿತ್ಯ ಕೃತಿಗಳು ಮುಂತಾದ ವಿಪುಲ ಸಾಹಿತ್ಯಿಕ ಆಕರಗಳಿವೆ. ಹಾಗೂ ವಿವಿಧ ಪುರಾಣಗಳು ಮಿಥಿಲೆಯ ಇತಿಹಾಸ ಮತ್ತು ಸಂಸ್ಕೃತಿಗಳ ನಾನಾ ಅಂಶಗಳನ್ನು ಉಲ್ಲೇಖಿಸುತ್ತವೆ.

ಘಟನೆಗಳ ನಿಜ ಸ್ಥಿತಿಯ ಬಗ್ಗೆ ಹಿಡಿತಕ್ಕೆ ಸಿಕ್ಕುವ ಯಾವುದೂ ತಿಳಿದುಬಂದಿಲ್ಲ. ಕೆಲವೊಂದು ಹೆಸರುಗಳು ಮತ್ತು ಸ್ಥಳಗಳನ್ನು ಕುರಿತಂತೆ ಲಭ್ಯವಿರುವ ಅಲ್ಲೊಂದಿಲ್ಲೊಂದು ಉಲ್ಲೇಖಗಳಿಂದಲೆ ನಾವು ತೃಪ್ತಿಪಡಬೇಕಾಗಿದೆ. ಅವೆಲ್ಲ ಚದುರಿದ ಸಾಮಗ್ರಿಯಾಗಿದ್ದು ತಿಳುವಳಿಕೆಯನ್ನು ಒಂದು ಸೂತ್ರದಲ್ಲಿ ಪೋಣಿಸಿ ಮೂರ್ತ ಆಕಾರ ನೀಡುವ ವ್ಯವಸ್ಥಿತ ಪ್ರಯತ್ನ ನಡೆದಿಲ್ಲ.

ಇತರ ಆಕರಗಳಿಗಾಗಿ - ನಾಣ್ಯಾಧಾರಿತ ಯಾ ಶಾಸನಾಧಾರಿತ - ನಾವು ಶೋಧ ಮಾಡುವಾಗ ನಮಗೆ ಭಯಂಕರ ನಿರಾಸೆ ಕಾದಿದೆ. ನೇಪಾಳದ ವಿವಿಧ ಹಸ್ತಪ್ರತಿಗಳನ್ನು ಶೋಧಿಸಲಾಗಿದ್ದು ಅವು ನಮ್ಮ ಅಧ್ಯಯನಕ್ಕೊಳಪಟ್ಟ ಕಾಲಘಟ್ಟದ ಮಿಥಿಲೆಯ ಇತಿಹಾಸ ಸಂಸ್ಕೃತಿಗಳ ಮೇಲೆ ಸ್ವಾರಸ್ಯಕರ ಪಾರ್ಶ್ವಬೆಳಕು ಬೀರುತ್ತವೆ. ರಾಜೇಂದ್ರಲಾಲ ಮಿತ್ರ, ಹರಪ್ರಸಾದ ಶಾಸ್ತ್ರಿ, ಎಗೆಲಿಂಗ್, ಕೀಥ್, ಕೆ.ಪಿ.ಜಯಸ್ವಾಲ, ಭಗವಾನಲಾಲ ಇಂದ್ರಾಜಿ, ಸೆಸಿಲ್ ಬೆಂಡಾಲ್, ಟುಕ್ಕಿ, ಎಲ್.ಪೆಟೆಕ್, ಡಿ.ಆರ್.ರೆಗ್ಮಿ, ಆರ್.ಸಿ.ಮಜುಮದಾರ, ಎಸ್.ಕೆ.ಸರಸ್ವತಿ ಮತ್ತಿತರರು ಕಂಡುಹಿಡಿದ, ಸಂಪಾದಿಸಿ ಪ್ರಕಟಿಸಿದ ನೇಪಾಳದ ದರಬಾರ ಹಸ್ತಪ್ರತಿಗಳು, ವಿವಿಧ ವಂಶಾವಳಿಗಳು, ನೇಪಾಳಿ ಶಾಸನಗಳು - ವಿಶೇಷತಃ ಮಲ್ಲಕರ್ನಾಟ ಕಾಲಘಟ್ಟದವುಗಳು - ಮಿಥಿಲೆಯ ಇತಿಹಾಸದ ಮೇಲೆ ಸಾಕಷ್ಟು ಬೆಳಕು ಚೆಲ್ಲಿ ಬಹುಮಟ್ಟಿಗೆ

ವೈಜ್ಞಾನಿಕ ರೀತಿಯಲ್ಲಿ ಇತಿಹಾಸವನ್ನು ಪುನಾರಚಿಸುವಲ್ಲಿ ನೆರವಾಗುತ್ತವೆ. ಇದುವರೆಗೆ ಪ್ರಕಟಗೊಂಡ ಹಸ್ತಪ್ರತಿಗಳ ನಾಲ್ಕು ಸಂಪುಟಗಳನ್ನು ಎ.ಬ್ಯಾನರ್ಜಿ, ಶಾಸ್ತ್ರಿ ಮತ್ತು ಕೆ.ಪಿ.ಜಯಸ್ವಾಲ ಸಂಪಾದಿಸಿರುವರು. ಅವು ಆ ಕಾಲಘಟ್ಟದ ಮಿಥಿಲೆಯ ಅರಸರು ಮತ್ತು ಪಂಡಿತರ ಹೆಸರುಗಳು ಮತ್ತು ತೇದಿಗಳನ್ನು ಪಟ್ಟಿಸುವಲ್ಲಿ ಸಹಾಯಕವಾಗುತ್ತವೆ. ಬಂಗಾಲದ ಏಶಿಯಾಟಿಕ್ ಸೊಸೈಟಿ ಮತ್ತು ಭಾರತದ ಇತರ ಗ್ರಂಥಾಲಯಗಳು ಸಂರಕ್ಷಿಸಿಟ್ಟಿರುವ ಹಲವಾರು ಹಸ್ತಪ್ರತಿಗಳು ಕೂಡ ಕೆಲವು ಮಧ್ಯಕಾಲೀನ ಮೈಥಿಲಿ ಅರಸರು ಮತ್ತು ಮಹತ್ವದ ವ್ಯಕ್ತಿಗಳ ಕಾಲಾನುಕ್ರಮವನ್ನು ನಿಗದಿಪಡಿಸುವಲ್ಲಿ ನೆರವಾಗುತ್ತವೆ. ಈ ಕಾಲಘಟ್ಟದ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ಮಹತ್ವದ ಹಸ್ತಪ್ರತಿಗಳೆಂದರೆ ಶ್ರೀನಿವಾಸನ *ಭಟ್ಟಿಕಾವ್ಯಟೀಕಾ*, ಲಕ್ಷ್ಮೀಧರನ *ಕೃತ್ಯಕಲ್ಪತರು*, ಜೈಸಿಂಹನ *ಲಿಂಗವರಟೀಕಾ*, ಶ್ರೀಧರ ಠಾಕೂರನ *ಕಾವ್ಯಪ್ರಕಾಶವಿವೇಕ* ಮತ್ತು ನಾರಾಯಣನ *ಛಾಂದೋಗಪರಿಶಿಷ್ಟ*. ದಿವಂಗತ ಜಾರ್ಜ್ ಏಬ್ರಹಮ್ ಗ್ರಿಯರ್ಸನ್‌ರ ಅಸಂಖ್ಯ ಬರಹಗಳು ನಮ್ಮ ಅಧ್ಯಯನಕ್ಕೆ ಮಹತ್ವದ ಆಕರಗಳಾಗಿವೆ.

ಚಂಪಾರಣ ಜಿಲ್ಲೆಯಲ್ಲಿ ಇತ್ತೀಚೆಗೆ ದೊರಕಿದ ಶಾಸನಗಳು, ಬೆಗುಸರಾಯಿಯಲ್ಲಿರುವ ನೌಲಗರ್ಹ ಶಾಸನ, ಬಣಗಾಂವ್‌ನ ತಾಮ್ರಪಟ, ಕಾಟ್ರಾ ಶಾಸನ (ಮೃಣ್ಮಯ ಪ್ರತಿಮೆ, ಬೆಗುಸರಾಯಿ, ತೇದಿ ಲಕ್ಷ್ಮಣ ಸಂವತ್ ೭೯), ಪಾಂಚೋಭ ತಾಮ್ರಪಟ, ಅಂಧ್ರಥಾರ್ಹಿ ಶಾಸನ, ಮೋತೀಹಾರಿಯ ಎರಡು ಶಾಸನಗಳು, ಮಲ್ಲದೇವನ ಭೀತಭಗವಾನಪುರ ಶಾಸನ, ಹವಿದಿಹ ಶಾಸನ ಮತ್ತು ರುಕುನುದ್ದೀನ ಕೈಕಸ್‌ನ ಮಹೇಶ್ವರ ಶಾಸನ ಇವು ನಮಗೆ ಲಭ್ಯವಿರುವ ಕೆಲವು ಶಾಸನಸಾಮಗ್ರಿಗಳು. ನಾವು ಆಯ್ದುಕೊಂಡ ಕಾಲಘಟ್ಟದ ಇತಿಹಾಸರಚನೆಗೆ ಅವುಗಳಲ್ಲಿ ಕೆಲವು ಮಾತ್ರ ಮಹತ್ವದವಾಗಿವೆ. ಮಹಮ್ಮದ್ ಬಿನ್ ತುಘಲಕನ ಕಾಲದ ಬೇದಿಬಾನಾ ಶಾಸನ, ತುಘಲಕಪುರ ಟಂಕಸಾಲೆ (ಧರ್ಭಾಂಗಾ) ದಿಂದ ಹೊರಡಿಸಿದ ಎರಡು ತಾಮ್ರನಾಣ್ಯಗಳು (ಖೊಟ್ಟಿ ನಾಣ್ಯಗಳು) ಮತ್ತು ನಸರತ ಶಾಹನ ಮೋತೀಹಾರಿ ಶಾಸನ (ಬೆಗುಸರಾಯಿ) ಅಮೂಲ್ಯ ಪ್ರಮಾಣಗಳಾಗಿದ್ದು ವೈಜ್ಞಾನಿಕ ಪರೀಕ್ಷೆ ಮತ್ತು ಅಧ್ಯಯನಕ್ಕೆ ಯೋಗ್ಯವಾಗಿವೆ. ಮುಲ್ಲಾ ತಕಿಯಾನು ದರ್ಭಾಂಗಾದಲ್ಲಿ ಮತ್ತು ಸುತ್ತಮುತ್ತ ಕೆಲವು ಮುಸ್ಲಿಮ ಶಾಸನಗಳು ಇರುವುದನ್ನು ಪ್ರಸ್ತಾಪಿಸುತ್ತಾನೆ. ವಿಜಯಸೇನನ ದೇಓಪಾರಾದ ಶಾಸನ ಕೂಡ ನಾನ್ಯದೇವನ ಇತಿಹಾಸದ ಮೇಲೆ ಸ್ವಲ್ಪ ಬೆಳಕು ಚೆಲ್ಲುತ್ತದೆ.

ಸೋಮದೇವನ *ಯಶಸ್ತಿಲಕ*, ಸಂಧ್ಯಾಕರ ನಂದಿಯ *ರಾಮಚರಿತ*, ಶ್ರೀಧರದಾಸನ *ಬಲ್ಲಾಳಚರಿತ ಸದುಕ್ತಿಕರ್ಣಾಮೃತ*, ಬಿಲ್ಹಣನ *ವಿಕ್ರಮಾಂಕದೇವಚರಿತ*, ವಾಮನನ *ಲಿಂಗಾನುಶಾಸನ*, ಚಾಂಡೇಶ್ವರ ಠಾಕೂರನ *ರತ್ನಾಕರಗಳು*, ಜ್ಯೋತಿರೀಶ್ವರನ *ವರ್ಣನರತ್ನಾಕರ*, ಉಮಾಪತಿಯ *ಪಾರಿಜಾತಹರಣನಾಟಕ*, ವಿದ್ಯಾಪತಿಯ *ಪ್ರಾಕೃತಪೈಂಗಲ* ಮತ್ತು ಇತರ ಬರಹಗಳು (ವಿಶೇಷತಃ ಅವನ *ಪುರುಷಪರೀಕ್ಷ*) ಮಹತ್ವದ ಆಕರಸಾಮಗ್ರಿಗಳು.

*ಪ್ರಾಕೃತಪೈಂಗಲಂ* ಒಂದು ರೀತಿಯಲ್ಲಿ ವಿದ್ಯಾಪತಿಯ *ಪುರುಷಪರೀಕ್ಷ*ಕ್ಕೆ ಪೂರಕವಾಗಿದೆ. ಈ ಕಾಲಘಟ್ಟದ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಇವೆರಡು ಕೃತಿಗಳು ಅಗಾಧ ಮಹತ್ವದವುಗಳಾಗಿವೆ. ವಿದ್ಯಾಪತಿಯ *ಪುರುಷಪರೀಕ್ಷ*, *ಪ್ರಾಕೃತಪೈಂಗಲಂ*, ಮುಸ್ಲಿಮ್ ಆಕರಗಳು, *ರಂಭಾಮಂಜರಿನಾಟಕ* ಮತ್ತು ಆ ಕಾಲಘಟ್ಟದ ಶಾಸನಗಳ ಆಧಾರ ಎಲ್ಲವೂ ಅತಿ ಮಹತ್ವದವು. ಅವುಗಳೆಲ್ಲ ಒಂದಿಲ್ಲೊಂದು ಘಟನೆಯ ಐತಿಹಾಸಿಕತೆಯನ್ನು ಪರಸ್ಪರ ದೃಢೀಕರಿಸುತ್ತವೆ. *ಪ್ರಾಕೃತಪೈಂಗಲಂ* ದಲ್ಲಿ *ರಾಜನೀತಿರತ್ನಾಕರ* ದ ಕರ್ತೃವಾದ ಚಾಂದೇಶ್ವರನ ಬಗೆಗೆ ಮಹತ್ವದ ಮಾಹಿತಿಯಿದೆ. ಚಾಂದೇಶ್ವರನು ಹೊಂದಿದ ವ್ಯಾಪಕ ಅಧಿಕಾರ ಅವನು ಮಹಾಕವಿ ಹರಿಬ್ರಹ್ಮ ಆಶ್ರಯದಾತನಾಗಿದ್ದನೆಂಬ ಸಂಗತಿಯಿಂದ ಸಿದ್ಧಪಡುತ್ತದೆ. ಹರಿಬ್ರಹ್ಮನ ತನ್ನ ಒಡೆಯನನ್ನು ಕುರಿತು ಸ್ತುತಿಪದ್ಯಗಳನ್ನು ಬರೆದಿದ್ದನು. ಹರಿಬ್ರಹ್ಮನು ತನ್ನ 'ಅವಹತ್ತ' ಪದ್ಯಗಳಲ್ಲಿ ಚಾಂದೇಶ್ವರನನ್ನು ಪ್ರಸ್ತಾಪಿಸುತ್ತ ಅವನನ್ನು ಹರಿಸಿಂಹದೇವನ ಶಕ್ತಿಶಾಲಿ ಮಂತ್ರಿಯೆಂದು ಬಣ್ಣಿಸಿರುವನು.

ವಿದ್ಯಾಪತಿಯ *ಪುರುಷಪರೀಕ್ಷ* ದಲ್ಲಿ ಹೇಳಿದ ಕತೆಗಳು ಮಿಥಿಲೆಯ ಕರ್ನಾಟ ವಂಶದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಕರ್ನಾಟರು ಕ್ರಿ.ಶ. ೧೦೯೭ ರಿಂದ ೧೩೨೫ರ ವರಗೆ ಮಿಥಿಲೆಯನ್ನು ಆಳಿದರೆಂಬುದು ೩,೪,೮,೧೧ ಮತ್ತು ೨೨ ನೆಯ ಕತೆಗಳಿಂದ ಸಿದ್ಧಪಡುತ್ತದೆ. ಕರ್ನಾಟಿ ವಂಶದ ಸಂಸ್ಥಾಪಕ ನಾನ್ಯದೇವನ ಪುತ್ರ 'ವೀರನಾಯಕ' ಮಲ್ಲದೇವನ ಬಗೆಗೆ ೩. ನೆಯ ಕತೆ ಸ್ವಲ್ಪ ಮಾಹಿತಿ ನೀಡುತ್ತದೆ. ಈ ಕತೆಯು ಪ್ರಖ್ಯಾತ ಇತಿಹಾಸಕಾರರ ಚರ್ಚೆಗೆ ಗ್ರಾಸವಾಗಿದೆ. ಮಲ್ಲದೇವನು ಕನೌಜದ ಜಯಚಂದ (ಕ್ರಿ.ಶ. ೧೧೭೦ - ೧೧೯೩) ಮತ್ತು ಚಿಕ್ಕೋರ ರಾಜನೊಬ್ಬನ ಸಹವರ್ತಿಯಾಗಿದ್ದನು. ಪಿಥಿ ರಾಜ್ಯದವರಾದ ಚಿಕ್ಕೋರರು ಒಂದೊಮ್ಮೆ ಈಶಾನ್ಯ ಭಾರತದ ಇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಬಹುಶಃ ಅದು ತಿರಹತ್‌ನ ಒಂದು ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದು ಗೌಡ ಮತ್ತು ಕಾನ್ಯಕುಬ್ಜಗಳಿಗೆ ನಡುರಾಜ್ಯವಾಗಿತ್ತು. ಗಹಡವಾಲರು ಮತ್ತು ಪಿಥಿ ರಾಜ್ಯದ ನಡುವೆ ಒಂದು ರೀತಿಯ ವಿವಾಹ ಸಂಬಂಧವಿತ್ತು. ಪಿಥಿ ರಾಜಕುವರಿ ಕುಮಾರದೇವಿಯು ಗೋವಿಂದಚಂದನ ಪತ್ನಿಯಾಗಿದ್ದಳು. ಅವಳು ಬೌದ್ಧಳಾಗಿದ್ದರೆ ಗೋವಿಂದಚಂದನು ಸಂಪ್ರದಾಯಸ್ಥ ಹಿಂದೂ ಆಗಿದ್ದನು. ಎರಡೂ ಪಂಥಗಳ ನಡುವಣ ಬಿಕ್ಕಟ್ಟು ಸ್ವಲ್ಪಮಟ್ಟಿಗೆ ಶಮನವಾಗಿತ್ತೆಂಬುದನ್ನು ಈ ವಿವಾಹ ತೋರ್ಪಡಿಸುತ್ತದೆ. ಇದರಿಂದ ಎರಡೂ ರಾಜ್ಯಗಳ ನಡುವಣ ಸಂಬಂಧ ಮಧುರವಾಗಿತ್ತೆಂಬುದು ತಿಳಿದುಬರುತ್ತದೆ. ಪ್ರಸ್ತುತ ಕತೆಯಲ್ಲಿ ಜಯಚಂದನನ್ನು ಕಾಶಿಯ ರಾಜನೆಂದು ಕರೆಯಲಾಗಿದೆ. ಅದು ಐತಿಹಾಸಿಕ ನಿಜವೂ ಹೌದು. ಈ ಕತೆಯಿಂದ ತಿಳಿದುಬರುವುದೇನೆಂದರೆ, ಚಿಕ್ಕೋರ ರಾಜನ ಬಲ ಹಾಳತಾಗಿದ್ದು ಅವನು ಕಾಶಿಯ ಜಯಚಂದನಂಥ ಬಲಶಾಲಿ ರಾಜನೊಂದಿಗೆ ಯುದ್ಧ ಕಾಯುವ ಸ್ಥಿತಿಯಲ್ಲಿರಲಿಲ್ಲ. ಜಯಚಂದನ ಕಾಲದಲ್ಲಿ ಚಿಕ್ಕೋರರು ಕೇವಲ ಮಾಂಡಲಿಕರಾಗಿದ್ದರು ಮತ್ತು ಹಾಗೆ

ಬೇಡಿದ್ದೇ ಆಗಿದ್ದರೆ, ದೊಡ್ಡ ಕಪ್ಪ ತೆರುವ ಸ್ಥಿತಿಯಲ್ಲಿರಲಿಲ್ಲ. ಎರಡೂ ರಾಜ್ಯಗಳ ನಡುವಣ ಘರ್ಷಣೆಗೆ ಮಲ್ಲದೇವನು ಕಾರಣನಾಗಿದ್ದನೆಂದು ಹೇಳಲಾಗುತ್ತದೆ. ವೀರಯೋಧನೂ ಕಾದಾಳುವೂ ಆಗಿದ್ದ ಮಲ್ಲದೇವನನ್ನು 'ಪ್ರತಿ ಮಲ್ಲ' ಎಂದು ಕರೆಯಲಾಗುತ್ತಿತ್ತು. ಜಯಚಂದನು ಅವನನ್ನು "ಕರ್ನಾಟ ವಂಶದ ಶ್ರೇಷ್ಠ ಸಂತತಿ" ಎಂದು ಸಂಬೋಧಿಸುತ್ತಾನೆ. ಮಲ್ಲದೇವನ ಐತಿಹಾಸಿಕತೆ ಇನ್ನೂ ದೃಢಪಡಬೇಕಿದೆ.

೪ ನೆಯ ಕತೆಯು ವಿವಿಧ ವ್ಯಾಖ್ಯಾನಗಳಿಗೆ ಗುರಿಯಾಗಿದೆ. ಈ ಕತೆಯಂತೆ ಹಸ್ತಿನಾಪುರದಲ್ಲೊಬ್ಬ ಮುಸ್ಲಿಮ ಅರಸನಿದ್ದ. ಅವನು ಸಮುದ್ರದಿಂದ ಸಮುದ್ರವರೆಗಿನ ನಾಡನ್ನಾಳುತ್ತಿದ್ದ. ಅವನ ದೌರ್ಜನ್ಯವನ್ನು ತಾಳಲಾರದೆ ಕಾಫರ ರಾಜನೊಬ್ಬ ತನ್ನೆಲ್ಲ ಸೇನಾಬಲದೊಂದಿಗೆ ಅವನ ಮೇಲೆ ದಾಳಿಯಿಡಲೋಸುಗ ಅವನಲ್ಲಿಗೆ ಹೋದ. ಅವನ ಆಗಮನವನ್ನು ಅರಿತ ಸುಲ್ತಾನನು ಬುಲ್ಖ್ ಮತ್ತು ತುರ್ಕಸ್ತಾನದಿಂದ ತಂದಿದ್ದ ಅಶ್ವಗಳು ಮತ್ತು ನೂರಾರು ಜನರ ಅಶ್ವದಳದೊಂದಿಗೆ ನಗರದಿಂದ ಹೊರಟು ಕಾಫರ ರಾಜನನ್ನು ಯುದ್ಧಕ್ಕೆ ಆಹ್ವಾನಿಸಿದ. ಸುಲ್ತಾನನ ನೆರವಿಗೆ ಇಬ್ಬರು ಯುವ ರಾಜಕುಮಾರರಿದ್ದರು: ಕರ್ನಾಟ ವಂಶದ ನರಸಿಂಹದೇವ ಮತ್ತು ಚೌಹಾಣ ವಂಶದ ಚೈಚಿಕದೇವ. ಆ ಸುಲ್ತಾನನು ಮಹಮ್ಮದ್ ಬಿನ್ ತುಘಲಕನೆಂದು (ಸು.ಕ್ರಿ.ಶ. ೧೧೮೫ - ೧೨೨೭) ಗ್ರಿಯರ್ಸನ್ ಗುರುತಿಸಿದ್ದಾನೆ. ಆ ವಿದ್ವಾಂಸನ ಅಭಿಪ್ರಾಯದಲ್ಲಿ, ಆ ಕಾಫರ ರಾಜನು ಅನಾಗರಿಕ ಮಂಗೋಲರ ತಾರ್ಮಶಿರಿನ್ ಖಾನ ಆಗಿದ್ದನು. ನರಸಿಂಹದೇವನು ನಾನ್ಯದೇವನ ಮೊಮ್ಮಗನೆಂಬುದನ್ನೂ ಗ್ರಿಯರ್ಸನ್ ಒಪ್ಪುತ್ತಾನೆ. ಹಾಗಿದ್ದ ಪಕ್ಷದಲ್ಲಿ, ಅವನು ಮಹಮ್ಮದ್ ಬಿನ್ ತುಘಲಕನ ಸಮಕಾಲೀನನಾಗಿರುವುದು ಸಾಧ್ಯವಿಲ್ಲ. ನರಸಿಂಹದೇವನು ಕ್ರಿ.ಶ. ೧೧೮೮ ರಿಂದ ೧೨೨೭ ರವರೆಗೆ ಆಳಿದನು. ಗ್ರಿಯರ್ಸನ್ ಹೀಗೆ ಅಭಿಪ್ರಾಯ ಪಡುತ್ತಾನೆ: "ಮಹಮ್ಮದ್ ಬಿನ್ ತುಘಲಕ್‌ನ ತಂದೆ ಮತ್ತು ಪೂರ್ವಾಧಿಕಾರಿಯಾಗಿದ್ದ ಘಿಯಾಸುದ್ದೀನನು ಕ್ರಿ.ಶ. ೧೩೨೪ ರಲ್ಲಿ ಬಂಗಾಲ ವಿಜಯಾನಂತರ ತಿರಹತ್ ಪ್ರದೇಶದ ಮೇಲೆ ಹಾಯ್ದುಹೋದ ಮತ್ತು ನರಸಿಂಹದೇವನನ್ನು ತನ್ನೊಂದಿಗೆ ಒಯ್ದ. ಚಾಚಿಕ ಯಾರೆಂಬುದನ್ನು ನಾನರಿಯೆ". ಈ ವಿದ್ವಾಂಸನ ಇಂಥ ಹೇಳಿಕೆ ಮೊದಲೇ ಗೋಜಲಾಗಿದ್ದುದನ್ನು ಇನ್ನಷ್ಟು ಗೋಜಲಾಗಿಸಿದೆ. ಅವನ ತೀರ್ಮಾನಗಳು ಸಂದೇಹಾಸ್ಪದವಾಗಿವೆ. ಕ್ರಿ.ಶ. ೧೩೨೪ ರಲ್ಲಿ ಕರ್ನಾಟ ವಂಶದ ಅಂತಿಮ ಮತ್ತು ಶ್ರೇಷ್ಠತಮ ಅರಸನಾಗಿದ್ದ ಹರಿಸಿಂಹದೇವನು ಆಳುತ್ತಿದ್ದ. ಘಿಯಾಸುದ್ದೀನನು ಅವನ ಮೇಲೆ ಆಕ್ರಮಣ ಮಾಡಲೇಬೇಕಿತ್ತು. ವಿದ್ವಾಂಸ ಚಕ್ರವರ್ತಿಯ ತೀರ್ಮಾನಗಳು ಇದರಂತೆಯೆ ಇದ್ದು ವಿಶ್ವಾಸಾರ್ಹವಲ್ಲ. ಮುಸ್ಲಿಮ ಸುಲ್ತಾನನನ್ನು ಶಹಾಬುದ್ದೀನ ಮಹಮ್ಮದ್ ಘೋರಿ ಎಂದು ಗುರುತಿಸುವುದು ಸಮಂಜಸವೆನಿಸುತ್ತದೆ. ಏಕೆಂದರೆ, ಈ ಗುರುತು ಸ್ಥಾಪನೆಗೆ ಮಿಥಿಲಾ ಪರಂಪರೆಯಲ್ಲಿ ಆಧಾರವುಂಟು. ಮಿಥಿಲಾ ಪರಂಪರೆ ದೃಢವಾಗಿ ಹೇಳುವುದೇನೆಂದರೆ ನರಸಿಂಹದೇವನು ತನ್ನ ಕಕ್ಕ ಮಲ್ಲದೇವನೊಂದಿಗೆ ಕನೌಜಿಗೆ ಹೋಗುತ್ತಿದ್ದನು ಮತ್ತು ಜಯಚಂದನ ಆಳ್ವಿಕೆಯ

ತುರವಾಯ ಅವನು ಶಹಾಬುದ್ದೀನ ಮಹಮ್ಮದ್ ಘೋರಿಯ ದರಬಾರಿಗೆ ಹೋಗುತ್ತಿದ್ದು ಘೋರಿಯ ಪರವಾಗಿ ಕಾದಾಡಿದನು. ನರಸಿಂಹದೇವನು ಮಹಮ್ಮದ್ ಘೋರಿಯ ಸಮಕಾಲೀನನಾಗಿದ್ದನು. ವಿದ್ಯಾಪತಿಯು ಬರಿ 'ಮಹಮ್ಮದ' ಎಂದಿರುವನಲ್ಲದೆ ಪೂರ್ಣ ಹೆಸರನ್ನು ಬಳಸಿಲ್ಲ ಎಂಬುದು ಲಕ್ಷಿಸಬೇಕಾದುದು. ಇತಿಹಾಸದಲ್ಲಿ ಇಂಥ ಉದಾಹರಣೆಗಳು ವಿರಳವಲ್ಲ. ಮೇಲಾಗಿ, ವಿದ್ಯಾಪತಿಯು ತನ್ನ ಐದು ಕತೆಗಳಲ್ಲಿ ಕಾರ್ನಟರ ಇತಿಹಾಸವನ್ನು ಹೇಳಿದ್ದಾನೆ. ಹೀಗೆ ಮಾಡುವಾಗ ಕಾಲಾನು ಕ್ರಮವನ್ನು ಗಮನದಲ್ಲಿಟ್ಟುಕೊಂಡಿರುವನು. ವಿದ್ಯಾಪತಿಯಂಥ ಪ್ರಖ್ಯಾತ ವಿದ್ವಾಂಸನಿಂದ ಕನಿಷ್ಠ ಪಕ್ಷ ಕಾಲಾನುಕ್ರಮದ ಇಷ್ಟಾದರೂ ಖಚಿತತೆಯನ್ನು ನಿರೀಕ್ಷಿಸಬಹುದು. ವಿದ್ಯಾಪತಿಯ ಪೂರ್ವಜರು ಮಿಥಿಲೆಯ ಕರ್ನಾಟರ ಕೆಳಗೆ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದುದರಿಂದ ಕರ್ನಾಟರ ವೀರಕೃತ್ಯಗಳನ್ನು ವಿದ್ಯಾಪತಿ ಸಂಪೂರ್ಣವಾಗಿ ಅರಿತವನಾಗಿರಲು ಸಾಕು. ಚಾಚಿಕದೇವನ ಅನನ್ಯತೆಯ ಪ್ರಶ್ನೆಯೂ ಪರೀಕ್ಷಣಯೋಗ್ಯವಾಗಿದೆ. ಸೋಮೇಶ್ವರ ಚೌಹಾಣನಿಗೆ ಪೃಥ್ವೀರಾಜ ಮತ್ತು ಚಾಚಿಕದೇವ ಎಂಬಿಬ್ಬರು ಪುತ್ರರಿದ್ದರೆಂದು ಚೌಹಾಣ ವಂಶಾವಳಿ ನಮ್ಮನ್ನು ನಂಬಿಸುತ್ತದೆ. ಪೃಥ್ವೀರಾಜ ಚೌಹಾಣನನ್ನು ಕ್ರಿ.ಶ. ೧೧೯೨ ರಲ್ಲಿ ಮಹಮ್ಮದ್ ಘೋರಿ ಕೊಂದ. ಚಾಚಿಕದೇವನು ಪೃಥ್ವೀರಾಜನ ಸಹೋದರನಾಗಿದ್ದುದೆ ಆದರೆ ಅವನು ಮಹಮ್ಮದ್ ಘೋರಿಯ ಸಮಕಾಲೀನನಾಗಿರಲು ಸಾಕು ಎಂಬುದು ನನಗೆ ಬಹುತೇಕ ಖಚಿತವೆನಿಸುತ್ತದೆ. ಚಾಚಿಕದೇವನು ತನ್ನ ಅಣ್ಣನ ಸೋಲಿನ ನಂತರ ಘೋರಿಯ ಜೊತೆ ಸೇರಿರಬಹುದು. ಈ ಕತೆಯಲ್ಲಿ ಚಾಚಿಕದೇವನನ್ನು 'ಸತ್ಯವೀರ'ನೆಂದು ಕರೆಯಲಾಗಿದೆ. ಹೆಚ್ಚಿನ ಆಧಾರ ಒದಗಿಬಾರದ ಹೊರತು ಕಾಫರ ರಾಜ ಯಾರೆಂದು ಗುರುತಿಸಲಸಾಧ್ಯ. ಮುಸ್ಲಿಮರು ಹಿಂದೂಗಳನ್ನೂ ಕಾಫರರೆಂದೆನ್ನುವರು ಮತ್ತು ಅದು ಆ ಕಾಲದ ಹಿಂದೂ ಶಕ್ತಿಯೊಂದಿಗೆ ಒಂದು ತರಹದ ಘರ್ಷಣೆಯನ್ನು ಸೂಚಿಸುತ್ತಿರುವ ಸಾಧ್ಯತೆಯಿದೆ.

೮, ೧೧ ಮತ್ತು ೨೨ ನೆಯ ಕತೆಗಳಲ್ಲಿ ಕರ್ನಾಟ ವಂಶದ ಕೊನೆಯ ಶ್ರೇಷ್ಠ ಅರಸನಾದ ಹರಿಸಿಂಹದೇವನ ಬಗೆಗೆ ಹೇಳಲಾಗಿದೆ. ೮ ನೆಯ ಕತೆಯಲ್ಲಿ ಅವನ ಮಂತ್ರಿ ವೀರೇಶ್ವರನ ಸಾಮರ್ಥ್ಯದ ಚರ್ಚೆ ಇದೆ. ೧೧ ನೆಯ ಕತೆಯಲ್ಲಿ ದೇವಗಿರಿ ಅರಸನೊಂದಿಗೆ ಅವನ ಸಂಬಂಧವನ್ನು ವಿವರಿಸಲಾಗಿದೆ. ಸಾಂಖ್ಯ ದರ್ಶನದಲ್ಲಿ ಮತ್ತು ಆಡಳಿತಶಾಸ್ತ್ರದಲ್ಲಿ ಪಾರಂಗತನಾದ ಗಣೇಶ್ವರನು ಹರಿಸಿಂಹದೇವನ ಮಂತ್ರಿಯಾಗಿದ್ದನೆಂದು ಹೇಳಲಾಗಿದೆ. ಹರಿಸಿಂಹದೇವನು ದೇವಗಿರಿಯ ರಾಮಚಂದ್ರದೇವನ ಸಮಕಾಲೀನನಾಗಿದ್ದನೆಂದು ತೋರುತ್ತದೆ. ಇಬ್ಬರೂ ರಾಜರ ನಡುವೆ ಪತ್ರವ್ಯವಹಾರ ಸಂಬಂಧವಿತ್ತು. ಮೈಥಿಲಿ ಅರಸನಿಗೆ ಗಣೇಶ್ವರನನ್ನು ಮಂತ್ರಿಯಾಗಿ ಪಡೆಯುವ ಅದೃಷ್ಟವಿದ್ದಂತೆಯೆ ದೇವಗಿರಿ ಅರಸನಿಗೆ ಹೇಮಾದ್ರಿ ಎಂಬ ನ್ಯಾಯಸಂಹಿತೆಗಾರನನ್ನು ಮಂತ್ರಿಯಾಗಿ ಪಡೆಯುವ ಅದೃಷ್ಟವಿತ್ತು. ಇವರೀರ್ವರೂ ಅರಸರು ಮೈತ್ರಿ ಒಪ್ಪಂದ ಮಾಡಿಕೊಂಡಿದ್ದಂತೆ ತೋರುತ್ತದೆ. ಆದರೆ, ಅದರ ನಿಖರತೆ ದೃಢಪಡಬೇಕಿದೆ. ೨೨ ನೆಯ ಕತೆಯ ಪ್ರಕಾರ, ಹರಿಸಿಂಹದೇವನನ್ನು

ಗಾನಕಲೆಯ ಶ್ರೇಷ್ಠತಮ ತೀರ್ಪುಗಾರನೆಂದು ಬಣ್ಣಿಸಲಾಗಿದೆ. ಹೀಗೆ, ವಿದ್ಯಾಪತಿಯ *ಪುರುಷಪರೀಕ್ಷ* ಅತಿ ಮಹತ್ವದ ಆಕರವಾಗಿದ್ದು ಅದರಲ್ಲಿ ಮಿಥಿಲೆಯ ಇತಿಹಾಸವನ್ನು ವ್ಯವಸ್ಥಿತವಾಗಿ ಮತ್ತು ಕಾಲಾನುಕ್ರಮದಲ್ಲಿ ಚರ್ಚಿಸಲಾಗಿದೆ. ಅವನು ಕರ್ನಾಟ ರಾಜವಂಶದ ಹಾಗೂ ಆ ಯುಗದ ಗಣ್ಯ ವ್ಯಕ್ತಿಗಳ ವಿವಿಧ ಅಂಶಗಳನ್ನು ಬೆಳಕಿಗೆ ತಂದಿರುವನು. ಆದರೆ, ವಿದ್ಯಾಪತಿಯ ಐತಿಹಾಸಿಕ ಪ್ರಜ್ಞೆಯ ಈ ಅಂಶವನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಲಾಗಿಲ್ಲ; ಮತ್ತು *ಪುರುಷಪರೀಕ್ಷ*ವನ್ನು ವಿಮರ್ಶಾತ್ಮಕ ಹಾಗೂ ಐತಿಹಾಸಿಕ ಪರೀಕ್ಷಣಕ್ಕೆ ಒಳಪಡಿಸಲಾಗಿಲ್ಲ.[2] ರಾಮನಾಥ ಝಾ ತೀರ ಇತ್ತೀಚಿಗೆ ಸಂಪಾದಿಸಿದ *ಪುರುಷಪರೀಕ್ಷ*ವೂ ವಿಮರ್ಶಾತ್ಮಕವಾಗಿಲ್ಲ, ಪಕ್ಷಪಾತರಹಿತವಾಗಿಲ್ಲ. *ಕೀರ್ತಿಲತಾ* ಕುರಿತ ಅವನ ತೀರ ಇತ್ತೀಚಿನ ಕೃತಿಯೂ ನಾನಾ ರೀತಿಯ ತಪ್ಪುಗಳು ಮತ್ತು ಸಂದೇಹಗಳಿಂದ ಮುಕ್ತವಾಗಿಲ್ಲ.

ನಾವು ಆಯ್ದುಕೊಂಡಿರುವ ಕಾಲಘಟ್ಟದ ಮಟ್ಟಿಗಾದರೂ ಮುಲ್ಲಾ ತಖಿಯಾ ಬರೆದ *ಬಯಾಝ್* ಐತಿಹಾಸಿಕ ಪ್ರಮಾಣ ನೀಡುವ ವಿಶ್ವಾಸಾರ್ಹ ಕೃತಿ. ಆದರೆ, ಅದರ ನಿಖರತೆಯ ಬಗೆಗೆ ಖಾತರಿಯಿಲ್ಲ. ಏಕೆಂದರೆ, ಅದು ಅನೇಕ ಹಸ್ತಗಳ ಮೂಲಕ ಹಾಯ್ದುಬಂದಿದೆ ಮತ್ತು ಅದು ತುಂಡುತುಂಡುಗಳಲ್ಲಿ ಮಾತ್ರ ಲಭ್ಯವಿದೆ. ಅದರಲ್ಲಿ ದಾಖಲಾದ ಅನೇಕ ಘಟನೆಗಳನ್ನು ಸಮಕಾಲೀನ ಮುಸ್ಲಿಮ ಆಕರಗಳು ದೃಢಪಡಿಸುವುದಿಲ್ಲ ಮತ್ತು ಅದರಲ್ಲಿ ಕೈಯಾಡಿಸಿದ ವ್ಯಕ್ತಿಗಳು ನಿಜವಾದ ಇತಿಹಾಸದೊಂದಿಗೆ ಕೆಲವು ಐತಿಹ್ಯಾಂಶಗಳನ್ನು ಸೇರಿಸಿರುವರು. ಅದು ಹೇಗೂ ಇರಲಿ, ಅದರ ಮಹತ್ವವನ್ನು ಕಡೆಗಣಿಸಲಾಗದು. ಆದರೆ, ಅದನ್ನು ಅತ್ಯಂತ ಜಾಗರೂಕತೆಯಿಂದ ಮತ್ತು ವೈಜ್ಞಾನಿಕವಾಗಿ ಅಭ್ಯಸಿಸಬೇಕಿದೆ. ಮಹಮ್ಮದ ಸದ್ರ ಅಲಾ ಅಹಮ್ಮದ ಹುಸೇನ ಡಬೀರನ *ಬಸಾತಿನ್-ಉಲ್-ಉನ್ಶ್* ಇನ್ನೊಂದು ಸಪ್ರಮಾಣ ವೃತ್ತಾಂತ. ಅದು ತಕ್ಕಮಟ್ಟಿಗೆ ಘಿಯಾಸುದ್ದೀನ ತುಘಲಕನು ಮಿಥಿಲೆಯ ಮೇಲೆ ಮಾಡಿದ ಆಕ್ರಮಣದ ಪ್ರತ್ಯಕ್ಷದರ್ಶಿ ಪ್ರಮಾಣ. ಆ ಘಟನೆಯ ಬಗೆಗಿನ ವೃತ್ತಾಂತವು ಎಷ್ಟೊಂದು ಹರಕುಮುರುಕಾಗಿದೆಯೆಂದರೆ ಅದನ್ನಾಧರಿಸಿ ಸಂಪೂರ್ಣ ಐತಿಹಾಸಿಕ ಚೌಕಟ್ಟನ್ನು ನಿರ್ಮಿಸುವುದು ಕಷ್ಟಕರ. ಮಿಥಿಲೆಯ ಆಳರಸನ ಹೆಸರನ್ನು ಹೇಳಲಾಗಿಲ್ಲ. ಅದನ್ನು ಇಶಾಮಿ, ಬರ್ನಿ, ಫೆರಿಸ್ತಾ ಮತ್ತು ಇತರರ ವೃತ್ತಾಂತಗಳಿಂದ ಪೂರೈಸಿಕೊಳ್ಳಬೇಕಿದೆ. *ತಬಾಖಿತ್-ಎ-ನಸೀರಿ, ತಾರೀಖ-ಎ-ಫಿರೋಜಶಾಹಿ, ಫತಹ-ಉಸ್-ಸಲಾತಿನ್* ಮುಂತಾದ ಮುಸ್ಲಿಮ ಐತಿಹಾಸಿಕ ಕೃತಿಗಳು ಮಿಥಿಲೆಯ ಸಮಕಾಲೀನ ಇತಿಹಾಸದ ಬಗೆಗೆ ಸುಸಂಬದ್ಧ ರೀತಿಯಲ್ಲಿ ಮಾಹಿತಿ ಒದಗಿಸುತ್ತವೆ.

ಪರಮೇಶ್ವರ ಝಾ, ದಾಸ ಬಿಹಾರಿ ದಾಸ ಮತ್ತು *ಮಿಥಿಲಾ ಮಿಹಿರ* (೧೯೩೫ - ೩೬ ದರ್ಭಾಂಗಾ) ಕರ್ತೃ ಮಿಥಿಲಾಂಕ ಇವರ ಬರವಣಿಗೆಗಳಲ್ಲಿ ಸಂರಕ್ಷಿಸಿಟ್ಟಿರುವ ಪಾರಂಪರಿಕ ಮೂಲಗಳು ಸಹ ಸಹಾಯಕವಾಗಿವೆ. ಆ ಕಾಲಘಟ್ಟದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸವನ್ನು ಪುನಾರಚಿಸುವಲ್ಲಿ ಮಿಥಿಲೆಯ ಪಂಜಿಗಳನ್ನು ಉಪಯೋಗಿಸಿಕೊಳ್ಳಬಹುದು. ಇವುಗಳು ಹಳೆಯ ರೀತಿಯ ಬರವಣಿಗೆಗಳಾಗಿರುವುದರಿಂದ ಮಿಥಿಲೆಯ ಇತಿಹಾಸದ ಈ

ಮಹತ್ವದ ಆಕರದಲ್ಲಿ ಆಳವಾಗಿ ಪ್ರವೇಶಿಸಲಾಗಿಲ್ಲ. ಹೀಗಾಗಿ, ಮಿಥಿಲೆಯ ಇತಿಹಾಸ ಬಹುತೇಕ ನಮ್ಮೆಲ್ಲರಿಗೆ ಮುಚ್ಚಿದ ಪುಸ್ತಕವಾಗಿದೆ. ಆಧುನಿಕ ಕಾಲದ ಅನುಭವಿ ಪಂಜಿಕಾರರಿಗೆ ಸಹ ಪಂಜಿ ತಾಡೋಲೆಗಳನ್ನು ತೃಪ್ತಿಕರವಾಗಿ ವಿವರಿಸಲು ಸಾಧ್ಯವಾಗಿಲ್ಲ. ಬಿನೋದ ಬಿಹಾರಿ ವರ್ಮಾ ತಾಡೋಲೆಗಳನ್ನಾಧರಿಸಿ ರಚಿಸಿದ ಕಾಯಸ್ಥ ಪಂಜಿಯ ಮೇಲಣ ವೈಜ್ಞಾನಿಕ ಕೃತಿಯೊಂದು ಹೊರಬಂದಿದೆ. ಈ ಕೃತಿಯು ವಿಧಾನ ಮತ್ತು ಅನುಸಂಧಾನದ ದೃಷ್ಟಿಯಿಂದ ರಾಮನಾಥ ಝಾ ಅವರ ಕೃತಿಗಿಂತ ವೈಜ್ಞಾನಿಕವಾಗಿದೆ. ನಮಗೆ ತಿಳಿದಿರುವ ವಿದೇಶಿ ಪ್ರವಾಸಿಯ ಒಂದೇ ವೃತ್ತಾಂತವೆಂದರೆ ಧರ್ಮಸ್ವಾಮಿಯದು. ಅವನು ಕ್ರಿ.ಶ. ೧೩ ನೆಯ ಶತಮಾನದಲ್ಲಿ ಮಿಥಿಲೆಗೆ ಭೇಟಿ ಕೊಟ್ಟಿದ್ದ ಮತ್ತು ಕರ್ನಾಟ ವಂಶದ ರಾಮಸಿಂಹದೇವ ನನ್ನು ಅವನ ರಾಜಧಾನಿ ಸಿಮರಾಂವಗಡದಲ್ಲಿಯೆ ಕಂಡಿದ್ದ. ಸಿಮರಾಂವಗಡ ಕೋಟೆಯ ನಿರ್ಮಾಣ, ವೈಶಾಲಿ ಪ್ರದೇಶದ ಮೇಲೆ ಮುಸ್ಲಿಮರು ಪದೇಪದೇ ಮಾಡಿದ ದಾಳಿಗಳು, ವೈವರ್ತ ಲಿಪಿಯ ಅಸ್ತಿತ್ವ ಮತ್ತು ಇನ್ನೂ ಅನೇಕ ಸಾಮಾಜಿಕ ಹಾಗೂ ಧಾರ್ಮಿಕ ಪದ್ಧತಿ ಗಳನ್ನು ಧರ್ಮಸ್ವಾಮಿ ಹೆಸರಿಸುತ್ತಾನೆ. ಇವೆಲ್ಲ ಆಕರಗಳನ್ನು ಒಟ್ಟಾಗಿ ತೆಗೆದುಕೊಂಡಾಗ ಕರ್ನಾಟರ ಆಳ್ವಿಕೆಯಲ್ಲಿಯ (ಸು.ಕ್ರಿ.ಶ. ೧೦೯೭ - ೧೩೨೪) ಮಿಥಿಲೆಯ ಇತಿಹಾಸವನು ಪುನಾರಚಿಸುವಲ್ಲಿ ನೆರವು ದೊರೆಯುತ್ತದೆ.

ಒಬ್ಬ ಮೆಗಾಸ್ತನೀಜನಾಗಲಿ ಫಾಹಿಯೆನ್‌ನಾಗಲಿ ಹುಯೆನ್‌ತ್ಸಾಂಗನಾಗಲಿ ಇಲ್ಲದುದ ರಿಂದ ನಾವು ಹಸ್ತಪ್ರತಿಗಳು ಮತ್ತು ಅವುಗಳ ಅಂತ್ಯಪ್ರಶಸ್ತಿಗಳು ಹಾಗೂ ಇತರ ಸಮಕಾಲೀನ ಸಾಹಿತ್ತಿಕ ಮೂಲಗಳಂಥ ಸ್ಥಳೀಯ ಆಕರಗಳನ್ನೆ ಆಶ್ರಯಿಸಬೇಕಾಗಿದೆ. ಬೇರೆ ಬೇರೆ ಕಾಲಘಟ್ಟಗಳ ವಿವಿಧ ಅರಸರ ಅಧೀನದಲ್ಲಿ ಸೇವೆಗೈಯುತ್ತಿದ್ದ ಸ್ಥಳೀಯ ಲೇಖಕರು ಮತ್ತು ವಿದ್ವಾಂಸರು ತಮ್ಮ ಹಸ್ತಪ್ರತಿಗಳ ಅಂತ್ಯಪ್ರಶಸ್ತಿಗಳಲ್ಲಿ ತಮ್ಮ ಕೆಲವು ಒಡೆಯರ ಹೆಸರುಗಳನ್ನು ಬಿಟ್ಟುಹೋಗಿರುವರು. ಈ ಆಕರಗಳಿಂದ ಮತ್ತು ಇತರ ಸಮಕಾಲೀನ ಹಸ್ತಪ್ರತಿಗಳಿಂದ ಮತ್ತು ನೇಪಾಳ, ಬಂಗಾಲ ಹಾಗೂ ಸಮೀಪದ ಪ್ರದೇಶಗಳ ಹಸ್ತಪ್ರತಿ ಗಳಿಂದ ಆಯ್ದಪ್ರಮಾಣಗಳು ಮಿಥಿಲೆಯ ಕರ್ನಾಟರ ಉತ್ತಮ ವೃತ್ತಾಂತವನ್ನು ನೀಡುತ್ತವೆ.

### ಟಿಪ್ಪಣಿಗಳು

1. D.S.Trivedi, *History of Pre-Mauryan Bihar,* P.82 off
2. *Ganganath Jha Comm. Volume* pp. 250-251
3. *Purusapariksha : An Important Source of Our Political History* (Journal of Oriental Thought, Vol. I, No. iv)

□□

# ೨

# ಕ್ರಿ.ಶ. ೧೦೯೭ರ ವರೆಗಿನ ಮಿಥಿಲಾ ಇತಿಹಾಸದ ಸಂಕ್ಷಿಪ್ತ ಅವಲೋಕನ

ಮಿಥಿಲೆಯು ಪೂರ್ವದಿಕ್ಕಿನಲ್ಲಿದ್ದ ಅತಿ ಪ್ರಾಚೀನ ಬ್ರಾಹ್ಮಣೀಯ ನಾಗರಿಕತೆಯ ಕೇಂದ್ರವಾಗಿತ್ತು ಮತ್ತು ಆರ್ಯಾವರ್ತದ ತೀರ ಪೂರ್ವತುದಿಯಾಗಿತ್ತು. ಅದರ ಬಗೆಗೆ ವೇದಗಳಲ್ಲಿ ಯಾವುದೇ ವಿಶೇಷ ಉಲ್ಲೇಖವಿಲ್ಲ. ಆರ್ಯರ ವಿಸ್ತರಣಾ ಪಥದಲ್ಲಿ ಆರ್ಯಪ್ರಭುತ್ವವನ್ನು ಪೂರ್ವದಿಕ್ಕಿನಲ್ಲಿ ಸ್ಥಾಪಿಸಲು ದೀರ್ಘ ಕಾಲ ಹಿಡಿದಿರುವ ಸಾಧ್ಯತೆಯಿದೆ. ಆರ್ಯ ನಾಗರಿಕತೆಯ ಆರಂಭದಿಂದಲೂ ಮಿಥಿಲೆಯು ತನ್ನ ಸಾಂಸ್ಕೃತಿಕ ಅವಿಚ್ಛಿನ್ನತೆಯನ್ನು ಸಂರಕ್ಷಿಸಿಕೊಂಡುಬಂದ ಬಹುಶಃ ಏಕೈಕ ಕೇಂದ್ರವಾಗಿತ್ತು. ಮತ್ತು ಅದು ಈವರೆಗೂ ತನ್ನ ಗತಕಾಲದ ಉಜ್ವಲ ಪರಂಪರೆಯನ್ನು ಕಳೆದುಕೊಂಡಿಲ್ಲ. ಪೂರ್ವ ಪ್ರಾಂತಗಳು ಆರ್ಯ ನಾಗರಿಕತೆಯ ಎಲ್ಲೆಯ ಹೊರಗುಳಿದರೆ

ವಿದೇಹದ ಜನತೆಯು ಸಂಪೂರ್ಣ ಆರ್ಯತ್ವವನ್ನು ಮನಃಪೂರ್ವಕವಾಗಿ ಸ್ವೀಕರಿಸಿತು. ಮಿಥಿಲೆಯು ವಿದೇಹಿಯರ ರಾಜಧಾನಿಯಾಗಿತ್ತು.

ಶತಪಥಬ್ರಾಹ್ಮಣವು ಒಂದು ಪುರಾಣಕತೆಯನ್ನು ಹೇಳುತ್ತದೆ. ಅದರಲ್ಲಿ ಆರ್ಯರ ಪೂರ್ವ ವಲಸೆಯ ಮೂರು ಮಜಲುಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಮಾಧವನು ವಿದೇಹದ ಅರಸನಾಗಿದ್ದ. ಗೋತಮ ರಾಹುಗಣನು ಅವನ ಕುಲಪುರೋಹಿತನಾಗಿದ್ದ. ಮಾಧವನು ಒಮ್ಮೆ ಸರಸ್ವತಿ ನದಿದಂಡೆಯ ಮೇಲಿದ್ದ. ಮಾಧವ ಮತ್ತು ಅವನ ಪುರೋಹಿತ ಗೋತಮ ರಾಹುಗಣ ಹಿಂಬಾಲಿಸುತ್ತಿದ್ದಂತೆಯೆ ಅಗ್ನಿವೈಶ್ವಾನರನು ಪೂರ್ವದ ಕಡೆಗೆ ಭೂಮಿಯನ್ನು ಸುಡುತ್ತ ಸದಾನೀರ (ಗಂಡಕ)ದ ವರೆಗೆ ಸಾಗಿದನು. ಅದನ್ನವನು ಸುಡಲಿಲ್ಲ. ಈ ಪ್ರದೇಶದ ಬ್ರಾಹ್ಮಣೀಕರಣವನ್ನು ವಿದೇಹ ಮಾಧವನಿಗೆ ಆರೋಪಿಸಲಾಗುತ್ತಿದ್ದು ಅವನು ಇತಿಹಾಸದಲ್ಲಿ ದಾಖಲಾದ ಅರಸರಲ್ಲಿಯೆ ಬಹುಶ: ಪ್ರಾಚೀನತಮನು.

ಸಿರಧ್ವಜ ಜನಕನು ಸಂಕಸ್ಯಕುಲದ ಸುಧನ್ವನನ್ನು ಕೊಂದು ತನ್ನ ಸೋದರನಿಗೆ ಪಟ್ಟಗಟ್ಟಿ ಮಿಥಿಲೆಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನೆಂದು ರಾಮಾಯಣದಿಂದ ತಿಳಿಯುತ್ತದೆ. ಈ ಸಂಗತಿಯನ್ನು ವಿಷ್ಣು ಪುರಾಣದಲ್ಲಿ ಹೇಳಲಾಗಿದೆ. ಹಾಗಾಗಿ, ಕುಶಧ್ವಜನು ಸಿರಧ್ವಜ ಜನಕನ ಪುತ್ರನಾಗಿದ್ದನೆಂಬ ಭಾಗವತಪುರಾಣದ ಅಭಿಪ್ರಾಯ ತಿರಸ್ಕೃತಗೊಳ್ಳುತ್ತದೆ. ದಿವೋದಾಸನು ಮೈಥಿಲಿ ಅರಸನೊಬ್ಬನನ್ನು ಸೋಲಿಸಿದನೆಂದು ಹೇಳಲಾಗಿದೆ. ಕೋಸಲ ಅರಸ ಪರತಾನರ ಹೈರಣ್ಯನಾಭನು ವಿದೇಹವನ್ನು ಗೆದ್ದಿದ್ದನೆಂದು ಹೇಳಲಾಗಿದೆ. ವಿದೇಹವು ಕೋಸಲದೊಂದಿಗೆ ಕೆಲಮಟ್ಟಿನ ದ್ವೇಷ ಬೆಳೆಸಿಕೊಂಡದ್ದು ಈ ಕಾರಣದಿಂದಾಗಿಯೆ. ಕೋಸಲ ಮತ್ತು ವಿದೇಹ ಎರಡೂ ರಾಜ್ಯಗಳವರಿಬ್ಬರೂ ವಿದೇಹ ಮಾಧವನು ತಮ್ಮ ಪೂರ್ವಜನೆಂದು ಸಾಧಿಸುತ್ತಾರೆಂಬುದು ಎಗೆಲಿಂಗ್‌ನ ಅಭಿಪ್ರಾಯ. ಆದರೆ, ಸದಾನೀರ ನದಿಯು ಅವೆರಡೂ ಕವಲುಗಳನ್ನು ಬೇರ್ಪಡಿಸಿದೆ. ವಿದೇಹವು ಆರ್ಯಾವರ್ತದ ಪೂರ್ವತುದಿಯಾಗಿದೆ. ಸಂಗತಿಗಳ ಮತ್ತು ಇತರ ದೃಢ ಪ್ರಮಾಣಗಳ ಅಲಭ್ಯತೆಯಿಂದಾಗಿ ಮಿಥಿಲೆಯ ರಾಜಕೀಯ ಇತಿಹಾಸದಲ್ಲಿ ಈ ಆಕಸ್ಮಿಕ ಉಲ್ಲೇಖಗಳನ್ನು ಸ್ಥಾನನಿರ್ದೇಶಿಸು ವುದು ಕಠಿಣ. ಆದರೆ, ಕಾಲಕ್ರಮೇಣ ವಿದೇಹದ ಅರಸೊತ್ತಿಗೆಯು ಬಲಶಾಲಿ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಯಿತೆಂದು ಧಾರಾಳವಾಗಿ ಹೇಳಬಹುದು.

ಜನಕನ ಕಾಲದಲ್ಲಿ ವಿದೇಹವು ತನ್ನ ವೈಭವದ ಶಿಖರದಲ್ಲಿತ್ತು. ಅವನು ಅಯೋಧ್ಯೆಯ ದಶರಥನ ಸಮಕಾಲೀನನಾಗಿದ್ದನು. ಅಯೋಧ್ಯೆಯ ಅರಸನೊಂದಿಗೆ ವಿವಾಹಸಂಬಂಧ ಬೆಳೆಸಿದ ಅವನನ್ನು ತನ್ನ ಕಾಲದ ಅತ್ಯಂತ ಜನಪ್ರಿಯ ಅರಸನೆಂದು ಪರಿಗಣಿಸಲಾಗಿದೆ. ಮತ್ತು ಅವನ ಆಳ್ವಿಕೆಯಲ್ಲಿ ಬ್ರಾಹ್ಮಣವ್ಯವಸ್ಥೆ ವಿದೇಹದಲ್ಲಿ ಸಂಪೂರ್ಣವಾಗಿ ಸ್ಥಿರಗೊಂಡಿತು. ದೇಶದ ನಾನಾ ಭಾಗಗಳಿಂದ ಬಂದ ಪ್ರಕಾಂಡ ಪಂಡಿತರಿಂದ ಅವನ ಆಸ್ಥಾನ ತುಂಬಿಹೋಗಿದ್ದು ಬೃಹದಾರಣ್ಯಕ ಉಪನಿಷತ್ತು ಅವನನ್ನು ತುಂಬಾ ಶ್ಲಾಘಿಸುತ್ತದೆ. ಶ್ವೇತ ಯಜುರ್ವೇದವು ಪೂರ್ವೀ ಮೂಲದ್ದೆಂಬ ವಾದವನ್ನು ಒಪ್ಪುವುದಾದರೆ ಜನಕನ ಆಸ್ಥಾನದಲ್ಲಿ

ಸುಪ್ರಸಿದ್ಧ ದಾರ್ಶನಿಕ ಸಂವಾದ ಜರುಗಿದ ಸ್ಥಳವಾಗಿದ್ದ ಅದು ವಿದೇಹದಲ್ಲಿದ್ದಿರಬೇಕು. ಅವನು ತನ್ನ ಔದಾರ್ಯಕ್ಕೆ ಪ್ರಖ್ಯಾತನಾಗಿದ್ದನು. ಅಶ್ವಮೇಧ ಯಾಗ ಸಂದರ್ಭದ ಪವಿತ್ರ ಸಭೆಯಲ್ಲಿ ಶ್ರೇಷ್ಠತಮ ಪಂಡಿತನೆಂದು ಸಿದ್ಧಮಾಡಿ ತೋರಿಸಿದವನಿಗೆ ಒಂದು ಸಾವಿರ ಆಕಳುಗಳನ್ನು ಬಹುಮಾನವಾಗಿ ನೀಡುವುದಾಗಿ ಹೇಳಿದ. ಯಾಜ್ಞವಲ್ಕ್ಯನು ಬಹುಮಾನವನ್ನು ಗೆದ್ದುಕೊಂಡು ಅರಸನ ಗುರುವಾದನು. *ಶತಪಥಬ್ರಾಹ್ಮಣದ* ೧೧ ನೆಯ ಸಂಪುಟದಲ್ಲಿ ಅದೇ ಕತೆಯನ್ನು ಪುನಃ ಪುನಃ ಉಲ್ಲೇಖಿಸಲಾಗಿದೆ. ಆ ಕತೆಯನ್ವಯ, ಜನಕನು ತನ್ನ ವೈಯಕ್ತಿಕ ಬುದ್ಧಿಸಾಮರ್ಥ್ಯ ಮತ್ತು ಜ್ಞಾನಬಲದಿಂದ ಆ ಪುರೋಹಿತನನ್ನು ದಿಙ್ಮೂಢನನ್ನಾಗಿಸಿದ. ಯಾಜ್ಞವಲ್ಕ್ಯನಿಂದ ಒಂದೂ ತೃಪ್ತಿಕರ ಉತ್ತರ ಬಾರದಿದ್ದುದನ್ನು ಕಂಡು "ಅಗ್ನಿಹೋತ್ರ ಅಥವಾ ಅಗ್ನಿಯಜ್ಞದ ನಿಜವಾದ ಅರ್ಥ ಇದುವರೆಗೂ ಯಾರಿಗೂ ಹೊಳೆದಿಲ್ಲ" ಎಂದು ಹೇಳಿದನು. ಯಾಜ್ಞವಲ್ಕ್ಯನು ತನ್ನ ಅಜ್ಞಾನವನ್ನು ಒಪ್ಪಿಕೊಂಡು ನಿಜವಾದ ಅರ್ಥವನ್ನು ತಿಳಿಸಿಕೊಡಲು ಜನಕರಾಜನನ್ನು ಪ್ರಾರ್ಥಿಸಿದನು.

*ಬೃಹದಾರಣ್ಯಕ ಉಪನಿಷತ್ತು* ಜನಕನ ಆಸ್ಥಾನದಲ್ಲಿ ಮೈತ್ರೇಯಿ ಮತ್ತು ಯಾಜ್ಞವಲ್ಕ್ಯರ ಮಧ್ಯೆ ನಡೆದ ಇನ್ನೊಂದು ಸಂವಾದ ಪ್ರಸಂಗವನ್ನು ಕೊಡುತ್ತದೆ. ಈ ಸಂವಾದಗಳು ಮಿಥಿಲೆಯ ಮಹಿಳೆಯರ ಘನ ಪಾಂಡಿತ್ಯವನ್ನು ಸೂಚಿಸುತ್ತವೆ. ಮಿಥಿಲೆಯು ತನ್ನ ಕಾಲದ ಉಚ್ಛ್ರಾಯಿಸುತ್ತಿದ್ದ ನಗರಗಳಲ್ಲೊಂದು ಆಗಿತ್ತಲ್ಲದೆ ಒಟ್ಟಾರೆ ವೈದಿಕ ಸಂಸ್ಕೃತಿ ವಿಕಾಸದ ದೊಡ್ಡ ಕೇಂದ್ರವಾಗಿತ್ತು.

ಜನಕರಾಜನು ಸುಲಭಾ ಎಂಬ ಸನ್ಯಾಸಿನಿಯೊಡನೆ ಸಂವಾದ ಹೂಡಿದನೆಂದು *ಮಹಾಭಾರತದಿಂದ* ತಿಳಿಯುತ್ತದೆ. 'ಸಭಾಪರ್ವ'ದಲ್ಲಿ ಹೇಳಿರುವಂತೆ ಯುಧಿಷ್ಠಿರನು ಪಟ್ಟವೇರಿದ ಬಳಿಕ ಭೀಮನು ತನ್ನ ದಿಗ್ವಿಜಯ ಮಾರ್ಗದಲ್ಲಿ ವಿದೇಹದ ಅರಸನನ್ನು ಸೋಲಿಸಿದ. ಮಿಥಿಲೆಯನ್ನು ಕರ್ಣನೂ ತನ್ನ ಅಧಿಕಾರಕ್ಕೊಳಪಡಿಸಿಕೊಂಡನೆಂದೂ ಕೃಷ್ಣ, ಭೀಮಸೇನ ಮತ್ತು ಅರ್ಜುನರು ಇಂದ್ರಪ್ರಸ್ಥದಿಂದ ರಾಜಗೀರಕ್ಕೆ ಹೋಗುವ ಮಾರ್ಗದಲ್ಲಿ ಮಿಥಿಲೆಗೆ ಭೇಟಿಕೊಟ್ಟರೆಂದೂ ಹೇಳಲಾಗಿದೆ. ಎಸ್.ಎನ್.ಪ್ರಧಾನರ ಅಭಿಪ್ರಾಯದಲ್ಲಿ ಶ್ರೀಕೃಷ್ಣ ವಾಸುದೇವನು ತನ್ನ ಬ್ರಾಹ್ಮಣ ಮಿತ್ರ ಶ್ರುತದೇವನನ್ನು ಭೇಟಿಯಾಗಲು ಮಿಥಿಲೆಗೆ ಹೋದಾಗ ಅಲ್ಲಿ ವಹುಲಾಸ್ವನು ಆಳುತ್ತಿದ್ದುದನ್ನು ಕಂಡನು. *ಮಹಾಭಾರತದ* ಪ್ರಕಾರ ಕೌಶಿಕಿಯು ಮಿಥಿಲೆಯ ಪೂರ್ವಗಡಿಯಾಗಿತ್ತು ಮತ್ತು ವಿಶ್ವಾಮಿತ್ರನಿಗೆ ಬ್ರಾಹ್ಮಣ್ಯ ಪ್ರಾಪ್ತವಾದದು ಕೌಶಿಕಿಯಲ್ಲಿಯೆ. ಮಹಾಭಾರತ ಯುದ್ಧ ಸಂದರ್ಭದಲ್ಲಿ ವಿದೇಹವು ಕುರುವಿನ ಮಿತ್ರರಾಜ್ಯವಾಗಿತ್ತು. ಮಿಥಿಲೆಯ ಅರಸನು ಪಾಂಡವರ ವಿರುದ್ಧ ಏಕೆ ಯುದ್ಧ ಮಾಡಿದ? 'ಆದಿಪರ್ವ'ದ ಪ್ರಕಾರ, ಪಾಂಡವರ ತಂದೆ ಪಾಂಡು ಮಿಥಿಲೆಯನ್ನು ಗೆದ್ದುಕೊಂಡಿದ್ದು ಮೈಥಿಲಿ ಅರಸನ ಕೋಪಕ್ಕೆ ಕಾರಣವಾಗಿತ್ತು. 'ಸಭಾಪರ್ವ'ದ ಪ್ರಕಾರ, ಭೀಮ ಮತ್ತು ಕರ್ಣರೂ ಮಿಥಿಲಾ ಮತ್ತು ನೇಪಾಳಗಳ ಮೇಲೆ ದಾಳಿ ಮಾಡಿದ್ದರು. ಇವೆಲ್ಲ ಆಕ್ರಮಣಕೃತ್ಯಗಳಿಂದ ಮಿಥಿಲೆಯ ಆಳರಸನು ಸಿಟ್ಟಿಗೆದ್ದು ಕೌರವರೊಂದಿಗೆ

ಸೇರಿದನೆಂಬುದು ಸಂಭಾವ್ಯವಾಗಿದೆ. ದುರ್ಯೋಧನನು ಗದಾವಿದ್ಯೆಯನ್ನು ಮಿಥಿಲೆಯಲ್ಲಿ ಕಲಿತುದರಿಂದ ಅಲ್ಲಿ ಅವನು ಚಿರಪರಿಚಿತನಾಗಿದ್ದನು. ಈ ಯುದ್ಧದಲ್ಲಿ ವಿದೇಹದ ಅರಸನು ಕೊಲ್ಲಲ್ಪಟ್ಟನೆಂದು ಹೇಳಲಾಗಿದೆ.

ಜಾತಕಗಳಲ್ಲಿ ಮಿಥಿಲೆ ಪದೇ ಪದೇ ಉಲ್ಲೇಖಿತವಾಗಿದೆ. ಜಾತಕಗಳ ಪ್ರಕಾರ, ಮಿಥಿಲಾ ಮಹಾನಗರವು ನಾಲ್ಕು ಉಪನಗರಗಳಿಂದ ಕೂಡಿದ್ದು ತನ್ನ ನಾಲ್ಕು ಮಹಾದ್ವಾರಗಳಾಚೆ ಹಬ್ಬಿತ್ತು. ವಿದೇಹ ರಾಜ್ಯದಲ್ಲಿ ಹತ್ತು ಸಾವಿರ ಗ್ರಾಮಗಳಿದ್ದುದೂ ತಿಳಿದುಬರುತ್ತದೆ. ದೇಶದ ಮೂಲೆಮೂಲೆಗಳಿಂದ ವರ್ತಕರು ಅಲ್ಲಿಗೆ ಪುನಃ ಪುನಃ ಬರುತ್ತಿದ್ದು ಶ್ರಾವಸ್ತಿಯ ವರ್ತಕರು ತಮ್ಮ ಸರಕು ಮಾರಲು ವಿದೇಹಕ್ಕೆ ಬರುತ್ತಿದ್ದರು. ಮೈಥಿಲಿ ಅರಸರು ಉನ್ನತ ವಿದ್ಯಾ ಸಂಸ್ಕೃತಿ ಸಂಪನ್ನರಾಗಿದ್ದರೂ ಬಹುಪತ್ನಿತ್ವ ರೂಢಿಯಲ್ಲಿತ್ತೆಂದು ಜಾತಕಗಳು ಇನ್ನಷ್ಟು ತಿಳಿಸುತ್ತವೆ. ಬುದ್ಧನ ಕಾಲದಲ್ಲಿ ಮಿಥಿಲೆಯನ್ನಾಳುತ್ತಿದ್ದ ಸುಮಿತ್ರನೆಂಬವನು ನಿಜ ಧರ್ಮದ ಅಭ್ಯಾಸಕ್ಕೆ ತನ್ನನ್ನು ಮೀಸಲಿಟ್ಟಿದ್ದನು. ಆಗಿನ ಕಾಲದಲ್ಲಿ ವಿದೇಹವು ಖಡ್ಗಗಳ ಉತ್ಪಾದನೆಗೆ ಪ್ರಸಿದ್ಧವಾಗಿತ್ತು. ವಿದೇಹದ ರಾಜಕುಮಾರರು ತಕ್ಷಶಿಲೆಯಲ್ಲಿ ಅಭ್ಯಾಸಗೈಯುತ್ತಿದ್ದರು.

ರಾಮಾಯಣದ ಪ್ರಕಾರ, ವೈಶಾಲಿಯು ವೈಶಾಲಿ, ಕುಂದಗ್ರಾಮ ಮತ್ತು ವಣಿಯಗ್ರಾಮ ಎಂಬ ಮೂರು ಮುಖ್ಯ ವಿಭಾಗಗಳು ಕೂಡಿ ನಿರ್ಮಿತವಾಗಿತ್ತು. ಅದನ್ನು ಸಂಸ್ಥಾಪಿಸಿದವನು ಇಕ್ಷ್ವಾಕು ಎಂದು ಹೇಳಲಾಗಿದೆ. ವೈಶಾಲಿಯನ್ನು ವಿಶಾಲ ಎಂಬುವನೊಬ್ಬ ಸಂಸ್ಥಾಪಿಸಿದ ನೆಂದೂ ಹೇಳಲಾಗಿದೆ. ರಾಮನು ಮಿಥಿಲೆಗೆ ಬಂದಾಗ ಪ್ರಮತಿಯು ವೈಶಾಲಿಯನ್ನಾಳುತ್ತಿದ್ದನು. ಪ್ರಮತಿಯ ತರುವಾಯ ವೈಶಾಲಿಯನ್ನು ಕೋಸಲಕ್ಕೆ ಸೇರಿಸಿಕೊಳ್ಳಲಾಯಿತು. ಕೋಸಲದ ಆಧಿಪತ್ಯ ಅವಸಾನಗೊಂಡ ತರುವಾಯ ವೈಶಾಲಿಯು ಮಿಥಿಲೆಯ ಅಧಿಪತ್ಯಕ್ಕೊಳಪಟ್ಟಿತು. ಮುಂದೆ, ವಿದೇಹದ ಅರಸೊತ್ತಿಗೆ ವಿಘಟಿತಗೊಂಡಾಗ ಆ ಇಡಿ ಪ್ರದೇಶವು ಹಲವಾರು ಶ್ರೀಮಂತಪ್ರಭುತ್ವದ ಗಣರಾಜ್ಯಗಳಾಗಿ ಒಡೆದುಹೋಯಿತು.

ಹದಿನಾರು ಮಹಾಜನಪದಗಳಲ್ಲಿ ವಿದೇಹ ಮತ್ತು ವೈಶಾಲಿಗಳು ಮಹತ್ವದ ರಾಜ್ಯಗಳಾಗಿದ್ದುದು ಕಂಡುಬರುತ್ತದೆ. ಕೌಟಿಲ್ಯನ *ಅರ್ಥಶಾಸ್ತ್ರವು* ಕರಾಳ ಜನಕ ಎಂಬ ಕೊನೆಯ ಜನಕ ಅರಸನ ಪತನವನ್ನು ದಾಖಲಿಸುತ್ತದೆ. ಅವನ ತರುವಾಯ ಅರಸೊತ್ತಿಗೆ ರದ್ದಾಗಿ ಪ್ರಜಾಪ್ರಭುತ್ವ ಬಂತು. ವೃಜ್ಜಿಯರ ಒಕ್ಕೂಟವನ್ನು ವಿದೇಹರು ಸೇರಿಕೊಂಡರು. ಬೌದ್ಧ ಕಾಲಘಟ್ಟದಲ್ಲಿ ಮಿಥಿಲಾ ಮತ್ತು ವೈಶಾಲಿ ಒಂದುಗೂಡಿದವು. ಆಗ ಈ ಪ್ರದೇಶದ ವರ್ತಕರು ವ್ಯಾಪಾರಕ್ಕಾಗಿ ಸುವರ್ಣಭೂಮಿಗೆ ಹೋಗುತ್ತಿದ್ದರು. ಬೌದ್ಧ ಸಾಹಿತ್ಯದಲ್ಲಿ ವಿದೇಹವು ಪ್ರಜಾಪ್ರಭುತ್ವ ರಾಜ್ಯವಾಗಿತ್ತೆಂದು ಉಲ್ಲೇಖಿಸಲಾಗಿದೆ. ಕೌಟಿಲ್ಯನು ಲಿಚ್ಛವಿಯರನ್ನು ಪ್ರತ್ಯೇಕವಾಗಿ ಉಲ್ಲೇಖಿಸುತ್ತಾನೆ ಮತ್ತು ವೃಜ್ಜಿಯರು ಎಂದರೆ ವಿದೇಹರೇ ಎನ್ನುತ್ತಾನೆ.

ವಿದೇಹರನ್ನು ಪ್ರಜಾಪ್ರಭುತ್ವವಾದಿಗಳೆಂದು ಪತಂಜಲಿ ಪರಿಗಣಿಸುತ್ತಾನೆ. ವಿದೇಹದ ಹಿಂದಿನ ಅರಸರಾಳ್ವಿಕೆ ಹೋಗಿ ವೃಜ್ಜಿ ಸಮುದಾಯದ ಸ್ವಲ್ಪ ಜನಾಧಿಪತ್ಯ ಅಸ್ತಿತ್ವಕ್ಕೆ ಬಂತು.

ಮತ್ತು ರಾಜಕೀಯ ಕೇಂದ್ರವು ಜನಕಪುರದಿಂದ ವೈಶಾಲಿಗೆ ಸ್ಥಳಾಂತರಗೊಂಡಿತು. ಅನೇಕ ಊರುಗಳಲ್ಲಿ ಚಾತುರ್ಮಾಸ ಆಚರಿಸುತ್ತಿದ್ದ ವರ್ಧಮಾನ ಮಹಾವೀರನಿಗೆ ಮಿಥಿಲೆ ಇಷ್ಟವಾದ ಮತ್ತು ಪ್ರಸಿದ್ಧ ಆಶ್ರಯತಾಣವಾಗಿತ್ತು ಎಂದು *ಕಲ್ಪಸೂತ್ರಗಳು* ತಿಳಿಸುತ್ತವೆ. ಅಲ್ಲಿ ಆವನು ತನ್ನ ಚಾತುರ್ಮಾಸಗಳನ್ನು ಕಳೆದನೆಂದು ಹೇಳಲಾಗಿದೆ. ಆ ಕಾಲಘಟ್ಟದಲ್ಲಿ ವೈಶಾಲಿಯು ಉತ್ಕೃಷ್ಟ ಪಟ್ಟಣವಾಗಿದ್ದು ವಸ್ತುತಃ ಸ್ವರ್ಗವಾಗಿತ್ತು. ಲಿಚ್ಛವಿಯರು ಅತ್ಯಂತ ಮಹತ್ವದ ರಾಜಕೀಯ ಶಕ್ತಿಗಳಲ್ಲೊಬ್ಬರಾಗಿ ಹೊರಹೊಮ್ಮಿದರು. ಅವರ ಬಗೆಗಿನ ಅತ್ಯಂತ ಪ್ರಾಚೀನ ಸಂಗತಿಯೆಂದರೆ ಅವರು ತಮ್ಮ ಒಬ್ಬ ಪುತ್ರಿಯನ್ನು ಮಗಧದ ಬಿಂಬಿಸಾರನಿಗೆ ಮದುವೆ ಮಾಡಿಕೊಟ್ಟದ್ದು. ಕೋಸಲ ಮತ್ತು ಮಲ್ಲರೊಂದಿಗೂ ಅವರು ಮೈತ್ರಿಸಂಬಂಧ ಹೊಂದಿದ್ದರು. ಅಜಾತಶತ್ರುವು ವೈಶಾಲಿ ಮತ್ತು ತಿರಹತ್‌ಗಳನ್ನು ಗೆದ್ದುಕೊಂಡನು. ವೈಶಾಲಿಯ ವಿರುದ್ಧ ಅಜಾತಶತ್ರು ಸಿದ್ಧತೆ ನಡೆಸುತ್ತಿದ್ದುದು ಬುದ್ಧನಿಗೆ ಗೊತ್ತಿತ್ತು. ಆದರೂ ಅವನು ಕುಸಿನಾರಾ ಮಾರ್ಗವಾಗಿ ಹೋಗುವಾಗ ತನ್ನ ಕೊನೆಯ ಭೇಟಿಯಲ್ಲಿ ಲಿಚ್ಛವಿಯರಿಗೆ ಹಾಗೆಂದು ತಿಳಿಸಲಿಲ್ಲವೇಕೆಂಬುದು ಇತಿಹಾಸದ ನಿಗೂಢವಾಗಿಯೆ ಉಳಿದಿದೆ. ವೈಶಾಲಿಯ ಇತಿಹಾಸವು ಆಡಳಿತ ದೃಷ್ಟಿಯಿಂದ ಬಹಳ ಮಹತ್ವದ್ದಾಗಿತ್ತು. ಅದು ಬೌದ್ಧ ಮತದ ಮಹತ್ವದ ಕೇಂದ್ರವೂ ಆಗಿದ್ದು ಎರಡನೆಯ ಬೌದ್ಧ ಸಮಾಲೋಚನಾ ಸಭೆ ಅಲ್ಲಿಯೆ ಜರುಗಿತ್ತು. ಅಜಾತಶತ್ರುವಿನ ವಿಜಯಾನಂತರ ವಿದೇಹ ಮತ್ತು ವೈಶಾಲಿಗಳು ಮಗಧ ಸಾಮ್ರಾಜ್ಯದ ಅಂಗವಾದವು. ಮಹಾಪದ್ಮನಂದನೂ ಮಿಥಿಲೆಯನ್ನು ಗೆದ್ದುಕೊಂಡಿದ್ದನೆಂದು ಹೇಳಲಾಗಿದೆ.

ಕ್ರಿ.ಪೂ. ೩೨೩ ರಲ್ಲಿ ಮೌರ್ಯ ಸಾಮ್ರಾಜ್ಯದ ಸ್ಥಾಪನೆಯು ಭಾರತದ ಇತಿಹಾಸದಲ್ಲಿ ಒಂದು ಹೆಗ್ಗುರುತು. ವೈಶಾಲಿ ಮತ್ತು ವಿದೇಹಗಳ ಭೂಪ್ರದೇಶಗಳು ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದಂತೆ ತೋರುತ್ತದೆ. ಅಶೋಕನು ಪಾಟಲೀಪುತ್ರ ಮತ್ತು ನೇಪಾಳಗಳ ನಡುವಣ ರಸ್ತೆಯಲ್ಲಿರುವ ವೈಶಾಲಿಗೆ ಬಂದಿದ್ದನೆಂದು ಹೇಳಲಾಗಿದೆ.

ಮೌರ್ಯ ಕಾಲಘಟ್ಟದಲ್ಲಿ ವೈಶಾಲಿಯು ಮಹತ್ವದ ಆಡಳಿತ ಕೇಂದ್ರವಾಗಿತ್ತು. ಅಶೋಕನ ಕಾಲದಲ್ಲಿ ಮಗಧ ಮತ್ತು ತಿರಹತ್‌ನಿಂದ ಬೌದ್ಧ ಭಿಕ್ಷುಗಳು ಟಿಬೆಟಿಗೆ ಧರ್ಮೋಪದೇಶಾರ್ಥ ಬಹು ಸಂಖ್ಯೆಯಲ್ಲಿ ಹೋಗಿದ್ದರು. ಮೌರ್ಯರ ಪತನಾನಂತರ ಸುಂಗರು ಅಧಿಕಾರಕ್ಕೆ ಬಂದರೆಂದು ನಂಬಲಾಗಿದೆ. ಆದರೆ ಅವರ ಅಧಿಕಾರ ನಿಜವಾದುದೊ ಕಾಲ್ಪನಿಕವೊ ಸ್ಪಷ್ಟವಾಗಿ ಮತ್ತು ಅಸಂದಿಗ್ಧವಾಗಿ ಹೇಳುವ ಸ್ಥಿತಿಯಿಲ್ಲ. ಕ್ರಿ.ಪೂ. ೧೮೪ ಮತ್ತು ಕ್ರಿ.ಶ. ೩೨೦ರ ಮಧ್ಯೆ ಮಿಥಿಲೆಯ ಇತಿಹಾಸವು ಕತ್ತಲಲ್ಲಿ ಮುಳುಗಿದೆ. ಮತ್ತು ಆ ಬಗೆಗೆ ನಿಶ್ಚಿತವಾಗಿ ಏನನ್ನು ಹೇಳಲೂ ನಮ್ಮಲ್ಲಿ ಪ್ರಮಾಣಗಳಿಲ್ಲ. ಅಸ್ಥಿರ ಪ್ರಮಾಣವನ್ನು ಆಧರಿಸಿ, ಕುಶಾನರು ವೈಶಾಲಿಯ ಗಡಿಗಳ ವರೆಗೆ ತಮ್ಮ ಅಧಿಕಾರ ವಿಸ್ತರಿಸಿಕೊಂಡಿದ್ದರೆಂದು ನಂಬಲಾಗಿದೆ. ಕನಿಷ್ಕನು ಬುದ್ಧನ ಭಿಕ್ಷಾಪಾತ್ರೆಯನ್ನು ಒಯ್ದದ್ದು ಅಲ್ಲಿಂದಲೆ ಎಂದು ನಂಬಲಾಗಿದೆ. ಕುಶಾನರ ತರುವಾಯ ಶಕರು ವೈಶಾಲಿಯೊಂದಿಗೆ ಸ್ವಲ್ಪ ಸಂಬಂಧ

ಹೊಂದಿದ್ದಂತೆ ತೋರುತ್ತದೆ. ಏಕೆಂದರೆ, ೨೪೮ ನೆಯ ನಂಬರಿನ ಮುದ್ರೆಯಲ್ಲಿ ಹೀಗೆ ಕೆತ್ತನೆಯಿದೆ: 'ಮಹಾಕ್ಷಾತ್ರಪ ಸ್ವಾಮಿ ರುದ್ರಸಿಂಗ ಅರಸನ ಸೋದರಿ ಮಹಾರಾಣಿ ಪ್ರಭುದಾಮಳ ಮುದ್ರೆ'.[1] ಮೌರ್ಯರ ಪತನಾನಂತರ ಲಿಚ್ಛವಿಯರು ತಮ್ಮ ಸ್ವಾಯತ್ತತೆ ಮತ್ತು ಅನನ್ಯತೆಯನ್ನು ಕಾಯ್ದುಕೊಂಡು ಬಂದಿರುವ ಸಾಧ್ಯತೆಯುಂಟು. ಏಕೆಂದರೆ, ಕ್ರಿ.ಶ. ೪ನೆಯ ಶತಮಾನದ ಉತ್ತರ ಭಾರತದ ಇತಿಹಾಸದಲ್ಲಿ ಅವರು ಗಮನಿಸಲೇಬೇಕಾದ ಬಲಶಾಲಿಗಳಾಗಿ ಮೇಲೆದ್ದುದನ್ನು ಕಾಣುತ್ತೇವೆ.

ಒಬ್ಬ ಚಿಕ್ಕ ಭೂಒಡೆಯನಾದ ಒಂದನೆಯ ಚಂದ್ರಗುಪ್ತನೊಂದಿಗೆ ಜರುಗಿದ ರಾಜಕುವರಿ ಕುಮಾರದೇವಿಯ ವಿವಾಹದೊಂದಿಗೆ ಹೊಸ ರಾಜಕೀಯ ಅಧ್ಯಾಯ ಆರಂಭವಾಯಿತು. ಲಿಚ್ಛವಿ ರಾಜವಂಶದೊಂದಿಗಿನ ಈ ಸಂಬಂಧವೇ ಚಕ್ರಾಧಿಪತ್ಯ ಶಕ್ತಿಯನ್ನು ಪಡೆಯಲೆತ್ನಿಸುವಂತೆ ಅವನಿಗೆ ಧೈರ್ಯ ನೀಡಿತು. ಮತ್ತು ಆ ಕಾಲಕ್ಕೆ ಲಿಚ್ಛವಿಯರು ರಾಜಕೀಯವಾಗಿಯೂ ಸೈನಿಕವಾಗಿಯೂ ಶಕ್ತಿಶಾಲಿಗಳಾಗಿದ್ದರೆಂದು ಇದು ವಿಶದಪಡಿಸುತ್ತದೆ. ಅವರು ಪಾಟಲಿಪುತ್ರದ ಪ್ರಭುಗಳಾಗಿದ್ದಿರುವ ಸಾಧ್ಯತೆಯಿದೆ. ಗುಪ್ತ ಕಾಲಘಟ್ಟದಲ್ಲಿ ಮಿಥಿಲೆಯು ಗುಪ್ತ ಸಾಮ್ರಾಜ್ಯದ ಭಾಗವಾಗಿತ್ತು. ಮತ್ತು ವೈಶಾಲಿಯು ಚಕ್ರವರ್ತಿ ಗೋವಿಂದಗುಪ್ತನ ಅಧೀನ ಪ್ರಾಂತವಾಗಿತ್ತು. ತಿರಭುಕ್ತಿಯು ಹಲವು ಭುಕ್ತಿಗಳಲ್ಲೊಂದಾಗಿತ್ತು. ಬಸರ್ಹ್ ಮುದ್ರೆಗಳು ಗುಪ್ತರ ಆಡಳಿತ ಪದ್ಧತಿಯ ಮೇಲೆ ಸ್ವಾರಸ್ಯಕರ ಬೆಳಕು ಚೆಲ್ಲುತ್ತವೆ.

ಒಂದು ಜೇಡಿಮಣ್ಣಿನ ಮುದ್ರೆಯ ಮೇಲೆ ಹೀಗಿದೆ:

"ಚಂದ್ರಗುಪ್ತನ ಪತ್ನಿ ಮತ್ತು ಗೋವಿಂದಗುಪ್ತನ ತಾಯಿಯಾದ ಮಹಾದೇವಿ ಶ್ರೀ ಧ್ರುವಸ್ವಾಮಿನಿ". ತನ್ನ ತಂದೆಯ ಜೀವಿತಕಾಲದಲ್ಲಿ ಗೋವಿಂದಗುಪ್ತನು ಆ ಪ್ರಾಂತದ ಮಂಡಲಾಧಿಪತಿಯಾಗಿದ್ದನೆಂದು ಎಣಿಸಲಾಗಿದೆ. ಅವನು ಅಗ್ರಪಟ್ಟಾಧಿಕಾರಿ ಹಾಗೂ ಯುವರಾಜನಾಗಿದ್ದು ತನ್ನದೇ ಪ್ರತ್ಯೇಕ ಸೈನಿಕಸಿಬ್ಬಂದಿಯನ್ನು ಹೊಂದಿದ್ದನು. ಅವನು ತನ್ನ ಹೆಸರಿನಲ್ಲಿಯೆ ಆಡಳಿತ ನಡೆಸಿದನು. ೧೯೦೩-೦೪ ಮತ್ತು ೧೯೧೩-೧೪ರ ಉತ್ಖನನಗಳಲ್ಲಿ ಬ್ಲಾಕ್ ಮತ್ತು ಸ್ಪೂನರ್ ಅನುಕ್ರಮವಾಗಿ ಕಂಡುಹಿಡಿದ ವೈಶಾಲಿ ಮುದ್ರೆಗಳು ಅಲ್ಲಿ ಅನೇಕ ಅಧಿಕಾರಿಗಳು ಇದ್ದುದರ ಬಗೆಗೆ ನಮ್ಮ ಗಮನ ಸೆಳೆಯುತ್ತವೆ: ಉಪರಿಕ (ಮಂಡಲಾಧಿಪತಿ), ಕುಮಾರ ಅಮಾತ್ಯ (ಕಿರಿಯ ಸೋದರನಾಗಿದ್ದ ಮಂತ್ರಿ), ಮಹಾಪ್ರತಿಹಾರ (ಅರಮನೆಯ ಆಡಳಿತಾಧಿಕಾರಿ), ತಲವಾರ (ದಂಡನಾಯಕ ಅಥವಾ ಸ್ಥಳೀಯ ಮುಖ್ಯಸ್ಥ), ಮಹಾದಂಡನಾಯಕ, ವಿನಯಸ್ಥಿತಿಸ್ಥಾಪಕ (ದೋಷ ವಿಮರ್ಶಕ)[3] ಮತ್ತು ಭಟ್ಟಾಶ್ವಪತಿ (ಸೈನ್ಯ ಹಾಗೂ ಅಶ್ವದಳದ ಅಧಿಪತಿ). ಇವಲ್ಲದೆ ಈ ಮುಂದೆ ಕಾಣಿಸಿದ ಹುದ್ದೆಗಳ ಇನ್ನೊಂದು ಪಟ್ಟಿಯಿದೆ: ಯುವರಾಜ - ಪದಿಯಕುಮಾರ - ಅಮಾತ್ಯಾಧಿಕರ್ಣ (ಯುವರಾಜನ ಮಂತ್ರಿ), ರಣಭಂಡಾಗಾರ ಅಧಿಕರ್ಣ (ಯುದ್ಧ ಇಲಾಖೆಯ ಪ್ರಧಾನ ಕೋಶಾಧಿಕಾರಿ), ಬಲಾಧಿಕರ್ಣ (ಯುದ್ಧದ ಹುದ್ದೆ),

ದಂಡಪಸಾಧಿಕರ್ಣ (ತಿರಹತ್‌ನ ಮಂಡಲಾಧಿಕಾರಿ ಹುದ್ದೆ), ತಿರಭುಕ್ತೌ-ವಿನಯ-ಸ್ಥಿತಿಸ್ಥಾಪಕ -ಅಧಿಕರ್ಣ (ತಿರಹತ್‌ನ ದೋಷ ವಿಮರ್ಶಕನ ಹುದ್ದೆ), ವೈಶಾಲಿ ಅಧಿಷ್ಠಾನಾಧಿಕರಣ (ವೈಶಾಲಿ ನಗರದ ಆಡಳಿತಾಧಿಕಾರಿ ಹುದ್ದೆ), ಶ್ರೀ ಪರಮಭಟ್ಟಾರಕ - ಪದಿಯಕುಮಾರಮಾತ್ಯ - ಅಧಿಕರ್ಣ (ಮಹಿಮನ ಸೇವೆಗಾಗಿ ನಿಯುಕ್ತನಾದ ವಿದ್ಯಾರ್ಥಿ - ಮಂತ್ರಿ). ಈ ಹುದ್ದೆಯು ಚಕ್ರಾಧಿಪತ್ಯದ ಅಧಿಕಾರಿಗಳು ಮತ್ತು ಉಪರಾಜನ ಆಡಳಿತಾಧಿಕಾರಿಗಳ ಮಧ್ಯೆ ಸಂದೇಹಾತೀತ ವ್ಯತ್ಯಾಸ ಸ್ಥಾಪಿಸುವುದನ್ನು ಎಚ್.ಸಿ.ರಾಯಚೌಧರಿ ಗುರುತಿಸುತ್ತಾರೆ. ಆದಾಗ್ಯೂ, ತಿರಭುಕ್ತಿ ಪ್ರಾಂತದ ಅಧಿಕಾರಿಗಳ ಮತ್ತು ವೈಶಾಲಿ ಅಧಿಷ್ಠಾನದ ನಿಮ್ನ ಆಡಳಿತಾಧಿಕಾರ ಹೊತ್ತ ಸಾರ್ವಜನಿಕ ಸೇವಕರ ಪಟ್ಟಿಯ ಮಧ್ಯೆ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ.[4]

ಕ್ರಿ.ಶ. ೫೫೦ರ ನಂತರದ ಮಿಥಿಲೆಯ ಇತಿಹಾಸವೆಂದರೆ ಗೊತ್ತುಗುರಿಯಿಲ್ಲದ ಕೊಳ್ಳೆಗಳಿಂದೊಡಗೂಡಿದ ನಿರಂತರ ಯುದ್ಧ ಮತ್ತು ದಾಳಿಗಳ ನಾಟಕವಲ್ಲದೆ ಬೇರೇನೂ ಅಲ್ಲ. ಹಿಂದೆ ಸರಿಯುತ್ತಿದ್ದ ಮತ್ತು ಮುನ್ನುಗ್ಗುತ್ತಿದ್ದ ಸೈನ್ಯಗಳು ಪರಸ್ಪರರ ಮೇಲೆ ಕತ್ತಿಯೆತ್ತುತ್ತ ಕೊನೆಗೆ ಒಂದೊಂದಾಗಿ ಬಿದ್ದುಹೋದುದರ ಮೂಕ ಪ್ರೇಕ್ಷಕನಾಗಿತ್ತು, ಮಿಥಿಲೆ. ನಂತರದ ಘಟನೆಗಳು ತೋರಿಸಲಿದ್ದಂತೆ, ಮಿಥಿಲೆಯು ಶಕ್ತಿ ರಾಜಕೀಯದ ಅಖಾಡಾವಾಗಿತ್ತು. ಈ ಪ್ರದೇಶದಲ್ಲಿ ರಾಜಕೀಯ ಅಧಿಕಾರ ಪಡೆಯುವ ಅವಕಾಶವನ್ನು ದಿಢೀರನೆ ಮೇಲೆದ್ದ ರಾಜಕೀಯ ಸಾಹಸಿಗರು ಬಳಸಿಕೊಂಡರು. ಕ್ರಿ.ಶ. ೬ನೆಯ ಶತಮಾನದ ನಾಲ್ಕನೆಯ ದಶಕದಲ್ಲಿ ಗುಪ್ತ ಸಾಮ್ರಾಜ್ಯದ ಪರಿಸ್ಥಿತಿ ದುರ್ಬಲಗೊಂಡಿತ್ತು. ಯಶೋಧರ್ಮನ್‌ನು ಉತ್ತರ ಭಾರತದ ಪ್ರದೇಶಗಳ ಬಹುಭಾಗಗಳನ್ನು ಆಕ್ರಮಿಸಿಕೊಂಡಿದ್ದ ಹಾಗೂ ಬಂಗಾಲದ ದತ್ತರನ್ನು ನಿರ್ಮೂಲನಗೊಳಿಸಿದ್ದ. ಪುಂಡ್ರಭುಕ್ತಿಯ ಕೊನೆಯ ಗುಪ್ತ ಆಡಳಿತಾಧಿಕಾರಿಯಾದ ವಿಷ್ಣುಗುಪ್ತನು ಯಶೋಧರ್ಮನ್‌ನ ಕ್ರೂರ ಖಡ್ಗಕ್ಕೆ ಬಲಿಯಾದ. ಗುಪ್ತ ವಂಶವು ಕ್ರಿ.ಶ. ೫೫೪ ರಲ್ಲಿ ಕೊನೆ ಕಂಡಿತು. ಅವನತಿಯ ನಾಟಕದ ಗತಿ ಎಷ್ಟು ತೀವ್ರವಾಗಿತ್ತೆಂದರೆ ಅಂದಿನ ವಿಕೇಂದ್ರೀಕರಣ ಪ್ರವೃತ್ತಿಗೆ ತಡೆ ಹಾಕುವ ಸಾಮರ್ಥ್ಯ ಯಾರಿಗೂ ಇರಲಿಲ್ಲ. ಮೌಖರಿಯರು ಗೌಡರ ಮೇಲೆ ವಿಜಯ ಸಾಧಿಸಿದರೆಂದು ನಂಬಲಾಗಿದೆ. ಆದರೆ, ಕಾಮರೂಪದ ಮಹಾಭೂತವರ್ಮನ್‌ನು ಕಾತೋಯವನ್ನು ದಾಟಿ ಮಿಥಿಲಾ ಮತ್ತು ಮೊರಂಗಾದ ಪೂರ್ವ ಭಾಗವನ್ನು ಗೆದ್ದುಕೊಂಡು ತನ್ನ ವಿಜಯಗಳ ಸ್ಮರಣಾರ್ಥವಾಗಿ ಗೆದ್ದುಕೊಂಡ ಪ್ರದೇಶದಲ್ಲಿ ಬ್ರಾಹ್ಮಣರಿಗೆ ಭೂದತ್ತಿ ಕೊಟ್ಟನು. ಈ ಪ್ರದೇಶವು ಸುಸ್ಥಿತವರ್ಮನ್‌ನ ಆಳ್ವಿಕೆಯವರೆಗೆ ಕಾಮರೂಪದ ಅಧೀನದಲ್ಲಿಯೆ ಮುಂದುವರಿಯಿತು. ಕ್ರಿ.ಶ. ೬ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಗುಪ್ತ ಪಾರಮ್ಯವನ್ನು ಮರುಸ್ಥಾಪಿಸಲೆತ್ನಿಸಿದ ಮಹಾಸೇನಗುಪ್ತನು ಅದನ್ನು ಗೆದ್ದುಕೊಂಡ.[5]

ಯಶೋಧರ್ಮನ್‌ನ ನಿರ್ಗಮನಾನಂತರದ ತಿರಹತ್ ಇತಿಹಾಸದ ಬಗೆಗೆ ನಮಗೆ ಯಾವುದೆ ಮಾಹಿತಿಯಿಲ್ಲ. ಗುಪ್ತ ಮಾಂಡಲಿಕರಲ್ಲೊಬ್ಬನಾದ ಮಹಾಸೇನಗುಪ್ತನು ಮೌಖರಿಯರ ವಿರುದ್ಧ ಮುನ್ನೆಚ್ಚರಿಕೆಯಾಗಿ ಥಾಣೇಶ್ವರ ಮನೆತನದೊಂದಿಗೆ

ವಿವಾಹಸಂಬಂಧ ಬೆಳೆಸಿದ. ಈ ಸಂಬಂಧದಿಂದ ಮಹಾಸೇನಗುಪ್ತನ ಪರಿಸ್ಥಿತಿ ಉತ್ತಮಗೊಂಡಿತು. ಅವನು ಸುಸ್ಥಿತವರ್ಮನ್‌ನನ್ನು ಸೋಲಿಸಿ ಆ ಪ್ರದೇಶದಲ್ಲಿ ಗುಪ್ತ ಪಾರಮ್ಯವನ್ನು ಮರುಸ್ಥಾಪಿಸಿದ. ಮಹಾಸೇನಗುಪ್ತನ ರಾಜ್ಯದಲ್ಲಿ ಮಿಥಿಲೆಯು ಸೇರಿತ್ತೆಂದು ಆರ್.ಡಿ. ಬ್ಯಾನರ್ಜಿ ಅಭಿಪ್ರಾಯಪಡುತ್ತಾರೆ. ಚಾಲುಕ್ಯ ವಂಶದ ಒಂದನೆಯ ಕೀರ್ತಿವರ್ಮನ್‌ನು ಕ್ರಿ.ಶ. ೬ನೆಯ ಶತಮಾನದಲ್ಲಿ ಬಿಹಾರದ ಬಹುಭಾಗದ ಮೇಲೆ ತನ್ನ ಅಧಿಕಾರ ಜಮಾಯಿಸಿದ್ದನೆಂದು ಮಹಾಕೂಟ ಶಾಸನ ತಿಳಿಸುತ್ತದೆ.

ಯಶೋಧರ್ಮನ್‌ನ ಮಿಂಚಿನ ವಿಜಯಾನಂತರ ಸಂಭವಿಸಿದ ಗುಪ್ತ ಸಾಮ್ರಾಜ್ಯದ ವಿಸರ್ಜನೆಯೊಂದಿಗೆ ಕಾಮರೂಪದ ವರ್ಮನ್ ಅರಸರು ತಮ್ಮ ಅಧಿಕಾರವನ್ನು ಪಶ್ಚಿಮದತ್ತ ವಿಸ್ತರಿಸುತ್ತ ಇಂದಿನ ಪೂರ್ಣಿಯಾ ಜಿಲ್ಲೆಯಲ್ಲಿರುವ ಕೋಸಿ ನದಿ ತಲುಪಿದರು. ಅಲ್ಲಿ ಮಹಾಭೂತವರ್ಮನ್‌ನು ಮಿಥಿಲೆಯ ಬ್ರಾಹ್ಮಣರಿಗೆ ಭೂದತ್ತಿ ನೀಡಿದನೆಂದು ಹೇಳಲಾಗಿದೆ. ವರ್ಮನರು ಉತ್ತರ ಬಿಹಾರದ ಭಾಗವೊಂದರ ಮೇಲೆ, ವಿಶೇಷತಃ ಪೂರ್ಣಿಯಾ ಜಿಲ್ಲೆಯಲ್ಲಿ, ಅಧಿಕಾರ ಜಮಾಯಿಸಿದ್ದರೆಂದು ನಿಧಾನಪುರ ತಾಮ್ರಪಟಗಳ ಆಧಾರದ ಮೇಲೆ ಅಭಿಪ್ರಾಯಪಡಲಾಗಿದೆ. ಭಾಸ್ಕರವರ್ಮನ್‌ನ ಪುನರ್ದತ್ತಿಯ ೧೨೬, ೧೨೮ ಮತ್ತು ೧೩೦ನೆಯ ಸಾಲುಗಳು ಆ ದತ್ತಿಯ ನಕ್ಷೆಯನ್ನು ನೀಡುತ್ತವೆ. ಅದರಿಂದ ಆ ಪ್ರದೇಶವು ಕೋಸಿ ವಲಯದಲ್ಲೆಲ್ಲೊ ಇತ್ತೆಂದು ಸ್ಪಷ್ಟಪಡುತ್ತದೆ.[7] ಮಹಾಸೇನಗುಪ್ತನ ಕೈಯಲ್ಲಾದ ಸುಸ್ಥಿತವರ್ಮನ್‌ನ ಸೋಲನ್ನು ಸುಪ್ರತಿಷ್ಠಿತವರ್ಮನ್‌ನು ಸರಿಪಡಿಸಿದನು. ಆದಾಗ್ಯೂ ಅವನು ಗೌಡ ದೇಶೀಯರ ಬಾಹುಬಲವನ್ನು ಅನುಭವಿಸಬೇಕಾಯಿತು. ಅವನ ಉತ್ತರಾಧಿಕಾರಿಯಾದ ಭಾಸ್ಕರವರ್ಮನ್‌ನು ಬಂಗಾಲದಲ್ಲಿ ಶಶಾಂಕನ ಯಶಸ್ಸಿನಿಂದ ಎಷ್ಟೊಂದು ಭಯಭೀತನಾಗಿದ್ದನೆಂದರೆ ಅವನು ಹರ್ಷವರ್ಧನನ ಮೈತ್ರಿ ಕೋರಬೇಕಾಯಿತು. "ಇಡಿ ಉತ್ತರ ಭಾರತದ ಒಡೆಯನಾಗುವ ಮಹತ್ವಾಕಾಂಕ್ಷೆಯನ್ನು ಶಶಾಂಕನು ಕೈಬಿಡಬೇಕಾಯಿತು ಮತ್ತು ತನ್ನದೇ ಬಿಹಾರ, ಬಂಗಾಲ ಮತ್ತು ಒಡಿಸಾ ರಾಜ್ಯದಿಂದ ತೃಪ್ತನಾಗಬೇಕಾಯಿತು" ಎಂದು ಬಿ.ಪಿ.ಸಿನ್ಹಾ ಸೂಚಿಸುತ್ತಾರೆ. ಶಶಾಂಕನು ಉತ್ತರ ಮತ್ತು ದಕ್ಷಿಣ ಬಿಹಾರದ ಗಣನೀಯ ಭಾಗವನ್ನು ಗೆದ್ದುಕೊಂಡ. ಅವನ ರಾಜ್ಯವು ಕರ್ಣ - ಸುವರ್ಣ, ಮಗಧ ಮತ್ತು ತನ್ಮಧ್ಯದ ಭೂಪ್ರದೇಶವಾದ ತಿರಭುಕ್ತಿ ಮತ್ತು ಕಾಶಿಗಳನ್ನೊಳಗೊಂಡಿತ್ತು. ತಿರಹತ್‌ವು ಪಂಚವಲಯಗಳ ಗೌಡ ಪ್ರದೇಶದ ಭಾಗವಾಗಿತ್ತೆಂಬ ನಂಬಿಕೆಯು ಮಿಥ್ಯ ಮಾತ್ರವಾಗಿರದೆ ಶಶಾಂಕನ ಸಾಮ್ರಾಜ್ಯವನ್ನು ನೆನಪಿಸುತ್ತಿರಬಹುದು.

ಉತ್ತರದಲ್ಲಿ ನೇಪಾಳ, ಟಿಬೆಟ್ ಮತ್ತು ಚೀನಗಳೊಂದಿಗೆ ಮತ್ತು ಪೂರ್ವದಲ್ಲಿ ಕಾಮರೂಪದೊಂದಿಗೆ ಗಡಿಪ್ರಾಂತವಾಗಿದ್ದ ಮಿಥಿಲೆಯು ಹರ್ಷವರ್ಧನನ ಆಳ್ವಿಕೆಯಲ್ಲಿ ಮಹತ್ವ ಪಡೆಯಿತು. ಹರ್ಷವರ್ಧನನ ರಾಜ್ಯದಲ್ಲಿ ವೈಶಾಲಿಯೂ ಸೇರಿತ್ತು. ತಿರಭುಕ್ತಿ ಅವನ ಕಕ್ಷೆಯಲ್ಲಿ ಬಂದಿತ್ತು ಮತ್ತು ಅವನನ್ನು ಇಡು ಇಂಡೀಜ್‌ಗಳ ದೊರೆಯೆಂದು

ಹುಯೆನ್ ತ್ಸಾಂಗ್ ಕರೆದಿದ್ದಾನೆ: ೧. ಪಂಜಾಬ ೨. ಕಾನ್ಯಕುಬ್ಜ ೩. ಮಿಥಿಲಾ ೪. ಗೌಡ ಮತ್ತು ೫. ಉತ್ಕಲ. ಹರ್ಷವರ್ಧನನು ಮಿಥಿಲೆಯನ್ನು ಗೆದ್ದುಕೊಂಡುದು ಬಹುಶಃ ಶಶಾಂಕನ ಪತನಾನಂತರ. ತಿರಹತ್‌ಅನ್ನು ಚೀನಿಯರು ಟಿವಟ್ ಹೊ ಎಂದು ಕರೆಯುತ್ತಿದ್ದರು. ಹುಯೆನ್ ತ್ಸಾಂಗನು ಕ್ರಿ.ಶ. ೬೩೫ ರಲ್ಲಿ ತಿರಹತ್‌ಗೆ ಭೆಟ್ಟಿ ಕೊಟ್ಟು ಆ ಪ್ರದೇಶದಲ್ಲಿ ಬೌದ್ಧ ಧರ್ಮ ಕ್ಷೀಣಿಸುತ್ತಿದ್ದುದನ್ನು ಕಂಡ. ವಿನಾಶದ ಸ್ಥಿತಿಯಲ್ಲಿದ್ದ ವೈಶಾಲಿ ಆಡಳಿತದ ಬಗೆಗೆ ಅವನು ವರ್ಣಿಸ ತಾಳಿರುವನು. ಆ ಕಾಲದ ವೈಶಾಲಿಯಲ್ಲಿ ತೀರಾ ಕಡಿಮೆ ಬೌದ್ಧರಿದ್ದರು. ಹರ್ಷವರ್ಧನನ ಆಳ್ವಿಕೆಯಲ್ಲಿ ತಿರಭುಕ್ತಿಯು ಮಹತ್ವದ ಆಡಳಿತ ಕೇಂದ್ರಗಳಲ್ಲೊಂದಾಗಿ ದ್ದಂತೆ ತೋರುತ್ತದೆ. ಹರ್ಷನ ಮರಣ ಕಾಲಕ್ಕೆ ಅರ್ಜುನ ಅಥವಾ ಅರುಣಾಶ್ವನು ತಿರಭುಕ್ತಿಯ ಮಂಡಲಾಧಿಪತಿಯಾಗಿದ್ದ, ಹರ್ಷವರ್ಧನನ ಮರಣಾನಂತರ ಅವನು ಸಿಂಹಾಸನವನ್ನು ಆಕ್ರಮಿಸಿಕೊಂಡನೆಂದು ಹೇಳಲಾಗಿದೆ. ತರುವಾಯದಲ್ಲಿ ತಿಬೆಟಿ ದಾಳಿಗಳು ಸಂಭವಿಸಿದವು.

ಹರ್ಷವರ್ಧನನ ಮರಣಾನಂತರ ಹಿಂದೆಂದೂ ಕಾಣದ ಮಟ್ಟದ ಉತ್‌ಪ್ಲವನ ಸಂಭವಿಸಿತು. ಹರ್ಷನ ಮರಣದ ಕ್ಷಿಪ್ರ ತರುವಾಯದಲ್ಲಿ ಒಂದು ಚೀನಿ ನಿಯೋಗ ಭಾರತಕ್ಕೆ ಆಗಮಿಸಿತು. ಅರ್ಜುನ ಅಥವಾ ಅರುಣಾಶ್ವನು ನಿಯೋಗದ ಮೇಲೆ ಆಕ್ರಮಣ ಮಾಡಿದನೆಂದು ಹೇಳಲಾಗಿದೆ. ನಿಯೋಗದ ಮುಂದಾಳು ವಾಂಗ್‌ನು ತಿಬೆಟಿನ ಮತ್ತು ಕಾಮರೂಪದ ಭಾಸ್ಕರವರ್ಮನ್‌ನ ಸಹಾಯ ಕೋರಿದ. ನೇಪಾಳದಿಂದಲೂ ಸಹಾಯ ಬಂತು. ಈ ಪ್ರಸಂಗದ ಬಗೆಗಿನ ಮೂಲಗಳು ಒಂದಕ್ಕೊಂದು ವಿರುದ್ಧವಾಗಿದ್ದು ಯಾವುದೆ ನಿಶ್ಚಿತ ತೀರ್ಮಾನಕ್ಕೆ ಬರುವುದು ಕಠಿಣ. ಈ ಪ್ರಸಂಗದ ಬಗೆಗಿನ ಉದ್ಧೃತ ಭಾಗಗಳು ಬರೀ ತುಣುಕಾಗಿ ಲಭ್ಯವಿದ್ದು ತರುವಾಯದ ನಂಬಿಕೆಗಳನ್ನು ತಾಂಗ್ ರಾಜವಂಶದ ಇತಿಹಾಸ, ಮಾ- ತ್ವಾ-ಲಿನ್ ಮತ್ತು ಬೇರೆ ಆಕರಗಳಲ್ಲಿ ಸಂರಕ್ಷಿಸಲಾಗಿದೆ. ಹರ್ಷವರ್ಧನನ ಮರಣಾನಂತರ ನಾಡಿನಲ್ಲಿ ಅರಾಜಕತೆ ಉಂಟಾಗಿ ಅರ್ಜುನ ಅಥವಾ ಅರುಣಾಶ್ವನು ರಾಜಕೀಯ ದೃಶ್ಯದಲ್ಲಿ ಕಾಣಿಸಿಕೊಂಡನೆಂದು ಚೀನಿ ಆಕರಗಳಿಂದ ತಿಳಿಯುತ್ತದೆ. ಅವನು ವಾಂಗ್ ನಿಯೋಗವನ್ನು ಅಪಮಾನಗೊಳಿಸಿದನು. ವಾಂಗ್ ತಿಬೆಟಿಗೆ ತೆರಳಿ ಕೆಲವು ಆಯ್ದು ತಿಬೆಟಿ ಅಶ್ವದಳ ಮತ್ತು ಕಾಲ್ದಳ ತೆಗೆದುಕೊಂಡು ಬಂದು ಅರ್ಜುನ ಅಥವಾ ಅರುಣಾಶ್ವನನ್ನು ಸೆರೆಹಿಡಿದು ಚೀನಕ್ಕೊಯ್ದನು. ಇವೆಲ್ಲ ಘಟನೆಗಳು ಮತ್ತು ವೃತ್ತಾಂತಗಳು, ಆಕ್ರಮಿಸಿಕೊಂಡಿದ್ದ ಮಂತ್ರಿಯು ತಿರಹತ್‌ನ ಸ್ಥಳೀಯ ಪ್ರಭುವಾಗಿದ್ದನು ಮತ್ತು ದಾಳಿಗಳು ಈ ಪ್ರದೇಶಕ್ಕೆ ಮಾತ್ರ ಸೀಮಿತಗೊಂಡಿದ್ದವೆಂದು ತಿಳಿಸುತ್ತವೆ. ಪಿ.ಸಿ. ಬಾಗ್ಚಿಯವರು ಅರ್ಜುನ ಅಥವಾ ಅರುಣಾಶ್ವನನ್ನು ತಿರಭುಕ್ತಿಯ ಅರಸನೆಂದು ಕರೆಯುತ್ತಾರೆ.[೨] ಅರಾಜಕತೆ ಮತ್ತು ಗೊಂದಲ ಮುಂದುವರಿದವು ಮತ್ತು ಕ್ರಿ.ಶ. ೭೦೨ ರವರೆಗೆ ತಿರಹತ್‌ನ ಒಂದು ಭಾಗ ತಿಬೆಟಿನ ನಿಯಂತ್ರಣದಲ್ಲಿತ್ತೆಂದು ನಂಬಲಾಗಿದೆ. ತಿಬೆಟಿ ಅರಸನು ಕ್ರಿ.ಶ. ೭೦೨ರ ಕೊಂಚ ತರುವಾಯ ನೇಪಾಳ ಮತ್ತು ತನ್ನ ವಿರುದ್ಧ ದಂಗೆಯೆದ್ದಿದ್ದ ಭಾರತದ ಸರಹದ್ದಿನ

ಜನರ ಮೇಲೆ ನಡೆದ ದಾಳಿಯಲ್ಲಿ ಮೃತಪಟ್ಟನೆಂದು ಲೂಸಿಯಾನೊ ಪೆಟೆಕ್ ತೋರಿಸಿಕೊಟ್ಟಿರುವರು.[೧೦] ತಿಬೆಟಿ ದಂಡಯಾತ್ರೆಯು ಕೆಲ ವರ್ಷಗಳ ವರೆಗೆ ಉತ್ತರ ಬಿಹಾರದ ಅತ್ಯಲ್ಪ ಭಾಗವನ್ನು ಕದಡಿದ್ದಿರಬಹುದಾದರೂ ಭಾರತೀಯ ಇತಿಹಾಸದ ಸಾಮಾನ್ಯ ಗತಿಯ ಮೇಲೆ ಪರಿಣಾಮ ಬೀರಲಿಲ್ಲ. ವಿ.ಎ.ಸ್ಮಿಥ್ ಈ ಘಟನೆಯನ್ನು ಅಪಾರ ಮಹತ್ವದ್ದೆಂದು ಪರಿಗಣಿಸಿದರೆ ಆರ್.ಸಿ. ಮಜುಮದಾರ ಅದಕ್ಕೆ ಬಹಳ ಮಹತ್ವ ನೀಡುವುದಿಲ್ಲ.

ಹರ್ಷವರ್ಧನನ ಮರಣಾನಂತರ ಮಹಾಸೇನಗುಪ್ತನ ಪುತ್ರ ಮಾಧವಗುಪ್ತನು ಅರ್ಜುನ ಅಥವಾ ಅರುಣಾಶ್ವನ ಒತ್ತಡಗಳಿಗೆ ತಡೆಯೊಡ್ಡಿದನು. ಉತ್ತರ ಬಿಹಾರದಲ್ಲಿಯ ಸಮಕಾಲೀನ ಉತ್ಪ್ಲವನಗಳಿಂದ ತಟಸ್ಥನಾಗಿದ್ದುಕೊಂಡು ಮಗಧವನ್ನು ಅವನು ತಿಬೆಟಿ ಅತಿಕ್ರಮಣದಿಂದ ಕಾಪಾಡಿದ. ಅವನ ಉತ್ತರಾಧಿಕಾರಿಯಾದ ಆದಿತ್ಯಸೇನನು ಚಕ್ರಾಧಿಪತ್ಯದ ಆಧ್ಯಾತ್ಮಿಕ ಚಳುವಳಿಯನ್ನು ಮುಂದುವರಿಸುವ ಮಹತ್ವಾಕಾಂಕ್ಷೆ ಹೊಂದಿದ್ದ. ಜಯದೇವನ ಕಾಲದ ನೇಪಾಳಿ ಶಾಸನವು ಆದಿತ್ಯಸೇನನನ್ನು ಮಗಧದ ಮಹಾ ಅರಸನೆಂದು ಉಲ್ಲೇಖಿಸುತ್ತದೆ. ಅವನು ಶಕ್ತಿಶಾಲಿ ಅರಸನಾಗಿದ್ದು ಅವನಿಗೆ ಉತ್ತರ ಬಿಹಾರದಿಂದ ತಿಬೆಟಿಯರನ್ನು ಹೊರಗಟ್ಟಿದ ಶ್ರೇಯಸ್ಸು ನೀಡಲಾಗಿದೆ. ಆದರೆ, ಅವರನ್ನು ಸಂಪೂರ್ಣವಾಗಿ ಹೊರಗಟ್ಟಿದ ನಿಜವಾದ ಶ್ರೇಯಸ್ಸು ಮೂರನೆಯ ಅರಸನಾದ ವಿಷ್ಣುಗುಪ್ತನಿಗೆ ಸಲ್ಲುವುದು. ಮುಜಫ್ಫರಪುರ ಜಿಲ್ಲೆಯ ಕಾಟ್ರಾ ಪೋಲಿಸ್ ಠಾಣೆಯಲ್ಲಿ ತಾಮ್ರಪಟವೊಂದನ್ನು ಇತ್ತೀಚೆಗೆ ಕಂಡುಹಿಡಿಯಲಾಗಿದೆ. ಚಾಮುಂಡವಿಸಯ ಎಂಬ ಇದುವರೆಗೆ ಗೊತ್ತಿರದ ಜಿಲ್ಲೆಯೂ ಸೇರಿದಂತೆ ತಿರಭುಕ್ತಿಯು ಮಹತ್ವದ ಆಡಳಿತ ಕೇಂದ್ರವಾಗಿ ಮುಂದುವರಿಯಿತೆಂದು ಆ ತಾಮ್ರಪಟ ತಿಳಿಸುತ್ತದೆ. ಇಮ್ಮಡಿ ಜೀವಿತಗುಪ್ತನು ತರುವಾಯದ ಗುಪ್ತ ವಂಶದ ಕೊನೆಯ ಅರಸನಾಗಿದ್ದನು. ಮತ್ತು ಅವನನ್ನು ಕನೌಜದ ಯಶೋವರ್ಮನ್‌ನು ಸೋಲಿಸಿದನು. ಅವನು ತಿರಭುಕ್ತಿಯನ್ನು ಜಯಿಸಿದನು ಮತ್ತು ತರುವಾಯದ ಗುಪ್ತರ ವ್ಯಾಪಕ ಸಾಮ್ರಾಜ್ಯವನ್ನು ಅಪಮಾನಕರ ಅಂತ್ಯಕ್ಕೆ ತಂದು ನಿಲ್ಲಿಸಿದ. ಯಶೋವರ್ಮನ್‌ನ ಪತನದಿಂದ ಕ್ರಿ.ಶ. ೭೭೦ರಲ್ಲಿ ಪಾಲರ ಉದಯದ ವರೆಗಿನ ಮಿಥಿಲೆಯ ಇತಿಹಾಸದ ಬಗೆಗೆ ಯಾವುದೇ ಖಚಿತ ಮಾಹಿತಿಯಿಲ್ಲ.

ಗುಪ್ತರ ನಂತರ ಪಾಲರು ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಪಾಲ ಸಾಮ್ರಾಜ್ಯದಾರಭ್ಯ ಮಿಥಿಲೆಯು ಅದರ ಭಾಗವಾಗಿದ್ದಂತೆ ತೋರುತ್ತದೆ. ಧರ್ಮಪಾಲನು ಈ ಘನ ವಂಶದ ಸಂಸ್ಥಾಪಕನಾಗಿದ್ದನು ಮತ್ತು ಸಮಕಾಲೀನ ಭಾರತದ ರಾಜಕೀಯದಲ್ಲಿ ಪ್ರಭಾವಶಾಲಿ ವ್ಯಕ್ತಿಯಾಗಿದ್ದನು. ಶಶಾಂಕನ ಕಾಲದಲ್ಲಿ ಆರಂಭಗೊಂಡ ಪಂಚಗೌಡ ಪರಿಕಲ್ಪನೆಯು ಪಾಲ ಕಾಲಘಟ್ಟದಲ್ಲಿ ಶಿಖರ ತಲುಪಿತು. ಪಾಲ ಮತ್ತು ಸೇನರ ಕಾಲದ ವರೆಗೆ ಮಿಥಿಲೆಯು ಬಂಗಾಲದ ಐದನೆಯ ವಿಭಾಗವೆಂದು ಪರಿಗಣಿತವಾಗಿತ್ತು. ಧರ್ಮಪಾಲನು ಕಾಮರೂಪ, ತಿರಹತ್, ಗೌಡ ಮತ್ತು ಇತರ ರಾಜ್ಯಗಳನ್ನು

ಸ್ವಾಧೀನಪಡಿಸಿಕೊಂಡನು. ಹಿಮಾಲಯದಡಿಯಲ್ಲಿ ಅವನು ದಾಳಿಯ ನೇತೃತ್ವ ವಹಿಸಿದ್ದನೆಂದು ನಂಬಲಾಗಿದೆ. ಕೇದಾರ, ಗೋಕರ್ಣ, ನೇಪಾಳ, ಬಾಗಮತಿ ಇತ್ಯಾದಿಗಳನ್ನು ಧರ್ಮಪಾಲ ಗೆದ್ದುದನ್ನು ನೋಡಿದರೆ ಅವನು ಮಿಥಿಲೆಯನ್ನು ಗೆದ್ದುಕೊಂಡದ್ದು ನಿಜವೆಂದು ತೋರುತ್ತದೆ. ಅವನ ಮಗ ದೇವಪಾಲನು ತಂದೆಯ ಪರಂಪರೆಯನ್ನು ಮುಂದುವರಿಸಿದನು. ದೇವಪಾಲನ ನಂತರ ಪಾಲರ ಉಜ್ವಲತೆ ಇಳಿಮುಖವಾಯಿತು.

ನಾರಾಯಣಪಾಲನ ಭಾಗಲಪುರ ದತ್ತಿಯು ತಿರಭುಕ್ತಿಯ ಕಕ್ಷವಿಸಯದಲ್ಲಿಯ ಶಿವದೇವಾಲಯಕ್ಕೆ ಗ್ರಾಮದತ್ತಿ ಇತ್ತುದನ್ನು ದಾಖಲಿಸುತ್ತದೆ. ಈ ದಾಖಲೆಯು ಪಾಲರು ತಿರಭುಕ್ತಿಯ ಮೇಲೆ ಅಧಿಕಾರ ಹೊಂದಿದ್ದರೆಂಬ ಸಂಗತಿಗೆ ಅಳಿಸಲಾಗದ ಸಾಕ್ಷಿಯಾಗಿದೆ. ಏಕೆಂದರೆ, ಯಾವ ಅರಸನೂ ತಾನು ಅಧಿಕಾರ ಹೊಂದಿರದ ಊರಿನಲ್ಲಿ ದತ್ತಿ ನೀಡುವುದಿಲ್ಲ. ತಾನು ಆ ಪ್ರದೇಶದಲ್ಲಿ ಸಾವಿರ ಶಿವದೇವಾಲಯಗಳನ್ನು ಕಟ್ಟಿಸಿದ್ದಾಗಿ ಅವನು ಹೆಮ್ಮೆಪಟ್ಟಿರುವನು.

ಪ್ರತಿಹಾರರು ಸಹ ಅಖಿಲ ಭಾರತ ಸಾಮ್ರಾಜ್ಯ ಕಟ್ಟಲೆತ್ನಿಸಿದರು. ಆದರೆ, ದೇವಪಾಲನ ಕಾಲದ ವರೆಗೆ ಅವರನ್ನು ಯಶಸ್ವಿಯಾಗಿ ತಡೆಗಟ್ಟಲಾಯಿತು. ಮಹೇಂದ್ರಪಾಲನು ಬಂಗಾಲದ ವರೆಗೆ ತನ್ನ ವಿಜಯಗಳನ್ನು ವಿಸ್ತರಿಸಿದನು ಮತ್ತು ಉತ್ತರ ಬಿಹಾರದ ಒಂದು ಭಾಗವು ಪ್ರತಿಹಾರರ ಅಧೀನಕ್ಕೊಳಪಟ್ಟಿತ್ತೆಂದು ದಿಘವಾ - ದುಬೌಲಿ ತಾಮ್ರಪಟದಿಂದ ಗೊತ್ತಾಗುತ್ತದೆ. ರಾಜ್ಯಪಾಲನ ಆಳ್ವಿಕೆಯಲ್ಲಿ ಗುರ್ಜರ ಪ್ರತಿಹಾರರು ಸೋನ ನದಿಯನ್ನು ದಾಟಿದರು ಮತ್ತು ತಿರಹತ್‌ಅನ್ನು ವಶಪಡಿಸಿಕೊಂಡರು. ಇಡಿ ತಿರಹತ್‌ಅನ್ನು ಗೆದ್ದುಕೊಂಡರೊ ಇಲ್ಲವೊ ಹೇಳುವುದು ಕಠಿಣ. ಪ್ರತಿಹಾರರ ತರುವಾಯ ಯಶೋವರ್ಮನ್ ಚಾಂದೇಲನು ಮತ್ತು ಆತನ ಪುತ್ರ ಧಂಗನು ಪೌರ್ವಾತ್ಯ ಅರಸರ ಸಂಪನ್ಮೂಲಗಳನ್ನು ಕುಂಠಿತಗೊಳಿಸುವ ನೀತಿಯನ್ನು ಅನುಸರಿಸಿದರು. ಆಗ ಪಾಲ ರಾಜ್ಯ ಕಷ್ಟದಲ್ಲಿತ್ತು. ಚಾಂದೇಲ ದಾಖಲೆಗಳಿಗೆ ಸಂಬಂಧಿಸಿರುವ ಖಜುರಾಹೊ ಶಾಸನದ ೨೩ನೆಯ ಪದ್ಯವು ಮಿಥಿಲೆಯನ್ನು ಕುರಿತ ಏಕೈಕ ಉಲ್ಲೇಖವಾಗಿದೆ. ಯಶೋವರ್ಮನ್‌ನು "ಗೌಡರೆಂಬ ಬಳ್ಳಿಗಳನ್ನು ತುಂಡರಿಸುವ ಖಡ್ಗವಾಗಿದ್ದನು ಮತ್ತು ಮೈಥಿಲರನ್ನು ದುರ್ಬಲಗೊಳಿಸಿದನು" ಎಂದು ಹೇಳಲಾಗಿದೆ. ಚಾಂದೇಲರ ನಿವೃತ್ತಿನಂತರ ಒಂದನೆಯ ಮಹಿಪಾಲನ ಪಶ್ಚಾತ್ ಪಾಲರು ತಮ್ಮ ಅಧಿಕಾರವನ್ನು ಪುನಃ ಪಡೆದುಕೊಂಡರು. ತಿರಹತ್ ಮೇಲೆ ಪಾಲರ ಸ್ವಾಧೀನವಿತ್ತೆಂಬುದು ಒಂದನೆಯ ಮಹಿಪಾಲನ ಇಮದ್ಪುರ ವಿಗ್ರಹಶಾಸನದಿಂದ ಸ್ಪಷ್ಟವಾಗುತ್ತದೆ. ಇದೇ ಕಾಲದಲ್ಲಿ ತಿರಹತ್ ಕಲಚೂರಿಯರ ನಿಯಂತ್ರಣದಲ್ಲಿತ್ತೆಂದು ಹೇಳಲಾಗಿದೆ. ಈ ಅಭಿಪ್ರಾಯಕ್ಕೆ ಆಧಾರವೆಂದರೆ ರಾಮಾಯಣದ ಹಸ್ತಪ್ರತಿಯೊಂದರ ಅಂತ್ಯಪ್ರಶಸ್ತಿ. ಗಂಗದೇವನ ಆಳ್ವಿಕೆಗೆ ಸಂಬಂಧಿಸಿದಂತೆ ಈ ಅಂಶವನ್ನು ಚರ್ಚಿಸಲಾಗಿದೆ. ಅಂತ್ಯಪ್ರಶಸ್ತಿಯ ಸಂವತ್‌ನ್ನು ಶಾಲಿವಾಹನ ಶಕೆ ಎಂದು ಗ್ರಹಿಸಿ ಕ್ರಿ.ಶ. ೧೧೫೪ ಎಂದು ನಿಗದಿಪಡಿಸಬೇಕಲ್ಲದೆ ಇತರರು ಸೂಚಿಸಿದಂತೆ ವಿಕ್ರಮ ಶಕೆ ಅಲ್ಲವೆಂಬುದಕ್ಕೆ ಆರ್.ಸಿ.ಮಜುಮದಾರ ಮತ್ತು ಆರ್.ಕೆ.ಚೌಧರಿಯವರೊಂದಿಗೆ ನನ್ನ ಸಹಮತವಿದೆ. ಈ

ಗಂಗದೇವನನ್ನು ಮಿಥಿಲೆಯ ಗಂಗದೇವನೆಂದು ಗುರುತಿಸಬೇಕು. ಇವನು ರಾಷ್ಟ್ರಕೂಟ ವಂಶದ ಅರಸನೆಂದು ಬಿ.ಪಿ.ಸಿನ್ಹಾ ಗುರುತಿಸುವರು. ಆದರೆ, ತಮ್ಮ ಅಭಿಪ್ರಾಯದ ಸಮರ್ಥನೆಗೆ ಅವರು ಯಾವುದೆ ಸಮಂಜಸ ವಾದವನ್ನು ಮುಂದಿಟ್ಟಿಲ್ಲ. ಹಾಗೆಯೆ, ಯು. ಠಾಕೂರರ ನಿರ್ಣಯವೂ ಹಾದಿ ತಪ್ಪಿಸುವಂಥದಾಗಿದೆ.

ಪಾಲರು ಈ ಭಾಗದ ಮೇಲಿನ ತಮ್ಮ ಹಿಡಿತವನ್ನು ಗಟ್ಟಿಗೊಳಿಸುತ್ತಿರುವಾಗಲೆ ಕಲಚೂರಿಯರು ಮಿಥಿಲಾ ಪ್ರದೇಶದೊಳಕ್ಕೆ ಕೆಲವು ವಿನಾಶಕಾರಿ ದಾಳಿಗಳನ್ನು ಮಾಡಿದರು. ಮುಮ್ಮಡಿ ವಿಗ್ರಹಪಾಲನು ಕರ್ಣನನ್ನು ಸೋಲಿಸಿ ಅವಳ ಪುತ್ರಿ ಯೌವನಶ್ರೀಯನ್ನು ಮದುವೆಯಾದನೆಂದು ಹೇಳಲಾಗಿದೆ. ವಿಕ್ರಮಶಿಲೆಯ ಆತಿಶ ದೀಪಂಕರನು ಕಲಚೂರಿಯರು ಮತ್ತು ಪಾಲರ ಮಧ್ಯೆ ಮಧ್ಯಸ್ಥಿಕೆ ವಹಿಸಿದ್ದನೆಂದು ಹೇಳಲಾಗಿದೆ. ಅದು 'ಕಪಾಲಸಂಧಿ' ಯಾಗಿತ್ತೆಂದೂ ಹಾಗಾಗಿ ಮುಮ್ಮಡಿ ವಿಗ್ರಹಪಾಲನು ಕರ್ಣನನ್ನು ಸಂರಕ್ಷಿಸಿದನೆಂದೂ ಷ್ಕಂಧ್ಯಾಕರ ನಂದಿಯಿಂದ ತಿಳಿದುಬರುತ್ತದೆ. ಈ ತರಹದ ಒಪ್ಪಂದವು ಕರ್ಣನ ನಿಮ್ನ ಅಂತಸ್ತನ್ನು ಸೂಚಿಸುತ್ತದೆ. ಪಾಲರು ಉತ್ತರ ಬಿಹಾರವನ್ನು ಪ್ರವೇಶಿಸಿ ಅಲ್ಲಿ ತಮ್ಮೊಬ್ಬ ಜೈಸ್ಕಂಧವಾರನನ್ನು ಇಟ್ಟಿದ್ದರೆಂದು ನೌಲಗಡ ಶಾಸನ, ಬಣಗಾಂವ ತಾಮ್ರಪಟ ಮತ್ತು *ರಾಮಚರಿತ*ಗಳ ಆಧಾರಗಳು ಸೂಚಿಸುತ್ತವೆ. ಮುಮ್ಮಡಿ ವಿಗ್ರಹಪಾಲನ ನಂತರವೂ ಪಾಲ ಅರಸರು ಉತ್ತರ ಬಿಹಾರದಲ್ಲಿ ತಮ್ಮ ಸಾರ್ವಭೌಮತ್ವ ಇತ್ತೆಂದು ಸಾಧಿಸಿದರು. ಕ್ರಿ.ಶ. ೧೦೯೭ ರಲ್ಲಿ ನಾನ್ಯದೇವನ ಉದಯದ ವರೆಗೆ ಮಿಥಿಲೆಯು ಪಾಲ ಸಾಮ್ರಾಜ್ಯದ ಅಂಗವಾಗಿತ್ತು. ರಾಮಪಾಲನು ಜನಕನ ರಾಜ್ಯವನ್ನು ಗೆದ್ದುಕೊಂಡು ತನ್ನ ಕೀರ್ತಿಯನ್ನು ಪಸರಿಸಿದನೆಂದು ಕಮೌಲಿ ದತ್ತಿಯ ೪ನೆಯ ಪದ್ಯ ದೃಢೀಕರಿಸುತ್ತದೆ. ಮಹಿಪಾಲನ ದತ್ತಿ ಸಹ ಪಾಲರ ಅಂಶಿಕ ರಾಜ್ಯವನ್ನು ಉಲ್ಲೇಖಿಸುತ್ತದೆ. ರಾಮಪಾಲನು ಪಾಲರ ಆಂಶಿಕ ಪುನರುಜ್ಜೀವನಕ್ಕೆ ಯತ್ನಿಸಿದನು. ಅವನ ಕಾಲದಲ್ಲಿ, ಪಾಲ ರಾಜ್ಯವು ಉತ್ತರ ಮತ್ತು ಮಧ್ಯ ಬಿಹಾರಕ್ಕೆ ಸೀಮಿತವಾಗಿತ್ತು. ಮಿಥಿಲೆಯು ಪಾಲ ರಾಜ್ಯದ ಉತ್ತರ ಗಡಿಯಾಗಿತ್ತು. ಮತ್ತು ಅದು ರಾಮಪಾಲನ ಆಳ್ವಿಕೆಯಲ್ಲಿ ಯಾ ತದನಂತರ ನಾಶವಾಯಿತು. ಐತಿಹ್ಯಗಳು ಮಿಥಿಲೆಯ ಇತಿಹಾಸವನ್ನು ಪಾರಮಾರರು ಮತ್ತು ಕಲಚೂರಿಯರೊಂದಿಗೆ ಜೋಡಿಸುತ್ತವೆ. ಆದರೆ, ಈ ವಾದವನ್ನು ಸಮರ್ಥಿಸುವ ಶಾಸನಾಧಾರಿತ ಅಥವಾ ನಾಣ್ಯಾಧಾರಿತ ಅಥವಾ ಸಾಹಿತ್ಯಿಕ ಮೂಲಗಳಿಲ್ಲ. ಕ್ರಿ.ಶ. ೧೧ನೆಯ ಶತಮಾನದ ಕೊನೆಯ ಪಾದದಲ್ಲಿ ಚಾಲುಕ್ಯ ಸೋಮೇಶ್ವರನು ಮತ್ತವನ ಪುತ್ರ ವಿಕ್ರಮಾದಿತ್ಯನು ಉತ್ತರ ಭಾರತದ ಅನೇಕ ಅರಸರ ವಿರುದ್ಧ ಯಶಸ್ವಿಯಾಗಿ ಕತ್ತಿ ಎತ್ತಿದರೆಂದು ಬಿಲ್ಹಣನ *ವಿಕ್ರಮಾಂಕದೇವಚರಿತ*ದಿಂದ ತಿಳಿಯುವುದು. ತಾವು ನೇಪಾಳದ ಮೇಲೆ ಪ್ರಭುತ್ವ ಪಡೆದಿದ್ದುದಾಗಿ ಅವರು ಸಾಧಿಸುತ್ತಾರೆ ಮತ್ತು ಮುಮ್ಮಡಿ ಸೋಮೇಶ್ವರನ (ಆರನೆಯ ವಿಕ್ರಮಾದಿತ್ಯನ ಪುತ್ರ) ಶಾಸನವೊಂದು ಅವನು "ಆಂಧ್ರ, ದ್ರಾವಿಡ, ಮಗಧ ಮತ್ತು ನೇಪಾಳ ಅರಸರ ಮಸ್ತಕಗಳ ಮೇಲೆ ಪಾದ ಇರಿಸಿದ್ದನು"[14] ಎಂದು ಹೇಳುತ್ತದೆ.

ಈ ದಾಕ್ಷಿಣಾತ್ಯ ದಾಳಿಗಳಿಂದಾಗಿ, ಗಹಡವಾಲರು, ಕರ್ನಾಟರು ಮತ್ತು ಸೇನರು

ಅನುಕ್ರಮವಾಗಿ ಕನೌಜ, ಮಿಥಿಲಾ ಮತ್ತು ಬಂಗಾಲಗಳಲ್ಲಿ ಮೂರು ರಾಜ್ಯಗಳನ್ನು ಸ್ಥಾಪಿಸಿದರು. ತಿರಹತ್‌ನಲ್ಲಿ ತಡೆಯೊಡ್ಡಿರದಿದ್ದರೆ ಗಹಡವಾಲರ ಮುನ್ನಡೆಯು ಅಯೋಧ್ಯೆಯಲ್ಲಿಗೇ ನಿಲ್ಲುತ್ತಿರಲಿಲ್ಲ.[15] ಎಂದು ಕೆ.ಪಿ.ಜಯಸ್ವಾಲ ಸರಿಯಾಗಿಯೆ ಗುರುತಿಸುತ್ತಾರೆ. ಗಂಗಾನದಿಯ ಮೇಲುಹರಿವೆಯ ಮೂಲಕ ಯಾವ ಅರಸನ ವಿರುದ್ಧ ವಿಜಯಸೇನನು ಮುಂದುವರಿದನೊ ಆ ಪಶ್ಚಿಮದ ಅರಸನು ಬಹುಶ: ಗೋವಿಂದಚಂದ ಗಹಡವಾಲನಾಗಿರಬೇಕು. ಕ್ರಿ.ಶ. ೧೦೯೭ರಲ್ಲಿ ಜರುಗಿದ ಕರ್ನಾಟ ಆಳ್ವಿಕೆಯ ಸ್ಥಾಪನೆಯು ಸಾಮಾನ್ಯವಾಗಿ ಬಿಹಾರದ ಇತಿಹಾಸದಲ್ಲಿ, ವಿಶೇಷತಃ ಮಿಥಿಲೆಯ ಇತಿಹಾಸದಲ್ಲಿ, ಅತ್ಯಂತ ಐತಿಹಾಸಿಕ ಮಹತ್ವದ ಘಟನೆಯಾಗಿತ್ತು. ಏಕೆಂದರೆ, ಪೌರ್ವಾತ್ಯ ಭಾರತದ ಇತಿಹಾಸದಲ್ಲಿ ಬಹಳ ಅರ್ಥಪೂರ್ಣ ಪಾತ್ರ ವಹಿಸಲಿದ್ದ ರಾಜವಂಶದ ಇತಿಹಾಸವು ಈ ದಿನಾಂಕದಿಂದ ಆರಂಭವಾಗುತ್ತದೆ. ಮಿಥಿಲೆಯ ರಾಜಕೀಯ ಇತಿಹಾಸ ಆರಂಭಗೊಳ್ಳುವುದು ಈ ದಿನಾಂಕದಿಂದಲೇ ಎಂದು ಸೂಚಿಸುವುದು ಅನುಚಿತವಾಗದು. ಇದು ಸ್ವತಂತ್ರವಾಗಿ ಆಳಿದ ಪ್ರಥಮ ರಾಜವಂಶ ಮತ್ತು ಆಳುವ ಏಕೈಕ ರಾಜವಂಶದ ಅದೃಷ್ಟವನ್ನು ಅನುಸರಿಸುವ ಅನುಕೂಲ ನಮಗಿದೆ. ಕ್ರಿ.ಶ. ೫೫೪ ಮತ್ತು ೧೦೯೭ರ ನಡುವಿನ ಅಸ್ಥಿರತೆಯ ಕಾಲಾವಧಿಯು ಸ್ಥಿರತೆಯ ಕಾಲಾವಧಿಗೆ ದಾರಿ ಮಾಡಿಕೊಟ್ಟಿತು. ಮತ್ತು ಈ ರಾಜವಂಶದ ಆಳ್ವಿಕೆಯ ಸ್ಥಾಪನೆಯು ಬೃಹತ್ ಪ್ರಗತಿ ಮತ್ತು ವೈಭವದ ಸಾಧನೆಗಳ ಹೊಸ ಯುಗಕ್ಕೆ ನಾಂದಿಯಾಯಿತು. ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಕರ್ನಾಟರ ಇತಿಹಾಸದ ವಿವರವಾದ ಅಧ್ಯಯನವನ್ನು ಮುಂದಿನ ಅಧ್ಯಾಯಗಳಲ್ಲಿ ನಿರೂಪಿಸಲಾಗಿದೆ.

**ಟಿಪ್ಪಣಿಗಳು**

1. JOI : *Ajatasatru and Lichhavis of Vaisali*
2. *Archaelogical Survey of India* - Annual Report (1913-14)
3. R.G.Basak *History of North - Eastern India* p.312
4. U.Thakur TM p.187-88
5. JIH xxxii p.130
6. JBORS XIV pp.254-65
7. Nidhanapur copperplate in the proceedings of ICH (1959)
8. DKM p.257
9. *Sino-Indian Studies-1.* p.68
10. L.Petech. *A Study of the Chronicles of Ladakh.* pp.51-57
11. DKM p. 412
12. *Ramacharita* p.19
13. EI p.355
14. JBBRAS XI p.268
15. JBORS, IX, p.307-8, X, pp.40-41.

□□

# ೩

# ಮಿಥಿಲೆಯ ಕರ್ನಾಟರ ಮೂಲ

ಹಿಂದಿನ ಅಧ್ಯಾಯದಲ್ಲಿ ಕ್ರಿ.ಶ. ೧೦೯೭ರ ವರೆಗಿನ ಮಿಥಿಲೆಯ ರಾಜಕೀಯ ಇತಿಹಾಸದ ಸಂಕ್ಷಿಪ್ತ ಅವಲೋಕನ ಮಾಡಿರುವೆವು. ಈಗ ಕ್ರಿ.ಶ. ೧೦೯೭ ರಿಂದ ೧೩೨೪ರವರೆಗೆ ಮಿಥಿಲೆಯನ್ನಾಳಿದ ಕರ್ನಾಟರ ಮೂಲದ ಬಗೆಗೆ ಚರ್ಚಿಸಲನುವಾಗೋಣ. ಅವರ ಆಳ್ವಿಕೆಯ ಕಾಲಘಟ್ಟವು ಭಾರತದ ಸಮಕಾಲೀನ ಇತಿಹಾಸದಲ್ಲಿ ಒಂದು ಮಹತ್ವದ ತಿರುವಾಗಿದೆ. ಈ ಮೊದಲು ನೋಡಲಾಗಿರುವಂತೆ ಮಿಥಿಲೆಯು ಅನೇಕ ಏರಿಳಿತಗಳನ್ನು ಅನುಭವಿಸಿತು. ಅರಾಜಕತೆ ಮತ್ತು ಗೊಂದಲ ಎಲ್ಲೆಲ್ಲೂ ತಾಂಡವವಾಡುತ್ತಿದ್ದವು. ಮಿಥಿಲೆಯು ರಾಜಕೀಯವಾಗಿ ಸುಪ್ತ ಮತ್ತು ಸಾಂಸ್ಕೃತಿಕವಾಗಿ ಸ್ಥಗಿತವಾಗಿತ್ತೇನೊ ಎಂದು ಮೇಲ್ನೋಟಕ್ಕೆ ತೋರಿತು. ಶತಶತಮಾನಗಳ ಅರಾಜಕತೆ ಮತ್ತು ಗೊಂದಲ, ಸೋಲು ಮತ್ತು ಅಪಮಾನಗಳು, ಅಘಾತಗಳು ಮತ್ತು ಆಶ್ಚರ್ಯಗಳ ನಂತರ ನಾನ್ಯದೇವನೆಂಬ ಮಹಾವೀರನು

ಕಾಣಿಸಿಕೊಂಡನು. ಅವನು ಕರ್ನಾಟ ವಂಶದವನಾಗಿದ್ದು ಮಿಥಿಲೆಯ ಚರ್ಯೆಯನ್ನು ಮಾರ್ಪಡಿಸುವಲ್ಲಿ ಯಶಸ್ವಿಯಾದನು ಮತ್ತು ತರುವಾಯದಲ್ಲಿ ಅದನ್ನು ಪೂರ್ವ ಭಾರತದ ರಾಜಕೀಯ ಮತ್ತು ಸಾಂಸ್ಕೃತಿಕ ನಕ್ಷೆಯಲ್ಲಿ ತಂದನು. ಹಾಗಾಗಿ, ಕ್ರಿ.ಶ. ೧೦೯೭ ನೆಯ ವರ್ಷವು ಮಿಥಿಲೆಯ ಇತಿಹಾಸದಲ್ಲೊಂದು ಹೆಗ್ಗುರುತಾಗಿದೆ.

ಕರ್ನಾಟರಿಗೆ ಒಂದಿಷ್ಟು ಸಂಬಂಧಿಸಿದ ಅಪಾರ ಆಕರ ಮತ್ತು ಆಧಾರ ರಾಶಿಯನ್ನು ಸಂಶೋಧನೆಗಳು ಬೆಳಕಿಗೆ ತಂದಿವೆ. ಆದರೂ ಅವರ ಮೂಲದ ಬಗೆಗೆ ಸಂಪೂರ್ಣವಾಗಿ ನಿಖರ ಮತ್ತು ವಿಶ್ವಾಸಾರ್ಹ ಚಿತ್ರದ ಕೊರತೆಯಿನ್ನೂ ಹಾಗೆಯೆ ಇದೆ. ದೇವಪಾಲನ ಮೊಂಘಿರದ ತಾಮ್ರಪಟವು' ಇತರ ಅನೇಕರೊಂದಿಗೆ ಕರ್ನಾಟರನ್ನು ಉಲ್ಲೇಖಿಸುತ್ತದೆ. ಸರಿಸುಮಾರು ಎಲ್ಲ ಪಾಲ ಮತ್ತು ಇತರ ಸಮಕಾಲೀನ ಶಾಸನಗಳಲ್ಲಿ ಆ ಪದದ ಉಲ್ಲೇಖವಿದೆ. ಕರ್ನಾಟರು ಮೂಲತಃ ದಕ್ಷಿಣದವರೆಂದು ಸೇನ ಶಾಸನಗಳು ತಿಳಿಸುತ್ತವೆ.' ಮಿಥಿಲೆಯಲ್ಲಿ ತನ್ನ ರಾಜವಂಶವನ್ನು ಸಂಸ್ಥಾಪಿಸಿದ ನಾನ್ಯದೇವನನ್ನು 'ಕರ್ನಾಟ ಕುಲಭೂಷಣ' ಎಂದು ಕರೆಯಲಾಗಿದೆ. ಬಂಗಾಲದಲ್ಲಿಯ ಅವನ ಪ್ರತಿರೂಪವನ್ನು 'ಕರ್ನಾಟ ಕ್ಷತ್ರಿಯರ ಕುಲಶಿರೋಮಣಿ'' ಎಂದು ಕರೆಯಲಾಗಿದೆ. ಬಲ್ಲಾಳಸೇನನ ನೈಹತ್ತಿ ದತ್ತಿಯ ಆಧಾರದ ಮೇಲೆ ನಾವು ಅಂಥದೇ ಊಹೆಯನ್ನು ನಿಸ್ಸಂದೇಹವಾಗಿ ಮಾಡಬಹುದು.' ಕೆಲವು ಕರ್ನಾಟ ದೊರೆಗಳು ಪ್ರತ್ಯಕ್ಷವಾಗಿ ರಾಜಕೀಯ ಅಧಿಕಾರವನ್ನು ಪಡೆದುಕೊಂಡು ಹೊಸ ರಾಜ್ಯವೊಂದನ್ನು ಸ್ಥಾಪಿಸಿದರೆಂಬ ತೀರ್ಮಾನಕ್ಕೆ ಬರಬಹುದು. ಒಂದನೆಯ ಸೋಮೇಶ್ವರನು (ಕ್ರಿ.ಶ. ೧೦೪೨ - ೧೦೬೮) ಪಾರಮಾರ ಅರಸನಾದ ಒಂದನೆಯ ಭೋಜನ ರಾಜಧಾನಿಗೆ ಹಾಕಿದ ಲಗ್ಗೆ ಮತ್ತು ಕಲಚೂರಿ ಅರಸನಾದ ಕರ್ಣನ ವಿನಾಶಗಳು ಉತ್ತರ ಭಾರತದ ರಾಜಕೀಯ ಕ್ಷೇತ್ರದಲ್ಲಿ ಕರ್ನಾಟ ಪ್ರಾಬಲ್ಯವನ್ನು ವಸ್ತುತಃ ಸುಲಭವಾಗಿಸಿದವು. ಆ ಪ್ರಕ್ರಿಯೆಯು ಅಂತಿಮವಾಗಿ ಕರ್ನಾಟ ರಾಜವಂಶದ ಸ್ಥಾಪನೆಯಲ್ಲಿ ಕೊನೆಗೊಂಡಿತು.

ಚಾಲುಕ್ಯರಾದ ಒಂದನೆಯ ಸೋಮೇಶ್ವರ (ಕ್ರಿ.ಶ. ೧೦೪೨ - ೧೦೬೮) ಮತ್ತು ಅವನ ಪುತ್ರ ಆರನೆಯ ವಿಕ್ರಮಾದಿತ್ಯನ (ಕ್ರಿ.ಶ. ೧೦೭೬ - ೧೧೨೬) ದಾಳಿಗಳ ಜಾಡಿನಲ್ಲಿ ಬಂಗಾಲದ ಸೇನರಂತೆಯೆ ಮಿಥಿಲೆಯ ಕರ್ನಾಟರೂ ದಕ್ಷಿಣದಿಂದ ಬಂದವರಾಗಿದ್ದರು.' ವಿಕ್ರಮಾದಿತ್ಯನು ಕಾಮರೂಪ ಮತ್ತು ಗೌಡಗಳ ಮೇಲೆ ದಾಳಿಗಳನ್ನು ಏರ್ಪಡಿಸಿದ. ಅದರ ಪರಿಣಾಮವಾಗಿ ಕ್ರಿ.ಶ. ೧೧ ನೆಯ ಶತಮಾನದ ಅಂತ್ಯದವರೆಗೆ ಉತ್ತರ ಭಾರತೀಯರು ಸ್ವಾಧೀನಕ್ಕೊಳ ಪಟ್ಟರು. ಈ ಪ್ರಕ್ರಿಯೆಯು ನಿಸ್ಸಂದೇಹವಾಗಿಯೂ ಕರ್ನಾಟರ ಬಲಸಂವರ್ಧನೆ ಮತ್ತು ಪಾರಮ್ಯಕ್ಕೆ ದಾರಿ ಮಾಡಿಕೊಟ್ಟಿತು. ಚಾಲುಕ್ಯರ ಉದಯವು ರಾಜಕೀಯ ಮಹತ್ವ ಪಡೆದಿದೆ. ವಾಸ್ತವವಾಗಿ, ಅದು ಹೊಸ ಯುಗವನ್ನು ಕರೆತಂದಿತು.' ಮತ್ತು ಸಾಮಾನ್ಯತಃ ಭಾರತದ ಇತಿಹಾಸದಲ್ಲಿ, ವಿಶೇಷತಃ ಮಿಥಿಲೆಯ ಇತಿಹಾಸದಲ್ಲಿ, ನಿರ್ಣಾಯಕ ತಿರುವಾಗಿ ಪರಿಣಮಿಸಿತು. ಆರನೆಯ ವಿಕ್ರಮಾದಿತ್ಯನ ಪುತ್ರನಾದ ಮುಮ್ಮಡಿ ಸೋಮೇಶ್ವರನು ಆಂಧ್ರ, ದ್ರಾವಿಡ, ಮಗಧ ಮತ್ತು ನೇಪಾಳಗಳ ಅರಸರ ಮಸ್ತಕದ ಮೇಲೆ ಪಾದವಿಟ್ಟಿದ್ದನೆಂದು

ವರ್ಣಿಸಲಾಗಿದೆ.[6] ಕನೌಜದ ಗೋವಿಂದಚಂದನ ಬಸಾಹಿ ತಾಮ್ರಪಟವೂ[7] ಚಾಲುಕ್ಯನ ಕೈಯಿಂದ ಸೋತ ಪರಮಾರರ ಪಲಾಯನವನ್ನು ದೃಢಪಡಿಸುತ್ತದೆ. ಚಾಲುಕ್ಯ ದಾಳಿಯ ಫಲವಾಗಿ ಉತ್ತರ ಭಾರತದಲ್ಲಿ ಕನೌಜ, ಮಿಥಿಲಾ ಮತ್ತು ಬಂಗಾಲ ಈ ಮೂರು ರಾಜವಂಶಗಳು ಪ್ರಸಿದ್ಧಿಗೆ ಬಂದವು. ಕರ್ನಾಟ ದಾಳಿಗಳ ಸುರಿಮಳೆಯು ಕನೌಜ, ಮಿಥಿಲಾ ಮತ್ತು ಬಂಗಾಲ ಈ ಮೂರು ಹೊಸ ರಾಜ್ಯಗಳ ಹುಟ್ಟಿಗೆ ಕಾರಣವಾಯಿತೆಂದು ಆರ್.ಸಿ.ಮಜುಮದಾರ ಅಭಿಪ್ರಾಯಪಡುವರು.[8] ಕರ್ನಾಟರ ಮೂಲದ ಬಗೆಗೆ ಇನ್ನೊಂದು ವಾದವಿದೆ. ಈ ವಾದದ ಪ್ರಕಾರ, ಬಂಗಾಲ ಮತ್ತು ಮಗಧಗಳಲ್ಲಿ ಪಾಲ ಆಡಳಿತ ಕಾಲದಲ್ಲಿ ಕರ್ನಾಟರು ಉನ್ನತ ಹುದ್ದೆಗಳಲ್ಲಿದ್ದರು; ಪಾಲ ಅಧಿಕಾರ ದುರ್ಬಲಗೊಂಡಾಗ ಕರ್ನಾಟ ದೊರೆಗಳು ಪರಿಸ್ಥಿತಿಯ ಪ್ರಯೋಜನ ಪಡೆದಿರಬಹುದು. ಪಾಲ ಶಾಸನಗಳಲ್ಲಿ ಬರುವ ಕರ್ನಾಟರ ಉಲ್ಲೇಖ ಕಾಲ್ಪನಿಕವಾಗಿದ್ದು ಯಾವುದೆ ಊಹೆ ತಪ್ಪು ತೀರ್ಮಾನಗಳಿಗೆ ಎಡೆಮಾಡಿಕೊಡುವುದೆಂದು ನೀಲಕಂಠ ಶಾಸ್ತ್ರಿ ಅಭಿಪ್ರಾಯಪಡುವರು. ಆರನೆಯ ವಿಕ್ರಮಾದಿತ್ಯನ ನೇತೃತ್ವದಲ್ಲಿ ದಕ್ಷಿಣದಿಂದ ಜರುಗಿದ ದಾಳಿಯಿಂದ ವಿಶಾಲ ಪ್ರದೇಶಗಳನ್ನು ವಶಪಡಿಸಿಕೊಳ್ಳಲಾಯಿತೆಂದು ಬಣ್ಣಿಸಲಾಗಿದೆ. ತಮಿಳು ಕಾವ್ಯ *ಕಳಿಂಗತ್ತುಪರಣಿ*ಯು ಉತ್ತರ ಕಲಿಂಗದ ಮೇಲೆ ಚೋಳರ ವಿಜಯವನ್ನು ವರ್ಣಿಸುತ್ತ ಚೋಳ ಅರಸ ಕುಲೋತ್ತುಂಗನಿಗೆ ಕಪ್ಪ ಕೊಡಬೇಕಾಗಿ ಬಂದ ಜನರ ದೀರ್ಘ ಪಟ್ಟಿಯನ್ನೆ ಕೊಡುತ್ತದೆ.[9] ಈ ವೃತ್ತಾಂತವನ್ನು ದರ್ಕಶರ್ಮ ಶಾಸನವು ಇನ್ನಷ್ಟು ದೃಢಪಡಿಸುವುದು.[10] ವಂಗರು, ಬಂಗಾಳರು ಮತ್ತು ಮಗಧರನ್ನು ಚೋಳ ವಿಜಯವು ಒಳಗೊಂಡಿತ್ತು. ಈ ಪ್ರದೇಶದಲ್ಲಿ ಕರ್ನಾಟರು ಮುನ್ನಡೆ ಸಾಧಿಸುತ್ತಿದ್ದುದು ಈ ಕಾಲದಲ್ಲಿಯೆ. ರಾಮಪಾಲನ ಆಧಿಪತ್ಯದಲ್ಲಿದ್ದ ಮಿಥಿಲೆಯೂ ಸೇರಿದಂತೆ ಪಾಲ ರಾಜ್ಯದ ಹಲವು ಭಾಗಗಳನ್ನು ದಾಕ್ಷಿಣಾತ್ಯ ದಾಳಿಗಳ ಈ ಎರಡು ತಂಡಗಳು ಧ್ವಂಸಗೊಳಿಸಿದವು. ಎರಡೂ ತಂಡಗಳಿಗೆ ಸಾಮಾನ್ಯ ವೈರಿಯಾದ ಕರ್ನಾಟರನ್ನು ತಡೆಗಟ್ಟಲು ಮೈತ್ರಿ ಮಾಡಿಕೊಳ್ಳಲು ರಾಮಪಾಲನು ಬಯಸಿರಬಹುದು.[11] "ವರೇಂದ್ರವನ್ನು ಕರ್ನಾಟರ ವಿರುದ್ಧ ಯಶಸ್ವಿಯಾಗಿ ಸಂರಕ್ಷಿಸಲಾಯಿತು" ಎಂದು ಸಂಧ್ಯಾಕರ ನಂದಿಯು *ರಾಮಚರಿತ*ದಲ್ಲಿ ಸೂಚಿಸುವನು. ಪಾಲರು ಇಬ್ಬರು ದುರ್ದಮ್ಯ, ಉಚ್ಛ್ರಾಯಶೀಲ ದೊರೆಗಳನ್ನು[12] ಎದುರಿಸಬೇಕಾಗಿ ಬಂತು: ಬಂಗಾಲದಲ್ಲಿ ವಿಜಯಸೇನ ಮತ್ತು ಮಿಥಿಲೆಯಲ್ಲಿ ನಾನ್ಯದೇವ.

ಕರ್ನಾಟರ ಮೂಲದ ಬಗೆಗೆ ಇನ್ನೊಂದು ವಾದವನ್ನು ವಿದ್ವಾಂಸರ ವರ್ಗವೊಂದು ಮುಂದಿಟ್ಟಿದೆ. ಅವರ ಪ್ರಕಾರ, ಕರ್ನಾಟರು ಮೇಲೆದ್ದುದು ಮಗಧದ ಶಕ್ತಿ ಕಳೆಗುಂದಿದುದರ ಪರಿಣಾಮದಿಂದ ಮಾತ್ರ.[13] ಅವರ ದೃಷ್ಟಿಯಲ್ಲಿ, ರಾಜೇಂದ್ರ ಚೋಳ ಗಂಗೈಕೊಂಡನು ಸಾಕಷ್ಟು ವ್ಯವಹಾರ ಜ್ಞಾನವುಳ್ಳವನಾಗಿದ್ದು ಮತ್ತು ಉತ್ತರ ಭಾರತದ ರಾಜಕೀಯ ಪರಿಸ್ಥಿತಿಯನ್ನು ಸ್ಪಷ್ಟವಾಗಿ ಅರಿತವನಾಗಿದ್ದು ಪಾರಮ್ಯ ಸಾಧಿಸಲು ಯಶಸ್ವೀ ಪ್ರಯತ್ನಮಾಡಿದ. ತಿರುಮಲೈ ಶಾಸನ ಮತ್ತು ಕೋಲಾರದ ೪೪ ನೆಯ ನಂಬರಿನ ಶಾಸನ[14] ಅವನ ವಿಜಯದ ಸಾಧನೆಗಳನ್ನು ಬಣ್ಣಿಸುತ್ತವೆ. ಆವನು "ಬಂಗಾಲದೇಶದ ಮೇಲೆ

ಆಕ್ರಮಣ ಮಾಡಲಾಗಿ ಅಲ್ಲಿಂದ ಗೋವಿಂದಚಂದನು ಪಲಾಯನಗೈದು, ಮಳೆಗಾಲ ಎಂದೂ ನಿಲ್ಲದ ಪ್ರದೇಶವನ್ನು ವಶಪಡಿಸಿಕೊಂಡನು''[15] ಎಂದು ಹೇಳಲಾಗಿದೆ. ಮಹಿಪಾಲನನ್ನು ಸೋಲಿಸಿದ ಶ್ರೇಯಸ್ಸು ಅವನದೆಂದು ಹೇಳಲಾಗಿದೆ.[16] ಚೋಳ ಶಾಸನದಲ್ಲಿ ಉಲ್ಲೇಖಿಸಿದ ಮಹಿಪಾಲನು ಆ ಹೆಸರಿನ ಪ್ರಥಮ ಪಾಲ ಅರಸನೆಂಬುದು ಕಿಎಲ್‌ಹಾರ್ನ್‌ರ ಅಭಿಪ್ರಾಯ. ಆದರೆ, ರಾಜೇಂದ್ರ ಚೋಳನ ವಿಜಯದ ಪರಿಣಾಮ ಬಂಗಾಲದ ಮತ್ತು ನೆರೆ ರಾಜ್ಯಗಳ ರಾಜಕೀಯ ಸ್ಥಿತಿಗತಿಗಳ ಮೇಲೆ ಆಗಲಿಲ್ಲವೆಂಬುದು ಲಕ್ಷ್ಯಗೊಟ್ಟು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿದರೆ ಕಂಡುಬರುವುದು. ದಂಡಭುಕ್ತಿಯೆಂದರೆ ಬಿಹಾರವೆ ಆಗಿತ್ತು ಎಂದು ಅಯ್ಯಂಗಾರ ಅಭಿಪ್ರಾಯಪಡುವರು. ಆದರೆ, ಇದಕ್ಕೆ ಸರ್ವಾನುಮತದ ಸಹಮತಿಯಿಲ್ಲ.

ದಂಡಭುಕ್ತಿ ಪ್ರದೇಶದಲ್ಲಿ ರಾಷ್ಟ್ರಕೂಟ ಕರ್ನಾಟರ ಕುಟುಂಬವೊಂದಿತ್ತು. ಅದನ್ನು ಅಲ್ಲಿ ಧ್ರುವ ಅಥವಾ ಮುಮ್ಮಡಿ ಗೋವಿಂದನು ಇರಿಸಿದ್ದನು. ದಂಡಭುಕ್ತಿಯು ಧರ್ಮಪಾಲನು ಬಹುಶಃ ಕರ್ನಾಟರ ಪ್ರದೇಶವನ್ನಾಳುತ್ತಿದ್ದ ಗೌಡ ದೊರೆಯ ಸಂಬಂಧಿಯಾಗಿದ್ದನು.

ರಾಷ್ಟ್ರಕೂಟರೇ ಕರ್ನಾಟರಾಗಿದ್ದರೆಂಬುದು ಎಂ.ರಾಮಕೃಷ್ಣ ಕವಿ ಅವರ ಅಭಿಮತ. ಅವರ ವಿಚಾರದಂತೆ, ಕ್ರಿ.ಶ. ೯೭೦ರಲ್ಲಿ ದಕ್ಷಿಣದಲ್ಲಿಯ ತಮ್ಮ ಅವನತಿಯ ತರುವಾಯದಲ್ಲಿ ರಾಷ್ಟ್ರಕೂಟರು ಉತ್ತರದತ್ತ ಸಾಗಿದರು.[17] ಆದರೆ, ದಕ್ಷಿಣದಿಂದ ಉತ್ತರಕ್ಕೆ ರಾಷ್ಟ್ರಕೂಟರ ವಲಸೆಗೆ ಎಂ.ರಾಮಕೃಷ್ಣ ಕವಿ ಯಾವುದೆ ಮಂದಟ್ಟಾಗುವ ವಿವರಣೆ ನೀಡುವುದಿಲ್ಲ. ಅದು ಹೇಗೂ ಇರಲಿ, ರಾಷ್ಟ್ರಕೂಟರ ವಿಸ್ತರಣಾ ವಾದವನ್ನು ಒಪ್ಪಲೇಬೇಕಾದುದಾದರೆ ಕರ್ನಾಟರು ಚಾಲುಕ್ಯರೊಂದಿಗೆಯೆ ಮುನ್ನಡೆ ಸಾಧಿಸಿದುದು ಸಂಭಾವ್ಯವಾಗಿದೆ. ಮೇಲಾಗಿ, ಚಾಲುಕ್ಯ ದಾಳಿಯು ಕರ್ನಾಟರಲ್ಲಿ ಆತ್ಮವಿಶ್ವಾಸ ಹುಟ್ಟಿಸಲಾಗಿ ಕ್ರಿ.ಶ. ಹನ್ನೊಂದನೆಯ ಶತಮಾನದ ಕೊನೆಯ ದಶಕದಲ್ಲಿ ಅವರು ತಮ್ಮ ಸ್ವತಂತ್ರ ಅಧಿಕಾರವನ್ನು ಸ್ಥಿರಗೊಳಿಸಿದರು. ಕರ್ನಾಟ ವಂಶದ ಸಂಸ್ಥಾಪಕನಾದ ನಾನ್ಯದೇವನು ಕೀರ್ತಿರಾಜನ ಸೋದರನೆಂದು ಬಣ್ಣಿಸಲಾಗಿದ್ದು ತುಂಗ ಧರ್ಮಾವಲೋಕನ ಬೋಧಗಯಾ ಶಾಸನದಿಂದ ಸ್ಪಷ್ಟಪಡುವುದು. ಈ ಗುರುತಿಸುವಿಕೆಯನ್ನು ರುಜುವಾತುಪಡಿಸುವ ಆಧಾರದ ಕೊರತೆಯಿಂದಾಗಿ ನಮ್ಮ ಈಗಿನ ತಿಳಿವಿನ ಸ್ಥಿತಿಯಲ್ಲಿ[18] ಅದನ್ನು ಒಪ್ಪುವುದು ಸಾಧ್ಯವಿರದಿದ್ದಾಗ್ಯೂ ಅದನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಬಂಗಾಲದ ಮೇಲೆ ದಾಳಿ ಮಾಡಿದ ಕರ್ನಾಟ ದೊರೆಯನ್ನು ಪಾಲ ವಂಶದ ಮಹಿಪಾಲನು ಸೋಲಿಸಿದನೆಂದು ಕ್ಷೇಮೇಶ್ವರನ *ಚಂಡಕೌಶಿಕ* ಬಣ್ಣಿಸುತ್ತದೆ. ಈ ಹಸ್ತಪ್ರತಿಯ ತೇದಿಯನ್ನು ಕ್ರಿ.ಶ. ೧೩೩೧ ಎಂದು ನಿಗದಿಪಡಿಸಲಾಗಿದ್ದು ಅದು ಮಹಿಪಾಲ ಮತ್ತು ಕರ್ನಾಟರ ನಡುವಣ ಬಲಪರೀಕ್ಷೆಯನ್ನು ಪರೋಕ್ಷವಾಗಿ ಉಲ್ಲೇಖಿಸುತ್ತದೆ. ಕಲ್ಯಾಣ ಚಾಲುಕ್ಯರು ಈ ಕಾಲಕ್ಕೆ ಕರ್ನಾಟ ಅರಸರಾಗಿದ್ದರು. ಆದರೆ, ಚಾಲುಕ್ಯ ಅರಸರ ಯಾವುದೆ ಸಮಕಾಲೀನ ಶಾಸನ ಪಾಲರೊಂದಿಗಿನ ಘರ್ಷಣೆಯನ್ನು ಉಲ್ಲೇಖಿಸುವುದಿಲ್ಲ. ಆರ್.ಪಿ.ಚಂದಾರ ಪ್ರಕಾರ,

ಕರ್ನಾಟರು ಮಹಿಪಾಲನ ರಾಜ್ಯದ ಮೇಲೆ ದಾಳಿ ಮಾಡಿದ ವೀರರು ಎಂಬ ಖ್ಯಾತಿ ಹೊಂದಿದ್ದರು.[19] ಮಹಿಪಾಲನು ಸೋಲಿಸಿದ ಜನರು ತರುವಾಯದಲ್ಲಿ ಬಂಗಾಲ ಮತ್ತು ಮಿಥಿಲೆಗಳಲ್ಲಿ ತಮ್ಮನ್ನು ಸಂಸ್ಥಾಪಿಸಿಕೊಂಡಿದ್ದು ಹೀಗೆ ಸೋತವರು ಕರ್ನಾಟರೊಂದಿಗೆ ಸಂಬಂಧ ಹೊಂದಿದ್ದಿರಬಹುದೆಂದು ಎಚ್.ಪಿ.ಶಾಸ್ತ್ರಿ ಬರೆಯುತ್ತಾರೆ. ನಮ್ಮ ಸದ್ಯದ ತಿಳಿವಿನ ಸ್ಥಿತಿಯಲ್ಲಿ ಕರ್ನಾಟರು ಬಂಗಾಲ ಮತ್ತು ಮಿಥಿಲೆಗಳಲ್ಲಿ ಮೊದಲು ಯಾವಾಗ ನೆಲೆಸಿದರೆಂಬ ಬಗೆಗೆ ನಿಖರವಾಗಿ ಹೇಳುವುದು ಬಲು ಕಠಿಣವಾಗಿದೆ. ಅವರು ಪಾಲರ ಆಡಳಿತದಲ್ಲೊಂದು ಮೂಲ ಘಟಕವಾಗಿದ್ದರೆಂದು ಮೇಲ್ನೋಟಕ್ಕೆ ತೋರುತ್ತದೆ. ಪಾಲರ ದತ್ತಿಗಳು ಈ ಸಂಗತಿಗೆ ಪ್ರಮಾಣ ಒದಗಿಸುತ್ತವೆ. ಬಂಗಾಲ ಮತ್ತು ಮಿಥಿಲೆಗಳಲ್ಲಿ ಕರ್ನಾಟರ ನಿಯಮಿತವಾದ ಒಳಪ್ರವಾಹಕ್ಕೆ ದಾಳಿಗಳ ಸರಣಿಯು ಸಂಭಾವ್ಯ ಕಾರಣವಾಗಿರಬಹುದು. ಸ್ಥಾನಿಕ ಕೇಂದ್ರೀಯ ಅಧಿಕಾರ ದುರ್ಬಲಗೊಂಡು ದಕ್ಷಿಣದ ಸತತ ದಾಳಿಗಳ ಪರಿಣಾಮವಾಗಿ ತಲೆದೋರಿದ ವಿಘಟನಾ ಶಕ್ತಿಗಳನ್ನು ತಡೆಯಲು ಅಸಮರ್ಥವಾದ[20] ತರುವಾಯದಲ್ಲಿ ಕರ್ನಾಟಕೇಂದು ಆರನೆಯ ವಿಕ್ರಮಾದಿತ್ಯನ ಹೊಸ ಅಲೆಯು ಸ್ವತಂತ್ರ ಅರಸರಾಗಿ ತಮ್ಮ ಸ್ಥಾನ ಸ್ಥಿರಪಡಿಸಿಕೊಳ್ಳಲು ಕರ್ನಾಟರಿಗೆ ಉತ್ತೇಜನ ನೀಡಿತು.

ರಾಷ್ಟ್ರಕೂಟ ಕರ್ನಾಟರು ದಂಡಭುಕ್ತಿಯಲ್ಲಿ ಇದ್ದರೆಂಬ ವಾದವನ್ನು ಒಪ್ಪುವುದೇ ಆದರೆ, ಇವರು ಮಗಧದಲ್ಲಿ ಕುಗ್ಗಿದ ಕರ್ನಾಟ ಶಕ್ತಿಯ ಪರಿಣಾಮವೆಂದು ಮತ್ತು ಅನೇಕ ವಿದ್ವಾಂಸರು ನಂಬುವಂತೆ ಚೋಳ ವಿಜಯದ ಪರಿಣಾಮ ಅಲ್ಲವೆಂದು ನಿಸ್ಸಂದೇಹವಾಗಿ ತೀರ್ಮಾನಿಸಬಹುದು. ಕರ್ನಾಟರು ಚೋಳ ಸೈನ್ಯದ ಶೇಷ ಭಾಗವೆಂದು ಅಥವಾ ಬಹುಶಃ ಕರ್ಣನ ಕರ್ನಾಟ ಮಿತ್ರಪಕ್ಷಗಳ ಶೇಷಭಾಗವೆಂದು ಕೆ.ಪಿ. ಜಯಸ್ವಾಲ ಅಭಿಪ್ರಾಯ ಪಡುವರು. ಕರ್ಣನು ಕ್ರಿ.ಶ. ೧೦೪೦ ಮತ್ತು ೧೦೭೦ರ ಮಧ್ಯೆ ಮಿಥಿಲೆಯನ್ನು ಧ್ವಂಸ ಮಾಡಿದನೆಂದು ಬಣ್ಣಿಸಲಾಗಿದೆ. ಇವನ ದಂಡಯಾತ್ರೆಯು ನಾನ್ಯದೇವನ ಸಿಂಹಾಸನಾ ರೋಹಣದ ನಲವತ್ತು ವರ್ಷ ಮುಂಚೆ ನಡೆಯಿತೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು.[21] ಕರ್ನಾಟರು ಚೋಳ ಸೈನ್ಯದ ಶೇಷ ಭಾಗವಾಗಿದ್ದರೆಂದು ಆರ್.ಡಿ.ಬ್ಯಾನರ್ಜಿ ಕೂಡ ಸೂಚಿಸುತ್ತಾರೆ.[22] ಕರ್ನಾಟರು ಚೋಳ ಸೈನ್ಯದ ಶೇಷ ಭಾಗವಾಗಿದ್ದರೆಂಬ ಆರ್.ಡಿ.ಬ್ಯಾನರ್ಜಿ ಮತ್ತು ಕೆ.ಪಿ.ಜಯಸ್ವಾಲರ ಅಭಿಪ್ರಾಯವು ಮೇಲ್ನೋಟಕ್ಕೆ ಅಸಂಭವನೀಯವಾಗಿದೆ. ಏಕೆಂದರೆ, ಅದನ್ನು ಪುಷ್ಟೀಕರಿಸುವ ಗಟ್ಟಿ ಆಧಾರವೇನೂ ಇಲ್ಲ. ಆ ವಾದಕ್ಕೆ ನಿಖರತೆ ಇಲ್ಲವಾದುದರಿಂದ ಅನೇಕ ವಿದ್ವಾಂಸರು ಅದನ್ನು ತಿರಸ್ಕರಿಸಿರುವರು. ಕರ್ನಾಟರು ಕರ್ಣನ ಕರ್ನಾಟ ಮಿತ್ರಪಕ್ಷಗಳ ಶೇಷ ಭಾಗವಾಗಿದ್ದರೆಂದು ಒಪ್ಪಿಕೊಳ್ಳಬಹುದಾದರೂ ಅವರೊಂದಿಗೆ ಕರ್ಣನ ಮೈತ್ರಿಯು ತಾತ್ಕಾಲಿಕ ಸ್ವರೂಪದ್ದಾಗಿತ್ತೆಂಬುದನ್ನು ಗಮನಿಸಬೇಕಾಗುತ್ತದೆ.[23] ಕರ್ನಾಟರು ಚೇದಿ ಅರಸ ಕರ್ಣನೊಂದಿಗೆ ಮೈತ್ರಿ ಹೊಂದಿದ್ದುದನ್ನು ಉದಯಾದಿತ್ಯನ ನಾಗಪುರ ಪ್ರಶಸ್ತಿ ಸ್ಪಷ್ಟಪಡಿಸುತ್ತದೆ. ಕರ್ಣನು ಅವರ ನೆರವಿನೊಂದಿಗೆ ಮಾಳವವನ್ನು ಸಮುದ್ರಯಾನ ಮಾಡಿದಷ್ಟು ಸಲೀಸಾಗಿ ಸ್ವಾಧೀನಪಡಿಸಿಕೊಂಡನು.[24] ಇದನ್ನಾಧರಿಸಿ ಮತ್ತು

ಆರ್.ಡಿ. ಬ್ಯಾನರ್ಜಿ, ಕೆ.ಪಿ. ಜಯಸ್ವಾಲರ ಹೇಳಿಕೆಗಳನ್ನು ಅನುಸರಿಸಿ ಬಿ.ಸಿ. ಸೇನ ಹೀಗೆ ಸೂಚಿಸುತ್ತಾರೆ: "ಕರ್ಣನ ಮರಣದ ಕ್ಷಿಪ್ರ ತರುವಾಯದಲ್ಲಿ ಜರುಗಿದ, ನಾನ್ಯದೇವನೆಂಬ ಕರ್ನಾಟ ವೀರನನ್ನು ಮಿಥಿಲೆಯ ಅರಸನನ್ನಾಗಿಸಿದ ಚಳುವಳಿಗಳಿಗೆ ಈ ಮೈತ್ರಿಯು ಬಹುಶಃ ಸಹಾಯ ಮಾಡಿತು."[27] ಮಿಥಿಲೆಯು ಈಗಾಗಲೆ ಚೇದಿ ಅರಸನ ಅಧೀನದಲ್ಲಿದ್ದುದರಿಂದ ಕರ್ನಾಟ ಮನೆತನಗಳು ಕರ್ಣನ ಹಿಂದೆಯೆ ಬಂದವೆಂದು ಕೆ.ಪಿ.ಜಯಸ್ವಾಲ ತಪ್ಪಾಗಿ ಭಾವಿಸಿದರು.[28] ಕರ್ನಾಟರ ಮೂಲದ ಬಗೆಗಿನ ಆಧುನಿಕ ಸಂಶೋಧನೆಗಳು ಮತ್ತು ಅಧಿಕ ವೈಜ್ಞಾನಿಕ ಮತ್ತು ಮುಂದಟ್ಟುಮಾಡುವ ವಾದಗಳ ದೃಷ್ಟಿಯಿಂದ ಈ ಅಭಿಪ್ರಾಯವು ಅಸಮರ್ಥನೀಯವಾದುದು.

ಪಾಲರು ಕಲಚೂರಿಯರ ತೊಂದರೆಗಳ ಲಾಭ ಪಡೆದುಕೊಳ್ಳುವ ಮೊದಲೆ ಅವರು ಕರ್ನಾಟ ಚಾಲುಕ್ಯರ ದಾಳಿಯನ್ನು ಎದುರಿಸಬೇಕಾಯಿತೆಂಬುದು ಸಮಂಜಸ ಅಭಿಮತವೆಂದು ತೋರುತ್ತದೆ.[29] ಮೊಟ್ಟಮೊದಲ ಚಾಲುಕ್ಯ ದಾಳಿ ಕ್ರಿ.ಶ. ೧೦೫೭ ರಲ್ಲಿ[30] ಸಂಭವಿಸಿರಬೇಕು. ವಂಗರ ಮತ್ತು ನೆರೆ ರಾಜ್ಯಗಳ ಮೇಲೆ ಇನ್ನೂ ಒಂದು ಮಹತ್ವದ ಚಾಲುಕ್ಯ ದಂಡೆಯಾತ್ರೆಯು ಕ್ರಿ.ಶ. ೧೧ನೆಯ ಶತಮಾನದ[31] ಕೊನೆಯ ದಶಕದಲ್ಲಿ ಅಥವಾ ಕ್ರಿ.ಶ. ೧೨ನೆಯ ಶತಮಾನದ ಆದಿಯಲ್ಲೇ ನಡೆಯಿತು. ಒಂದರ ಮೇಲೊಂದು ಜರುಗಿದ ದಾಕ್ಷಿಣಾತ್ಯ ದಾಳಿಗಳು ಸ್ಥಳೀಯ ದೊರೆಗಳು ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಳ್ಳುವ ಅವಕಾಶವನ್ನು ನೀಡಿರಬಹುದಾಗಿದೆ. ಠಾಕೂರರು[32] ಆರ್.ಡಿ.ಬ್ಯಾನರ್ಜಿ ಮತ್ತು ಕೆ.ಪಿ.ಜಯಸ್ವಾಲರನ್ನು ಅನುಸರಿಸಿದರು. ಮೇಲಾಗಿ, ನಾನ್ಯದೇವನು ಕಾಮರೂಪದ ಧರ್ಮಪಾಲನ ಕಿರಿಯ ಸಮಕಾಲೀನನಾಗಿದ್ದನೆಂದೂ ಪ್ರತಿಪಾದಿಸಲಾಗಿದೆ.[33] ಧರ್ಮಪಾಲನ ಆಳ್ವಿಕೆಯಲ್ಲಿ ಸಂಕಲಿತವಾದ *ಕಾಲಿಕಾಪುರಾಣ*ದಲ್ಲಿ ನಾನ್ಯದೇವನ *ಭರತಭಾಷ್ಯ*ದ ಮೊಟ್ಟಮೊದಲ ಉಲ್ಲೇಖವಿದೆ. ತಾಂತ್ರಿಕ ವಿದ್ಯೆಯ ಪ್ರಖ್ಯಾತ ಕೇಂದ್ರವಾಗಿದ್ದ ಆಸಾಮಿನಲ್ಲಿಯ ಬಸ್ಸತ್ತಾರಿಯಾ ಬ್ರಾಹ್ಮಣರು ಬಹುಶಃ ಮಿಥಿಲೆಯಿಂದ ಬಂದವರಾಗಿದ್ದರು. ಮಿಥಿಲೆಯೊಂದಿಗೆ ಕಾಮರೂಪದ ಸಂಬಂಧವನ್ನು ಸ್ಥಾಪಿಸುವುದೇ ಆ ಪುರಾಣದ ಏಕೈಕ ಉದ್ದೇಶವಾಗಿದ್ದಿರಬಹುದು.

ನಾನ್ಯದೇವನು ಕರ್ನಾಟ ಕ್ಷತ್ರಿಯನಾಗಿದ್ದುದರ ಬಗೆಗೆ ಯಾವುದೆ ಅನುಮಾನವಿಲ್ಲ. ಅದನ್ನು ಅವನ ವಿವಿಧ ಉಪಾಧಿಗಳು ಸ್ಪಷ್ಟಪಡಿಸುತ್ತವೆ. ಅವನನ್ನು "ಕರ್ನಾಟಕುಲ ಭೂಷಣ"ನೆಂದು ಸಂಬೋಧಿಸಲಾಗುತ್ತಿತ್ತೆಂದು ಅವನು ಭರತನ ನಾಟ್ಯಶಾಸ್ತ್ರಕ್ಕೆ ಬರೆದ ಭಾಷ್ಯದಿಂದ ವಿದಿತವಾಗುತ್ತದೆ. ಈ ಹೆಸರು 'ನನ್ನಿ' ಅರ್ಥಾತ್ 'ಪ್ರೇಮ' ಎಂಬ ದ್ರಾವಿಡ ಪದದ ಸಂಸ್ಕೃತೀಕರಣಗೊಂಡ ರೂಪವೇ ಎಂದು ಕೆ.ಪಿ.ಜಯಸ್ವಾಲ ನಂಬುತ್ತಾರೆ.[34] 'ನಾನ್ಯ' ಪದವು ಕರ್ನಾಟ ಮೂಲದ್ದು ಮತ್ತು ನೇಪಾಳಿ ಭಾಷೆಯ 'ನನಿಯ' ಅಥವಾ 'ನನಿ' ಯು ಇದರದೇ ನಿಷ್ಪನ್ನವೆಂದು ಡಿ.ಆರ್.ರೆಗ್ಮಿ ಹೇಳುತ್ತಾರೆ. ಈ ಪದವನ್ನು ಅನೇಕ ವೇಳೆ ಹಿರಿಯರು ತಮ್ಮ ಮುದ್ದಿನ ಕಿರಿಯರನ್ನು ಕರೆಯಲು ಬಳಸುವರು.[35] ನನ್ನಿಯ, ನಾನ್ಯೋಪ

ಮತ್ತು ಇಂಥ ಇತರ ನಾನ್ಯದೇವನ ಹೆಸರುಗಳು ಮಿಥಿಲೆಯಲ್ಲಿ ಪ್ರಚಲಿತವಿರುವ ಪರಂಪರಾಗತ ಅಭಿಪ್ರಾಯಗಳಿಂದ ವಿದಿತವಾಗುತ್ತವೆ. ತನ್ನ ಸುಪ್ರಸಿದ್ಧ ಮಿಥಿಲತತ್ತ್ವವಿಮರ್ಶೆದಲ್ಲಿ ಪರಮೇಶ್ವರ ಝಾ ಮತ್ತು ತನ್ನ ಮಿಥಿಲದರ್ಪಣದಲ್ಲಿ ರಾಸ ಬಿಹಾರಿ ದಾಸ ಮುಂತಾದ ವಿಶ್ವಾಸಾರ್ಹವಾದ ಸಾಂಪ್ರದಾಯಿಕ ಲೇಖಕರು ಆ ಅಭಿಪ್ರಾಯಗಳನ್ನು ಸಂರಕ್ಷಿಸಿಟ್ಟಿರುವರು. ದೇಒಪಾರಾ ಶಾಸನವು ವಿಜಯಸೇನನನ್ನು ಕರ್ನಾಟ ರಾಜವಂಶಜನೆಂದು ಸಂದೇಹಾತೀತವಾಗಿ ಕರೆಯುತ್ತದೆ. ಮತ್ತು ಹಾಗೆಯೆ ನಾನ್ಯದೇವನನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೧ನೆಯ ಶತಮಾನದ ಮೊದಲ ಪಾದದಲ್ಲಿ ದಕ್ಷಿಣದಿಂದ ನಡೆದ ದಾಳಿಗಳು ಉತ್ತರ ಭಾರತದಲ್ಲಿ ರಾಜಕೀಯ ಸ್ಥಿರತೆಗೆ ಹಿನ್ನಡೆಯುಂಟು ಮಾಡಿದವು. ಆ ಸಂದರ್ಭದಲ್ಲಿ ಕರ್ನಾಟರು ಉತ್ತರ ಭಾರತದ ಪೂರ್ವ ಪ್ರದೇಶದಲ್ಲಿ ಶಾಶ್ವತ ನೆಲೆ ಸ್ಥಾಪಿಸಲು ಹವಣಿಸುತ್ತ ತಮ್ಮತಮ್ಮ ಚಿಕ್ಕಚಿಕ್ಕ ಸ್ವತಂತ್ರ ರಾಜ್ಯಗಳನ್ನು ಕಂಡರಿಸಿಕೊಂಡರು. ಆ ರಾಜ್ಯಗಳು ಮುಂಬರುವ ಶತಮಾನಗಳಲ್ಲಿ ಅತಿ ಮಹತ್ವದ ಪಾತ್ರಗಳನ್ನಾಡಲಿದ್ದವು.[36] ಆ ಕಾಲಘಟ್ಟದ ವ್ಯವಸ್ಥಿತ ಅಧ್ಯಯನಕ್ಕಾಗಿ ಮಿಥಿಲೆಯ ಕರ್ನಾಟರ ಉದಯವನ್ನು ಚಾಲುಕ್ಯರ ವಿಜಯಿ ದಂಡಯಾತ್ರೆಗಳೊಂದಿಗೆ ಜೋಡಿಸುವುದು ಅಪೇಕ್ಷಣೀಯವಾದುದು.

ನಾನ್ಯದೇವನ ಪೂರ್ವಜರು ಪೂರ್ವ ಭಾರತದಲ್ಲಿ ಚಿಕ್ಕ ಸಾಹಸಿ ಒಡೆಯರಾಗಿದ್ದರು. ಆ ಪ್ರದೇಶದಲ್ಲಿ ಪ್ರಚಲಿತವಿದ್ದ ಅರಾಜಕತೆ ಮತ್ತು ಗೊಂದಲದ ಪ್ರಯೋಜನ ಪಡೆದುಕೊಂಡ ನಾನ್ಯದೇವ ಮತ್ತು ಅವನ ಪೂರ್ವಜರು ತಮ್ಮ ಸ್ವಾತಂತ್ರ್ಯವನ್ನು ಭದ್ರಪಡಿಸಿಕೊಂಡಂತೆ ತೋರುತ್ತದೆ.[37] ಸ್ವಾತಂತ್ರ್ಯದ ಸ್ಥಿರತೆಯು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ನಡೆದ ಚಾಲುಕ್ಯ ದಾಳಿಯ ಕಾಲದಲ್ಲಿ ಸಂಭವಿಸಿರುವ ಸಾಧ್ಯತೆಯಿದೆ. ನೇಪಾಳ ಶಾಸನಗಳಲ್ಲಿ ಮಿಥಿಲೆಯ ಕರ್ನಾಟರನ್ನು 'ಕರ್ನಾಟಚೂಡಾಮಣಿ'[38] ಎಂದು ಕರೆದಿದೆ. ಚಾಂದೇಶ್ವರನು 'ಕರ್ನಾಟವಂಶೋದ್ಭವ' ಮತ್ತು 'ಕರ್ನಾಟಾಧಿಪ' ಎಂದು[39] ಕರೆದಿದ್ದಾನೆ. ಸೇನ ಜಿ. ಕರ್ನಾಟಕುಲಲಕ್ಷ್ಮಿ ಶಾಸನಗಳಲ್ಲಿ[40] 'ಕರ್ನಾಟ ಕುಲಕ್ಷ್ಮಿ'[41] ಎಂದೂ ಕರೆಯಲಾಗಿದೆ.

ಕ್ರಿ.ಶ. ೧೧೬೨ ರಷ್ಟು ಇತ್ತೀಚಿನ ಪಟ್ಟದಕಲ್ಲು ಶಿಲಾಶಾಸನದಲ್ಲಿ[42] ನೇಪಾಳವನ್ನು ಮುಮ್ಮಡಿ ಸೋಮೇಶ್ವರನ ಸಾಮಂತ ರಾಜ್ಯವೆಂದು ಹೆಸರಿಸಲಾಗಿದೆ. ನೇಪಾಳದ ಸ್ಥಿತಿಗತಿಯು ಅಸ್ಥಿರ ಮತ್ತು ಅಸ್ತವ್ಯಸ್ತವಾಗಿದ್ದುದನ್ನು ಅನೇಕ ಶಾಸನಗಳು ಮತ್ತು ವಂಶಾವಳಿ ಮೂಲಗಳು ರುಜುಪಡಿಸುತ್ತವೆ. ಇವೆಲ್ಲ ಲಭ್ಯ ಮಾಹಿತಿಯ ದೃಷ್ಟಿಯಿಂದ ಹೀಗೆನ್ನುವುದು ಸಮಂಜಸವಾದೀತು: "ಮಹಾ ಚಾಲುಕ್ಯ ಅರಸನ ಮೇಲೆ ಒಂದರ ಮೇಲೊಂದರಂತೆ ಹಿಮಾಲಯ ಪರ್ವತಶ್ರೇಣಿಯ ಅಡಿಯವರೆಗೂ ಜರುಗಿದ ದಾಳಿಗಳ ಪರಿಣಾಮವಾಗಿ, ನಾನ್ಯದೇವನ ಪೂರ್ವಜರು ತಿರಹತ್‌ನಲ್ಲಿ, ನೇಪಾಳದ ಗಡಿಯಲ್ಲಿ, ಸಾಮಂತರಾಗಿ ತಮ್ಮನ್ನು ಸ್ಥಾಪಿಸಿಕೊಂಡರು...ಮತ್ತು ಬಲಶಾಲಿ ಚಾಲುಕ್ಯ ಬಾಹು ಹಿಂತೆಗೆದ ನಂತರದಲ್ಲಿ ಅವರು ಪ್ರಾಮುಖ್ಯತೆಗೆ ಏರುತ್ತ ತಮ್ಮ ನಿಷ್ಠೆಯನ್ನು ಕಿತ್ತೆಸೆದು ತಿರಹತ್‌ನ ಅರಸರಾಗಿ ತಮ್ಮನ್ನು ಸ್ಥಾಪಿಸಿಕೊಂಡರು."[43]

ನಾನ್ಯದೇವನು ಈ ವಂಶದ ಪ್ರಥಮ ಅರಸ. ಚಾಲುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಸಹಾಯದೊಂದಿಗೆ ಅವನು ಈ ಪ್ರದೇಶದ ಮೇಲೆ ತನ್ನ ಪಾರಮ್ಯವನ್ನು ಸ್ಥಾಪಿಸಿದ. ನಾನ್ಯದೇವನು ಪ್ರಥಮದಲ್ಲಿ ಯಾವುದೊ ಅಜ್ಞಾತ ಅರಸನಡಿ ಸೇವೆ ಸ್ವೀಕರಿಸಿದನು, ತನ್ನ ಒಡೆಯನ ದೌರ್ಬಲ್ಯದ ಪ್ರಯೋಜನ ಪಡೆದನು ಮತ್ತು ಕೊನೆಗೆ ತನ್ನ ಅಧಿಕಾರ ಜಮಾಯಿಸಿದನು ಎಂಬುದು ಲೆವಿ ಅವರ ಅಭಿಮತ. ಪಾಲ ಅರಸರು ತಮ್ಮ ಕೈಕೆಳಗೆ ಅನೇಕ ಕರ್ನಾಟ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದುದು ಚಿರಪರಿಚಿತ ಸಂಗತಿ. ನಾನ್ಯದೇವನು ಪಾಲರ ಕೈಕೆಳಗೆ ಅಧಿಕಾರಿಯಾಗಿದ್ದನು ಮತ್ತು ಕೈವರ್ತ ದಂಗೆಯ ಕಾಲದಲ್ಲಿ ತಿರಭುಕ್ತಿ (ತಿರಹತ್)ಯಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಿದನೆಂದು ಡಿ.ಸಿ.ಗಾಂಗೂಲಿ ಭಾವಿಸುತ್ತಾರೆ. ರಾಮಚರಿತದಲ್ಲಿ ಹೇಳಲಾಗಿರುವ, ಕೈವರ್ತ ಭೀಮನೊಂದಿಗೆ ತನ್ನ ಕಾದಾಟದ ಪೂರ್ವಭಾವಿಯಾಗಿ ರಾಮಪಾಲನಿಗೆ ಎದುರಾದ ಒಂದು ಹೊಸ ಗಂಡಾಂತರವು ಈ ಘಟನೆಯನ್ನು ಉಲ್ಲೇಖಿಸುತ್ತಿರಬಹುದು.[44]

ಸಾರಾಸಗಟಾಗಿ ತಿರಸ್ಕರಿಸಲು ಬಾರದ ನಂಬಿಕೆಗಳ ಪ್ರಕಾರ, ನಾನಿಪದೇವನು ಅಥವಾ, ಸರಿಯಾಗಿ ಹೇಳುವುದಾದರೆ, ನಾನ್ಯುಪದೇವನು ನೇಪಾಳ ಅಡಿಗುಡ್ಡದಲ್ಲಿ ಮಿಥಿಲಾ ರಾಜ್ಯದ ಪ್ರಾಚೀನ ರಾಜಧಾನಿ ಸಿಮ್ರೌನವನ್ನು ಕ್ರಿ.ಶ. ೧೦೯೭ ರಲ್ಲಿ ಸಂಸ್ಥಾಪಿಸಿದ. ಅದರ ಭಗ್ನಾವಶೇಷಗಳಲ್ಲಿ ಅನೇಕ ಮೂರ್ತಿಗಳು ಮತ್ತು ವಿಗ್ರಹಗಳು ದೊರಕಿವೆ.[45] ಲಭ್ಯವಿರುವ ಪ್ರಮಾಣವು ಮಿಥಿಲೆಯ ಕರ್ನಾಟರು ದಾಕ್ಷಿಣಾತ್ಯರೆಂದು ಸೂಚಿಸಲು ಸಹಾಯಕವಾಗುತ್ತದೆ.

ರಾಮಪಾಲನ ಆಳ್ವಿಕೆಯಲ್ಲಿ ಕರ್ನಾಟರು ನೇಪಾಳ ಕೊಳ್ಳದಲ್ಲಿ ಮತ್ತು ಅಡಿಗುಡ್ಡದಲ್ಲಿ ಬಹಳ ಬಲಶಾಲಿ ಸಾಮಂತರಾಗಿದ್ದಂತೆ ತೋರುತ್ತದೆ. ತದನಂತರದಲ್ಲಿ ಪಾಲ ಅರಸರ ದೌರ್ಬಲ್ಯದ ಪ್ರಯೋಜನ ಪಡೆದು ಕ್ರಿ.ಶ. ೧೦೯೭ ರಲ್ಲಿ ತಮ್ಮದೇ ಸ್ವತಂತ್ರ ರಾಜವಂಶವನ್ನು ಸ್ಥಾಪಿಸಿದರು. ಕರ್ನಾಟರು ಸು. ೧೦೯೭ ರಿಂದ ೧೩೨೪ - ೨೫ ರವರೆಗೆ ಮಿಥಿಲೆಯನ್ನು ಆಳಿದರು. ಮಿಥಿಲೆಯಲ್ಲಿ ಕರ್ನಾಟರ ಆಗಮನದೊಂದಿಗೆ ನಾವು ಇತಿಹಾಸದ ಅಧಿಕ ನಿಶ್ಚಿತವಾದ, ಸಮತೂಕದ ನೆಲೆ ತಲುಪುತ್ತೇವೆ.

ಟಿಪ್ಪಣಿಗಳು

1. Cf. CIB (Pala Inscriptions) IB, 110-113. H.C.Raichaudhury, *Studies in Indian Antiquities*, P. 157.
2. Inscriptions of Bengal. No.110, 113 Verse IV Cf. IHQ XII(611-12).
3. JASB, N.v. of 1909, p.471 Verse No. Modhinagar Grant.
4. EI. XIV. p. 159.
5. Bilhan's Introduction to *Vikramankadevacharita* Cf. IHQ VII. p. 683.
6. JBBARS, IX p.268. IHQ VII p.683 E.C. IX.
7. IA XIV p. 103.
8. IHQ VII p. 684.
9. IA XIX 329 ff.

10. EI XXII p.138 ff.
11. RC III p. 24.
12. Ep. Carnatica, XI. *Inscriptions of Devanagara Taluq* No.2. 3, Cf. MB p.164.
13. PAIOC III p. 398.
14. EI-XI p. 230-31.
15. PAIOC III p. 396.
16. SII. III Part-III pp.424-25 JIH III 320 ff. Cf. K.A.N. Sastri : *The Cholas* p. 247 ff. Also Cf. MB p. 138-39, 209.
17. JAHRS, I, Page 57.
18. Ibid. p, 56-57; Cf PIHC, Jaipur Session.
20. *Gaudarajamala*, p. XI for different views Cf. HAIB p.396-97.
21. IA., 1918, p. 290, 1919, p. 144 ff.
22. PIHC., XIV, p. 130.
23. PB-p. 99.
24. JBORS. IX-p. 306.
25. IAG. VII-p. 681 DHNI-I p. 316 fn 3.4.
26. IHQ. XII-pp. 475-76.
27. EI-II p. 185.
28. HAIB. p. 456 Cf. J.N. Banerjee Comm. Volume. edited by D.C.Sircar.
29. JBORS IX p. 262.
30. *Vikramankadevcharita* III p. 74.
31. EI IV p. 262
32. IA 1919 p. 114. Bombay Gazetteer. Vol. 1. p. II, p. 219.
33. TM. p. 231, Cf. HAIA, p. 456 Aslo *Gaudarajamala*, p. 47.
34. IHQ, XXIII, p. 326 of K.L. Barua. *Early History of Kamarupa*.
35. JBORS, IX p. 306.
36. D.R.Regmi HMN p. 152.
37. IHQ VII p. 681 XXX ff.
38. DHNI p. 203.
39. IA. 1880 p. 188 Levi to Nepal II. p. 221-22.
40. JASC (L), p. 186.
41. *Charitakosa* (Marathi) Sv. Nanyadeva.
42. EII p. 305. JASB p. 190-9, 467 ff. EI XV 282.
43. Q. Journal of the Mythical Society XLIV p. 1 Cf. IHQ XXX p. 206.
44. TM.
45. HCIP V p.47.
46. JBORS XXVIII p. 131 Cf. B.H. Hedgeson. An Account of a visit to the ruins of Simaraon. Once the capital of Mithila province in the JASB V p. 121 Cf. PIHC XIV p. 130 ff. For inscriptions at Simaraon, vide CIB.

❑❑

## ೪

# ನಾನ್ಯದೇವನ ಜೀವನ, ಸಾಧನೆ

ಕ್ರಿ.ಶ. ೧೦೯೭ ರಲ್ಲಿ ಕರ್ನಾಟ ರಾಜವಂಶವನ್ನು ಸಂಸ್ಥಾಪಿಸಿದ ಶ್ರೇಯಸ್ಸನ್ನು ನಾನ್ಯದೇವನಿಗೆ ನೀಡಲಾಗಿದೆ.[1] ಗೊಂದಲಕ್ಕೀಡಾದ ಪರಿಸ್ಥಿತಿಯ ಲಾಭ ಪಡೆದು ಕನೌಜದಲ್ಲಿ ಗಹಡವಾಲರು, ಬಂಗಾಲದಲ್ಲಿ ಸೇನರು ಮತ್ತು ಮಿಥಿಲೆಯಲ್ಲಿ ಕರ್ನಾಟರು ತಮ್ಮತಮ್ಮ ಸ್ಥಾನ ಭದ್ರಪಡಿಸಿಕೊಂಡರು. ರಾಮಪಾಲನು ಬಹಳ ತೊಂದರೆಯಲ್ಲಿದ್ದು ಎಲ್ಲ ಕಡೆಗೂ ವೈರಿಗಳನ್ನು ಎದುರಿಸಬೇಕಾಯಿತು. ನಾನ್ಯದೇವನು ಸಮಕಾಲೀನ ಪರಿಸ್ಥಿತಿಯ ಗೊಂದಲದ ಲಾಭ ಪಡೆದುಕೊಳ್ಳಲು ಸಂತೋಷಿಸಿದನು. ಮತ್ತು ಸ್ವತಂತ್ರ ಕರ್ನಾಟ ರಾಜ್ಯದ ಅಸ್ತಿವಾರ ಹಾಕಿದನು. ನಾನ್ಯದೇವನು ಮಾಡಿದ ಕರ್ನಾಟ ರಾಜವಂಶದ ಸಂಸ್ಥಾಪನೆಯು ಇತಿಹಾಸದ ಅತಿ ಮಹತ್ವದ ಘಟನೆಗಳಲ್ಲೊಂದು. ಏಕೆಂದರೆ, ಅದು ಮಿಥಿಲೆಯಲ್ಲಿ ರಾಜಕೀಯ ಪ್ರಗತಿ ಮತ್ತು ಸ್ಥಿರತೆಯ ಹೊಸ ಯುಗವನ್ನೆ ಆರಂಭಿಸಿತು.

ನಾನ್ಯದೇವನ ಕಾಲವನ್ನು ನಿಗದಿಗೊಳಿಸಲು ಬಹಳಷ್ಟು ಕಾರ್ಯ ಮಾಡಲಾಗಿದೆ. ಅವನ ಅಧಿಕಾರಾರೋಹಣ ಕಾಲದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಚದುರಿಹೋಗಿದ್ದ ಸಾಕಷ್ಟು ಸಾಮಗ್ರಿ ಲಭ್ಯವಿದ್ದಾಗ್ಯೂ ತೀರ ಇತ್ತೀಚಿನ ವರೆಗೆ ಕಾಲಾನುಕ್ರಮಣಾತ್ಮಕ ವೃತ್ತಾಂತದ ಕೊರತೆಯೂ ಸಾಕಷ್ಟಿತ್ತು.

ಮಿಥಿಲೆಯ ಇತಿಹಾಸದ ಪ್ರಥಮ ಸುಸಂಬದ್ಧ ವೃತ್ತಾಂತವನ್ನು ಮನಮೋಹನ ಚಕ್ರವರ್ತಿ ಅವರು ಜೆಎಎಸ್‌ಬಿ (ಹೊಸ ಮಾಲಿಕೆ)ಯಲ್ಲಿ ಪ್ರಕಟಿಸಿದರು. ಆ ವಿದ್ವಾಂಸರು ನಾನ್ಯದೇವನನ್ನು ೧೨ನೆಯ ಶತಮಾನದಲ್ಲಿ ಇರಿಸಿದರು.[2] ಆದರೆ, ಕಿಎಲ್‌ಹಾರ್ನ್‌ರು ನಾನ್ಯದೇವನನ್ನು ಶಾಲಿವಾಹನ ಶಕೆ ೧೦೧೯ ಅಂದರೆ ಕ್ರಿ.ಶ. ೧೦೯೭ ರಲ್ಲಿ ಇರಿಸಿರುವರು. ನಾನ್ಯದೇವನ ಕಾಲವು ಸಿಮರಾಂವ ಶಿಲಾಸ್ತಂಭವೆಂದು ಕರೆಯಲಾಗುವ ಶಾಸನದಿಂದ ತಿಳಿದುಬರುತ್ತದೆ ಮತ್ತು ನೇಪಾಳ - ವಂಶಾವಳಿ ಕಡತಗಳಲ್ಲಿ ಅದರ ಪಠ್ಯದ ಯಥಾಪ್ರತಿಯನ್ನು ಕಾಯ್ದಿರಿಸಲಾಗಿದೆ. ಪ್ರಸ್ತುತ ಪದ್ಯದ ಬಗೆಗೆ ಚಂದಾ ಝಾ ತಾವು ಸಂಪಾದಿಸಿದ ವಿದ್ಯಾಪತಿಯ 'ಪುರುಷಪರೀಕ್ಷ'[3]ದ ಪಠ್ಯದಲ್ಲಿ ಗಮನ ಸೆಳೆದಿರುವರು. ಸಿಮರಾಂವಗಡ ಕೋಟೆಯನ್ನು ನಾನ್ಯದೇವನು ಕಟ್ಟಿಸಿದನೆಂದು ಬಗೆಯಲಾಗಿದೆ. ಶಾಸನದಲ್ಲಿ ನಮೂದಿಸಿರುವ ದಿನಾಂಕವು ಅದ್ಭುತ ಖಚಿತತೆ ಹೊಂದಿದ್ದು ಬಂಗಾಲ ಮತ್ತು ಮಗಧಗಳ ಪ್ರಾಚೀನ ಕ್ಷೇತ್ರದಲ್ಲಿಯೆ ಅದಕ್ಕೆ ಸಮನಾದ ಇನ್ನೊಂದು ದಿನಾಂಕ ದೊರೆಯದು ಎಂದು ಸಮರ್ಥ ವಿದ್ವಾಂಸರಲ್ಲೊಬ್ಬರು ಅಭಿಪ್ರಾಯಪಡುತ್ತಾರೆ. ನಾನ್ಯದೇವನು ಸಿಂಹಲಗ್ನದಲ್ಲಿ ಅಥವಾ ಶಕೆ ೧೦೧೯ನೆಯ[4] ವರ್ಷದಲ್ಲಿ ಸ್ವಾತಿ ನಕ್ಷತ್ರದ ಏಳನೆಯ ಶುಕ್ಲವಾಗಿದ್ದ ತಿಥಿಯಂದು ಅಥವಾ ಸೌರ ಶ್ರಾವಣದ ಶನಿವಾರದಂದು ಆ ಸ್ತಂಭವನ್ನು ಕಟ್ಟಿಸಿದ. ಆ ದಿನಾಂಕವು ಕ್ರಿ.ಶ. ೧೦೯೭, ಜುಲೈ ೧೮ಕ್ಕೆ ಸರಿಹೊಂದುತ್ತದೆ. ಲೆವಿಯವರು ಈ ಪದ್ಯವನ್ನು ಅಲ್ಲಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ ವ್ಯಾಖ್ಯಾನಿಸಿರುವರು.[5]

ನೇಪಾಳಿ ಆಕರಗಳಲ್ಲಿ ನಾನ್ಯದೇವನನ್ನು ಕುರಿತು ವಿರೋಧಾತ್ಮಕವಾದ ಪ್ರಮಾಣ ಮತ್ತು ಮಾಹಿತಿ ಇವೆ. ಮನಮೋಹ ಚಕ್ರವರ್ತಿ ಅವರು ನಿಗದಿಪಡಿಸಿದ ದಿನಾಂಕವು ನಾನ್ಯದೇವನ ಮಗ ಮಲ್ಲದೇವ ಮತ್ತು ಗಹಡವಾಲ ಅರಸ ಜಯಚಂದ (ಕ್ರಿ.ಶ. ೧೧೭೦ - ೧೧೯೩)ರ ಏಕಕಾಲಿಕತೆಯನ್ನು ಆಧರಿಸಿದೆ. ಮಲ್ಲದೇವನು ಗಹಡವಾಲ ಅರಸ ಜಯಚಂದನಡಿ ಸೇವೆ ಸಲ್ಲಿಸಿದನೆಂದು ಹೇಳಲಾಗಿರುವ ಸಂಗತಿಯನ್ನಾಧರಿಸಿ ಮನಮೋಹನ ಚಕ್ರವರ್ತಿ ಅವರು ವಿದ್ಯಾಪತಿಯ ಅಭಿಪ್ರಾಯವನ್ನು ಸಿದ್ಧಪಡಿಸಲೆಂಬಂತೆ ನಾನ್ಯದೇವನನ್ನು ಕ್ರಿ.ಶ. ೧೨ನೆಯ ಶತಮಾನದ ಮಧ್ಯದಲ್ಲಿ ಇರಿಸಿರುವರು.[6] ವಿದ್ಯಾಪತಿಯ ವಿಚಾರವನ್ನು ಗಣನೆಗೆ ತೆಗೆದುಕೊಂಡದ್ದಾದರೆ ಮಲ್ಲದೇವನು ಜಯಚಂದನ ಆಸ್ಥಾನದಲ್ಲಿದ್ದಾಗ ಕೇವಲ ೧೬ ವರ್ಷದವನಾಗಿದ್ದನೆಂದು ಹೇಳಬೇಕಾಗುವುದು. ಹಾಗಾಗಿ, ಕ್ರಿ.ಶ. ೧೧೫೪ ಕ್ಕಿಂತ ಮುಂಚೆ ಅವನು ಹುಟ್ಟಿರಲಾರ. ಆದರೆ, ಲಭ್ಯವಿರುವ ಪ್ರಮಾಣದ ದೃಷ್ಟಿಯಿಂದ, ನಾವು ನಾನ್ಯದೇವನ ದಿನಾಂಕವನ್ನು ಕ್ರಿ.ಶ. ೧೧೫೦ ರಾಚೆ ಸರಿಸಲಾರೆವು. ಮಲ್ಲದೇವನು ೧೬ ನೆಯ ವಯಸ್ಸಿನಲ್ಲಿ

ತೀರಿಕೊಂಡನೆಂಬ ಮನಮೋಹನ ಚಕ್ರವರ್ತಿ ತಳೆದ ಅಭಿಪ್ರಾಯವನ್ನು ಆರ್.ಸಿ.ಮಜುಮದಾರ ಒಪ್ಪುತ್ತಾರೆ.[7] ಆದರೆ, ಅದು ಸರಿಯಲ್ಲ. ಏಕೆಂದರೆ, ವಿದ್ಯಾಪತಿಯು ಮಲ್ಲದೇವನ ಮರಣವನ್ನು ಉಲ್ಲೇಖಿಸಿಲ್ಲ. ನಾನ್ಯದೇವನು ಕ್ರಿ.ಶ. ೧೦೯೭ ರಲ್ಲಿ ಕರ್ನಾಟ ರಾಜವಂಶವನ್ನು ಸ್ಥಾಪಿಸದನೆಂದು ಬಹುತೇಕ ವಿದ್ವಾಂಸರು ಒಲವು ತೋರುತ್ತಾರೆ.[8] ನೇಪಾಳ ವಂಶಾವಳಿಯನ್ನು ವ್ಯಾಖ್ಯಾನಿಸುವಲ್ಲಿ ಆಗಿರುವ ತಪ್ಪಿಗೆ ಸಿಮರಾಂವ ಶಾಸನವೆಂದು ಕರೆಯಲಾಗುವ ಶಾಸನದ ಪ್ರಥಮ ಸಾಲಿನ ತಪ್ಪು ವ್ಯಾಖ್ಯಾನವೆ ಕಾರಣವಾಗಿದೆ. ಕೆ.ಪಿ.ಜಯಸ್ವಾಲರ ಅಭಿಪ್ರಾಯದಲ್ಲಿ, ದಿನಾಂಕವನ್ನು ಸ್ವೀಕೃತ ಸೂತ್ರದಂತೆ ಬಲದಿಂದ ಎಡಕ್ಕೆ[9] (ಅಂಕನಾಮ ವಾಮತೆಗತಿಃ) ಓದುವ ಬದಲು ಎಡದಿಂದ ಬಲಕ್ಕೆ ಓದಿದ್ದುದರಿಂದ ತಪ್ಪು ನುಸುಳಿದೆ. ಕರ್‌ಪ್ಯಾಟ್ರಿಕ್‌ರು ದಿನಾಂಕವನ್ನು ಕ್ರಿ.ಶ. ೯೦೧ ಎಂದು, ಭಗವಾನಲಾಲ ಕ್ರಿ.ಶ. ೮೧೧ ಎಂದು ಮತ್ತು ಕೆ.ಸಿ.ಪಾಂಡೆ ೧೦ ನೆಯ ಶತಮಾನದ ಅಂತ್ಯವೆಂದು ನಿಗದಿಪಡಿಸುವರು. ಕೆ.ಸಿ.ಪಾಂಡೆ[10] ನಾನ್ಯದೇವನ ಕಾಲದ ಬಗೆಗೆ ಸುದೀರ್ಘವಾಗಿ ವಿಚಾರ ಮಾಡಿರುವರು. ಅವರು ಕೆಲವು ಸಮಸ್ಯೆಗಳನ್ನು ಎತ್ತಿರುವರು. ಅಭಿನವಗುಪ್ತನು ಭರತನ ನಾಟ್ಯಶಾಸ್ತ್ರ ಕುರಿತ ತನ್ನ ಭಾಷ್ಯದಲ್ಲಿ ನಾನ್ಯದೇವನನ್ನು ಉಲ್ಲೇಖಿಸುತ್ತ ಅವನ *ಭರತಭಾಷ್ಯ*ದಿಂದ ಹೀಗೆ ಉದ್ಧರಿಸಿರುವನು: *ಉಕ್ತಮ್ ನಾನ್ಯದೇವನಃ ಸ್ವ ಭರತಭಾಷ್ಯಾ* (ಪು. ೧೨೨). "ನಾನ್ಯದೇವನು ಭರತನ ನಾಟ್ಯಶಾಸ್ತ್ರ ಕುರಿತ ತನ್ನ ಭಾಷ್ಯವನ್ನು ಕ್ರಿ.ಶ. ೧೦ ನೆಯ ಶತಮಾನದ ಅಂತ್ಯಕ್ಕೆ ಮುನ್ನ ಪೂರ್ತಿಗೊಳಿಸಿದನು" ಎಂದು ಕೆ.ಸಿ.ಪಾಂಡೆ ಅಭಿಪ್ರಾಯಪಡುವರು (ಪು. ೧೭೨). ಅವರು ಮುಂದುವರಿದು ಹೀಗೆ ಬರೆಯುತ್ತಾರೆ: "ನಾನ್ಯದೇವನ ಉತ್ತರಾಧಿಕಾರಿ ಗಂಗದೇವನೂ ಗಾಂಗೇಯದೇವನೂ ಒಬ್ಬನೆ ವ್ಯಕ್ತಿ ಎಂದು ಆರ್.ಸಿ.ಮಜುಮದಾರ ಸೂಚಿಸುತ್ತಾರೆ. ಹಾಗಿದ್ದರೆ, ಬೆಂಡಾಲ್ ಅವರು ಗಮನಿಸಿದ ಪುಸ್ತಕವೊಂದರ ಅಂತ್ಯಪ್ರಶಸ್ತಿಯು ಗಾಂಗೇಯದೇವನು ತಿರಹತ್‌ಅನ್ನು ಆಳುತ್ತಿದ್ದನೆಂದು ಪ್ರಸ್ತಾಪಿಸುತ್ತದೆ ಮತ್ತು ಆ ಪುಸ್ತಕದ ಕಾಲವನ್ನು ಸಂವತ್ ೧೦೭೬ ಎಂದು ನಿಗದಿಪಡಿಸಲಾಗಿದೆ. ಹಾಗಾಗಿ, ಅದು ಕ್ರಿ.ಶ. ೧೧ ನೆಯ ಶತಮಾನದ ಆರಂಭದಲ್ಲಿ ಅಭಿನವಗುಪ್ತನು ನಾನ್ಯದೇವನನ್ನು ಉದ್ಧರಿಸಿದುದನ್ನು ತೃಪ್ತಿಕರವಾಗಿ ವಿವರಿಸುತ್ತದೆ." ನಾನ್ಯದೇವನ ಕಾಲ ಮತ್ತು ದಿನಾಂಕ ಅಂತಿಮವಾಗಿ ಬಗೆಹರಿದಿವೆಯೆಂದು ಕೆ.ಸಿ.ಪಾಂಡೆ ಪರಿಗಣಿಸುವುದಿಲ್ಲ.

ಬೆಂಡಾಲ್ ಮುಂದಿಟ್ಟಿರುವ ಆಧಾರಾಂಶವನ್ನು ಅನುಸರಿಸುವ ಬಗೆಗೆ ಕೆ.ಸಿ.ಪಾಂಡೆ ಅವರ ಸೂಚನೆಯನ್ನು ಲಕ್ಷ್ಯದಲ್ಲಿಡಬೇಕು. ಗಾಂಗೇಯದೇವನು ಕಲಚೂರಿ ಅರಸನಾಗಿದ್ದನು, ಕರ್ನಾಟನಲ್ಲ ಎಂದು ಬೆಂಡಾಲ್‌ರು ಪರಿಗಣಿಸುವುದು ಅಡಚಣೆಯನ್ನು ನಿವಾರಿಸುವುದಿಲ್ಲ: "ನಮಗೆ ಗೊತ್ತಿರುವಂತೆ, ನಾನ್ಯದೇವನು ಕರ್ನಾಟ ರಾಜವಂಶದ ಮತ್ತು ಮಿಥಿಲೆಯ ಅರಸನಾಗಿದ್ದ ಬಗೆಗೆ ಎಲ್ಲಿಯೂ ಉಲ್ಲೇಖವಿಲ್ಲ. ಹಾಗಾಗಿ, ಆಧುನಿಕ ಸಂಶೋಧನೆಗಳ ದೃಷ್ಟಿಯಿಂದ ಕೆ.ಸಿ.ಪಾಂಡೆಯವರ ಪ್ರಸ್ತಾಪವನ್ನು ಸ್ವೀಕರಿಸಲು ಸಾಧ್ಯವಿಲ್ಲ." ನಾನ್ಯದೇವನು ಕ್ರಿ.ಶ. ೧೦೯೭ ರಲ್ಲಿ ಸಿಂಹಾಸನಾರೋಹಣ ಮಾಡಿದನೆಂದೂ

ಭರತನ ನಾಟ್ಯಶಾಸ್ತ್ರಕ್ಕೆ ಭಾಷ್ಯ ಬರೆದವನೆಂದೂ ಎಲ್ಲ ಸಾಹಿತ್ಯಿಕ, ಪಾರಂಪರಿಕ ಮತ್ತು ಶಾಸನಗಳ ಪ್ರಮಾಣ ದೃಢಪಡಿಸುತ್ತದೆ.[೧೧]

ಎಂ.ರಾಮಕೃಷ್ಣ ಕವಿಯ ಅಭಿಪ್ರಾಯದಲ್ಲಿ, ನಾನ್ಯದೇವನು ಅಭಿನವಗುಪ್ತನನ್ನು ನಿಕಟವಾಗಿ ಅನುಸರಿಸುತ್ತಾನೆ ಮತ್ತು ಎರಡು ಕಡೆ ಆ ಮಹಾಭಾಷ್ಯಕಾರನನ್ನು ಹೆಸರುಗೊಂಡು ಉಲ್ಲೇಖಿಸುತ್ತಾನೆ. ಅಭಿನವಗುಪ್ತನು ಕ್ರಿ.ಶ. ೧೦೩೦ ರಲ್ಲಿ ಮೃತಪಟ್ಟನು. ಅಭಿನವಗುಪ್ತನು ಮಾಡಿದ ನಾನ್ಯದೇವನ ಉಲ್ಲೇಖವು ಹಸ್ತಪ್ರತಿಯಲ್ಲಿ ತರುವಾಯದ ಪ್ರಕ್ಷೇಪವಾಗಿದ್ದು ಇಂಥ ಪ್ರಕ್ಷೇಪಗಳು ಪ್ರಾಚೀನ ಭಾರತದಲ್ಲಿ ವಿರಳವೇನಲ್ಲ. ಕೊನೆಯಲ್ಲಿ, ನಾನ್ಯದೇವನ ಕಾಲದ ಬಗೆಗೆ ಹೆಚ್ಚಿನ ವಾದವಿವಾದ ಅಗತ್ಯವಿಲ್ಲ. ಅದು ಒಟ್ಟಾರೆ ಕಾರ್ಯತಃ ಅಂತಿಮವಾಗಿ ತೀರ್ಮಾನಗೊಂಡಂತೆ ತೋರುತ್ತದೆ. ನಾನ್ಯದೇವನು ಅಧಿಕಾರವಾಣಿಯ ಭಾಷ್ಯಕಾರನಾಗಿದ್ದುದರಿಂದ, ಅವನ ವಿಚಾರಗಳನ್ನು ಅಭಿನವಗುಪ್ತನ ಕೃತಿಯಲ್ಲಿ ಸೇರಿಸಬೇಕೆಂದು ಉದ್ದೇಶಪೂರ್ವಕ ತಪ್ಪನ್ನು ಪ್ರಕ್ಷೇಪಕಾರನು ಮಾಡಿರಬಹುದಾದ ಸಾಧ್ಯತೆಯಿದೆ. ಅಭಿನವಗುಪ್ತನ ಹೊಸ ಹಸ್ತಪ್ರತಿಯ ಸಂಶೋಧನೆಯು ಈ ಸಮಸ್ಯೆಯನ್ನು ಪರಿಹರಿಸೀತು. ಪ್ರಥಮ ಸಾಲನ್ನು ವ್ಯಾಖ್ಯಾನಿಸುವಲ್ಲಿನ ಚಿಕ್ಕ ದೋಷವೊಂದನ್ನು ಬಿಟ್ಟರೆ ನೇಪಾಳ ವಂಶಾವಳಿಯು ಕರ್ನಾಟ ರಾಜವಂಶದ ಕಾಲವನ್ನು ಸರಿಯಾಗಿ ನೀಡುತ್ತದೆ. ಹರಿಸಿಂಹದೇವನ ಕಾಲವನ್ನೂ ಕ್ರಿ.ಶ. ೧೩೨೪-೨೫ ಎಂದು ಸರಿಯಾಗಿ ಕೊಡಲಾಗಿದ್ದು ನೇಪಾಳಿ ದಾಖಲೆಗಳಲ್ಲಿ ಉಲ್ಲೇಖಿತವಾಗಿರುವ ಕರ್ನಾಟರ ಆಳ್ವಿಕೆಯ ಒಟ್ಟು ಕಾಲಾವಧಿಯು ಸ್ಥಳೀಯ ಮತ್ತು ಪಾರಂಪರಿಕ ಮೂಲಗಳೊಂದಿಗೆ ಸರಿಹೊಂದುತ್ತದೆ.

ಪಾರಂಪರಿಕ ಮೂಲಗಳಲ್ಲಿ ಹರಿಸಿಂಹದೇವನು ನೇಪಾಳಕ್ಕೆ ಪಲಾಯನಗೈದ ವೃತ್ತಾಂತವಿದೆ. ಈಗ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿ ಕಾಯ್ದಿಟ್ಟಿರುವ ಪರ್ಶಿಯನ್ ಹಸ್ತಪ್ರತಿ *ಬಸಾತಿನ್-ಉಲ್-ಉನ್ಸ್*[೧೨] ಸೇರಿದಂತೆ ಹಲವಾರು ಮೂಲಗಳು ಹರಿಸಿಂಹದೇವನ ಪಲಾಯನವನ್ನು ದೃಢಪಡಿಸುತ್ತವೆ. ಹರಿಸಿಂಹದೇವನ ವಂಶಜನೆಂದು ಹೇಳಿಕೊಳ್ಳುವ ಜಗಿಯೋತಿರಮಲನ ನಾಟಕ ಮುದಿತಕುವಲಯಾಶ್ವಸ್ವದ ಹಸ್ತಪ್ರತಿಯು ಆ ದಿನಾಂಕವನ್ನು ''ನವೇಂದುಖ ಚಂದ್ರಯುಕ್ತೇ ಶಕೆ'' ಎಂದು ದಾಖಲಿಸುತ್ತದೆ. ಅದು ಕ್ರಿ.ಶ. ಜುಲೈ ೧೮, ೧೦೯೭ ಕ್ಕೆ ತಾಳೆ ಹೊಂದುತ್ತದೆ. ಸಿಮರಾಂವ ಶಾಸನಗಳ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಿದರೆ ಕೇವಲ ಎಂಟು ದಿನಗಳ ವ್ಯತ್ಯಾಸ ಕಂಡುಬರುತ್ತದೆ. ಅದನ್ನು ಸ್ವಾತಿ ನಕ್ಷತ್ರದ ಶನಿವಾರವೆಂದು ದೃಢಪಡಿಸಲಾಗಿದೆ.[೧೩] ಪಾರಂಪರಿಕ ಕಾಲಲೇಖನದಲ್ಲಿ ನೀಡಲಾಗಿರುವ ನಾನ್ಯದೇವನ ಕಾಲವು ಬಹುತೇಕ ನೇಪಾಳಿ ವೃತ್ತಾಂತಗಳಲ್ಲಿ ಕಂಡುಬರುತ್ತದೆ. ಆದರೆ, ಅತ್ಯಂತ ಸರಿಯಾದ ರೂಪದಲ್ಲಿ ಅದು ಕೈಸರ ಸನಿಶೇರ ಜಂಗಬಹಾದುರ ರಾಣಾನ ವಶದಲ್ಲಿರುವ ವಂಶಾವಳಿಯಲ್ಲಿ ಮತ್ತು ಮುದಿತಕುವಯಾಶ್ವಸ್ವದಲ್ಲಿ ಮಾತ್ರ ಕಂಡುಬರುತ್ತದೆ. ಬಹುತೇಕ ಮೂಲಗಳಲ್ಲಿಯ ವ್ಯತ್ಯಾಸಗಳನ್ನು ಪರಿಗಣಿಸಿ ಮತ್ತು ಮೇಲೆ ಚರ್ಚಿಸಿದ ವಿವರಗಳನ್ನು ಗಮನದಲ್ಲಿಟ್ಟುಕೊಂಡು ನಾವು ನಾನ್ಯದೇವನ ಸಿಂಹಾಸನಾರೋಹಣ ದಿನಾಂಕವನ್ನು ಕ್ರಿ.ಶ. ಜುಲೈ ೧೮, ೧೦೯೭

ಎಂದು ಸ್ವೀಕರಿಸಬೇಕು.[14] ದೇಒಪಾರಾ ಶಾಸನವನ್ನು ಸಂಪಾದಿಸುವಾಗ ಕಿವಲ್‌ಹಾರ್ನ್‌ರು ನಾನ್ಯದೇವನನ್ನು ಶಕೆ ೧೦೧೯ (ಕ್ರಿ.ಶ. ೧೦೯೭) ರಲ್ಲಿ ಇರಿಸಿದ್ದಾರೆ. ಸಮಕಾಲೀನ ರಾಜಕೀಯ ವಿದ್ಯಮಾನಗಳನ್ನು ಪರಿಗಣಿಸಿದಾಗ ಮಾತ್ರವೇ ನಾನ್ಯದೇವನದೇ ಭಾಷ್ಯದಲ್ಲಿ ಬಳಸಲಾದ ಉಪಾಧಿಗಳನ್ನು ಖಚಿತಪಡಿಸಿಕೊಳ್ಳಬಹುದು. ಬೇರೆ ಬೇರೆ ಛಾಯೆ ಮತ್ತು ಸ್ವರೂಪಗಳ ಶಾಸನಗಳಿಂದ ಅವನ ಸಮಕಾಲೀನರು ನಮಗೆ ಗೊತ್ತಾಗಿರುವರು. ವಿಜಯಸೇನನ ದೇಒಪಾರಾ ಶಾಸನವು ಅವನ ಕಾಲವನ್ನು ಖಚಿತಪಡಿಸಿಕೊಳ್ಳಲು ಸಹಾಯಕವಾಗುತ್ತದೆ. ದೇಒಪಾರಾ ಶಾಸನದಲ್ಲಿ ಅವನನ್ನು ನಾನ್ಯ ಎಂದು ಕರೆಯಲಾಗಿದ್ದು ಶ್ರೀಧರದಾಸನ ಅಂಧ್ರುತಾರ್ಹಿ ಶಾಸನದಲ್ಲೂ ಹೆಸರಿಸಲಾಗಿದೆ.[15] ಚರ್ಚಿತ ಆಧಾರದ ಮೇಲಿಂದ, ನಾನ್ಯದೇವನ ಕಾಲವು ನಿರ್ಣಯಿತವಾಗಿದೆಯೆಂದೇ ಗ್ರಹಿಸಬೇಕು. ಇನ್ನೂ ನಿಖರವಾದ ಹೊಸ ಸಾಮಗ್ರಿ ದೊರೆತುದಾದರೆ ಆ ಮಾತು ಬೇರೆ. ನಾನ್ಯದೇವನು ೫೦ ವರ್ಷ (ಕ್ರಿ.ಶ.ಸು. ೧೦೯೭-೧೧೪೭) ಆಳಿದನೆಂದು ಹೇಳಲಾಗಿದೆ.

## ನಾನ್ಯದೇವನ ವಿಜಯಗಳು

ನಾನ್ಯದೇವನು ತನ್ನ ರಾಜಕೀಯ ಜೀವನದ ಆರಂಭಿಕ ಹಂತದಲ್ಲಿ ಒಬ್ಬ ಸಾಮಂತ ದೊರೆಯಾಗಿ ಗಮನ ಸೆಳೆಯುತ್ತಾನೆ. ಈ ಅಭಿಪ್ರಾಯವನ್ನು ಭರತನ ನಾಟ್ಯಶಾಸ್ತ್ರಕ್ಕೆ ಅವನೇ ಬರೆದ ಭಾಷ್ಯ ಸಮರ್ಥಿಸುತ್ತದೆ. ಭಾಷ್ಯದ ಲಭ್ಯವಿರುವ ಭಾಗವು ನಾನ್ಯದೇವನನ್ನು ಗುರುತಿಸಲು ಸಹಾಯ ಮಾಡುತ್ತದೆ. "ಮಹಾಸಾಮಂತಾಧಿಪತಿ ಧರ್ಮಾವಲೋಕ ಶ್ರೀಮಾನ್ ನಾನ್ಯಪತಿಃ". ಅವನ ಮಂತ್ರಿ ಶ್ರೀಧರದಾಸನ ಅಂಧ್ರುತಾರ್ಹಿ ಶಾಸನದಲ್ಲಿ ನಾನ್ಯದೇವನನ್ನು "ಶ್ರೀಮಾನ್ ನಾನ್ಯಪತಿ" ಎನ್ನಲಾಗಿದೆ. ಶ್ರೀಧರದಾಸನಿಗೆ ಅವನ ಖಚಿತ ಹೆಸರು ಗೊತ್ತಿರಬೇಕು ಅಥವಾ ಶ್ರೀಧರದಾಸನು ನಾನ್ಯದೇವನ ಭಾಷ್ಯದಿಂದ ಕೆಳಗಿನ ಪ್ರಶಸ್ತಿಗಳನ್ನು ತೆಗೆದುಕೊಂಡಿರಬೇಕು.

೧. ಮಹಾಸಾಮಂತಾಧಿಪತಿ ಶ್ರೀಮಾನ್ ನಾನ್ಯಪತಿ
೨. ಮಿಥಿಲೇಶ್ವರೇಣ
೩. ಕರ್ನಾಟ ಕುಲಭೂಷಣ
೪. ರಾಜನಾರಾಯಣ
೫. ನೃಪ
೬. ಮೋಹನ ಮುರಾರಿ
೭. ನರಪತಿ
೮. ಮೈಥಿಲೇಂದ್ರ
೯. ಸಂಗ್ರಾಮಬ್ಭೈರವ, ಇತ್ಯಾದಿ.[16]

'ಮಹಾಸಾಮಂತಾಧಿಪತಿ' ಎಂಬ ಉಪಾಧಿಯು ನಾನ್ಯದೇವನು ಮಿಥಿಲೆಯಲ್ಲಿ ರಾಜನಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲು ಸಾಮಂತ ದೊರೆಯಾಗಿದ್ದುದನ್ನು


ಆಂಧ್ರ ಪ್ರದೇಶ
ಬಿಹಾರ
ಪಶ್ಚಿಮ ಬಂಗಾಳ

ಸೂಚಿಸುತ್ತದೆ. ಆದರೆ, ಅವನು ಚಾಲುಕ್ಯ ಅರಸನ ಅಡಿಯಲ್ಲಿ ಸಾಮಂತನಾಗಿದ್ದನೊ ಅಥವಾ ಪಾಲರ ಅಡಿಯಲ್ಲೊ ಹೇಳುವುದು ಕಠಿಣವಾಗಿದೆ. ಈ ಸಂಬಂಧದಲ್ಲಿ ಯಾವುದೇ ಊಹೆಯನ್ನು ಮಾಡುವುದು ಅನಗತ್ಯ. ನಾನ್ಯದೇವನು ಎಷ್ಟೊಂದು ಬಲಶಾಲಿ ಸಾಮಂತನಾಗಿದ್ದನೆಂದರೆ ತಾನು ಸೇವೆ ಸಲ್ಲಿಸುತ್ತಿದ್ದ ಒಡೆಯನ ಹೆಸರು ಹೇಳುವ ಗೊಡವೆಗೂ ಅವನು ಹೋಗಲಿಲ್ಲ. ತರುವಾಯದ ಮೊಘಲ ಕಾಲದಲ್ಲಿ ನವಾಬರು ತಮ್ಮ ಒಡೆಯರ ಹೆಸರು ಹೇಳುತ್ತಿರಲಿಲ್ಲ. ಅಂಥ ಒಬ್ಬ ಬಲಶಾಲಿ ನವಾಬನೊಂದಿಗೆ ನಾನ್ಯದೇವನ ಸ್ಥಾನಮಾನಗಳನ್ನು ಹೋಲಿಸಬಹುದು. ನಾನ್ಯದೇವನು ಸಿಮುರಾಂವಗಡದಲ್ಲಿ ತನ್ನ ರಾಜಧಾನಿಯನ್ನು ಸ್ಥಾಪಿಸಿದ. ಅದನ್ನು *ಕೃತ್ಯರತ್ನಾಕರದ* ಸಿಮರಾಮಪುರ ಎಂದು ಗುರುತಿಸಬಹುದು. ಅವನ ಸ್ಥಾನಮಾನ ಏನಾದರೂ ಇದ್ದಿರಲಿ, ಅವನು ಮಿಥಿಲೆಯಲ್ಲಿ ಸುಸಂಘಟಿತ ರಾಜ್ಯವನ್ನು ಕಟ್ಟುವಲ್ಲಿ ಯಶಸ್ವಿಯಾದುದನ್ನು ಅಲ್ಲಗಳೆಯುವಂತಿಲ್ಲ. ಆ ರಾಜ್ಯವು ಈಶಾನ್ಯ ಭಾರತದ ಇತಿಹಾಸದಲ್ಲಿ ಮಹತ್ವದ ಪಾತ್ರವಾಡುವ ನಿಯತಿ ಹೊಂದಿತ್ತು. ನಾನ್ಯದೇವನು ಇತರರ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಲಿಲ್ಲ. ಹಾಗೆಯೆ, ಸಮಕಾಲೀನ ರಾಜಕೀಯದಲ್ಲಿ ತೊಡಗುವುದು ವಿವೇಕವೆಂದು ಬಗೆಯಲಿಲ್ಲ. ಅವನು ಮಿಥಿಲೆಯ ಅನನ್ಯತೆಯನ್ನು ಯಶಸ್ವಿಯಾಗಿ ಕಾಪಾಡಿದನು ಮತ್ತು ಸ್ವಂತದ ಮಹತ್ವಾಕಾಂಕ್ಷೆಗಳನ್ನು ಸೀಮಿತ ಉದ್ದೇಶಕ್ಕೆ ಮಿತಗೊಳಿಸಿದನು. ಅವನು ಸುವರ್ಣ ಮಧ್ಯಮಾರ್ಗ ನೀತಿಯನ್ನು ಅನುಸರಿಸಿದನು ಮತ್ತು ಶಾಂತಿ ಹಾಗೂ ಸಮರಗಳೆರಡರಲ್ಲೂ ಮಿಂಚಿದನು. ಅವನ ಮಹತ್ವದ ಸಮಕಾಲೀನರಾಗಿದ್ದವರೆಂದರೆ (ಅ) ಪಾಲ ರಾಜವಂಶದ ರಾಮಪಾಲ ಮತ್ತು ಮದನಪಾಲ (ಆ) ಸೇನ ರಾಜವಂಶದ ವಿಜಯಸೇನ (ಇ) ಕನೌಜದ ಗೋವಿಂದಚಂದ ಗಹಡವಾಲ (ಈ) ಕಲಿಂಗದ ರಾಘವ[17] ಮತ್ತು (ಉ) ಮಗಧಾಧಿಪತಿ ಪೀಠಿಪತಿಃ[18] ನಾನ್ಯದೇವನ ವಿರುದ್ಧ ಮಗಧಾಪತಿ ಪೀಠಿಪತಿಃ ಯುದ್ಧ ಮಾಡಿದನೆಂದು ಹೇಳಲಾಗಿದೆ.[19]

ಪಾಲ ರಾಜ್ಯವನ್ನೊಂದುಳಿದು, ಮಿಕ್ಕೆಲ್ಲ ರಾಜ್ಯಗಳು ಹೊಸದಾಗಿ ಸ್ಥಾಪಿತವಾಗಿದ್ದು ಮಿಥಿಲೆಯ ಕರ್ನಾಟರ ಸಮಕಾಲೀನವಾಗಿದ್ದವು. ಅಂದಿನ ಉತ್ತರ ಭಾರತದ ನಕ್ಷೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ನಾನ್ಯದೇವನು ಎಲ್ಲ ದಿಕ್ಕುಗಳಿಂದಲೂ ಆಕ್ರಮಣಕ್ಕೆ ಪಕ್ಕಾಗಿದ್ದನೆಂದು ತಿಳಿಯುತ್ತದೆ. ನೆರೆ ರಾಜ್ಯಗಳ ಆಕ್ರಮಣಕಾರಿ ದುರುದ್ದೇಶಗಳಿಂದ ಮಿಥಿಲೆಯ ಸುರಕ್ಷಿತೆಯನ್ನು ಕಾಪಾಡುವಲ್ಲಿ ಅವನ ಶ್ರೇಷ್ಠ ಮುತ್ಸದ್ದಿತನ ಸಹಾಯಕವಾಯಿತು. ಅವನೆಂದೂ ಅತಿಯಾಗಿ ಮಹತ್ವಾಕಾಂಕ್ಷಿಯಾಗಿರದೆ ಬೇರೆ ರಾಜ್ಯಗಳನ್ನು ವಶಪಡಿಸಿಕೊಳ್ಳುವುದಕ್ಕಿಂತ ತಾನು ಪಡೆದುದನ್ನು ಭದ್ರಪಡಿಸಿಕೊಳ್ಳುವಲ್ಲಿ ನಂಬಿಕೆಯಿಟ್ಟಿದ್ದನು. ಶಕ್ತಿ ರಾಜಕೀಯ ಮತ್ತು ಸಾಹಸಗಳ ಕಾಲವದು. ಆದರೆ, ಅವನು ರಾಜತಾಂತ್ರಿಕವಾಗಿ ಅಂಥದರಿಂದ ದೂರವಿದ್ದನು. ಮತ್ತು ಯಾವಾಗಲೂ ಸುವರ್ಣ ಮಧ್ಯಮಾರ್ಗ ನೀತಿಯನ್ನು ಅನುಸರಿಸಿದನು. ಫ್ರೆಂಚ್ ದೊರೆ ಲೂಯಿ ಫಿಲಿಪ್‌ನಂತೆ ನಾನ್ಯದೇವನು ತನ್ನ ಸುವರ್ಣ ಮಧ್ಯಮಾರ್ಗದಿಂದ ಯಾರನ್ನೂ ತೃಪ್ತಿಪಡಿಸಲು ಸಾಧ್ಯವಾಗಲಿಲ್ಲ. ಆದರೆ, ತನಗೆದುರಾದ

ಅನೇಕ ತೊಂದರೆಗಳನ್ನು ಲೆಕ್ಕಿಸದೆ ಅವನು ತನ್ನ ರಾಜ್ಯವನ್ನು ಶಕ್ತಿಮೀರಿ ಭದ್ರಪಡಿಸಿದನು. ನೇಪಾಳದ ವಿಜಯವನ್ನು ಬಿಟ್ಟರೆ ಅವನ ಯಶಸ್ವಿ ವಿಜಯವಾವುದೂ ನಮಗೆ ತಿಳಿಯದು.

ಕಲಚೂರಿ ಅರಸ ಕರ್ಣನು ಕಾಶಿರಾಜನನ್ನು ಸೋಲಿಸಿ ಚಂಪಾರಣವನ್ನು ಗೆದ್ದುಕೊಂಡನೆಂದು *ಪ್ರಾಕೃತ ಪೈಂಗಲಂ*[20] ದಿಂದ ತಿಳಿಯುತ್ತದೆ. ಈ ಹೇಳಿಕೆಗೆ ಅಲ್ಹಣ ದೇವಿಯ ಬೆರಾಘಾಟ ಶಾಸನದಲ್ಲಿ ಸಮರ್ಥನೆ ಕಂಡುಬರುತ್ತದೆ. ಯಶಃಕರ್ಣನು ಕಾಶಿಯಲ್ಲಿರುವ ಗಹಡವಾಲ ಗಡಿಯನ್ನು ನಾಶಪಡಿಸಿ ಚಂಪಾರಣವನ್ನು ತಲುಪಿದನು ಮತ್ತು ಅದನ್ನು ಧ್ವಂಸಗೊಳಿಸಿದನೆಂದು[21] ಆ ಶಾಸನ ತಿಳಿಸುತ್ತದೆ. ಆ ಘಟನೆ ನಾನ್ಯದೇವನ ಕಾಲದಲ್ಲಿ ಜರುಗಿತೆಂದು ಕೆ.ಪಿ.ಜಯಸ್ವಾಲ ಸೂಚಿಸುತ್ತಾರೆ.[22]

ನಾನ್ಯದೇವನನ್ನು ಸೋಲಿಸಲಾಯಿತೊ ಅಥವಾ ಚಂಪಾರಣವು ಚೇದಿಯರ ಕೈಸೇರಿತೊ ನಿಶ್ಚಿತವಾಗಿ ಹೇಳಲಾಗದು. ಯಶಃಕರ್ಣನು ಚಂಪಾರಣವನ್ನು ಧ್ವಂಸಗೊಳಿಸಿದನೆಂದು ಬೆರಾಘಾಟ ಶಾಸನದಿಂದ ತಿಳಿದುಬರುತ್ತದಾದರೂ ಆ ಪ್ರದೇಶದಲ್ಲಿ ಅವನಿಗೆ ಪಾರಮ್ಯ ಸಾಧಿಸಲಾಗಲಿಲ್ಲ. ಆ ಘಟನೆಯು ಚೇದಿಯರು ಕಾಶಿಯಿಂದ ಹಿಂತಿರುಗಿದ ಕಾಲವಾದ ಕ್ರಿ.ಶ. ೧೧೨೪ ಕ್ಕೂ ಹಿಂದೆ ಜರುಗಿತು. ಯಶಃಕರ್ಣನು ಚಂಪಾರಣದಲ್ಲಿ ಎರಡು ದಾಳಿಗಳನ್ನು ಏರ್ಪಡಿಸಿದನು.[23] ಚಂಪಾರಣದ ದಾಳಿಯು ಘಟ್ಟನೆಯ ಸ್ವರೂಪದ್ದಾಗಿದ್ದು ಶಾಶ್ವತ ಸ್ವಾಧೀನದಲ್ಲಿ ಪರಿಣಮಿಸಲಿಲ್ಲ. ನಾನ್ಯದೇವನು ಈ ದಾಳಿಯನ್ನು ಗಂಭೀರವಾಗಿ ತೆಗೆದುಕೊಂಡು ತನ್ನ ರಾಜಧಾನಿಯನ್ನು ನಾನಪುರದಿಂದ ಚಂಪಾರಣ ಜಿಲ್ಲೆಯ ಸಿಮರಾಂವಗಡಕ್ಕೆ ಸ್ಥಳಾಂತರಿಸಿದ್ದು ಸ್ಪಷ್ಟವಿದೆ. ಸ್ಥಳೀಯ ಪರಂಪರೆಗಳು ಕರ್ನಾಟ ರಾಜಧಾನಿ ಸ್ಥಳಾಂತರಗೊಂಡುದನ್ನು ದೃಢೀಕರಿಸುತ್ತವೆ.[24] ನಾನ್ಯದೇವನು ಸಿಮರಾಂವಗಡವನ್ನು ಗಮನಾರ್ಹ ರೀತಿಯಲ್ಲಿ ಬಲಪಡಿಸಿದನು. ಮತ್ತು ಅಸಾಧಾರಣ ಕೋಟೆಯನ್ನು ನಿರ್ಮಿಸಲು ಆಯೋಜಿಸಿದನು.[25] ಸಿಮರಾಂವಗಡವು ಕರ್ನಾಟ ರಾಜಧಾನಿಯಾಗಿ ಸಾಕಷ್ಟು ಕಾಲ ಮುಂದುವರಿಯಿತು. ಪ್ರಮುಖ ದ್ವಾರದ ಮೇಲೊಂದು ಶಾಸನವಿತ್ತೆಂದು ನಂಬಲಾಗುತ್ತದೆ. ನೇಪಾಳದಲ್ಲಿ ನಾನ್ಯದೇವನ ವಿಜಯಾನಂತರ ರಾಜಧಾನಿಯ ಯುದ್ಧವ್ಯೂಹಕ ಮಹತ್ವ ಇಮ್ಮಡಿಸಿತು.

ನಾನ್ಯದೇವನು ಸೌವಿರ ಮತ್ತು ಮಾಳವಾಗಳ ವೀರರನ್ನು ಸೋಲಿಸಿದನೆಂದು ಚಿತ್ರಿಸಲಾಗಿದೆ. ಸಮಕಾಲೀನರಾದ ಅವರಿಬ್ಬರ ಖ್ಯಾತಿಯನ್ನು ನುಚ್ಚುನೂರುಗೊಳಿಸಿದ ಶ್ರೇಯಸ್ಸನ್ನು ನಾನ್ಯದೇವನಿಗೆ ನೀಡಲಾಯಿತು. ಅವನು ಸೌವೀರ ಮತ್ತು ಮಾಳವಾಗಳ ಅರಸರನ್ನು ಸೋಲಿಸಿದುದು ಮಿಥಿಲೆಯ ಅರಸನಾಗಿ ಅಲ್ಲ, ಪೂರ್ವ ಜೀವನದಲ್ಲಿ ಸಾಮಂತ ದೊರೆಯಾಗಿದ್ದಾಗ ಇರಬಹುದು.[26] ಆರನೆಯ ಚಾಲುಕ್ಯ ವಿಕ್ರಮಾದಿತ್ಯನು ತನ್ನ ದಂಡಯಾತ್ರೆ ಮಾರ್ಗದಲ್ಲಿ ಈ ಪ್ರದೇಶಗಳನ್ನು ಗೆದ್ದುಕೊಂಡನೆಂಬುದನ್ನು ಬಿಟ್ಟರೆ ಸೌವಿರ ಮತ್ತು ಮಾಳವಾ ಅರಸರ ಬಗೆಗೆ ನಮಗಿರುವ ಮಾಹಿತಿ ತೀರ ಕಡಿಮೆ. ನಾನ್ಯದೇವನು ಈ ದಂಡಯಾತ್ರೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಂತೆ ತೋರುತ್ತದೆ. ಮತ್ತು ಅಂತಿಮವಾಗಿ,

ಈ ದಂಡಯಾತ್ರೆಗಳ ನೆಗಳ್ತೆಯನ್ನು ತನಗೆ ತಾನೇ ಕೊಟ್ಟುಕೊಂಡಿರುವ ಸಾಧ್ಯತೆಯಿದೆ. ಈ ಎರಡು ದಂಡಯಾತ್ರೆಗಳ ಕಾಲದಲ್ಲಿಯೆ ಬಹುಶಃ ಅವನು ಗುರ್ಜರ ಸ್ತ್ರೀಯೊಬ್ಬಳನ್ನು ಮದುವೆಯಾದನು.[27] 'ಮಿಥಿಲೇಶ್ವರೇಣ' ಎಂಬ ಇನ್ನೂ ಒಂದು ಪ್ರಶಸ್ತಿಯ ಬಳಕೆ ಸೂಚಿಸುವ ಸಂಗತಿಯೇನೆಂದರೆ "ಸಾಮಾನ್ಯ ಜನಸಮೂಹವನ್ನು ಭ್ರಮೆಗೊಳಪಡಿಸಲು ಅವನು ಸಾಮ್ರಾಟನ ವೈಭವ ಮತ್ತು ಘನತೆಗಳ ಪ್ರಭೆಯನ್ನೊಳಗೊಂಡ ಮೇಲಂಗಿಯನ್ನು ತೊಟ್ಟುಕೊಂಡ."[28] ಮಿಥಿಲೆಯ ಅರಸನಾಗಿ ಅವನು ತನ್ನ ಶಸ್ತ್ರಗಳನ್ನು ದೂರ ಪಶ್ಚಿಮದ ವರೆಗೆ ಕೊಂಡೊಯ್ದನೆಂದು ನಂಬುವುದು ಅಸಾಧ್ಯ"[29] ಎಂದು ಆರ್.ಸಿ.ಮಜುಮದಾರ ಸರಿಯಾಗಿಯೆ ತೋರಿಸಿರುವರು.

ವಂಗರ ಮತ್ತು ಗೌಡರ ಶಕ್ತಿಯನ್ನು ಮುರಿದೆನೆಂದು ನಾನ್ಯದೇವನು ಹೇಳಿಕೊಂಡಿರುವನು. ಮಿಥಿಲೆಯಲ್ಲಿ ಕರ್ನಾಟ ರಾಜವಂಶದ ಸ್ಥಾಪನೆಯ ಕಾಲಕ್ಕೆ ಬಂಗಾಲವು ಸಂಕಷ್ಟದಲ್ಲಿದ್ದುದರಿಂದ ಪ್ರತಿಯೊಬ್ಬ ಮಹತ್ವಾಕಾಂಕ್ಷಿ ಅರಸನು ಆ ಪ್ರಾಂತದ ಗೊಂದಲದ ಲಾಭ ಪಡೆಯಲೆತ್ನಿಸಿದುದು ಸಹಜವೆ. ಇಡಿ ಪೂರ್ವ ಭಾರತವು ರಾಜಕೀಯ ವಿಘಟನೆಯ ಪ್ರಕ್ರಿಯೆಯಲ್ಲಿತ್ತು. ರಾಮಪಾಲನಿಂದ ಬಂಗಾಲದ ಕೈವರ್ತರ ದಮನ ಸರಳವಾಗಿರಲಿಲ್ಲ. ಪೂರ್ವ ಬಂಗಾಲವು ವರ್ಮನ್‌ರ ಪಾಲಾಯಿತು. ಸೇನರು ತಮ್ಮನ್ನು ರಾಢಾದಲ್ಲಿ ಸ್ಥಾಪಿಸಿಕೊಂಡಿದ್ದರು. ಮಿಥಿಲೆಯಲ್ಲಿ ಯಶಸ್ವಿಯಾಗಿ ನೆಲೆಗೊಂಡ ತರುವಾಯದಲ್ಲಿ ಅವನು ಗೌಡರತ್ತ ಅರ್ಥಾತ್ ಉತ್ತರ ಮತ್ತು ಪೂರ್ವ ಬಂಗಾಲದತ್ತ ಗಮನ ಹರಿಸಿದ. ನಾನ್ಯದೇವನು ಬಹುಶಃ ಕುಮಾರಪಾಲನಿಂದ ಮತ್ತು ವಂಗದಲ್ಲಿ ಯಾದವ ಅರಸ ಹರಿವರ್ಮನ್‌ನಿಂದ ಘರ್ಷಣೆ ಎದುರಿಸಿದ.[30] ಮಿಥಿಲಾ ಮತ್ತು ಬಂಗಾಲಗಳಲ್ಲಿ ಕರ್ನಾಟ ರಾಜವಂಶದ ಸ್ಥಾಪನೆಯು ದಾಕ್ಷಿಣಾತ್ಯ ಚೋಳ ಮತ್ತು ಚಾಲುಕ್ಯರು ಬಂಗಾಲದಲ್ಲಿ ನಡೆಸಿದ ದಾಳಿಗಳಿಗಿಂತ ಎಷ್ಟೊ ಅಧಿಕ ಮಹತ್ವದ್ದಾಗಿತ್ತು. ಮಿಥಿಲೆಯ ನಾನ್ಯದೇವನು ಬಂಗಾಲಕ್ಕೆ ಭಯಂಕರ ವೈರಿಯಾಗಿದ್ದನು. ರಾಮಪಾಲನ ಮೇಲೆ ತನ್ನ ವಿಜಯಕ್ಕೆ ಮುನ್ನ ಇಲ್ಲವೆ ನಂತರ ಅವನು ವಿಜಯಸೇನನೊಂದಿಗೆ ಘರ್ಷಣೆಗಿಳಿದ. ರಾಮಪಾಲನೊಂದಿಗೆ ಘರ್ಷಣೆಗಿಳಿಯದೆ ಅವನು ಮಿಥಿಲೆಯಲ್ಲಿ ರಾಜ್ಯ ಸ್ಥಾಪಿಸುವುದು ಸಾಧ್ಯವಿರಲಿಲ್ಲ. ಅವನು ಮಿಥಿಲೆಯನ್ನು ಸ್ವತಂತ್ರವಾಗಿಸಿದ್ದು ಈ ಘರ್ಷಣೆಯ ಪರಿಣಾಮವಾಗಿಯೆ.[31] ಇಮ್ಮಡಿ ಸೋಮೇಶ್ವರ[32] (ಕ್ರಿ.ಶ. ೧೧೨೬-೧೧೩೮), ಬಿಜ್ಜಲ್ಲ (ಕ್ರಿ.ಶ. ೧೧೫೬-೧೧೬೭) ಮತ್ತು ಅವನ ಮಗ ಸೋಮ ನೇಪಾಳ, ಆಂಧ್ರ, ದ್ರಾವಿಡ, ಮಗಧ ಮತ್ತು ಕಲಿಂಗ[33] ಅರಸರನ್ನು ಗೆದ್ದುಕೊಂಡುದಾಗಿ ಜಂಭ ಕೊಚ್ಚಿಕೊಂಡಿರುವರು. ತಾವು ದೂರದ ಅಧಿಪತಿಗಳಿಗೆ ನಾಮಮಾತ್ರದ ನಿಷ್ಠೆ ತೋರಿಸುತ್ತಿದ್ದು ಈ ಪ್ರದೇಶಗಳಲ್ಲಿ ಕರ್ನಾಟ ದೊರೆಗಳು ಮಾಡಿದುದರ ಶ್ರೇಯಸ್ಸು ತಮ್ಮದೆಂದು ಹೇಳಿಕೊಂಡುದನ್ನು ಇದು ಸೂಚಿಸುತ್ತದೆ. ಬಂಗಾಲದ ಸೇನರು ಮತ್ತು ಮಿಥಿಲೆಯ ಕರ್ನಾಟರ ನಡುವಣ ತಿಕ್ಕಾಟಕ್ಕೆ ಸಾಕಷ್ಟು ಕಾರಣಗಳಿದ್ದವು. ಬಂಗಾಲದ ಒಂದೇ ಪ್ರದೇಶದ ಮೇಲೆ ಇಬ್ಬರದೂ ಕಣ್ಣಿತ್ತು. ಇಬ್ಬರೂ

ಕರ್ನಾಟ ದೊರೆಗಳು ಆರಂಭಿಕ ಹಂತಗಳಲ್ಲಿ ಜೊತೆಗೂಡಿ ಪ್ರಯತ್ನಿಸಿದಂತೆ ತೋರುತ್ತದೆ. ಆದರೆ, ಲೂಟಿ ಹಂಚಿಕೆಯಲ್ಲಿ ಮನಸ್ತಾಪವುಂಟಾಗಿ ಕೊನೆಗದು ವಿಜಯಸೇನನ ಪಾಲಾಯಿತು.

ಆರ್.ಸಿ.ಮಜುಮದಾರರ ಅಭಿಮತದಲ್ಲಿ, ನಾನ್ಯದೇವನು ಪಾಲರು ಮತ್ತು ಸೇನರು ಇಬ್ಬರ ವಿರುದ್ಧವೂ ಆರಂಭಿಕ ಯಶಸ್ಸು ಪಡೆದಿರಬಹುದು. ಆದರೆ, ಕೊನೆಯಲ್ಲಿ ವಂಗದ ವಿಜಯಸೇನನು ಅವನನ್ನು ಸೋಲಿಸಿ ಮಿಥಿಲಾ ರಾಜ್ಯದ ಮೇಲೆ ಎರಗಿದನು.[34] ವಿಜಯಸೇನನು ಮಿಥಿಲೆಯನ್ನು ಸ್ವಾಧೀನಪಡಿಸಿಕೊಂಡನೆಂದು ಮಜುಮದಾರ ಮುಂದುವರಿದು ಹೇಳುತ್ತಾರೆ. ಇಂಥ ನಂಬಿಕೆ ಬಹಳ ಅಸಂಭವನೀಯವಾಗಿದೆ. ಏಕೆಂದರೆ, ಲಕ್ಷ್ಮಣ ಸಂವತ್ಸರದ ಯಥಾರ್ಥತೆಯೇ ಸಂದೇಹಾಸ್ಪದವಾಗಿದೆ. ಕೊನೆಯದಾಗಿ, ಸೇನರು ಮಿಥಿಲೆಯ ಮೇಲೆ ನಿಜವಾಗಿಯೂ ವಿಜಯ ಸಾಧಿಸಿದ್ದರೆಂಬ ಬಗೆಗೆ ನೇರ ಅಥವಾ ಪರೋಕ್ಷವಾದ ಸ್ಪಷ್ಟ ಪ್ರಮಾಣವಿಲ್ಲ. ನಾನ್ಯದೇವನು ಇಲ್ಲಿ ಸೋತನೆಂದು ದೇಓಪಾರಾ ಶಾಸನವು ಉಲ್ಲೇಖಿಸುತ್ತಿರುವುದು ನಿಜ.[35] ವಿಜಯಸೇನನು ಮೊದಲು ಗೌಡ, ಕಾಮರೂಪ ಮತ್ತು ಕಲಿಂಗದ ಅರಸರನ್ನು ಸೋಲಿಸಿ ಆ ಮೇಲೆ ನಾನ್ಯದೇವನ ಮತ್ತು ವೀರನ ವಿರುದ್ಧ ಸಾಗಿದನೆಂದು ಆ ಶಾಸನದ ೨೦, ೨೧ ಮತ್ತು ೨೨ ನೆಯ ಪದ್ಯಗಳನ್ನು ಅರ್ಥೈಸಬಹುದು. ಅವರು ಸೆರೆಯಲ್ಲಿದ್ದಾಗ ಅವರಿಬ್ಬರ ಮಧ್ಯೆ ಜರುಗಿತೆಂಬಂಥ ಸಂಭಾಷಣೆಯನ್ನು ಕವಿಯು ಕಲ್ಪಿಸಿಕೊಂಡಿರುವನು. ಸಂಭಾಷಣೆಯಲ್ಲಿ ಅವರು ತಮ್ಮ ಶಸ್ತ್ರಗಳ ನಿಷ್ಫಲತ್ವದ ಬಗೆಗೆ ಚರ್ಚಿಸಿದ್ದಾರೆ. ಮಿಥಿಲೆಯ ಮೇಲೆ ಯಾವುದೇ ದಾಳಿಯನ್ನು ಹೂಡಲಾಯಿತೆಂಬುದನ್ನು ಬಲ್ಲಾಳಸೇನನ ಶಾಸನಗಳು ಉಲ್ಲೇಖಿಸುವುದಿಲ್ಲ. ಪಾರಂಪರಿಕ ನಂಬಿಕೆಗಳು ಉಲ್ಲೇಖಿಸುವ ದಾಳಿಗಳು ಅವನ ತಂದೆ ಜರುಗಿಸಿದವುಗಳೇ ಇದ್ದಿರಬಹುದು. ಮಿಥಿಲೆಯ ಮೇಲೆ ಸೇನರ ದಾಳಿಯ ಸಮಸ್ಯೆಯು ಈಶಾನ್ಯ ಭಾರತದ ಇತಿಹಾಸದಲ್ಲಿ ಇನ್ನೂ ಒಗಟಾಗಿಯೆ ಉಳಿದಿದೆ. ದೇವಪಾರಾ ಶಾಸನವು ನಾನ್ಯದೇವನ ಸೋಲಿನ ಮಾಹಿತಿ ನೀಡುತ್ತದೆ, ಅಷ್ಟೆ. ವಿಜಯಸೇನನು ಗಂಗಾನದಿಯ ಪ್ರವಾಹದಗುಂಟ ಪಶ್ಚಿಮದ ಮೇಲೆ, ಅತ್ಯಂತ ಸಂಭಾವ್ಯತಃ ಕನೌಜದ ಗೋವಿಂದಚಂದನ ಮೇಲೆ ದಾಳಿ ನಡೆಸಿದನೆಂದು ಹೇಳಲಾಗಿದೆ. ವಿಜಯಸೇನನು ಮಿಥಿಲೆಯ ಮೇಲೆ ದಾಳಿಯಿಟ್ಟು ನಾನ್ಯದೇವನನ್ನು ಸೋಲಿಸಿದ್ದು ಈ ದಂಡಯಾತ್ರೆಯ ಮಾರ್ಗದಲ್ಲಿಯೆ ಎಂಬುದು ಅತಿ ಸಂಭವನೀಯವಾದುದು.[36]

ಎಚ್.ಸಿ.ರೇ ಪ್ರಸ್ತುತ ೨೨-೨೪ ನೆಯ ಪದ್ಯಗಳನ್ನು ವ್ಯಾಖ್ಯಾನಿಸುತ್ತ ವಿಜಯಸೇನನು ನಾಗರ ನದಿಯನ್ನು ದಾಟಿ ಮಿಥಿಲೆಯ ದೊರೆಯೊಂದಿಗೆ ಘರ್ಷಣೆಗೊಳಗಾದನು ಎಂದು ಸೂಚಿಸುತ್ತಾರೆ. ಬಂಗಾಲದ ದೊರೆಯು ಪಶ್ಚಿಮ ಪ್ರದೇಶದಲ್ಲಿ ನೌಕಾ ದಾಳಿಯನ್ನು ಏರ್ಪಡಿಸಿದ್ದು ಈ ದಂಡಯಾತ್ರೆಯ ಕಾಲಕ್ಕೆ.[37] ಅದು ''ಗಹಡವಾಲರೊಂದಿಗೆ ಸಂಪೂರ್ಣವಾಗಿ ಅಸಂಬಂಧಿತವಾಗಿರಲಿಕ್ಕಿಲ್ಲ.''[38] ನೌಕಾ ದಾಳಿಯು ಕಾಲ್ದಳಕ್ಕೆ ಸಹಾಕಯವಾಗಿದ್ದಂತೆ ತೋರುತ್ತದೆ. ನೌಕಾಪಡೆಯು ರಾಜಮಹಲದಾಚೆ ಪಶ್ಚಿಮದತ್ತ ಸಾಗಿತು. ನೌಕಾಪಡೆಯನ್ನು

ಎಂದು ಕಳಿಸಲಾಯಿತೆಂಬ ಬಗೆಗೆ ಊಹೆ ಮಾಡುವುದು ಸಾಧ್ಯವಿಲ್ಲ. ಮತ್ತು ಬಿಹಾರದಲ್ಲಿ ಆಗ ಮೂವರು ಬೇರೆ ಬೇರೆ ಅರಸರಲ್ಲಿ - ಗೋವಿಂದಚಂದ, ಮದನಪಾಲ ಮತ್ತು ನಾನ್ಯದೇವ - ಯಾರ ವಿರುದ್ಧ ನೌಕಾಪಡೆಯನ್ನು ಕಳಿಸಲಾಯಿತೆಂಬುದು ತಿಳಿಯದು. ದೇಒಪಾರಾ ಶಾಸನವು ಪಶ್ಚಿಮದಲ್ಲಿ ವಿಜಯಸೇನನ ನೌಕಾಪಡೆಯ ವಿಜಯಸಾಧನೆಗಳ ಬಗೆಗೆ ವಿಶೇಷವಾಗಿ ಹೇಳುವುದಿಲ್ಲವಾದ್ದರಿಂದ ವಿಜಯಸೇನನ ಪಶ್ಚಿಮ ದಾಳಿಯು ಅಷ್ಟು ಯಶಸ್ವಿಯಾಗಲಿಲ್ಲವೆಂದು ಸಹಜವಾಗಿಯೆ ತೀರ್ಮಾನಿಸಬಹುದು.

ಮಿಥಿಲೆಯ ಪಾರಂಪರಿಕ ನಂಬಿಕೆಗಳನ್ವಯ, ಬಲ್ಲಾಳಸೇನನು ತನ್ನ ತಂದೆಯ ಸೂಚನೆಯಂತೆ ಮಿಥಿಲೆಯ ಮೇಲೆ ದಾಳಿ ಮಾಡಿ ನಾನ್ಯದೇವನನ್ನು ಆಧುನಿಕ ಸುಪೌಲ ಮತ್ತು ದರ್ಭಾಂಗಾ ಗಡಿಯಲ್ಲಿರುವ ಗಂಡೇಶ್ವರ ಕೋಟೆಯಲ್ಲಿ ಬಂಧಿಸಿಟ್ಟ.[39] ಅವರ ಶ್ಲಾಘನೀಯ ಸೇವೆಗೆ ಮನ್ನಣೆಯಿತ್ತು ಬಲ್ಲಾಳಸೇನನನ್ನು "ನಿಶ್ಶಂಕ ಶಂಕರ" ಎಂಬ ಬಿರುದಿನಿಂದ ಅಲಂಕರಿಸಲಾಯಿತು.[40] ಇಷ್ಟೇ ಅಲ್ಲದೆ, ಗಂಗದೇವನು ತನ್ನ ತಂದೆಯನ್ನು ಸೇನ ಸೆರೆಯಿಂದ ಮುಕ್ತಗೊಳಿಸಿ ಆ ಪ್ರದೇಶವನ್ನು ಮರಳಿ ಪಡೆದನು ಮತ್ತು ನಿಶಂಖಪುರ ಎಂಬ ಹೆಸರನ್ನು ಗಂಗಾಪುರ ರಜನಿ ಎಂದು ತನ್ನದೇ ಹೆಸರಿಗೆ ಬದಲಾಯಿಸಿದನು. ಅದು ಇಂದಿಗೂ ಸಹರ್ಸಾ ಜಿಲ್ಲೆಯ ನಿಶಂಖಪುರ - ಕುರ್ಹ ಪರಗಣಾದಲ್ಲಿ ಒಂದು ಗ್ರಾಮವಾಗಿದೆ.[41] ಲಕ್ಷ್ಮಣಸೇನನ ಮಧ್ಯನಗರ ದತ್ತಿಯಲ್ಲಿ ಬಲ್ಲಾಳಸೇನನನ್ನು "ಅರಿರಾಜ ನಿಶ್ಶಂಕ ಶಂಕರ" ಎಂದು ಬಣ್ಣಿಸಲಾಗಿದೆ. ಮಿಥಿಲೆಯ ಮೇಲಿನ ತನ್ನ ದಂಡೆಯಾತ್ರೆಯ ಕಾಲಕ್ಕೆ ಬಲ್ಲಾಳಸೇನನು ತನ್ನ ಯೋಧಪ್ರತಿಭೆಯನ್ನು ಮೆರೆದಂತೆ ತೋರುತ್ತದೆ.[42] ಸಹರ್ಸಾ ಜಿಲ್ಲೆಯ ಮಾಧಿಪುರ ಉಪವಿಭಾಗದಲ್ಲಿರುವ ನಿಶಂಖಪುರ - ಕುರ್ಹ ಪರಗಣವು ಸೇನರ ಆಡಳಿತ ಕೇಂದ್ರವಾಗಿತ್ತೆಂದು ನಂಬಲಾಗಿದೆ.[43] ಬಲ್ಲಾಳಸೇನನು ತನ್ನ ತಂದೆಯ ಆಳ್ವಿಕೆಯಲ್ಲಿ ಮಿಥಿಲೆಯ ಮೇಲೆ ದಾಳಿ ಮಾಡಿದನು ಮತ್ತು ಅವನ ರಾಜ್ಯವು ವಂಗ, ರಾಢಾ, ವಾಗ್ದಿ, ವರೇಂದ್ರ ಮತ್ತು ಮಿಥಿಲಾಗಳು ಸೇರಿ ಆಗಿತ್ತು ಎಂಬುದು ತರುವಾಯದ ಸಾಹಿತ್ಯಕ ಮೂಲಗಳಿಂದ ಸ್ಪಷ್ಟಪಡುತ್ತದೆ.[44] ಈ ಹೇಳಿಕೆಯಲ್ಲಿ ಅಧಿಕೃತತೆ ಏನಾದರೂ ಇದ್ದರೆ, ಲಕ್ಷ್ಮಣನು ಸ್ಪಷ್ಟವಾಗಿಯೆ ಕ್ರಿ.ಶ. ೧೧೨೦ ರಲ್ಲಿ ರಾಮಪಾಲನ ಮರಣಾನಂತರ ಜನಿಸಿದನು. ಆಗ ಮಾತ್ರವೆ ಬಲ್ಲಾಳಸೇನನು ಮಿಥಿಲೆಯ ಮೇಲೆ ಆಕ್ರಮಣ ಮಾಡಿರಬೇಕು. ಲಘುಭಾರತದ ಈ ಉದ್ಧೃತ ಭಾಗವನ್ನಾಧರಿಸಿಯೆ (ಅಧ್ಯಾಯ ೨, ಪುಟ ೧೪೦) ಬಲ್ಲಾಳಸೇನನು ಮಿಥಿಲೆ ಮೇಲೆ ದಾಳಿ ಹೂಡಿದನೆಂದು ನಾಗೇಂದ್ರನಾಥ ಬಸು ಸೂಚಿಸಿರುವರು. *ಬಲ್ಲಾಳಚರಿತ*[45] ವನ್ನಾಧರಿಸಿ ಬಲ್ಲಾಳನು ಮಿಥಿಲೆಯ ಮೇಲೆ ದಂಡೆತ್ತಿ ಹೋದನೆಂದು ತೋರಿಸಲಾಗಿದೆ. ಮತ್ತು ಮಿಥಿಲೆಯ ಮೇಲೆ ಸೇನರ ಪ್ರಾಬಲ್ಯವನ್ನು ನಾನ್ಯದೇವನ ನಂತರದ ಮಿಥಿಲೆಯ ಇತಿಹಾಸದಲ್ಲಿಯ ಅಸ್ಪಷ್ಟತೆ (ಆಧುನಿಕ ಸಂಶೋಧನೆಯ ದೃಷ್ಟಿಯಿಂದ ಇದು ಈಗ ನಿಲುವುದಿಲ್ಲ) ಮತ್ತು ಲಕ್ಷ್ಮಣ ಸಂವತ್‌ಶಕೆಯೊಂದಿಗಿನ ಮಿಥಿಲೆಯ ಸಂಬಂಧ - ಇವು ಪರೋಕ್ಷವಾಗಿ ಸಮರ್ಥಿಸುತ್ತವೆ ಎಂದು ಆರ್. ಸಿ. ಮಜುಮದಾರ ಅಭಿಪ್ರಾಯಪಡುತ್ತಾರೆ.[46]

ಅದೇ ರೀತಿಯಲ್ಲಿ, ಆರ್.ಸಿ.ಮಜುಮದಾರ ಮುಂದುವರಿದು ಹೀಗೆನ್ನುತ್ತಾರೆ: "ಮಿಥಿಲೆಯ ಮೇಲೆ ಬಲ್ಲಾಳಸೇನನ ದಂಡಯಾತ್ರೆಯನ್ನು ಇತರ ಪಾರಂಪರಿಕ ನಂಬಿಕೆಗಳು ಮತ್ತು ಐತಿಹಾಸಿಕ ಸಂಗತಿಗಳು ಸಮರ್ಥಿಸುತ್ತವೆ."[47] ಆದರೆ, ಮಜುಮದಾರ ಈ ಐತಿಹಾಸಿಕ ಸಂಗತಿಗಳ ಯಾವುದೆ ಉದಾಹರಣೆಯನ್ನು ಉಲ್ಲೇಖಿಸದಿರುವುದು ಬಲು ಆಶ್ಚರ್ಯಕರವಾಗಿದೆ. "ಈ ನಂಬಿಕೆಗಳು ಎಷ್ಟರಮಟ್ಟಿಗೆ ನಿಜವಾದ ಘಟನೆಗಳಿಗೆ ಸರಿಹೊಂದುತ್ತವೆಂದು ಹೇಳುವುದು ಬಲು ಕಠಿಣವಾಗಿದೆ" ಎಂದು ಹೇಳುವ ಮೂಲಕ ಆರ್.ಸಿ.ಮಜುಮದಾರ ಪುನಃ ತದ್ವಿರುದ್ಧ ಅಭಿಪ್ರಾಯ ತಳೆಯುತ್ತಾರೆ.[48]

ಬಲ್ಲಾಳಸೇನನ ಶಾಸನಗಳು ಮಿಥಿಲೆಯ ಮೇಲೆ ಯಾವುದೆ ದಂಡಯಾತ್ರೆಯನ್ನು ಉಲ್ಲೇಖಿಸುವುದಿಲ್ಲ ಎಂಬುದನ್ನು ನಾವು ಗಮನಿಸಬೇಕು. ನಾನ್ಯದೇವನ ಸೋಲನ್ನು ಮತ್ತು ತತ್ಪರಿಣಾಮವಾಗಿ ವಿಜಯಸೇನನು ಅವನನ್ನು ಸೆರೆಹಿಡಿದುದನ್ನು ದೇಒಪಾರಾ ಶಾಸನ, ಮಿಥಿಲೆಯ ಪಾರಂಪರಿಕ ನಂಬಿಕೆಗಳು ಮತ್ತು ಮುಲ್ಲಾ ತಖಿಯಾನ ಪ್ರಮಾಣ ಋಜುವಾತುಪಡಿಸುತ್ತವೆ. ಮಿಕ್ಕ ಪ್ರಮಾಣಗಳು ನಂತರದ ಕಾಲದವಿದ್ದು ಸಂಪೂರ್ಣವಾಗಿ ನೆಚ್ಚುವಂಥವಲ್ಲ. ನಮ್ಮ ತಿಳಿವಿನ ಈಗಿನ ಸ್ಥಿತಿಯಲ್ಲಿ, ನಾನ್ಯದೇವನ ಸೋಲು ಮತ್ತು ಬಂಧನವನ್ನು ಪೂರ್ತಿಯಾಗಿ ತಿರಸ್ಕರಿಸಲಾಗದಾದರೂ ಮಿಥಿಲೆಯು ಎಂದಾದರೂ ಸೇನರ ನಿಯಂತ್ರಣಕ್ಕೆ ಒಳಗಾಗಿತ್ತೆಂಬುದು ಮಾತ್ರ ಸಂದೇಹಾಸ್ಪದ. ಕ್ರಿ.ಶ. ೧೧೨೦ ರಷ್ಟೊತ್ತಿಗೆ ವಿಜಯಸೇನನ ಉತ್ತರ ಬಂಗಾಲ ಮತ್ತು ತಿರಹತ್‌ಗಳನ್ನು ಗೆದ್ದುಕೊಂಡಿರಲು ಸಾಕು ಎಂದು ಜಿ.ಎಂ.ಸರಕಾರ ದೃಢವಾಗಿ ಹೇಳುತ್ತಾರೆ.[49] ಗಂಗದೇವನು ಶಕ್ತಿಶಾಲಿ ಸೈನ್ಯವನ್ನು ಸಂಘಟಿಸಿದ ಬಗೆಗೆ ಮತ್ತು ಸೇನರಿಂದ ರಾಜ್ಯವನ್ನು ಮತ್ತೆ ವಶಪಡಿಸಿಕೊಂಡ ಬಗೆಗೆ ಮಿಥಿಲೆಯ ಪಾರಂಪರಿಕ ನಂಬಿಕೆಗಳು ಒತ್ತಿಹೇಳುತ್ತವೆ. ಆರ್.ಸಿ.ಮಜುಮದಾರ ಹಾಗೆಂದು ನಂಬಿಸಬಯಸಿದರೂ,[50] ಅವರ ಪರಸ್ಪರ ವಿರುದ್ಧವಾದ ಹೇಳಿಕೆಗಳ ದೃಷ್ಟಿಯಿಂದ ನಾನ್ಯದೇವನ ನಂತರ ಮಿಥಿಲೆಯ ಇತಿಹಾಸದಲ್ಲಿ ಯಾವ ಅಸ್ಪಷ್ಟತೆಯೂ ಇಲ್ಲ. ದೇಒಪಾರಾ ಶಾಸನವು ಕೂಡ ತಿರಹತ್ ಪ್ರದೇಶದಲ್ಲಿ ಸೇನ ಅಧಿಕಾರದ ವಿಸ್ತರಣೆಯನ್ನು ನಿರ್ದಿಷ್ಟವಾಗಿ ಸೂಚಿಸುವುದಿಲ್ಲ. ಆದಾಗ್ಯೂ ಸಹ, ನಾನ್ಯದೇವನನ್ನು ಗಂಭೀರ ಸೋಲಿಗೆ ಒಳಪಡಿಸಿದಂತೆ ತೋರುತ್ತದೆ.[51]

ಈ ವಿಷಯವಾಗಿ ಡಿ.ಸಿ.ಸರಕಾರರ ನಿಲುವು ಸಮತೂಕದ್ದೆಂದು ಹೇಳಬಹುದು. "ನಾನ್ಯದೇವನ ಉತ್ತರಾಧಿಕಾರಿಗಳು ಬಹು ಕಾಲದವರೆಗೆ ಮಿಥಿಲೆಯನ್ನು ಆಳಿದರು. ಆದ್ದರಿಂದ, ವಿಜಯಸೇನನು ನಾನ್ಯದೇವನ ವಿರುದ್ಧ ಹೇಳಿಕೊಳ್ಳುವಂಥ ಯಶಸ್ಸು ಪಡೆದನೆಂದು ಹೇಳಲು ಕಷ್ಟವಾಗುತ್ತದೆ ಎಂದು ಸರಕಾರರು ಅಭಿಪ್ರಾಯಪಡುತ್ತಾರೆ.[52] ಗಂಗಾನದಿಯ ದಕ್ಷಿಣಕ್ಕೆ ಭಾಗಲಪುರದ ಸನೋಖರ ಪ್ರದೇಶದವರೆಗೆ ಬಲ್ಲಾಳಸೇನನು ತನ್ನ ಅಧಿಕಾರವನ್ನು ವಿಸ್ತರಿಸಿದನೆಂಬ ಸಂಗತಿಯನ್ನು ಕ್ರಿ.ಶ. ೧೧೬೬ ರಲ್ಲಿ ಕಂಡುಹಿಡಿದ ಬಲ್ಲಾಳಸೇನನ ಶಾಸನ ಮತ್ತು ಅದರ ವ್ಯಾಖ್ಯಾನ ಸ್ಥಿರಪಡಿಸುತ್ತದೆ. ಆದರೆ, ಪಶ್ಚಿಮದಲ್ಲಿ

ಬಲಶಾಲಿ ಗಹಡವಾಲ ಶಕ್ತಿಯ ಅಸ್ತಿತ್ವವು ಸೇನ ವಿಸ್ತರಣಾ ಮಾರ್ಗದಲ್ಲಿ ಅಡೆತಡೆಯಾಗಿತ್ತು. ಸನೋಖಿರವು ಬಿಹಾರದಲ್ಲಿ ಸೇನ ಶಕ್ತಿಯ ಪೂರ್ವ ಗಡಿಯಾಗಿದ್ದಿರಬಹುದು. ಸೇನರು ಮೊರಂಗಾ ಎಂಬ ಪ್ರದೇಶದ ಅಲ್ಪ ಭಾಗವನ್ನು, ಅಂದರೆ ಬಂಗಾಲದ ಜಲ್ಪೈಗುರಿಯ ಗಡಿಗಳವರೆಗೆ ಹಬ್ಬಿರ ಈಶಾನ್ಯ ಪೂರ್ಣಿಯಾವನ್ನು, ತಮ್ಮ ವಶದಲ್ಲಿಟ್ಟುಕೊಂಡಿರುವ ಸಾಧ್ಯತೆಯಿದೆ. ವೀರಬಂಧವು ಬಂಗಾಲದ ಸೇನರು ಮತ್ತು ಮಿಥಿಲೆಯ ಕರ್ನಾಟರ ನಡುವಣ ವಿಭಜನಾರೇಖೆಯಾಗಿತ್ತು.[೫೩] ವಿಜಯಸೇನರ ಬರಾಕಪುರ ದತ್ತಿಯ[೫೪] ೧೧ನೆಯ ಪದ್ಯದಲ್ಲಿ ವಿಜಯಸೇನನ ಪತ್ನಿ ಕಾಣಿಕೆಗಳನ್ನು ನೀಡಿರುವುದು ಕಂಡುಬರುತ್ತದೆ. ಈ ದತ್ತಿಯನ್ನು ಮಹೇಶ್ವರಭಟ್ಟಾರಕನ ಗೌರವಾರ್ಥ ಬ್ರಾಹ್ಮಣ ಸಾಮಂತನಾದ ಉದಯಾಕರದೇವನಿಗೆ ಪುಂಡ್ರವರ್ಧನ ಭುಕ್ತಿಯಲ್ಲಿ ನೀಡಲಾಗಿದೆ.[೫೫] ಪುಂಡ್ರವರ್ಧನಭುಕ್ತಿ ಮತ್ತು ತಿರಭುಕ್ತಿಗಳ ಗಡಿ ಒಂದೇ ಆಗಿದ್ದು ಪುಂಡ್ರವರ್ಧನಭುಕ್ತಿಯ ಒಂದು ಭಾಗ ಉತ್ತರ ಬಿಹಾರದ ಪೂರ್ಣಿಯಾ ಜಿಲ್ಲೆಯಲ್ಲಿತ್ತು. ಪುಂಡ್ರವರ್ಧನಭುಕ್ತಿಯು ಸೇನ ವಶದಲ್ಲಿದ್ದುದು ಕಾರಣವಾಗಿ ಮಿಥಿಲೆಯು ತಮ್ಮದೇ ಪ್ರಾಂತಗಳಲ್ಲೊಂದು ಎಂದು ಸೇನರು ಸಾಧಿಸಿರುವ ಸಾಧ್ಯತೆಯಿದೆ. ಮಿಥಿಲೆಯು ಸೇನ ರಾಜ್ಯದ ಐದು ಪ್ರಾಂತಗಳಲ್ಲೊಂದು ಆಗಿತ್ತೆಂಬ ಭಾವನೆಯು ಈ ತಪ್ಪು ಅಭಿಪ್ರಾಯವನ್ನಾಧರಿಸಿದ್ದುದು. ಆಧುನಿಕ ಸಂಶೋಧನೆಗಳ ದೃಷ್ಟಿಯಿಂದ, ಬಲ್ಲಾಳ ಸೇನನ ರಾಜ್ಯವು ಪಶ್ಚಿಮದಲ್ಲಿ ಮಿಥಿಲೆಯವರೆಗೆ (DHNI- ೧, ಪುಟ ೩೭೪) ಹಬ್ಬಿತ್ತೆಂಬ ಅಭಿಪ್ರಾಯವನ್ನು ಒಪ್ಪುವುದು ಕಷ್ಟ. ಗಹಡವಾಲ ಪ್ರಭುತ್ವದ ರಾಜದಂಡವನ್ನು ಹಿಂತೆಗೆದುಕೊಂಡ ಕೂಡಲೆ ಸೇನರು ತಮ್ಮ ವಿಜಯಸ್ತಂಭಗಳನ್ನು ಕಾಶಿ ಮತ್ತು ಪ್ರಯಾಗಗಳಲ್ಲಿ ನಿಲ್ಲಿಸಿರಬಹುದು. ಇವೆಲ್ಲ ಪ್ರಮಾಣಗಳು ಸಿದ್ಧಪಡಿಸುವಂತೆ, ನಾನ್ಯದೇವನು ಸೇನರ ಆಕ್ರಮಣದಿಂದ ತನ್ನನ್ನು ಯಶಸ್ವಿಯಾಗಿ ಸಂರಕ್ಷಿಸಿಕೊಂಡನು, ತಿರಹತ್‌ನ ಸ್ವತಂತ್ರ ರಾಜನಾಗಿ ಆಳ್ವಿಕೆ ಮುಂದುವರಿಸಿದನು ಮತ್ತು ಅವನ ರಾಜವಂಶವು ಸೇನರಿಗಿಂತ ಅದೆಷ್ಟೊ ದೀರ್ಘ ಕಾಲ ಆಧಿಪತ್ಯ ಹೊಂದಿತ್ತು.

ನಾನ್ಯದೇವನು ಗಹಡವಾಲರೊಂದಿಗೆ ಸ್ನೇಹಸಂಬಂಧ ಹೊಂದಿದ್ದನೆಂದು ಕೆ.ಪಿ. ಜಯಸ್ವಾಲ ಅಭಿಪ್ರಾಯಪಡುತ್ತಾರೆ. ಸೇನರ ಹೆಚ್ಚುತ್ತಿದ್ದ ಶಕ್ತಿಯ ವಿರುದ್ಧ ಪಾಲರು, ಕರ್ನಾಟರು, ಗಹಡವಾಲರು ಒಂದು ಒಕ್ಕೂಟ ರಚಿಸಿಕೊಂಡರೆಂಬುದು ಜಯಸ್ವಾಲರ ಅಭಿಮತ.[೫೬] ಗೋವಿಂದಚಂದನ ವಿದೇಶ ಮಂತ್ರಿ ಬರೆದ ಕಲ್ಪತರು ಪ್ರಕಾರ, ಕರ್ನಾಟ ವಂಶದ ಮಲ್ಲದೇವನು ಜಯಚಂದ ಗಹಡವಾಲನ ಕೈಕೆಳಗೆ ಸೇವೆ ಸಲ್ಲಿಸಿದನು, ಗಹಡವಾಲರು ಮತ್ತು ಮಿಥಿಲೆಯ ಕರ್ನಾಟರ ನಡುವಣ ಸಂಬಂಧ ಮಧುರವಾಗಿತ್ತೆಂಬುದು ಸ್ಪಷ್ಟವಿದೆ ಎಂದು ಜಯಸ್ವಾಲ ದೃಢವಾಗಿ ಹೇಳುತ್ತಾರೆ. ಈ ಸಂದರ್ಭದಲ್ಲಿ ಸೂಚಿಸಲಾಗಿರುವ ಇನ್ನೊಂದು ಅಂಶವೆಂದರೆ ಗೋವಿಂದಚಂದ ಗಹಡವಾಲನು ಮೊಂಘಿರವರೆಗೆ ತನ್ನ ರಾಜ್ಯವನ್ನು ಹಬ್ಬಿಸಿದನು ಮತ್ತು ಗಹಡವಾಲರು ಮತ್ತು ಸೇನರ ನಡುವೆ ಕಾದಾಟವಾಗಿ[೫೭] ಸೇನರನ್ನು ಹೊಡೆದೋಡಿಸಲಾಯಿತು. ನಿಜವೆಂದರೆ, ಮೊಂಘಿರವು ಗಹಡವಾಲರ

ಕೈಸೇರಿತು.[೫೯] ಮತ್ತು ಬಂಗಾಲದಲ್ಲಿ ಕೂಡ ಸೇನರ ಪ್ರತಿಷ್ಠೆ ಬಲು ಕ್ಷೀಣಿಸಿತ್ತು. ಮದನಪಾಲನು ದಕ್ಷಿಣ ಬಿಹಾರದ ನಗಣ್ಯ ಭಾಗವನ್ನು ಹಿಡಿದುಕೊಂಡಿದ್ದ ಮತ್ತು ಗಹಡವಾಲರ ಮೇಲೆ ಅವನ ಯಶಸ್ಸು ತಾತ್ಪೂರ್ತಿಕ ಸ್ವರೂಪದ್ದಾಗಿರುವ ಸಾಧ್ಯತೆಯಿದೆ. ಮೊಂಘಿರ ಮತ್ತು ಪಾಟ್ನಾ ನಡುವಣ ಕ್ರಿಮಿಲಾ ವಿಸಯವು ಪಾಲರ ಅಧೀನವಲ್ಲಿತ್ತೆಂದು ಕ್ರಿ.ಶ. ೧೧೬೧ರ ದೆಂದು ಕಾಲನಿಗದಿತವಾದ ಮದನಪಾಲನ ವಾಲ್ಗುದರ ಶಾಸನವು ತೋರಿಸುತ್ತದೆ.[೬೦] ಕಾಶಿ ಅರಸನು ಗೌಡ, ವಂಗ, ಕಲಿಂಗ, ತೆಲಂಗ, ಮಹಾರಾಷ್ಟ್ರ, ಸೌರಾಷ್ಟ್ರ, ಚಂಪಾರಣ, ನೇಪಾಳ, ಭೂತಾನ, ಚೀನ ಮತ್ತು ಲೋಹಾವರ ಅರಸರೊಂದಿಗೆ ಯಶಸ್ವಿಯಾಗಿ ಕಾದಿದನೆಂದು *ಪ್ರಾಕೃತ ಪೈಂಗಲಂ* ಸೂಚಿಸುತ್ತದೆ.[೬೧]

ಈ ಸಾಹಿತ್ಯಿಕ ಪ್ರಮಾಣದಿಂದ ಗಹಡವಾಲರು ವಂಗ, ಗೌಡ, ಚಂಪಾರಣ ಮತ್ತು ನೇಪಾಳಗಳಲ್ಲಿಯ ತಮ್ಮ ಸಮಕಾಲೀನರೊಂದಿಗೆ, ಅಂದರೆ ಸೇನರು, ಪಾಲರು ಮತ್ತು ಕರ್ನಾಟರೊಂದಿಗೆ, ಮಧುರ ಸಂಬಂಧ ಹೊಂದಿರಲಿಲ್ಲವೆಂಬ ಕಲ್ಪನೆ ಬರುತ್ತದೆ.

ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದಾಗ, ಗಂಗಾ ನದಿಯ ಮೇಲ್ಗಡೆಯ ಪ್ರವಾಹದ ಮೂಲಕ ವಿಜಯಸೇನನು ಏರಿಹೋಗುದು ಪಶ್ಚಿಮದ ಅರಸು ಗೋವಿಂದಚಂದನ ಮೇಲೆಯೇ ಎಂಬ ಭಾವನೆ ಹುಟ್ಟುತ್ತದೆ. ನಾನ್ಯದೇವನು ನಿಜವಾಗಿಯೂ ಮಾಳವಾದ ಮೇಲೆ ದಾಳಿಯಿಟ್ಟನೆಂದು ಒಪ್ಪುವುದಾದರೆ ಅವನು ಗೋವಿಂದಚಂದ ಗಹಡವಾಲನ ಪ್ರದೇಶದೊಳಗಿಂದ ಬಲವಂತವಾಗಿ ಹಾಯ್ದುಹೋದನೆಂದೂ ಒಪ್ಪಬೇಕಾಗುತ್ತದೆ. ಈ ಘಟನೆಯ ಬಗೆಗೆ ಸಂಪೂರ್ಣ ನಿಶ್ಚಿತತೆ ತಾಳುವಂತಿಲ್ಲ. ಅದೇ ವೇಳೆಗೆ, ಗೌಡ ಅರಸರು, ಲಾಹೋರದ ಮುಸ್ಲಿಮರು, ಮುಮ್ಮಡಿ ಚಾಲುಕ್ಯ ಸೋಮೇಶ್ವರ ಇವರ ವಿರುದ್ಧ ಗೋವಿಂದಚಂದನು ಕಾದಾಡಿದ್ದು ಮಾತ್ರವಲ್ಲದೆ ವಿಜಯಸೇನನೊಂದಿಗೆ ಮತ್ತು ಮಾಳವಾದ ಪಾರಮಾರ ರೊಂದಿಗೆ ಘರ್ಷಣೆ ಹೊಂದಿದ್ದನೆಂಬುದನ್ನು ಗಮನಿಸಬೇಕಾಗುತ್ತದೆ.[೬೨] ಗಹಡವಾಲರು ಮತ್ತು ಕರ್ನಾಟರ ನಡುವಣ ಮೈತ್ರಿಯನ್ನು ದೃಢೀಕರಿಸುವ ಅಧಿಕೃತ ಪ್ರಮಾಣವಿಲ್ಲ. ನಾನ್ಯದೇವನು ಉಬ್ಬಾಯಿಸುತ್ತಿದ್ದ ನೇರ ನೆರೆಯವನಾದುದರಿಂದ ಎರಡೂ ರಾಜ್ಯಗಳ ನಡುವೆ ಘರ್ಷಣೆ ನಡೆದಿರುವ ಸಾಧ್ಯತೆಯಿದೆ. ಪಾಲರು, ಸೇನರು, ಗಂಗರು, ಕಾಕತೀಯರು, ಚಾಲುಕ್ಯರು, ಚಾಂದೇಲರು ಮತ್ತು ಮಿಥಿಲೆಯ ಕರ್ನಾಟರು ಇವರೆಲ್ಲರೊಂದಿಗೆ ಗೋವಿಂದ ಚಂದನು ಘರ್ಷಣೆಗಿಳಿಯಬೇಕಾಗಿದ್ದ ಸಾಧ್ಯತೆಯಿದೆ.[೬೩] ಇಲ್ಲಿ, ಗಹಡವಾಲರು ಚಂಪಾರಣ ಮೇಲೆ ನಡೆಸಿದ ದಾಳಿಯು ಗಣನೆಗೆ ತೆಗೆದುಕೊಳ್ಳಬೇಕಾದ ಮಹತ್ವದ ಅಂಶವಾಗಿದ್ದು ಆ ದಾಳಿಯು ಅದೇ ಪ್ರದೇಶದಲ್ಲಿ ನಡೆದ ಕಲಚೂರಿ ದಾಳಿಯ ಜಾಡಿನಲ್ಲಿ ಸಂಭವಿಸಿರಬಹುದು. ಕ್ರಿ.ಶ. ೧೦೭೭ರ ಆದಿಭಾಗಕ್ಕೆ ಸರಿಹೊಂದುವ ವಿಕ್ರಮ ಸಂವತ್ಸರ ೧೧೩೪ರದೆಂದು ಕಾಲ ನಿಗದಿಪಡಿಸಲಾದ ಶೋಢದೇವನ ಕಲ್ಹಾ ಶಾಸನದಿಂದ, ಈತನು ಗೋರಖಪುರ ಪ್ರದೇಶದಲ್ಲಿ ತಾನು ಸ್ವತಂತ್ರನೆಂದು ಘೋಷಿಸಿಕೊಂಡು ಉತ್ತರ ಬಿಹಾರದ ಸರನವರೆಗೆ ತನ್ನ ರಾಜ್ಯವನ್ನು ಬೆಳೆಸಿದನೆಂದು ತಿಳಿಯುತ್ತದೆ.[೬೪] ಲಕ್ನೊ ವಸ್ತುಸಂಗ್ರಹಾಲಯದಲ್ಲಿರುವ ಕೀರ್ತಿದೇವನ

ತಾಮ್ರಪಟದ ಕಾಲವನ್ನು ವಿಕ್ರಮ ಸಂವತ್ಸರ ೧೧೭೬, ಅಂದರೆ ಕ್ರಿ.ಶ. ೧೧೧೯, ಎಂದು ನಿಗದಿಗೊಳಿಸಲಾಗಿದೆ. ಉತ್ತರ ಬಿಹಾರದ ಮೋತೀಹಾರಿಯ ಗಡಿಗೆ ಹೊಂದಿಕೊಂಡಿರುವ ಗೋರಖಪುರದ ಈಶಾನ್ಯ ಭಾಗವು ಗಹಡವಾಲ ರಾಜ್ಯದ ಹೊರಗೆ ಇತ್ತು ಎಂದು ಆ ತಾಮ್ರಪಟ ತೋರಿಸುತ್ತದೆ. ಕೀರ್ತಿಪಾಲನು 'ದರದ ಗಂಡಕಿ ದೇಶ'[65]ದ ಎರಡು ಗ್ರಾಮಗಳನ್ನು ದತ್ತಿ ನೀಡಿದುದನ್ನು ಆ ಶಾಸನ ಉಲ್ಲೇಖಿಸುತ್ತದೆ. ಶಾಸನದಲ್ಲಿ ಹೇಳಿದ ನಾಡು ಬಹುಶಃ ಪರ್ವತಗಳ ನಡುವಣ ಗುಡ್ಡಗಾಡು ಪ್ರದೇಶವಾಗಿದ್ದು ಗಂಡಕಿವರೆಗೆ ಹಬ್ಬಿರಬೇಕು.[66] ಬಹಳಮಟ್ಟಿಗೆ, ಗಂಡಕ ನದಿಯು ಗಹಡವಾಲರ ಈಶಾನ್ಯ ಗಡಿಯನ್ನು ಸೂಚಿಸಿದ್ದಿರಬೇಕು. ಆ ಪ್ರದೇಶದ ನಂತರ ಮಿಥಿಲೆಯ ಕರ್ನಾಟ ಪ್ರದೇಶ ಆರಂಭಗೊಂಡಿತು.[67]

ಮೇಲೆ ಹೇಳಿದ ವಾದಗಳ ಹಿನ್ನಲೆಯಲ್ಲಿ ನಾನ್ಯದೇವನು ಮತ್ತು ಅವನ ಸಮಕಾಲೀನನಾಗಿದ್ದ ಗಹಡವಾಲನು ಪರಸ್ಪರ ಮಿತ್ರರಾಗಿದ್ದರೆಂಬ ಕೆ.ಪಿ.ಜಯಸ್ವಾಲರ ಸಿದ್ಧಾಂತವನ್ನು ಒಪ್ಪುವುದು ಎಳ್ಳಷ್ಟೂ ಸಾಧ್ಯವಿಲ್ಲ. ಎರಡೂ ರಾಜವಂಶಗಳ ಮಧ್ಯೆ ಇದ್ದ ಮೈತ್ರಿಯ ಬಗೆಗೆ ಗಟ್ಟಿ ಪ್ರಮಾಣದ ಅಭಾವ ಎದ್ದುಕಾಣುತ್ತದೆ.[68] ಮಿಥಿಲೆಯ ಬಗೆಗಿನ ಪಾರಂಪರಿಕ ನಂಬಿಕೆಗಳೂ ಸಹ ನಾನ್ಯದೇವ ಮತ್ತು ಗಹಡವಾಲರ ನಡುವಿನ ಯಾವದೇ ಸಂಪರ್ಕವನ್ನು ಪ್ರಸ್ತಾಪಿಸುವುದಿಲ್ಲ. ನಾನ್ಯದೇವನು ಸೇನರ ಮತ್ತು ಗಹಡವಾಲರ ನಡುವೆ ಶಕ್ತಿ ಸಮತೋಲನವನ್ನು ಕಾಯ್ದುಕೊಂಡಿದ್ದ ಪಕ್ಷದಲ್ಲಿ, ಅವನು ಆಕ್ರಮಣಕಾರಿ ನೀತಿಯನ್ನು ಅನುಸರಿಸಿರಬಹುದಾದ ಸಾಧ್ಯತೆಯಿತ್ತು. ನಾನ್ಯದೇವನು ತಿರಹತ್‌ನಲ್ಲಿ ತನ್ನ ಅದೃಷ್ಟದೊಂದಿಗೆ ತೃಪ್ತನಾಗಿದ್ದನು[69] ಮತ್ತು ನೇಪಾಳದ ಕೊಳ್ಳದಲ್ಲಿ ತನ್ನ ಪ್ರತಿಫಲವನ್ನು ಅರಸಿದ ಎಂದು ಗ್ರಹಿಸುವುದೆ ಸೂಕ್ತ. ಸಮಕಾಲೀನ ರಾಜಕೀಯ ಸಂದರ್ಭದ ಬೆಳಕಿನಲ್ಲಿ ಅದು ಸ್ಪಷ್ಟವಿದೆ.

ಮಿಥಿಲಾ ಮತ್ತು ನೇಪಾಳ ಮಧ್ಯೆ ಸಂಬಂಧ ಅನಾದಿ ಕಾಲದಿಂದ ಅಸ್ತಿತ್ವದಲ್ಲಿದೆ. ಮಿಥಿಲೆಯು ನೇಪಾಳ ಮಾರ್ಗದಲ್ಲಿ ಬರುತ್ತದೆ. ಪಾಲ ಪ್ರಭುತ್ವದ ಅವಸಾನದ ನಂತರ ಯಾವುದೆ ಅಧಿಕೃತ ಮಾಹಿತಿ ಇಲ್ಲದ ಕಾಲಘಟ್ಟವು ಬಂತು. ಆಂಧ್ರ, ದ್ರಾವಿಡ ಮತ್ತು ನೇಪಾಳ ಅರಸರ ಮಸ್ತಕದ ಮೇಲೆ ಪಾದವಿಟ್ಟು ಆರನೆಯ ವಿಕ್ರಮಾದಿತ್ಯನ ಖ್ಯಾತಿಯನ್ನು ಈಗಾಗಲೇ ಚರ್ಚಿಸಲಾಗಿದೆ.[70] ಕ್ರಿ.ಶ. ೧೧೭೨ರ ಪಟ್ಟದಕಲ್ಲು ಶಾಸನವು ಚಾಲುಕ್ಯ ಅರಸ ಮುಮ್ಮಡಿ ಸೋಮೇಶ್ವರನ ಸಾಮಂತ ರಾಜ್ಯಗಳಲ್ಲಿ ನೇಪಾಳವನ್ನು ಉಲ್ಲೇಖಿಸುತ್ತದೆ.[71] ತನ್ನ ಇತಿಹಾಸದ ವಿಷಮ ಸ್ಥಿತಿಯಲ್ಲಿದ್ದ ನೇಪಾಳದಲ್ಲಿ ಎಲ್ಲವೂ ಸರಿಯಾಗಿರಲಿಲ್ಲವೆಂಬ ತೀರ್ಮಾನಕ್ಕೆ ಬರುವಂತೆ ಈ ಪ್ರಮಾಣವು ತಳಹದಿ ಒದಗಿಸುತ್ತದೆ. ನಯಕೋಟಿ ಮತ್ತು ಪಾಟಿನ್‌ಗಳ ಠಾಕೂರಿಗಳು ಒಬ್ಬರಿಗೊಬ್ಬರು ಸರಿಯಾಗಿರದ್ದರಿಂದ ನೇಪಾಳದಲ್ಲಿ ಆಂತರಿಕ ಗಲಭೆಗಳು ತೀರ ಹೆಚ್ಚಾಗಿದ್ದವು. ನಯಕೋಟಿದ ಠಾಕೂರಿಗಳ ಪುನರ್‌ಸ್ಥಾಪನೆಗೆ ಎಡೆಮಾಡಿ ಕೊಟ್ಟ ಗಲಭೆಗಳಿಗೆ ಕರ್ನಾಟರು ಅಲ್ಲಿ ಆಗಲೇ ತಮ್ಮ ಪಾರಮ್ಯ ಸ್ಥಾಪಿಸಿದ್ದ ಮಿಥಿಲೆಯ

ತಳಹದಿಯಾಗಿತ್ತು.[72] ಹರ್ಷದೇವನು (ಕ್ರಿ.ಶ. ೧೦೮೨-೧೦೯೮) ಸಂಪೂರ್ಣ ರಾಜಬಿರುದು ಧರಿಸದಿದ್ದುದು ಅವನು ಅಂಥ ಅಲಂಕಾರಗಳನ್ನು ಇಷ್ಟಪಡಲಿಲ್ಲವೆಂಬುದನ್ನು ತೋರಿಸುತ್ತದೆ. ಅವನ ಮರಣದಿಂದ ನೇಪಾಳದಲ್ಲಿ ಇನ್ನಷ್ಟು ತೊಂದರೆಯಾಯಿತು. ನಾನ್ಯದೇವನು ನೇಪಾಳದಲ್ಲಿ ಪ್ರಚಲಿತವಿದ್ದ ಪರಿಸ್ಥಿತಿಯ ಲಾಭವನ್ನು ಪಡೆದುಕೊಂಡಂತೆ ತೋರುತ್ತದೆ. ಅವನು ನೇಪಾಳವನ್ನು ಪ್ರವೇಶಿಸಿ ಶಾಲಿವಾಹನ ಶಕೆಯನ್ನು ಪರಿಚಯಿಸಿದನು ಮತ್ತು ಭಟಗಾಂವದಲ್ಲಿ ತನ್ನ ಆಸ್ಥಾನವನ್ನು ಸ್ಥಾಪಿಸಿದನು. ಭಟಗಾಂವದಿಂದ ಅವನು ಕಾಠಮಾಂಡು[73] ಮತ್ತು ಪಾಟಿನ್ ಗಳನ್ನು ಆಳಿದನೆಂದು ತರುವಾಯದ ವಂಶಾವಳಿಗಳು ಸೂಚಿಸುತ್ತವೆ. ನೇಪಾಳದ ತೀರ ಇತ್ತೀಚಿನ ಇತಿಹಾಸಕಾರರಲ್ಲೊಬ್ಬರಾದ ಪೆಟೆಕ್‌ರು ನಾನ್ಯದೇವನು ನೇಪಾಳವನ್ನು ಆಳಿದ್ದನ್ನು ಒಪ್ಪುವುದಿಲ್ಲ. ಆದರೆ, ಲಭ್ಯ ಸಾಮಗ್ರಿಯ ಆಧಾರ ಬಲದಿಂದ "ಸ್ಪಷ್ಟವಾಗಿಯೆ ನಾನ್ಯದೇವನು ಹರ್ಷದೇವನ ಮರಣಾನಂತರ ನೇಪಾಳದ ಮೇಲೆ ದಾಳಿಯಿಟ್ಟನು. ಮತ್ತು ಇದನ್ನು ಮರೆಯಲಾಗಲಿಲ್ಲ..."[74] ಎಂದು ಪೆಟೆಕ್‌ರು ಒಪ್ಪುವಂತಾಗಿದೆ. ಧವಳಶ್ರೋತ್ರದ ರಾಮದೇವನು ನೇಪಾಳದಲ್ಲೊಬ್ಬ "ಮಹಾಸಾಮಂತಾಧಿಪತಿ"ಯಾಗಿದ್ದನು ಮತ್ತು ಹರ್ಷದೇವನ ಕಾಲದಲ್ಲಿ ತನ್ನ ಸ್ವಾತಂತ್ರ್ಯ ಸಾಧಿಸಿದನು ಎಂದು ಕ್ರಿ.ಶ. ೧೦೯೭ರ ಹಸ್ತಪ್ರತಿಯ ಅಂತ್ಯಪ್ರಶಸ್ತಿಯು ಸೂಚಿಸುತ್ತದೆ. ನಾನ್ಯದೇವನ ಉದಯಕ್ಕೂ ಮುಂಚೆ ಹಸ್ತಪ್ರತಿಯಲ್ಲಿ ಉಲ್ಲೇಖಿಸಿದ ರಾಮದೇವನು ಪಾಲ ವಂಶದ ರಾಮಪಾಲನ ಆಧಿಪತ್ಯವನ್ನು ಒಪ್ಪಿಕೊಂಡಿರಬಹುದು. ಈ ಸಂಗತಿಯನ್ನು ಪಬ್ಲಿಕಮಾಲಾ'ದ ಹಸ್ತಪ್ರತಿಯ ಅಂತ್ಯಪ್ರಶಸ್ತಿಯು ಸ್ಥಿರೀಕರಿಸುತ್ತದೆ. ಈ ಅಂತ್ಯಪ್ರಶಸ್ತಿಯು ಇಂತಿದೆ: "ರಾಮದೇವಸ್ಯ-ಪರಮೇಶ್ವರ ಪರಮಭಟ್ಟಾರಕ ಪರಮಸೌಗತ ಮಹಾರಾಜ ಶ್ರೀಮದ್ ರಾಮಪಾಲದೇವಸ್ಯ." ನಾನ್ಯದೇವನಿಂದ ಒದಗಬಹುದಾಗಿದ್ದ ಅಪಾಯಕ್ಕೆ ಸುರಕ್ಷಿತೆಯೆಂದು ರಾಮದೇವನು ರಾಮಪಾಲನ ಪ್ರಭುತ್ವವನ್ನು ಒಪ್ಪಿಕೊಂಡಿರಬಹುದೆಂಬುದು ಪೆಟೆಕ್‌ರ ಅಭಿಪ್ರಾಯ.[76] ಇಂಥ ಯಾವುದೆ ಸೂಚನೆಯನ್ನು ಈ ಅಂತ್ಯಪ್ರಶಸ್ತಿ ನೀಡದಿರುವುದರಿಂದ ಪೆಟೆಕ್‌ರ ಅಭಿಪ್ರಾಯವನ್ನು ಒಪ್ಪುವುದು ಕಷ್ಟಕರ.

ಮಿಥಿಲೆಯಲ್ಲಿ ನಾನ್ಯದೇವನ ಶಕ್ತಿಯ ಉದಯವು ಪಾಲ ಸಾಮ್ರಾಜ್ಯದ ಮರಣಗಂಟೆಯನ್ನು ಬಾರಿಸಿತು ಮತ್ತು ನೇಪಾಳದಲ್ಲಿ ಕರ್ನಾಟರು ಪಾಲ ವಂಶದ ಸ್ಥಾನವನ್ನು ಆಕ್ರಮಿಸಿಕೊಂಡರು ಎಂದು ಹೇಳಲಾಗಿದೆ. ಪಾಲ ಶಕ್ತಿಯ ಅವಸಾನದ ನಂತರ ರಾಮದೇವನು ನಾನ್ಯದೇವನ ಮಹಾಸಾಮಂತಾಧಿಪತಿಯಾಗಿ ತನ್ನ ನಿಷ್ಠೆಯನ್ನು ಬದಲಿಸಿರಬಹುದು. ಶಿವದೇವನ ಕಾಲಕ್ಕೆ (ಕ್ರಿ.ಶ. ೧೦೯೮-೧೧೨೬) ರಾಮದೇವನು ನಾನ್ಯದೇವನ ಸಾಮಂತನಾಗಿದ್ದಿರಬಹುದು. ಈ ಸಂಬಂಧದಲ್ಲಿ, ಪೆಟೆಕ್‌ರು ತಮ್ಮದೇ ತೀರ್ಮಾನಗಳ ಅಧಿಕೃತತೆಯ ಬಗೆಗೆ ಸಂದೇಹ ತಾಳಿರುವುದು ಯಥೋಚಿತವಾಗಿದೆ. ನಾನ್ಯದೇವನ ಉದಯಕ್ಕಿಂತ ಪೂರ್ವದಲ್ಲಿ ನೇಪಾಳದ ಮೇಲೆ ರಾಮಪಾಲನ ಪ್ರಾಬಲ್ಯವನ್ನು *ಆರ್ಯೋಷ್ಣೀಷ ವಿಜಯನಾಮಧಾರಿಣಿಯು* ಇದುವರೆಗೆ ಗಮನಕ್ಕೆ ಬಾರದಿದ್ದ ಹಸ್ತಪ್ರತಿಯನ್ನು ಬೆಳಕಿಗೆ ತಂದವರು ಪೆಟೆಕ್.

ತನ್ನ ಕಾಲದಲ್ಲಿ ನೇಪಾಳದಲ್ಲಿ ಅರಾಜಕತೆ ಮತ್ತು ಗೊಂದಲ ರಾರಾಜಿಸುತ್ತಿದ್ದ ಸಂದರ್ಭದ ಲಾಭ ಪಡೆದು ನಾನ್ಯದೇವನು ಆ ಕೊಳ್ಳವನ್ನು ಪ್ರವೇಶಿಸಿದನು. ಅವನು ಇಡಿ ನೇಪಾಳವನ್ನು ಅಡಗಿಸಿ ವಶಪಡಿಸಿಕೊಂಡನು, ಆಳರಸರನ್ನು ಸಿಂಹಾಸನದಿಂದ ಕೆಳಗಿಳಿಸಿದನು ಮತ್ತು ತರುವಾಯದಲ್ಲಿ ಭಟಗಾಂವದಲ್ಲಿ ಆಸ್ಥಾನವನ್ನು ಸ್ಥಾಪಿಸಿದನೆಂದು ಹೇಳಲಾಗಿದೆ. ನೇಪಾಳಿ ಐತಿಹ್ಯದಂತೆ ನಾನ್ಯದೇವನು ಇಬ್ಬರು ನೇಪಾಳಿ ಅರಸರಾದ ಪಾಟನ್‌ದ ಜಗದೇವಮಲ್ಲ ಮತ್ತು ಭಟಗಾಂವದ ಆನಂದಮಲ್ಲರನ್ನು ಸೆರೆಹಿಡಿದನು. ನೇಪಾಳದ ಇತಿಹಾಸದ ಈ ನಿರ್ದಿಷ್ಟ ಕಾಲಘಟ್ಟದಲ್ಲಿ ಮಲ್ಲ ಅರಸರನ್ನು ಸೇರಿಸುವ ಮೂಲಕ ಚರಿತ್ರೆಗಳು ಪ್ರಮಾದವೆಸಗಿವೆಯೆಂಬುದು ಲೆವಿ ಅವರ ಅಭಿಪ್ರಾಯ.[77] ನೇಪಾಳದ ಮಲ್ಲ ಅರಸರು ತಾವು ನಾನ್ಯದೇವನ ವಂಶಜರೆಂದು ಗುರುತಿಸಿಕೊಳ್ಳುತ್ತಾರೆ.[78]

ನಾನ್ಯದೇವನು ಕೊಳ್ಳದಲ್ಲಿಯ ಸ್ಥಳೀಯ ಅರಸರನ್ನು ನಾಶಪಡಿಸಲಿಲ್ಲ ಎಂಬುದು ಇನ್ನೊಂದು ವಿಚಾರಸರಣಿ. ಆ ಅರಸರು ಅವನಡಿಯಲ್ಲಿ ಆಳ್ವಿಕೆ ಮುಂದುವರಿಸಿದರು. ನೇಪಾಳದಲ್ಲಿ ಪಾಲರ ಅವಸಾನದಿಂದುಂಟಾದ ಶೂನ್ಯವನ್ನು ಕರ್ನಾಟರು ತುಂಬಿದರೆಂದು ಸೂಚಿಸುವುದು ಯೋಗ್ಯವೆಂದು ತೋರುತ್ತದೆ. ಬೆಂಡಾಲ್‌ರು ನಾನ್ಯದೇವನನ್ನು ಹೆಸರಿಸದಿರುವ ಸಾಹಸ ಮಾಡಿದರೆ ರೈಟ್ ಮತ್ತು ಭಗವಾನಲಾಲರು ಅವನನ್ನು ತರುವಾಯದ ಕಾಲಕ್ಕೆ ತಳ್ಳುತ್ತಾರೆ.[79] ಡಿ.ಆರ್.ರೆಗ್ಮಿ ಈ ಶೀರ್ಷಿಕೆಗಳನ್ನು ಒಪ್ಪದಿದ್ದರೂ ಒಟ್ಟು ಕೊಳ್ಳದ ಮೇಲೆ ನಾನ್ಯದೇವನ ಪ್ರಭುತ್ವವಿತ್ತೆಂಬುದನ್ನು ಸಂದೇಹಿಸಲು ಯಾವ ಕಾರಣವೂ ಇಲ್ಲ.[80] ನೇಪಾಳದ ಮಲ್ಲರು ಮತ್ತು ನಾನ್ಯದೇವನ ನಡುವಣ ಘರ್ಷಣೆಯನ್ನು ರೈಟ್ ಉಲ್ಲೇಖಿಸುತ್ತಾರೆ. ಲೆವಿ ತೋರಿಸಿದಂತೆ, ಮಲ್ಲರು ನೇಪಾಳದಲ್ಲಿ ಕ್ರಿ.ಶ. ೨೦೦ ರಿಂದ ೧೨೦೦ ರವರೆಗೆ ಇದ್ದರು.[81] ನಾನ್ಯದೇವನು ಮಲ್ಲರನ್ನು ಸೋಲಿಸಿ ತಿರಹತ್‌ಗೆ ಓಡಿಸಿದನೆಂದು ವಂಶಾವಳಿಗಳು ತೋರಿಸುತ್ತವೆ. ಪೆಟೆಕ್‌ರ ಅಭಿಪ್ರಾಯದಲ್ಲಿ, ಅರಿಮಲ್ಲದೇವನು ಕ್ರಿ.ಶ. ೧೨೦೦ ರಲ್ಲಿ ಮಲ್ಲ ವಂಶವನ್ನು ಸ್ಥಾಪಿಸಿದನಾದ್ದರಿಂದ ಪ್ರಸ್ತುತ ಕಾಲಘಟ್ಟದಲ್ಲಿ ಕೊಳ್ಳದಲ್ಲಿ ಯಾವುದೇ ಮಲ್ಲ ಅರಸನಿರಲಿಲ್ಲ.[82] 'ರಾಜಾಧಿರಾಜ ಪರಮೇಶ್ವರ' ಎಂಬ ಆಡಂಬರದ ಬಿರುದನ್ನು ಧರಿಸಿದ್ದ ಠಾಕೂರಿ ಅರಸ ಶಿವದೇವನನ್ನು ಎದುರಿಸಬೇಕಾದುದರಿಂದ ನಾನ್ಯದೇವನಿಗೆ ನೇಪಾಳದಲ್ಲಿ ಶಾಂತಿಕಾಲ ಲಭಿಸಲಿಲ್ಲ. ಶಿವದೇವನು ಪಟ್ಟಕ್ಕೇರಿದ ಸಂದರ್ಭಗಳು ನಿಗೂಢತೆಯಲ್ಲಿ ಹುದುಗಿವೆ. ನಯಕೋಟ ಮತ್ತು ಪಾಟನ್‌ಗಳ ಠಾಕೂರಿಗಳು ಕಾದಾಟದಲ್ಲಿ ನಿರತರಾಗಿದ್ದರಿಂದ ನಾಡಿನಲ್ಲಿ ಆಂತರಿಕ ಕಲಹವಿದ್ದುದು ನಿಸ್ಸಂದೇಹ. ಪಾಟನ್ ಮನೆತನವನ್ನು ನಾಶಪಡಿಸಿದನೆಂದು ಭಾವಿಸಲಾದ ನಾನ್ಯದೇವನ ಆಶ್ರಯವನ್ನು ನಯಕೋಟದ ಠಾಕೂರಿಗಳು ಪಡೆದರು.[83] ನಾನ್ಯದೇವನ ನೇಪಾಳ ದಾಳಿಯು ಕ್ರಿ.ಶ. ೧೧೧೯-೨೦ ರಲ್ಲಿ ಜರುಗಿತು. ಅನಂತರವೂ ಆಳರಸರು ತಮ್ಮ ಸಾಮಂತ ಅಂತಸ್ತನ್ನು ಲೆಕ್ಕಿಸದೆ ಚಕ್ರಾಧಿಪತ್ಯದ ಬಿರುದುಗಳನ್ನು[84] ಧರಿಸುವುದನ್ನೆ ಮುಂದುವರಿಸಿದರು. ಶಿವದೇವನು ಅಂಗೀಕರಿಸಿದ ಆಡಂಬರದ ಬಿರುದುಗಳನ್ನು ನೋಡಿದರೆ ನಾನ್ಯದೇವನು ಒಟ್ಟು ನಾಡನ್ನು

ದೀರ್ಘ ಕಾಲ ಅಂಕೆಯಲ್ಲಿಟ್ಟುಕೊಂಡಿದ್ದನೆಂಬ ಬಗೆಗೆ ಸಂದೇಹ ಮೂಡುತ್ತದೆ.[೮೫] ಶಿವದೇವನು ಕ್ರಿ.ಶ. ೧೧೧೮ ಮತ್ತು ೧೧೨೩ರ ಮಧ್ಯೆ ಆಳುತ್ತಿದ್ದನು ಮತ್ತು ನಯಕೋಟದ ಠಾಕೂರಿಗಳು ಅವನ ಬಾವುಟದಡಿ ಅಧಿಕಾರವನ್ನು ತಿರುಗಿ ಪಡೆದುಕೊಂಡರೆಂದು ತೋರುತ್ತದೆ. ಆರಂಭದಲ್ಲಿ ನಾನ್ಯದೇವನು ಶಿವದೇವನಿಗೆ ಬೆಂಬಲ ನೀಡಿದನು ಮತ್ತು ಕೊಳ್ಳದಲ್ಲಿ ಅವನ ಅಧಿಕಾರಕ್ಕೆ ಶಕ್ತಿ ಒದಗಿಸಿದನೆಂದು ಸೂಚಿಸಲಾಗಿದೆ.[೮೬] ತಿರಹತ್‌ನಲ್ಲಿ ನಾನ್ಯದೇವನ ಮೇಲೆ ಎಲ್ಲಾ ಕಡೆಯಿಂದಲೂ ಒತ್ತಡಗಳಿದ್ದುದರಿಂದ ಅವನು ನೇಪಾಳದತ್ತ ಗಮನ ಹರಿಸಿದುದು ಸಹಜವೆ. ಅವನು ತಿರಹತ್‌ನಲ್ಲಿ ತಾನು ಗೆದ್ದುಕೊಂಡುದನ್ನು ಭದ್ರಪಡಿಸಲು ನಿರತನಾಗಿದ್ದರಿಂದ ಠಾಕೂರಿಗಳು ಕೆಲಕಾಲ ತಮ್ಮ ಸ್ವಾತಂತ್ರ್ಯವನ್ನು ಸಾಧಿಸಿದರು. ಶಿವದೇವನ ನಂತರ ಕ್ರಿ.ಶ. ೧೧೨೮ ರಲ್ಲಿ ಇಂದ್ರ ಅಥವಾ ಮಹೇಂದ್ರನು ಬಂದನು. ಮತ್ತು ಮಾನದೇವನು ಕ್ರಿ.ಶ. ೧೧೩೪ ರಲ್ಲಿ ಅಧಿಕಾರಕ್ಕೆ ಬಂದನು. ಡಿ.ಆರ್.ರೆಗ್ಮಿ ಅವರ ವಾದವನ್ನು ಒಪ್ಪುವುದಾದರೆ, ನಾನ್ಯದೇವನು ಕ್ರಿ.ಶ. ೧೧೪೧ ರಲ್ಲಿ ಕೊಳ್ಳವನ್ನು ವಶಪಡಿಸಿಕೊಂಡನೆಂದು ಸ್ವೀಕರಿಸಬೇಕಾಗುತ್ತದೆ.[೮೭] ಕ್ರಿ.ಶ. ೧೧೧೮ ಮತ್ತು ೧೧೪೧ರ ನಡುವಣ ಆಂತರಿಕ ಪರಿಸ್ಥಿತಿಯು ನಾನ್ಯದೇವನ ಗಮನ ಸೆಳೆಯಿತು. ಮತ್ತು ಅವನು ತನ್ನ ರಾಜ್ಯದ ಆ ಭಾಗದಲ್ಲಿ ಸುವ್ಯವಸ್ಥೆಯನ್ನು ಪುನರ್‌ಸ್ಥಾಪಿಸಲು ಸಂಪೂರ್ಣವಾಗಿ ಮಗ್ನನಾಗ ಬೇಕಾಯಿತು. ಆದ್ದರಿಂದ, ಕ್ರಿ.ಶ. ೧೧೪೧ ರಲ್ಲಿ ನೇಪಾಳದ ಮರುವಿಜಯದಲ್ಲಿ ತೊಡಗುವುದು ಅವನಿಗೆ ಅಗತ್ಯವಾಯಿತು. ಈ ಅವಧಿಯ ನಂತರ ನೇಪಾಳದ ಮೇಲೆ ಅವನ ಪಾರಮ್ಯ ಅಬಾಧಿತವಾಗಿ ಮುಂದುವರಿಯಿತು.[೮೮] ನೇಪಾಳದಲ್ಲಿ ಅವನ ಪ್ರಭುತ್ವದ ಸ್ವರೂಪ ಅಷ್ಟೊಂದು ಸ್ಪಷ್ಟವಿಲ್ಲವೆಂದು ತೋರುವುದಾದರೂ ನಾನ್ಯದೇವನ ಅಂತಿಮ ಯಶಸ್ಸಿಗೆ ಆಂತರಿಕ ಒಡಕುಗಳು ಪ್ರಮುಖ ಕಾರಣವಾಗಿದ್ದವು.

## ನಾನ್ಯದೇವನ ಮೌಲ್ಯಮಾಪನ

ನಾನ್ಯದೇವನು ಕ್ರಿ.ಶ. ಸುಮಾರು ೧೦೯೭ ರಿಂದ ೧೧೪೭ರ ವರೆಗೆ ಸುಮಾರು ಐವತ್ತು ವರ್ಷ ಆಳಿದನೆಂದು ಹೇಳಲಾಗಿದೆ. ಅವನ ಹೆಗ್ಗಳಿಕೆಯು ಅವನು ಕರ್ನಾಟ ರಾಜವಂಶದ ಸಂಸ್ಥಾಪಕನೆಂಬ ಸಂಗತಿಯ ಮೇಲಲ್ಲದೆ ಆ ರಾಜವಂಶದ ಅರಸರಲ್ಲಿಯೆ ಅತ್ಯಂತ ಸಮರ್ಥನೆಂಬ ಸಂಗತಿಯ ಮೇಲೂ ನಿಂತಿದೆ. ಕಾಲನಿರ್ಣಯವಾಗಿರದ ಅಂಧ್ರಠಾರ್ಹಿ ಶಾಸನವು ಮಿಥಿಲೆಯ ಕೇಂದ್ರಭಾಗದಲ್ಲಿದ್ದು ನಾನ್ಯದೇವನನ್ನು ಕುರಿತ ಏಕೈಕ ದಾಖಲೆಯಾಗಿದೆ. ಆ ಶಾಸನದ ಆಧಾರದ ಮೇಲೆ ನಾನ್ಯದೇವನನ್ನು ಅವನ ಸಮಕಾಲೀನರು ಕ್ಷತ್ರಿಯನೆಂದು ಪರಿಗಣಿಸುತ್ತಿದ್ದರೆಂದು ತಿಳಿಯುತ್ತದೆ. ಮಿಥಿಲೆಯ ಐತಿಹ್ಯದಲ್ಲಿ[೮೯] ಅವನನ್ನು ದಾಕ್ಷಿಣಾತ್ಯ ಪಾರಮಾರ (ಕರ್ನಾಟ) ಕ್ಷತ್ರಿಯನೆಂದು ಬಣ್ಣಿಸಲಾಗಿದೆ.

ಅವನನ್ನು 'ಪ್ರಭು', 'ವಿಜೇತ' ಎಂತಲೂ ಬಣ್ಣಿಸಲಾಗಿದೆ. ಮತ್ತು ತನ್ನ ಅಸಾಧಾರಣ ಸಾಧನೆಗಳಿಂದಲ್ಲದೆ ತನ್ನ ಪ್ರಸಿದ್ಧಿ[೯೦] ಖ್ಯಾತಿಗಳಿಂದ ಅವನು ಪ್ರಪಂಚವನ್ನು ದ್ವಿತೀಯ ಕ್ಷೀರಸಾಗರವನ್ನಾಗಿ ಮಾಡಿದನೆಂದು ಹೇಳಲಾಗಿದೆ.

ಇವತ್ತಿಗೂ ತನ್ನ ಮೂಲ ನಿಗೂಢತೆ ಮತ್ತು ಅಸ್ಪಷ್ಟತೆಯಲ್ಲಿ ಹುದುಗಿರುವ ನಾನ್ಯದೇವನು ಶೂನ್ಯ ಮಾತ್ರದಿಂದಲೆ ಸ್ವತಂತ್ರ ರಾಜ್ಯವೊಂದನ್ನು ಯಶಸ್ವಿಯಾಗಿ ಕಟ್ಟಿದನು. ಆವನು ಈಶಾನ್ಯ ಭಾರತದ ಅತ್ಯಂತ ಗಮನಾರ್ಹ ರಾಜಕೀಯ ವ್ಯಕ್ತಿಗಳಲ್ಲೊಬ್ಬನಾಗಿದ್ದ ನೆಂಬುದರಲ್ಲಿ ಸಂದೇಹವಿಲ್ಲ. ಅಂದಿನ ಭಾರತದ ಅನಿಶ್ಚಿತ ರಾಜಕೀಯ ಸ್ಥಿತಿ ಮತ್ತು ಕ್ಷೋಭೆಗಳನ್ನು ಪರಿಗಣಿಸಿದರೆ, ಅವನ ರಾಜಕೀಯ ಅಥವಾ ಇನ್ನಿತರ ಇತಿಮಿತಿಗಳೇನೆ ಇದ್ದರೂ ಅವನ ಸಾಧನೆಗಳು ಯಾವ ದೃಷ್ಟಿಯಿಂದಲೂ ಅಲ್ಪವಾದವುಗಳಲ್ಲ. ನಾನ್ಯದೇವನ ಬುದ್ಧಿವಂತಿಕೆಯು ಕಲ್ಪಿಸಿಕೊಂಡ ಮತ್ತು ನಿರ್ಮಿಸಿದ ರಾಜ್ಯವು ಸಾಕಷ್ಟು ದೀರ್ಘ ಕಾಲ ಬಾಳಿತಲ್ಲದೆ ಬಹುತೇಕ ಎಲ್ಲ ಸಮಕಾಲೀನ ರಾಜವಂಶಗಳಿಗಿಂತ ಹೆಚ್ಚು ಕಾಲ ಬಾಳಿತು. ಯಾವುದೆ ದೃಷ್ಟಿಯಿಂದ ನೋಡಿದರೂ ಇದು ಸಣ್ಣ ಸಾಧನೆಯಾಗಿರಲಿಲ್ಲ. ಏಕೆಂದರೆ, ಮಿಥಿಲೆಯ ಸಿಂಹಾಸನವನ್ನು ಏರಿದಾಗ ಅವನು ಬಹಳ ಕಡಿಮೆ ಸೈನಿಕ ವಿಜಯ ಪಡೆದಿದ್ದ. ಅವನು ಗುರ್ಜರ ಸ್ತ್ರೀಯೊಬ್ಬಳನ್ನು[2] ಮದುವೆಯಾಗಿದ್ದನೆಂದು ಅವನ ಭಾಷ್ಯದಿಂದ ತಿಳಿಯುತ್ತದೆ. ಅವನಿಗೊಬ್ಬ ಕೀರ್ತಿರಾಜನೆಂಬ ಸೋದರನಿದ್ದ. ಅವನನ್ನು ನರಪತಿ ಎಂತಲೂ ಕರೆಯುತ್ತಿದ್ದರು. ನರಪತಿ ವಾಸ್ತವವಾಗಿ ಎಲ್ಲಿ ಆಳಿದನೆಂಬುದು ನಿಶ್ಚಿತವಾಗಿ ಗೊತ್ತಿಲ್ಲ. ತನ್ನ ರಾಜ್ಯವನ್ನು ಪರಿಣಾಮಕಾರಿಯಾಗಿ ಭದ್ರಪಡಿಸಿದನೆಂಬುದರ ಮೇಲೆಯೂ ನಾನ್ಯದೇವನ ಯಶಸ್ಸು ನಿಂತಿದೆ. ಮತ್ತು ಆವನು ತನ್ನ ಉತ್ತರಾಧಿಕಾರಿಗಳಿಗೆ ಉತ್ತಮ ಬಳುವಳಿಯನ್ನು ಬಿಟ್ಟುಹೋದ.

ನಾನ್ಯದೇವನು ವೀರ ಯೋಧ ಮತ್ತು ನಿಪುಣ ಮುತ್ಸದ್ದಿಯಾಗಿದ್ದ. ಅಷ್ಟೆ ಅಲ್ಲದೆ, ಆವನು ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಮಹಾಪೋಷಕನಾಗಿದ್ದ. ಭರತನ ನಾಟ್ಯಶಾಸ್ತ್ರದ ಮೇಲೆ ಅವನ ಭಾಷ್ಯ ಆ ವಿಷಯದ ಬಗೆಗೆ ಅಂದಿನ ಅತ್ಯಂತ ಉನ್ನತ ಮಟ್ಟದ ಕೃತಿಗಳಲ್ಲೊಂದು ಎಂದು ಪರಿಗಣಿತವಾಗಿದೆ. ಅವನ ಸಮರ್ಥ ನಾಯಕತ್ವದಲ್ಲಿ ಮಿಥಿಲೆಯು ವೈಭವದ ಶಿಖರವನ್ನೇರಿತು ಮತ್ತು ಇನ್ನೊ ಒಮ್ಮೆ ರಾಜಕೀಯ ಹಾಗೂ ಸಂಸ್ಕೃತಿ ಕ್ಷೇತ್ರಗಳಲ್ಲಿ ಹದಿನೈದು ನೂರು ವರ್ಷಾನಂತರ ಭಾರತೀಯ ಇತಿಹಾಸದ ಮುಂಚೂಣಿಗೆ ಬಂದಿತು. ರಾಜಕೀಯ ಅನಿಶ್ಚಯದ ಅಂದಿನ ದಿನಗಳಲ್ಲಿ ಬಿಹಾರದ ಭಾಗವೊಂದರಲ್ಲಿ ಸ್ಥಿರತೆಯನ್ನು ನೆಲೆಗೊಳಿಸಿದ್ದು ಸಾಮಾನ್ಯ ಮಾತೇನಲ್ಲ. ಹಾಗೆ ಮಾಡುವಲ್ಲಿ ಯಶಸ್ವಿಯಾದ ನಾನ್ಯದೇವನು ಉತ್ತರ ಭಾರತದ ಆದಿ ಮಧ್ಯಯುಗೀನ ಇತಿಹಾಸದಲ್ಲಿ ಗಮನಾರ್ಹ ವ್ಯಕ್ತಿಗಳಲ್ಲೊಬ್ಬನಾದ. ಅವನ ರಾಜವಂಶವು ತಿರಹತ್ ಅನ್ನು ಸುಮಾರು ಎರಡೂಕಾಲು ಶತಮಾನಗಳ ಕಾಲ ಆಳಿತು. ಮತ್ತು ತಮ್ಮ ಪಡಿರೂಪಗಳಂತೆಯೆ ಕರ್ನಾಟರು ಸಹ ಪಾಂಡಿತ್ಯ ಮತ್ತು ಸಂಸ್ಕೃತಿಗಳ ವಿವಿಧ ಶಾಖೆಗಳಿಗೆ ಅಮೂಲ್ಯ ಕೊಡುಗೆ ನೀಡಿದರು.

**ಟಿಪ್ಪಣಿಗಳು**

1. CIB The Simaraon Inscription *History of Bihar* p. 101. ff. TM p. 234 ff.
2. JASB (N.S) XI p. 407.

3. *Purursapariksa* edited by Chanda Jha (Darbhanga Edition) p. 19; (new edition of the PP has been brought out by Prof. Ramanath Jha and published by the Patna University); Cf. R.K. Chaudhary's article 'The Karnatas of Mithila' in the ABORI XXXV. 91. Inscription of Bihar by R.K. Choudhary, for the text of Epigraph. R.K. Choudhary, *History of Bihar.* 101 TM p. 234.
4. IHQ III, 577 Cf, I.A. 1922.
5. Levi. op. cit. II, pp. 194-197 (Footnotes)
6. *Purusapariksa* I, p. 3.
7. IHQ. VII p. 688.
8. MD 61, Bihari Lal. *Aini Tirhut.* pp. 10-11 Cf. Katalog Der Doutschen Morgenlandischer Grassel Schaft-Leipzig. 1881 Vol. II p. 8. Here we find the mention of a MSS which was written in 1097 A.D. during the reign of Nanyadeva. Also Cf. IA IX p. 414 where Nanyadeva is assigned a reign of 50 years.
9. JBORS. IX p. 305, Levi II p. 197.
10. K.C.Pandey : *Abhinavagupta, an Historical and Philosophical Study* (Benaras 1935) p. 125.
11. For traditional account Cf. MD, p. 61 BMI pp. 460-470, MTV, p. 97, TM pp. 236-238.
12. Cf. R.K. Choudhary. Photostat Copy.
13. JBRS, IX p. 305; TM, p. 295; PIHC, XIV; Levi, II p. 194.; pp. 198- 199
14. IA. IX, p. 188; XIII, p. 418 : EI. I, p. 313.
15. JBORS. IX pp. 304-305.
16. The colophon of the manuscript *Bharatabhasya* by Nanyadeva (MSS No. III of 1869/70 the Bhandarkar Oriental Research Institute, Poona). Although the date of the manuscript is not recorded, the manuscript appears to be very old.
17. ABORI, XXXV p. 68, PIHC. XIV.
18. RC. Commentary II. p. 5-6, pp. 11.8.
19. JBORS. IX, p. 301.
20. *Bibliotheca Indica Series,* Calcutta, 1902, p. 296. verse 4. Cf. R.K. Choudhary's, *Prakritapaingalama, an important source of the History of Mithila* Also HCIp. V. p. 63.
21. EI, II p. 2.
22. JBORS, IX p. 301.
23. HCIP, V, p. 63. Cf. R.K.Choudhary *Prakrita Paingalama, an important source of the history of Mithila.*
24. BMI, p. 461, *Aini-Tiruhut.* p. 11.
25. ASR. XVI, p. 3.
26. TM, p. 239.
27. IHQ, VII, p. 685.

28. TM, p. 239.
29. IHQ, VII, p. 685.
30. HCIP, V, pp. 35-47.
31. NB, pp. 164,65.
32. JBBRAS, XI, p. 268.
33. EI, XV, p. 315.
34. MB, p. 212.
35. EI, I, p. 305.
36. HCIP, V, p. 37.
37. DHNI, I, p. 360.
38. Ibid., I, p. 330.
39. MTV, pp. 100-101.
40. Ibid., pp. 98, 101.
41. ABORI, XXXV, p. 95.
42. HCIP, V, p. 37.
43. HAIB, p. 473.
44. ABORI, XXXV, p. 95.
45. *Ballalacharita* (Edited by H.P.Sastri), A.S.B. Calcutta 1964, p. 16.
46. MB, p. 216.
47. MB, p. 241.
48. Ibid, p. 216. How a reputed historian of his eminence has contradicated himself is evident from the above two quotations.
49. JDL, XVI, p. 72.
50. IHQ, XXX, p. 209.
51. JBORS, XXV, p. 133.
52. IHQ, XXX, p. 210.
53. *Bhagalpur Gazetteer*, p. 40.
54. EI, XV, pp. 278, 286.
55. Ibid.
56. JBORS, X, pp. 44, 46.
57. PB, p. 103.
58. JBORS, IX, pp. 309-10.
59. EI, XXVII, p. 142.
60. JASB, (L) XVII, p. 29.
61. EI, XXVII, p. 142.
62. IHQ, III, p. 567.
63. HCIP, V, p. 53.
64. EI, VII, p. 85, 93; DHNI, II, p. 747.
65. EI, VII, p. 93 ff.
66. JNSI, X, p. 72, 74.

67. R.K. Choudhary: *History of Bihar*. p. 101. ff.
68. T.K. pp. 299-322. The question of Malladeva serving under Jayachanda does not stand historically verified. R.S. Tripathi has taken all evidence into consideration but he does not attach any importance to this story.
69. Levi, II. p. 205-19. IHQ. VII. p. 689. DHNI. I. p. 206.
70. JBBRAS. XI. p. 268. IHQ. VII. p. 683.
71. IHQ. VII. p. 682, XXX pp. 208-209 QJMS. XLV. I. ff. T.M. p. 233 ff.
72. ABORI. XXXV. p. 93 ff.
73. D.W. Wright : *History of Nepal*. p. 167.
74. Luciano Petech. *Medieval History of Nepal*. p. 53. ff.
75. H.P. Sasthri : *Nepal Catalogue*. pp. 1-54.
76. Petech. p. 54.
77. Levi. II. p. 199 ff. DHNI. I. pp. 203-204.
78. ABORI. (Silver Jubilee Volume) 1942, p. 299. Cf. Pratapmalla Inscription.
80. D.R.Regmi : *Medieval Nepal*.
81. Levi. II. pp. 212-13.
82. Petech. pp. 52, 81.
83. PIHC. X. pp. 250-52.
84. ABORI. XXXV. p. 98.
85. HCIP. V. p. 47.
86. TM. p. 251 : According to some scholars the assumption of the imperial title by Sivadeva in 1120 A.D. shows that Nanyadeva was killed before that date Cf. JASB. 1921 p. 4. The assumption is completely vague and wrong.
87. D.R.Regmi : *Ancient and Medieval Nepal*. (Ist Edn.) p. 145. D.R.Regmi has since changed his views and he now does not accept the theory of Karnata dominations over Nepal. Vide *Medieval Nepal*. part. I.
88. JIH; XXXXVI. pp. 123-125.
89. MTV. 97. Cf. MD. TM, BMI, for traditional stories current about Nanyadeva.
90. JBORS. IX. p. 303 Cf. R.K. Choudhury : *Inscriptions of Bihar*, *G.D.C. Bulletin* No. 4.
91. JAHRS. I. p. 57.

❑❑

## ೨೧

# ನಾನ್ಯದೇವನ ಉತ್ತರಾಧಿಕಾರಿಗಳು

## ಮಲ್ಲದೇವ

ನಾನ್ಯದೇವನಿಗೆ ಮಲ್ಲದೇವ ಮತ್ತು ಗಂಗದೇವ ಎಂಬಿಬ್ಬರು ಪುತ್ರರಿದ್ದರು. ವಿದ್ವಾಂಸರು ಮಲ್ಲದೇವನನ್ನು ಮಿಥಿಲೆಯ ಮರೆತುಹೋದ ಅರಸನೆಂದು ಪರಿಗಣಿಸುತ್ತಾರೆ.[1] ಮಲ್ಲದೇವನ ಬಗೆಗೆ *ಪುರುಷಪರೀಕ್ಷ*ದಲ್ಲಿರುವ ಪ್ರಮಾಣದ ಹಿನ್ನೆಲೆಯಲ್ಲಿ, ನಾನ್ಯದೇವನ ನಂತರ ಅಧಿಕಾರಾರೋಹಣದ ಬಗೆಗೆ ಸಹಜವಾಗಿಯೆ ಸಂದೇಹಗಳು ಎದ್ದಿವೆ. ಮಲ್ಲದೇವನನ್ನು ಅಗ್ರಪಟ್ಟಾಧಿಕಾರಿಯೆಂದು ಬಣ್ಣಿಸಲಾಗಿದ್ದರೂ ಮಿಥಿಲೆಯ ಪಾರಂಪರಿಕ ಕಾಲಾನುಕ್ರಮಣ ಸೂಚಿಯಲ್ಲಿ ಮತ್ತು ನೇಪಾಳ ವಂಶಾವಳಿಯಲ್ಲಿ ನಾನ್ಯದೇವನ ನಂತರ ಗಂಗದೇವನು ಬರುತ್ತಾನೆ. ಪಟ್ಟಾಧಿಕಾರಕ್ಕಾಗಿ ಹೋರಾಟ ನಡೆಯಿತೊ ಇಲ್ಲವೊ ಎಂಬುದನ್ನು ಹೇಳುವ ಸ್ಥಿತಿಯಲ್ಲಿ ನಾವಿಲ್ಲ. ಆದರೆ; ಭೀತಭಗವಾನಪುರ ಶಾಸನವು ಮಲ್ಲದೇವನ ಬಗೆಗೆ ಯುಕ್ತ ಪ್ರಶ್ನೆಯನ್ನು ಎತ್ತುತ್ತದೆ. ಆದುದರಿಂದ, ಅದನ್ನು ನಾವು

ಗಮನಿಸಬೇಕಾಗುತ್ತದೆ. "ಓಂ ಶ್ರೀ ಮಲ್ಲದೇವಸ್ಯ" ಎಂದು ಇರುವ ಭೀತಭಗವಾನಪುರ ಶಾಸನದ ಹಿನ್ನೆಲೆಯಲ್ಲಿ, ಭೀತಭಗವಾನಪುರವು ಮಲ್ಲದೇವನ ರಾಜಧಾನಿಯಾಗಿತ್ತೆಂದು ತೀರ್ಮಾನಿಸಬಹುದು. ತಿರಹತ್‌ನ ಗಂಧವಾರಿಯಾ ರಾಜಪುತರು ತಾವು ಮಲ್ಲದೇವನ ವಂಶಜರೆಂದು ಗುರುತಿಸಿಕೊಳ್ಳುತ್ತಾರೆ. ಭೀತಭಗವಾನಪುರದ ಇಂದಿಗೂ ಉತ್ಖನನಗೊಳ್ಳದ ಮತ್ತು ವಸ್ತುತಃ ಗಮನಕ್ಕೆ ಬಾರದಿರುವ ಭಗ್ನಾವಶೇಷಗಳು ಕೂಡ ಕಪ್ಪುಶಿಲೆಯ ಕರ್ನಾಟ ಶೈಲಿಯಲ್ಲಿದ್ದು ಕ್ರಿ.ಶ. ೧೨ನೆಯ ಶತಮಾನದ ವಾಸ್ತುಶೈಲಿಯೊಂದಿಗೆ ಗಮನಾರ್ಹ ಸಾಮ್ಯ ಹೊಂದಿವೆ. ಆ ಶಾಸನವು ಸಹ ಅದೇ ಶತಮಾನದ ಲಿಪಿಯನ್ನು ಹೋಲುತ್ತದೆ. ವಿದ್ಯಾಪತಿಯ ಪ್ರಕಾರ, ಮಲ್ಲದೇವನು ವೀರ ಯೋಧನಾಗಿದ್ದನು.[2] ಅವನನ್ನು "ಪ್ರತಿಮಲ್ಲ"ನೆಂದೂ ಕರೆಯಲಾಗುತ್ತಿತ್ತು. ಪುರುಷಪರೀಕ್ಷದನ್ವಯ ಅವನು ನಾನ್ಯದೇವನ ಅಗ್ರಪಟ್ಟಾಧಿಕಾರಿಯಾಗಿದ್ದನು.

ಅವನನ್ನು ವೀರ ಯೋಧನೆಂದು ಕರೆಯುತ್ತ ವಿದ್ಯಾಪತಿಯು ಅವನ ಸ್ವತಂತ್ರ ಸ್ವಭಾವವನ್ನೂ ಕೊಂಡಾಡುತ್ತಾನೆ.[3] ಮಲ್ಲದೇವನು ಸ್ವತಂತ್ರ ಪ್ರವೃತ್ತಿಯವನಾಗಿದ್ದುದರಿಂದಲೆ ತನ್ನ ರಾಜ್ಯವನ್ನು ತೊರೆದು ಬೇರೆಡೆ ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಂಡ. ನಾನ್ಯದೇವನ ಮರಣಾನಂತರ ಅವನು ಮಿಥಿಲೆಯ ಅರಸನಾದಂತೆ ತೋರುತ್ತದೆ. ಘಟನೆಗಳು ಹಾಗೆಂದು ರುಜುಪಡಿಸುತ್ತವೆ. ಮಲ್ಲದೇವನು ಕನೌಜದ ಅರಸ ಜಯಚಂದನ ಆಸ್ಥಾನಕ್ಕೆ ಸ್ಥಳಾಂತರಗೊಂಡನೆಂದು ಹೇಳಲಾಗಿದೆ. ಆದರೆ ಜಯಚಂದನ ಜಗಳಗಂಟಿ ಸ್ವಭಾವದಿಂದಾಗಿ ಮಲ್ಲದೇವನಿಗೆ ಅಲ್ಲಿ ದೀರ್ಘಕಾಲ ಇರಲಾಗಲಿಲ್ಲ. ಗಹಡವಾಲರೊಂದಿಗೆ ಜಗಳ ಕಾಯ್ದುದ್ದರಿಂದ ಅವನು ಜಯಚಂದನ ಆಸ್ಥಾನವನ್ನು ಶಾಶ್ವತವಾಗಿ ತೊರೆಯಬೇಕಾಯಿತು. ಜಯಚಂದನು ಮಲ್ಲದೇವನನ್ನು "ಕರ್ನಾಟ ಕುಲದ ಶ್ರೇಷ್ಠತಮ ಪುತ್ರ" ಎಂದು ಕರೆಯುತ್ತಿದ್ದನು. ಮಲ್ಲದೇವನು ಕನೌಜ ತೊರೆದು ಪಿಥಿಯ ಚಿಕ್ಕೋರ ಅರಸನಲ್ಲಿಗೆ ನಡೆದನು.[4] ಚಿಕ್ಕೋರರು ಈಶಾನ್ಯ ಭಾರತದ ಇತಿಹಾಸದಲ್ಲಿ ಮಹತ್ವದ ಪಾತ್ರವಾಡಿದವರು. ಪಿಥಿ ಸ್ವತಂತ್ರ ರಾಜ್ಯವಾಗಿತ್ತು.[5] ಗಹಡವಾಲರು ಮತ್ತು ಚಿಕ್ಕೋರರ ಮಧ್ಯೆ ಸುಮಧುರ ಸಂಬಂಧವಿತ್ತು. ಚಿಕ್ಕೋರ ರಾಜಕುವರಿ ಕುಮಾರದೇವಿಯನ್ನು ಗೋವಿಂದಚಂದ ಗಹಡವಾಲನಿಗೆ ಮದುವೆ ಮಾಡಿಕೊಟ್ಟರು. ವಿದ್ಯಾಪತಿಯ ಅಭಿಪ್ರಾಯದಂತೆ, ಚಿಕ್ಕೋರರು ಕಾಶಿಯ ಜಯಚಂದನಂಥ ಬಲಾಢ್ಯ ಅರಸನೊಂದಿಗೆ ಬಲಪರೀಕ್ಷೆ ಮಾಡುವ ಸ್ಥಿತಿಯಲ್ಲಿರಲಿಲ್ಲ. ಮಲ್ಲದೇವನು ಗಹಡವಾಲರ ಮೇಲೆ ಸಿಟ್ಟಿಗೆದ್ದುದರಿಂದಲೆ ಚಿಕ್ಕೋರರು ಮತ್ತು ಗಹಡವಾಲರ ಮಧ್ಯೆ ಯುದ್ಧ ಜರುಗುವಂತಾಯಿತು.

ನಾನ್ಯದೇವ ಎಂಬವನ ಪುತ್ರರು ನೇಪಾಳವನ್ನು ಆಳಿದರೆಂದು ಐತಿಹ್ಯಗಳು ದೃಢವಾಗಿ ಹೇಳುತ್ತವೆ.[6] ಮಿಥಿಲೆಯನ್ನು ಗಂಗದೇವನು, ನೇಪಾಳವನ್ನು ಇನ್ನೊಬ್ಬ ಮಗ ಮಲ್ಲದೇವನು ಆಳಿರುವ ಸಾಧ್ಯತೆ ಬಹಳವಿದೆ. ನರಸಿಂಹದೇವನು ತನ್ನ ಸಂಬಂಧಿಗಳೊಂದಿಗೆ ಬೆಳೆಸಿದ ಮನಸ್ತಾಪದಿಂದಾಗಿ ಮಿಥಿಲಾ ಮತ್ತು ನೇಪಾಳ ಬೇರ್ಪಟ್ಟವು. ನಾನ್ಯದೇವನ ರಾಜ್ಯದ ಈ

ಇಬ್ಭಾಗವನ್ನು ತಳ್ಳಿಹಾಕಲಾಗದು ಅಥವಾ ತಿರಸ್ಕರಿಸಲಾಗದು. ಗಂಗದೇವನು ಮಿಥಿಲೆಯ ನಿರ್ದಿಷ್ಟ ಭಾಗವೊಂದನ್ನು ಆಳುತ್ತ ಅಲ್ಲಿಂದ ಬಂಗಾಲದ ವರೆಗೆ ತನ್ನ ಪ್ರಭುತ್ವವನ್ನು ವಿಸ್ತರಿಸಿಕೊಂಡನು ಮತ್ತು ಮಲ್ಲದೇವನು ಮಿಥಿಲೆಯ ಈಶಾನ್ಯ ಭಾಗವನ್ನು ಹಾಗೂ ನೇಪಾಳದ ತರೈನ್ ಪ್ರದೇಶವನ್ನು ಆಳುತ್ತಿದ್ದನೆಂಬುದು ಬಹು ಸಂಭವನೀಯವಾಗಿದೆ. ಮಲ್ಲದೇವನು ಭೀತಭಗವಾನಪುರವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡನು. ಗಂಗದೇವ ಮಲ್ಲದೇವರಿಗೆ ಸರಿಯಾಗಿ ಕೂಡಿಬರಲಿಲ್ಲ.[7] ಮಲ್ಲದೇವನು ವರ್ಧಮಾನ ಉಪಾಧ್ಯಾಯನೆಂಬವನಿಗೆ ಆಶ್ರಯವಿತ್ತಿದ್ದ, ಸ್ಮೃತಿಗಳ ಮೇಲೆ ಪ್ರಖ್ಯಾತ ಲೇಖಕನಾಗಿದ್ದ, ಕ್ರಿ.ಶ. ೧೧೫೦ ಮತ್ತು ೧೩೫೦ರ ಮಧ್ಯೆ[8] ಉತ್ಕರ್ಷಕ್ಕೆ ಬಂದನೆಂದು ಹೇಳಲಾಗಿರುವ, ವರ್ಧಮಾನನು ತನ್ನ ಬರವಣಿಗೆಗಳಲ್ಲಿ ''ಕರ್ನಾಟ ಲಲಾಟ''ನೊಬ್ಬನನ್ನು ಉಲ್ಲೇಖಿಸಿರುವನು. ಮಲ್ಲದೇವನ ಹೆಸರನ್ನು ಇನ್ನೂ ಸಂಸ್ಮರಿಸುತ್ತಿರುವ ಹಳ್ಳಿಗಳ ಕೆಲವು ಹೆಸರುಗಳನ್ನು ಐತಿಹ್ಯಗಳು ದೃಢಪಡಿಸುತ್ತವೆ. ಪೂರ್ಣಿಯಾ ಮತ್ತು ಸಹರ್ಷ ಜಿಲ್ಲೆಗಳ ಗಡಿಯಲ್ಲಿರುವ ಮಲ್ಹಿಹ ಗ್ರಾಮ ಮತ್ತು ಸುಪೌಲ ಉಪವಿಭಾಗದಲ್ಲಿರುವ ಮಲ್ಹಾಡ ಗ್ರಾಮ ಮಲ್ಲದೇವನು ಸ್ಥಾಪಿಸಿದವುಗಳೆಂದು ಹೇಳಲಾಗಿದೆ. ಈ ಶತಮಾನದ ಮೂವತ್ತರ ಮತ್ತು ನಲವತ್ತರ ದಶಕಗಳಲ್ಲಿ ಸಂಭವಿಸಿದ ಕೋಸಿ ನೆರೆಹಾವಳಿಗಳು ಈ ಗ್ರಾಮಗಳ ಅನೇಕ ಅವಶೇಷಗಳನ್ನು ಕೊಚ್ಚಿಹಾಕಿದವು. ಈಗಿನ ತಿಳಿವಿನ ಸ್ಥಿತಿಯಲ್ಲಿ ಏಕೈಕ ಶಾಸನದ ಆಧಾರದಿಂದ ನಿಶ್ಚಿತವಾಗಿ ಏನನ್ನೂ ಹೇಳಲಾಗದು.[9] ಭವಿಷ್ಯತ್ತಿನಲ್ಲಿ ಹೆಚ್ಚಿನ ಪ್ರಾಕ್ತನ ಉತ್ಖನನಗಳು ಮಲ್ಲದೇವನು ಮಿಥಿಲೆಯ ಅರಸನಾಗಿದ್ದುದರ ಅಧಿಕೃತತೆಯ ಬಗೆಗೆ ಸ್ವಾಗತಾರ್ಹ ಬೆಳಕು ಚೆಲ್ಲಬಹುದು.

'ಮಲ್ಲದೇವನು ನಿಜಕ್ಕೂ ಮಿಥಿಲೆಯನ್ನು ಆಳಿದನೆ?' ಎಂಬ ಪ್ರಶ್ನೆಯು ಸಮಂಜಸ ಊಹೆಗೆ ಇನ್ನೂ ತೆರೆದುಕೊಂಡಿದೆ. ಕೆ.ಆರ್.ಕಾನುಂಗೊ[10] ಅವರು ನಾನ್ಯದೇವನ ತರುವಾಯ ಅರಿಮಲ್ಲದೇವ ಎಂಬವನೊಬ್ಬ ಮಿಥಿಲೆಯ ಅರಸನಾಗಿದ್ದನೆಂದು ಹೇಳಿ ಇನ್ನಷ್ಟು ಗೊಂದಲ ಸೃಷ್ಟಿಸಿರುವರು. ಅದು ಹಾಗಿರಲಿ, ಮಲ್ಲದೇವನ ಆಳ್ವಿಕೆಯ ಕಾಲಾವಧಿಯನ್ನು ತೋರಿಸಲು ಸ್ಪಷ್ಟ ಪ್ರಮಾಣವಿಲ್ಲ. ಅರಿಮಲ್ಲದೇವನು ನೇಪಾಳದ ಅರಸನಾಗಿದ್ದನಲ್ಲದೆ ಮಿಥಿಲೆಯ ಅರಸನಾಗಿರಲಿಲ್ಲ. ಅವನು ಕರ್ನಾಟ ವಂಶದವನಾಗಿರಲಿಲ್ಲ ಮತ್ತು ತಿರಹತ್‌ನ ಯಾವುದೆ ಭಾಗದ ಮೇಲೆ ಅವನ ಅಧಿಕಾರವಿರಲಿಲ್ಲ. ಅಷ್ಟೆ ಅಲ್ಲದೆ, ಕಲ್ಪನೆಯನ್ನು ಎಷ್ಟು ಹರಿಬಿಟ್ಟರೂ ನಾವು ಅರಿಮಲ್ಲದೇವನನ್ನು ನಾನ್ಯದೇವನ ಮಗನಾದ ಮಿಥಿಲೆಯ ಮಲ್ಲದೇವನೊಂದಿಗೆ ಗುರುತಿಸಲಾಗದು. ಮಲ್ಲದೇವನ ಐತಿಹಾಸಿಕತೆ ಅಸ್ಪಷ್ಟತೆಯಲ್ಲಿ ಹುದುಗಿದೆ. ಮತ್ತು ಭೀತಭಗವಾನಪುರದ ಅವಶೇಷಗಳ ಬಗೆಗಿನ ಸತ್ಯವನ್ನು ಇನ್ನೂ ವಿಶದೀಕರಿಸಬೇಕಿದೆ. ಹೆಚ್ಚಿನ ಪ್ರಮಾಣ ಲಭ್ಯವಾಗುವವರೆಗೆ ಮಲ್ಲದೇವನ ಬಗೆಗೆ ಯಾವುದೇ ಊಹೆ ಮಾಡುವುದು ತರವಲ್ಲ. ಜನಪ್ರಿಯ ನಂಬಿಕೆಯಂತೆ, ಮಲ್ಲದೇವನು ನಾನ್ಯದೇವನ ನಂತರ ಮಿಥಿಲೆಯ ಒಂದು ಭಾಗವನ್ನು ಆಳಿದನು.

## ಗಂಗದೇವ (ಕ್ರಿ.ಶ. ೧೧೪೭ - ೧೧೮೮)

ರಾಮಾಯಣದ ಹಸ್ತಪ್ರತಿಯೊಂದರ ಅಂತ್ಯಪ್ರಶಸ್ತಿಯು ತಿರಭುಕ್ತಿಯ ಗಂಗೆಯದೇವನನ್ನು ಉಲ್ಲೇಖಿಸುತ್ತದೆ. ಆದರೆ, ಅದು ಬೆಳಕಿಗೆ ಬಂದಾಗಿನಿಂದ ಅವನಾರು ಎಂಬ ಬಗೆಗೆ ಸಾಕಷ್ಟು ಚರ್ಚೆಯಾಗಿದೆ. ಬೆಂಡಾಲ್, ಲೆವಿ, ಆರ್.ಪಿ.ಚಂದಾ, ಕೆ.ಪಿ.ಜಯಸ್ವಾಲ, ವಿ.ವಿ.ಮಿರಾಶಿ, ಆರ್.ಸಿ.ಮಜುಮದಾರ, ಆರ್.ಕೆ.ಚೌಧರಿ ಮತ್ತಿತರರು ಆ ಹಸ್ತಪ್ರತಿಯ ಸತ್ಯಾಸತ್ಯತೆಯ ಬಗೆಗೆ ಚರ್ಚಿಸಿರುವರು ಮತ್ತು ಗಂಗೆಯದೇವನು ಮಿಥಿಲೆಯ ಗಂಗದೇವನೇ ಎಂಬ ತೀರ್ಮಾನಕ್ಕೆ ಬಹುತೇಕ ವಿದ್ವಾಂಸರು ಬಂದಿದ್ದಾರೆ. *ಗರುಡಧ್ವಜ* (ಪ್ರಥಮ ಹಸ್ತಪ್ರತಿ) ಮತ್ತು *ಗೌಡಧ್ವಜ* (ಎರಡನೆಯ ಹಸ್ತಪ್ರತಿ)ಗಳನ್ನು ಗುರುತಿಸುವ ಸುತ್ತ ಚರ್ಚೆ ಕೇಂದ್ರೀಕೃತವಾಗಿದೆ. ಸಮಸ್ಯೆ ಕುರಿತಂತೆ ಎರಡು ಪರ್ಯಾಲೋಚಿತ ವಿಚಾರಧಾರೆಗಳಿವೆ: ೧. ವಿ.ವಿ.ಮಿರಾಶಿ ಮತ್ತಿತರರು ಗಂಗೆಯದೇವನನ್ನು ಕಲಚೂರಿ ಅರಸನೆಂದು ಗುರುತಿಸುತ್ತಾರೆ; ಮತ್ತು ೨. ಆರ್.ಸಿ.ಮಜುಮದಾರ ಮತ್ತು ಆರ್.ಕೆ.ಚೌಧರಿ[11] ಗಂಗೆಯದೇವನನ್ನು ಮಿಥಿಲೆಯ ಗಂಗದೇವನೆಂದು ಗುರುತಿಸುತ್ತಾರೆ. ನಾನು ಎರಡನೆಯ ವಾದವನ್ನು ಅನುಸರಿಸಿ ಗಂಗೆಯದೇವನು ಮಿಥಿಲೆಯ ನಾನ್ಯದೇವನ ಮಗನೆಂಬ ಸಂಗತಿಯನ್ನು ಸ್ವೀಕರಿಸಿರುವೆನು. ಗಂಗದೇವನು ಬಲಾಢ್ಯ ಅರಸನಾಗಿದ್ದುದನ್ನು ಘಟನೆಗಳು ದೃಢಪಡಿಸುತ್ತವೆ. ಅಂತಾಗಿಯೂ ಮರುಮೌಲ್ಯಮಾಪನ ಅಗತ್ಯವೆಂದು ತೋರುತ್ತದೆ

ನೇಪಾಳದ ಪ್ರತಾಪಮಲ್ಲ ಶಾಸನವು ಗಂಗದೇವನು ಕ್ರಿ.ಶ. ೧೧೪೭ ರಲ್ಲಿ ನಾನ್ಯದೇವನ ತರುವಾಯ ಪಟ್ಟವೇರಿದನೆಂದು ತೋರಿಸುತ್ತದೆ. ಗಂಗದೇವನು ಬಹಳ ಶೂರ ಅರಸನೆಂದು ಪರಿಗಣಿಸಲಾಗಿದೆ. ಪಾಲರು ಮತ್ತು ಸೇನರ ಮೇಲೆ ಅವನು ಸೇಡು ತೀರಿಸಿಕೊಂಡನೆಂದೂ ಹೇಳಲಾಗಿದೆ. ಅವನು ಮದನಪಾಲನ ಸಮಕಾಲೀನನಾಗಿದ್ದನು ಮತ್ತು ಅವನ ರಾಜ್ಯದ ಮೇಲೆ ಯಶಸ್ವಿ ದಾಳಿ ಮಾಡಿದನು.[12] ಪಾಲ ರಾಜ್ಯ ಕುಸಿದಿದ್ದು ಆಂತರಿಕ ಒಡಕುಗಳು ಮತ್ತು ಬಾಹ್ಯ ಆಕ್ರಮಣಗಳಿಂದಾಗಿ. ಮದನಪಾಲನ ಆಳ್ವಿಕೆಯ ಎಂಟನೆಯ ವರ್ಷದವರೆಗೆ ಉತ್ತರ ಬಂಗಾಲದ ಏನಿಲ್ಲೆಂದರೂ ಗಣನೀಯ ಭಾಗವು ಗಂಗದೇವನ ಅಧೀನದಲ್ಲಿತ್ತೆಂದು ಮನಹಾಲಿ ತಾಮ್ರಪಟದಿಂದ ಅರ್ಥೈಸಬಹುದು. ಅವನು ತನ್ನ ಆಳ್ವಿಕೆಯ ಹದಿನಾಲ್ಕನೆಯ ವರ್ಷದಲ್ಲಿ ಮೊಂಘಿರ ಜಿಲ್ಲೆಯ ದಕ್ಷಿಣ ಭಾಗವನ್ನು ಆಳುತ್ತಿದ್ದನೆಂದು ಜಯನಗರ ಶಾಸನದಿಂದ ವಿದಿತವಾಗುತ್ತದೆ. ಮತ್ತು ಈ ದೃಢ ಹೇಳಿಕೆಗೆ ಮದನಪಾಲನ ವಾಲ್ಗುದರ ಶಾಸನವು ಹೆಚ್ಚಿನ ಸಮರ್ಥನೆ ಒದಗಿಸುತ್ತದೆ. ಮದನಪಾಲನು ಕ್ರಿ.ಶ. ೧೧೬೧ರ ವರೆಗೆ ಆಳಿದನೆಂದು ಈ ಶಾಸನವು ತೋರಿಸುತ್ತದೆ. ಸಂಧ್ಯಾಕರ ನಂದಿಯ ರಾಮಚರಿತವು (IV, 27) ಮಿಥಿಲೆಯ ಕರ್ನಾಟರು ಗೌಡ ಪ್ರದೇಶದ ಮೇಲೆ ದಾಳಿಯಿಟ್ಟಿದ್ದುದನ್ನು ಉಲ್ಲೇಖಿಸುತ್ತದೆ. ವಂಗ ಮತ್ತು ಗೌಡರ ಶಕ್ತಿಯನ್ನು ಮುರಿದುದಾಗಿ ನಾನ್ಯದೇವನು ಹೇಳಿಕೊಂಡಿರುವನು ಮತ್ತು ಗಂಗದೇವನು ಕೂಡ ಗೌಡ ಪ್ರದೇಶದಲ್ಲಿ ಸ್ವಲ್ಪ ಅಧಿಕಾರ ಹೊಂದಿದ್ದುದಾಗಿ ಹೇಳಿಕೊಂಡಿದ್ದಾನೆ.

ಗಂಗದೇವನು ನಿಶ್ಚಿತವಾಗಿಯೂ ಮದನಪಾಲನ ಸಮಕಾಲೀನನಾಗಿದ್ದನು ಮತ್ತು ಉತ್ತರ ಬಂಗಾಲದಲ್ಲಿ ಅವನ ರಾಜ್ಯದ ಮೇಲೆ ಯಶಸ್ವಿಯಾಗಿ ಆಕ್ರಮಣ ಮಾಡಿದನು. ರಾಮಾಯಣ ಹಸ್ತಪ್ರತಿಯ ಅಂತ್ಯಪ್ರಶಸ್ತಿಯಲ್ಲಿ ಗಂಗದೇವನನ್ನು ಗೌಡಧ್ವಜನೆಂದು ಸರಿಯಾಗಿಯೆ ಸಂಬೋಧಿಸಲಾಗಿದೆ. ಮದನಪಾಲನ ಮರಣಾನಂತರ ಪಾಲ ಅರಸರು ಪಶ್ಚಿಮ, ಪೂರ್ವ ಮತ್ತು ದಕ್ಷಿಣ ಬಂಗಾಲದಲ್ಲಿ ಯಾವುದೆ ಪ್ರಭುತ್ವ ಹೊಂದಿರಲಿಲ್ಲ. ಸೇನ ವಂಶದ ಬಲ್ಲಾಳಸೇನನು ಗಂಗದೇವನ ಸಮಕಾಲೀನನಾಗಿದ್ದನು. ಬಲಾಢ್ಯ ಬಲ್ಲಾಳಸೇನನ ಆಳ್ವಿಕೆಯಲ್ಲಿ ಸೇನ ರಾಜ್ಯದ ಯಾವ ಪ್ರಾಂತವನ್ನೂ ಬೇರಾವ ಅರಸನೂ ಗೆದ್ದುಕೊಳ್ಳಲಿಲ್ಲವೆಂಬ ಸಾಮಾನ್ಯ ನಂಬಿಕೆಯಿದೆ. *ಬಲ್ಲಾಳಚರಿತ* ಒಂದನ್ನು ಬಿಟ್ಟು ಬೇರೆ ಬೇರೆ ಆಕರಗಳ ಪ್ರಮಾಣದಿಂದ, ತನ್ನದೇ ಆಳ್ವಿಕೆಯಲ್ಲಿ ಬಲ್ಲಾಳಸೇನನು ಮಿಥಿಲೆಯ ಮೇಲೆ ಯಾವುದೆ ಸ್ವತಂತ್ರ ದಾಳಿ ನಡೆಸಲಿಲ್ಲವೆಂದು ತಿಳಿದುಬರುತ್ತದೆ. ಬಲ್ಲಾಳಸೇನ ಮತ್ತು ಗಂಗದೇವರು ಘರ್ಷಣೆಗಿಳಿದುದನ್ನು ಸಿದ್ಧಪಡಿಸುವ ಖಚಿತ ಪುರಾವೆ ಇಲ್ಲ. ಮಧಿಪುರ ಉಪವಲಯದಲ್ಲಿರುವ ಗಂಗಪುರ ರಜನಿ ಗ್ರಾಮವು ಗಂಗದೇವನು ಈ ಪ್ರದೇಶದಲ್ಲಿ ನಿಶ್ಚಿತವಾಗಿಯೂ ಆಳಿದುದರ ಕುರುಹಾಗಿ ಇನ್ನೂ ಇದೆ. ತನ್ನ ತಂದೆ ನಾನ್ಯದೇವನ ಕಾಲದಲ್ಲೂ ಗಂಗದೇವನು ಸೇನರನ್ನು ಸೋಲಿಸಿ ಪಶ್ಚಿಮಕ್ಕೆ ತಳ್ಳಿದನೆಂದು ಹೇಳಲಾಗಿದೆ.

ಮಿಥಿಲೆಯ ಮೇಲೆ ಸೇನರ ಪ್ರಭುತ್ವವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅದು ಮೊರಂಗಾ ಪ್ರದೇಶದವರೆಗೆ ಸೀಮಿತವಾಗಿತ್ತೆಂದು ದೃಢವಾಗಿ ಹೇಳಬಹುದು. ಸೇನ ಸಾಹಿತ್ಯಿಕ ದಾಖಲೆಗಳಲ್ಲಿ ಬರುವ ಮಿಥಿಲೆ ಎಂದರೆ ಮೊರಂಗಾ ಮಾತ್ರ, ಬೇರೇನೂ ಅಲ್ಲ. 'ಪಂಚ ಗೌಡ'ದ ಪರಿಕಲ್ಪನೆ ಪಾರಂಪರಿಕವಾದುದಾಗಿದ್ದು ಬಂಗಾಲದ ಎಲ್ಲ ಆಳರಸರೂ ತಮ್ಮ ಪ್ರತಿಷ್ಠೆಯನ್ನು ಬಾಹ್ಯದಲ್ಲಿ ಪ್ರದರ್ಶಿಸಲೋಸುಗ ಈ ಬಿರುದುಗಳಿಂದ ತಮ್ಮನ್ನು ಅಲಂಕರಿಸಿ ಕೊಳ್ಳುವುದನ್ನು ಮುಂದುವರಿಸಿದರು. ಸಾಹಿತ್ಯಿಕ ಪ್ರಮಾಣವು ನಂತರದ ಕಾಲದ್ದಿದ್ದು ಅದನ್ನು ಏಕೈಕ ಅಧಿಕೃತ ಮತ್ತು ಐತಿಹಾಸಿಕ ಪ್ರಮಾಣವೆಂದು ಪರಿಗಣಿಸಲಾಗದು. ಶಕ್ತಿರಾಜಕೀಯ ಕ್ಷೇತ್ರದಲ್ಲಿ ಬಲ್ಲಾಳಸೇನನ ದಿಕ್ಕುದೆಸೆಯಿಲ್ಲದ ಸಾಹಸಕ್ಕೆ ಅಂದಿನ ರಾಜಕೀಯ ವಾತಾವರಣ ಅನುಕೂಲಕರವಾಗಿರಲಿಲ್ಲ. ಗೋವಿಂದಚಂದನ ಆಳ್ವಿಕೆಯಲ್ಲಿ ಗಹಡವಾಲರು ಮೊಂಘಿರ ವರೆಗೆ ಮುಂದರಿದಿದ್ದರು. ಮದನಪಾಲನ ನಾಯಕತ್ವದಲ್ಲಿ ಪಾಲರ ಪ್ರಭುತ್ವವು ಮರುಸ್ಥಾಪನೆ ಗೊಂಡಾಕ್ಷಣ ಗಹಡವಾಲರ ಹಿಮ್ಮೆಟ್ಟಿಕೆಯನ್ನು ಮದನಪಾಲನ ವಾಲ್ಗುದರ ಶಾಸನವು ದೃಢಪಡಿಸುತ್ತದೆ. ಪರಿಸ್ಥಿತಿ ಹೀಗಿದ್ದು ಬಲ್ಲಾಳಸೇನನು ಮಿಥಿಲೆಯೊಳಗೆ ತನ್ನ ಸಾಮ್ರಾಜ್ಯ ಶಾಹಿ ವಿಸ್ತರಣೆಯನ್ನು ಕೈಗೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಅದೂ ಅಲ್ಲದೆ, ಸಮಕಾಲೀನ ಅರಸರ ಏರುತ್ತಿದ್ದ ಶಕ್ತಿಯಿಂದಾಗಿ ಬಲ್ಲಾಳಸೇನನು ರಕ್ಷಣಾತ್ಮಕ ಸ್ಥಿತಿಗೆ ತಳ್ಳಲ್ಪಟ್ಟನು.

"ನೇಪಾಳದ ಮೇಲೆ ಗಂಗದೇವನ ಪ್ರಭುತ್ವ ಒಂದು ರೀತಿಯಲ್ಲಿ ಶಿಥಿಲವಾಗಿತ್ತು... ಅವನು ಕಪ್ಪಗಳನ್ನು ಕೀಳುತ್ತಿದ್ದನು... ಮತ್ತು ಆಗಾಗ ಅಲ್ಲಲ್ಲಿಯ ರಾಜಕೀಯ ಚಟುವಟಿಕೆಗಳನ್ನು ಪ್ರಭಾವಿಸಿದನು"[13] ಎಂಬ ಠಾಕೂರರ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಿಲ್ಲ. ಮಲ್ಲದೇವನು ತರೈನ್ ಪ್ರದೇಶವನ್ನು ಮತ್ತು ಗಂಗದೇವನು ತಿರಹತ್ ಅನ್ನು

ಆಳುತ್ತಿದ್ದನೆಂಬುದನ್ನು ನಾವು ಒಪ್ಪಿರುವೆವು. ಗಂಗದೇವನ ಕಾಲದಲ್ಲಿ ಅನಂತದೇವ (ಕ್ರಿ.ಶ. ೧೧೪೬ - ೧೧೬೭), ರುದ್ರದೇವ, ಮಿತ್ರದೇವ (ರೈಟ್), ಅಥವಾ ಅಮಿತದೇವ (ಬೆಂಡಾಲ್) ನೇಪಾಳದ ಸಮಕಾಲೀನ ಅರಸರಾಗಿದ್ದರು. ಆಗ ನೇಪಾಳದ ಪರಿಸ್ಥಿತಿಯು ರಾಜಕೀಯ ವಿಘಟನಾ ಪ್ರಕ್ರಿಯೆಯಲ್ಲಿತ್ತು. ಕ್ರಿ.ಶ. ೧೧೬೨ರ ಪಟ್ಟದಕಲ್ಲ ಶಾಸನವು ಇದನ್ನು ದೃಢೀಕರಿಸುತ್ತ ನೇಪಾಳವು ಚಾಲುಕ್ಯ ಅರಸ ಮುಮ್ಮಡಿ ಸೋಮೇಶ್ವರನ ಮಾಂಡಲಿಕ ರಾಜ್ಯವಾಗಿತ್ತೆಂದು ಹೇಳುತ್ತದೆ. ಕ್ರಿ.ಶ. ೧೨೦೦ರ ಶಾಸನವೊಂದರಲ್ಲಿ ನೇಪಾಳದ ಸ್ಥಿರತೆಯನ್ನು ಕದಡಿದುದಕ್ಕೆ ಕಲಚೂರಿ ಅರಸ ಬಿಜ್ಜಳನನ್ನು ಕೊಂಡಾಡಲಾಗಿದೆ.[14] ನೇಪಾಳ ಸೇನಾಪತಿಗಳನ್ನು ಯಾದವ ಜೈತುಂಗಿಯು ಸೋಲಿಸಿದನೆಂದು ಮಂಗಲ್ವೆ ಶಾಸನವು ಬಿಂಬಿಸುತ್ತದೆ. ಈ ಸಂಗತಿಗಳ ಮತ್ತು ಠಾಕೂರಿ ವಂಶದ ಪುನರ್‌ಸ್ಥಾಪನೆಯನ್ನು ಬಿಂಬಿಸುವ ಐದು ಹಸ್ತಪ್ರತಿಗಳ ಶೋಧದ ಹಿನ್ನೆಲೆಯಲ್ಲಿ, ಕರ್ನಾಟರ ಪ್ರಭುತ್ವವು ಇದ್ದೂ ಇಲ್ಲದಂತಾಗಿತ್ತು ಮತ್ತು ಠಾಕೂರಿಗಳು ತಮ್ಮ ಸ್ವಾತಂತ್ರ್ಯವನ್ನು ಹಿಡಿದುಕೊಂಡಿದ್ದರು ಎಂದು ತೀರ್ಮಾನಿಸಬಹುದು.

ಅದಕ್ಕನುಗುಣವಾಗಿ, ಮಿಥಿಲೆಯಲ್ಲಿ ಸಂಭವಿಸಿದ "ಕರ್ನಾಟವಂಶದ" ವಿಭಜನೆಯು ಗಂಗದೇವನ ಆಳ್ವಿಕೆಯಲ್ಲಿ ನೇಪಾಳವು ತನ್ನ ಸ್ವಾತಂತ್ರ್ಯ ಪಡೆಯುವುದಕ್ಕೆ ಸಹಕಾರಿಯಾಯಿತು. ಹಾಗಾಗಿಯೂ, ಮಲ್ಲದೇವನು ತರೈನ್ ಪ್ರದೇಶದಲ್ಲಿ ನೇಪಾಳದ ಭಾಗವೊಂದರ ಮೇಲೆ ಪ್ರಭುತ್ವ ಸಾಧಿಸುವಲ್ಲಿ ಯಶಸ್ವಿಯಾದನು. ಎಣಿಸಿಕೊಂಡಂತೆ, ತಿರಹತ್‌ನ ಪೂರ್ವಭಾಗಕ್ಕೆ ಹೊಂದಿಕೊಂಡಿದ್ದ ನೇಪಾಳದ ಇಂಥ ಭೂಪ್ರದೇಶವನ್ನು ಮಲ್ಲದೇವನು ಆಳಿದನು. ನಾನ್ಯದೇವನಿಗಿಂತ ಪೂರ್ವದಲ್ಲಿ ಮತ್ತು ಆನಂತರ ನೇಪಾಳದ ಮಲ್ಲರೂ ಸಹ ತಮ್ಮ ಅಧಿಕಾರ ಸ್ಥಾಪಿಸಿಕೊಂಡಿದ್ದರು. ಇಂಥ ರಾಜವಂಶದ ಅಸ್ತಿತ್ವ ಪೂರ್ತಿ ಅಸಂಭವವೇನಲ್ಲ ಎಂದು ಲೆವಿ ಪರಿಗಣಿಸುತ್ತಾರೆ.[15]

ಆಂಧ್ರಥಾರ್ಹಿ ಶಾಸನದಲ್ಲಿ ಗಂಗದೇವನನ್ನೇನೊ ಉಲ್ಲೇಖಿಸಲಾಗಿದೆ. ಆದರೆ, ಅವನ ಆಳ್ವಿಕೆಯ ಕಾಲದ ಬಗೆಗೆ ಕಿಂಚಿತ್ತನ್ನೂ ದೃಢಪಡಿಸುವ ಸಾಮಗ್ರಿ ತೀರ ಕಡಿಮೆ ಇದೆ ಅಥವಾ ಯಾವುದೇ ಖಚಿತ ಸಾಮಗ್ರಿ ಇಲ್ಲವೆಂದರೂ ನಡೆಯುತ್ತದೆ. ಅವನ ಆಳ್ವಿಕೆಯ ಕಾಲಾವಧಿ ಕೂಡ ಅಸ್ಪಷ್ಟತೆಯಲ್ಲಿ ಹುದುಗಿದೆ. ಶ್ರೀಧರದಾಸನು ಗಂಗದೇವನ ಮಂತ್ರಿಯಾಗಿದ್ದನು ಮತ್ತು ಅವನ ಪ್ರಕಾರ, ಗಂಗದೇವನ ಆಳ್ವಿಕೆಯು ಅವನ ತಂದೆಯ ಆಳ್ವಿಕೆಯೊಂದಿಗೆ ಹೋಲಿಸಿದರೆ ಶಾಂತಿಯುತವಾಗಿತ್ತು. ಗಹಡವಾಲರ ಮುನ್ನಡೆಯಿಂದಾಗಿ, ಸೇನರು ವಿಪತ್ಕಾರಿಯಾಗಿರಲಿಲ್ಲ ಮತ್ತು ಮೇಲಾಗಿ, ಮುಸ್ಲಿಮ ದಾಳಿಕಾರರ ಅಪಾಯವೂ ಅವರಿಗಿತ್ತು. ಮೇಲೆ ಹೇಳಿರುವಂತೆ, ಎಲ್ಲ ಸಮಕಾಲೀನ ಶಕ್ತಿಗಳು ಆಂತರಿಕ ಮತ್ತು ಬಾಹ್ಯ ತೊಂದರೆಗಳನ್ನು ಎದುರಿಸುತ್ತಿದ್ದರೆ ಗಂಗದೇವನ ಅಧೀನದಲ್ಲಿ ಮಿಥಿಲೆಯು ತುಲನಾತ್ಮಕವಾಗಿ ಶಾಂತಿ ಹೊಂದಿತ್ತು.

ಗಂಗದೇವನು ತನ್ನ ರಾಜ್ಯದಲ್ಲಿ ಕೆಲವು ಮಹತ್ವದ ಆಡಳಿತ ಸುಧಾರಣೆಗಳನ್ನು ಕೈಕೊಂಡನು. ಈ ಸುಧಾರಣೆಗಳು ಕರ್ನಾಟ ಅಧಿಪತ್ಯವನ್ನು ಬಲಪಡಿಸುವಲ್ಲಿ ಅಪಾರ

ಸಹಾಯ ಒದಗಿಸಿದವು. ಪರಗಣ ಪದ್ಧತಿಯನ್ನು ಅಥವಾ ಕಂದಾಯ ಆಡಳಿತಕ್ಕಾಗಿ ಆರ್ಥಿಕ ವಿಭಾಗಗಳನ್ನು ಜಾರಿಗೆ ತಂದ ಕಲ್ಪನೆ ಅವನದೆಂದು ಹೇಳಲಾಗಿದೆ. ಪ್ರತಿಯೊಂದು ಪರಗಣದಲ್ಲಿ ಕಂದಾಯ ಸಂಗ್ರಹಕ್ಕಾಗಿ ಒಬ್ಬ ಚೌಧರಿ ಅಥವಾ ಮುಖ್ಯಸ್ಥನನ್ನು ನೇಮಿಸ ಲಾಯಿತು. ಎಲ್ಲ ಬಗೆಯ ವ್ಯಾಜ್ಯಗಳನ್ನು ಬಗೆಹರಿಸಲು ಚುನಾವಣಾಧಾರಿತ ಪಂಚಾಯತಿ ವ್ಯವಸ್ಥೆಯನ್ನು ಮಾಡಲಾಯಿತು. ತನ್ನ ಪ್ರಜೆಗಳ ಕಲ್ಯಾಣಕ್ಕಾಗಿ ಅವನು ಕೆರೆಗಳನ್ನು ತೋಡಿಸಿ ದನು ಮತ್ತು ಹಲವಾರು ದೊಡ್ಡ ದೇವಾಲಯಗಳನ್ನು ಕಟ್ಟಿಸಿದನು. ಇವತ್ತು ಅವನ ಹೆಸರು ಹೊತ್ತ ಮೂರು ಕೆರೆಗಳು ಇವೆ. ಅಂಧ್ರಥಾರ್ಹಿಯಲ್ಲಿ ಬೃಹತ್ ಕೋಟೆಯನ್ನು ಕಟ್ಟಿಸಿದವನು ಅವನೇ ಎಂಬ ಪಾರಂಪರಿಕ ನಂಬಿಕೆಯಿದೆ. ಗಂಗದೇವನು ತನ್ನ ರಾಜಧಾನಿಯನ್ನು ದರ್ಭಾಂಗಾಕ್ಕೆ ಸ್ಥಳಾಂತರಿಸಿದನೆಂದು ಮುಲ್ಲಾ ತಖಿಯಾ ಪ್ರಕಟಪಡಿಸುತ್ತಾನೆ. ಸಿಮರಾಂವಗಡವು ಪ್ರಧಾನ ರಾಜಧಾನಿಯಾಗಿ ಮುಂದುವರಿದರೂ ಹಲವಾರು ಪಟ್ಟಣಗಳನ್ನು ತಾತ್ಕಾಲಿಕ ರಾಜಧಾನಿಗಳಾಗಿ ಮಾರ್ಪಡಿಸಲಾಯಿತು. ದರ್ಭಂಗಾ ಅವುಗಳಲ್ಲೊಂದು. ನಾನ್ಯದೇವನು ಗೆದ್ದುಕೊಂಡು ಭದ್ರಪಡಿಸಿದನಾದರೆ ಹೊಸದಾಗಿ ಕಟ್ಟಿದ ರಾಜ್ಯಕ್ಕೆ ಭದ್ರ ನೆಲೆಗಟ್ಟನ್ನು ಒದಗಿಸುವುದು ಗಂಗದೇವನ ಪಾಲಿಗಿತ್ತು.[16] ನಮ್ಮ ಈಗಿನ ತಿಳಿವಿನ ಸ್ಥಿತಿಯಲ್ಲಿ, ತಿರಭುಕ್ತಿಯ ಈ ಗಂಗದೇವನೂ ಗಂಗೆಯದೇವನೂ ಒಬ್ಬನೇ ಆಗಿದ್ದನೆಂದು ನಿಸ್ಸಂದೇಹವಾಗಿ ತೀರ್ಮಾನಿಸಬಹುದು. ಅನೇಕ ಇತಿಹಾಸಕಾರರ ಅಭಿಪ್ರಾಯಗಳು ಇದನ್ನು ದೃಢಪಡಿಸಿವೆ.

**ಟಿಪ್ಪಣಿಗಳು**

1. ABORI XXXV, pp. 98-102.
2. *Purusapariksha* I, p. 3.
3. ABORI XXV, pp. 99-100.
4. PB, p. 86.
5. ABORI XXXV, p. 99.
6. Ibid.
7. MTV III.
8. MTV p. 112. Vardhamana is said to have been serving under Malladeva. The Inscription at Hati is ascribed to him. Cf. R.K.Choudhury. *The Later Karnatas of Mithila.*
9. ABORI XXXV. p. 102.
10. *History of Bengal* II, pp. 22-27. Cf. R.K. Choudhury *Mithila ka Rajanitik Itihasa.*
11. ABORI XXXV, pp. 103-106 T.M., pp. 215-218.
12. MB p. 170.
13. TM p. 257 ff.
14. Inscriptions already referred to earlier.
15. Nepal II.
16. Cf. MTV MD; Mulla Taqia's account.

೬

# ಮಿಥಿಲೆಯ ರಾಜಕೀಯ ಇತಿಹಾಸ

## (೧೧೮೮ - ೧೨೮೫)

### ನರಸಿಂಹದೇವ (ಕ್ರಿ.ಶ. ೧೧೮೮ - ೧೨೨೭)

ಕ್ರಿ.ಶ. ೧೧೮೮ ರಲ್ಲಿ ಗಂಗದೇವನ ಮರಣಾನಂತರ ನರಸಿಂಹದೇವನು ಮಿಥಿಲೆಯ ಸಿಂಹಾಸನವನ್ನು ಏರಿದನು. ರಾಮದತ್ತನ *ದಾನಪದ್ಧತಿ*ಯಲ್ಲಿ ಬರುವ ನರಸಿಂಹದೇವನೇ ಅವನೆಂದು ಗೊಂದಲಕ್ಕೀಡಾಗಿ ಅನೇಕ ವಿದ್ವಾಂಸರು ನರಸಿಂಹ ದೇವನ ಬಗೆಗೆ ತಪ್ಪು ಅಭಿಪ್ರಾಯ ತಳೆದಿರುವರು. ರಾಮದತ್ತನು *ಸುಗತಿಸೋಪಾನ*ದ ಕರ್ತೃವಾದ ಗಣೇಶ್ವರನ ಮಗನಾಗಿದ್ದನು. *ದಾನಪದ್ಧತಿ* ಹಸ್ತಪ್ರತಿಯಲ್ಲಿ ಬರುವ ನರಸಿಂಹದೇವನು ಕರ್ನಾಟ ರಾಜವಂಶದ ಮೂರನೆಯ ಅರಸನಾದ ನರಸಿಂಹನಿಗಿಂತ ಭಿನ್ನನಾಗಿರುವನು. "ಶ್ರೀಮಾನ" ಮತ್ತು "ಕರ್ನಾಟನವ್ಯಭೂಷಣ" ಎಂದು ಸಂಬೋಧಿಸಲಾಗಿರುವ ಹಾಗೂ *ದಾನಪದ್ಧತಿ*ಯಲ್ಲಿ ಉಲ್ಲೇಖಿತನಾದ ನರಸಿಂಹದೇವನು

ಹರಿಸಿಂಹದೇವನ ಪತನಾನಂತರ ಈ ರಾಜವಂಶದ ಸ್ಥಳೀಯ ಅರಸನಾಗಿರಬಹುದಾದುದು ಅತ್ಯಂತ ಸಂಭವನೀಯವಾಗಿದೆ.[1] "ಕರ್ನಾಟನವ್ಯಭೂಷಣ" ಬಿರುದು ಸ್ಪಷ್ಟಪಡಿಸುವಂತೆ, *ದಾನಪದ್ಧತಿ*ಯಲ್ಲಿ ಉಲ್ಲೇಖಿಸಿದ ನರಸಿಂಹದೇವನು ಕರ್ನಾಟ ಮೂಲದವನೆಂದು ನಿಸ್ಸಂದೇಹವಾಗಿ ಸ್ವೀಕೃತವಾಗಿದೆ. ಈ ಸಂಬಂಧದಲ್ಲಿ ಮನಮೋಹನ ಚಕ್ರವರ್ತಿ ಅವರ ಅಭಿಮತಗಳು ಸೂಕ್ತವಾಗಿವೆ. ಹರಿಸಿಂಹದೇವನ ನಿರ್ಗಮನಾನಂತರ ನರಸಿಂಹದೇವನು, ಸರಿಯಾಗಿ ಹೇಳುವುದಾದರೆ, ಇಮ್ಮಡಿ ನರಸಿಂಹದೇವನು ಕರ್ನಾಟ ರಾಜವಂಶದ ಚಿಕ್ಕ ಪ್ರದೇಶವನ್ನು ಹಿಡಿದುಕೊಂಡಿದ್ದನೆಂಬುದು ಅತ್ಯಂತ ಸಂಭವನೀಯವಾಗಿದೆ; ಹಾಗಾಗಿ, ಈ ವಂಶದ ಬಗೆಗೆ ಹೆಚ್ಚಿನ ವಿವಾದ ಅನಗತ್ಯ. ಈ ಅರಸನ ಕಾಲನುಕ್ರಮಣಿಕೆಗೆ ಸಂಬಂಧಿಸಿದಂತೆ ಠಾಕೂರರು ಗೊಂದಲಕ್ಕೀಡಾದಂತಿದೆ. ರಾಮದತ್ತನು ಇಮ್ಮಡಿ ನರಸಿಂಹದೇವನ ಮಂತ್ರಿಯಾಗಿದ್ದುದರಿಂದ ಕರ್ನಾಟ ರಾಜವಂಶದ ಮೂರನೆಯ ಅರಸನಾದ ನರಸಿಂಹದೇವನ ಮಂತ್ರಿಯಾಗಿರಲು ಸಾಧ್ಯವಿಲ್ಲ. ರಾಮದತ್ತನು ಚಾಂದೇಶ್ವರನ ಸಮಕಾಲೀನನಾಗಿದ್ದನು.

ವಿದ್ಯಾಪತಿಯ *ಪುರುಷಪರೀಕ್ಷ*ವು ನರಸಿಂಹದೇವನ ಮೇಲೆ ಸ್ವಲ್ಪ ಬೆಳಕು ಚೆಲ್ಲುತ್ತದೆ. *ಪುರುಷಪರೀಕ್ಷ*ದ ೪ ನೆಯ ಕತೆಯಲ್ಲಿ ವಿದ್ಯಾಪತಿಯು ದಿಲ್ಲಿ ಸುಲ್ತಾನನ ದಾಳಿಯನ್ನು ಉಲ್ಲೇಖಿಸುತ್ತಾನೆ. ವೈರಿಯ ಮೇಲೆ ಮಾಡಿದ ಈ ದಾಳಿಯಲ್ಲಿ ಸುಲ್ತಾನನಿಗೆ ಇಬ್ಬರು ರಾಜಕುಮಾರರು - ಅಂದರೆ ಕರ್ನಾಟ ರಾಜವಂಶದ ನರಸಿಂಹದೇವ ಮತ್ತು ಚಾಚಿಕದೇವ ಚವ್ಹಾಣ - ಸಹಾಯ ಮಾಡಿದರು. ಆ ಸುಲ್ತಾನನು ಮೊಹಮ್ಮದ-ಬಿನ್-ತುಘಲಕನೆಂದು ಗ್ರಿಯರ್ಸನ್ ಒಪ್ಪಿರುವರು. ಆದರೂ ಅದಕ್ಕೆ ವ್ಯತಿರಿಕ್ತವಾಗಿ, ನರಸಿಂಹದೇವನನ್ನು ನಾನ್ಯದೇವನ ಮೊಮ್ಮಗನೆಂದು ಗುರುತಿಸುತ್ತಾರೆ. ಇದು ತಪ್ಪು ವಿಚಾರ. ನಾನ್ಯದೇವನ ಮೊಮ್ಮಗನು ಮೊಹಮ್ಮದ್-ಬಿನ್-ತುಘಲಕನ ಸಮಕಾಲೀನನೆಂತು ಆದಾನು? ಮನಮೋಹನ ಚಕ್ರವರ್ತಿ ಅವರು ಗ್ರಿಯರ್ಸನ್‌ರ ವ್ಯಾಖ್ಯಾನವನ್ನು ಒಪ್ಪಿರುವರು ಮತ್ತು ತರುವಾಯದ ಲೇಖಕರು ಅದೇ ಅಭಿಪ್ರಾಯವನ್ನು ಕಣ್ಮುಚ್ಚಿ ಒಪ್ಪಿರುವರು. ಠಾಕೂರ ಅವರು ವಿಷಯವನ್ನು ಸರಿಯಾಗಿ ವಿಶ್ಲೇಷಿಸಿಲ್ಲ. ಆದುದರಿಂದ, ಅವರ ತೀರ್ಮಾನಗಳು ಸಂದೇಹಾಸ್ಪದವಾಗಿದೆ ಮತ್ತು ಕೆಲವೊಮ್ಮೆ ಒಂದಕ್ಕೊಂದು ವಿರೋಧಾತ್ಮಕ ಸ್ವರೂಪದವುಗಳಾಗಿವೆ. ಮುಸ್ಲಿಮ ವಿಸ್ತರಣೆಯು ಅಲ್ಲಿಯ ಸಮಸ್ಯೆಯ ಮೂಲವಾಗಿರಲಿಲ್ಲ ಎಂದು ತೋರಿಸಿಕೊಡುವ ಮೂಲಕ ಅವರ ಸಂದೇಹ ಮತ್ತು ತೀರ್ಮಾನಗಳನ್ನು ಪರಿಹರಿಸಬಹುದು. ನರಸಿಂಹದೇವನು ದಿಲ್ಲಿ ಸುಲ್ತಾನನಿಗೆ ಸಲ್ಲಿಸಿದ ಸೇವೆಗಳು ದೋಸ್ತಿಯ ಹಾಗೂ ಸದ್ಭಾವನೆಯ ಸಂಕೇತಗಳಾಗಿರಬಹುದೆ ವಿನಹ ದಾಸ್ಯದ ಚಿಹ್ನೆಯಾಗಿರಲಿಲ್ಲ.[3] *ಪುರುಷಪರೀಕ್ಷ*ದಲ್ಲಿ ಬರುವ ಮೊಹಮ್ಮದನನ್ನು ಶಹಾಬುದ್ದೀನ ಮೊಹಮ್ಮದ ಘೋರಿ ಎಂದು ಗುರುತಿಸಬೇಕು. ನರಸಿಂಹದೇವನು ತನ್ನ ಕಕ್ಕ ಮಲ್ಲದೇವನೊಂದಿಗೆ ಕನೌಜಕ್ಕೆ ಹೋಗುತ್ತಿದ್ದನೆಂಬುದಕ್ಕೆ ಮಿಥಿಲಾ ಐತಿಹ್ಯದಲ್ಲಿ ಸಮರ್ಥನೆಯುಂಟು. ಜಯಚಂದನ ಆಳ್ವಿಕೆಯ ಕೊನೆಗೆ ನರಸಿಂಹದೇವನು ದಿಲ್ಲಿಗೆ ತೆರಳಿ ಮೊಹಮ್ಮದ ಘೋರಿ ಪರವಾಗಿ ಕಾದಾಡಿದನೆಂದು ತೋರುವುದು.[4] ನರಸಿಂಹದೇವನು ಶಹಾಬುದ್ದೀನ ಮೊಹಮ್ಮದ ಘೋರಿಯ ಸಮಕಾಲೀನ

ನಾಗಿದ್ದನೆಂದು ಕಾಲಾನುಕ್ರಮಣಿಕೆಯಿಂದ ತೋರ್ಪಡುವುದೆ ಹೊರತು ಗ್ರಿಯರ್ಸನ್ ಮತ್ತು ಮನಮೋಹನ ಚಕ್ರವರ್ತಿ ಸೂಚಿಸಿರುವಂತೆ ಮೊಹಮ್ಮದ್-ಬಿನ್-ತುಘಲಕನ ಸಮಕಾಲೀನನಾಗಿರಲಿಲ್ಲ.[5] ಅದೇ ಸಮಯಕ್ಕೆ ವಿದ್ಯಾಪತಿಯ ಪ್ರಮಾಣವನ್ನು ಪೂರ್ತಿಯಾಗಿ ತಿರಸ್ಕರಿಸುವಂತಿಲ್ಲ. ತನ್ನ ಐದು ಕತೆಗಳಲ್ಲಿ ವಿದ್ಯಾಪತಿಯು ಮಿಥಿಲೆಯ ಕರ್ನಾಟರ ಇತಿಹಾಸವನ್ನು ನಿರೂಪಿಸಿರುವನು. ಮತ್ತು ಹಾಗೆ ಮಾಡುವಲ್ಲಿ, ಕಾಲಾನುಕ್ರಮಣಿಕೆಯ ಮೇಲೆ ವಿಶೇಷ ಒತ್ತು ನೀಡಿರುವನು. ವಿದ್ಯಾಪತಿಯ ಪೂರ್ವಜರು ಕರ್ನಾಟ ಅರಸರಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆಗೈಯುವ ಸುಯೋಗ ಪಡೆದಿದ್ದರು ಮತ್ತು ಸಹಜವಾಗಿಯೆ, ಅವನು ಕರ್ನಾಟ ಆಸ್ಥಾನಗಳಲ್ಲಿ ತನ್ನ ಪೂರ್ವಜರಿಂದ ಕರ್ನಾಟ ಅರಸರ ಅಸಂಖ್ಯ ಪರಾಕ್ರಮಗಳ ಬಗೆಗೆ ಸವಿವರವಾಗಿ ತಿಳಿದುಕೊಂಡಿರಲು ಸಾಕು. ವಿದ್ಯಾಪತಿಯು ಸಂಬಂಧಪಟ್ಟ ಎಲ್ಲ ವಿವರಗಳನ್ನು ಬಲ್ಲವನಾದ್ದರಿಂದ ಅವನಂಥ ಕವಿಯಿಂದ ಖಚಿತ ಕಾಲಾನುಕ್ರಮಣಿಕೆಯನ್ನು ನಿರೀಕ್ಷಿಸಬಹುದಾಗಿದೆ. ಮೇಲ್ಕಾಣಿಸಿದ ಪರಿಸ್ಥಿತಿಗಳಲ್ಲಿ ಶಹಾಬುದ್ದೀನ ಮೊಹಮ್ಮದ ಘೋರಿಯು ಹಸ್ತಿನಾಪುರದ (ದಿಲ್ಲಿ) ಅರಸನಾಗಿದ್ದನೆಂಬ ವಿದ್ಯಾಪತಿಯ ವಾದವನ್ನು ಹಿಂದೆಮುಂದೆ ನೋಡದೆ ಒಪ್ಪಬಹುದು. ಅನೇಕ ಪರಾಭವಗಳ ನಂತರ ಪೃಥ್ವೀರಾಜನನ್ನು ಸೋಲಿಸಿ ಶಹಾಬುದ್ದೀನ ಮೊಹಮ್ಮದ ಘೋರಿ ಕ್ರಿ.ಶ. ೧೧೯೨ ರಲ್ಲಿ ದಿಲ್ಲಿಯ ದೊರೆಯಾಗಿದ್ದ. ಚಾಚಿಕದೇವನನ್ನು ಪೃಥ್ವೀರಾಜನ ಸೋದರನೆಂದು ಗುರುತಿಸಲಾಗಿದೆ.[6] ಸಹಜವಾಗಿಯೆ, ಅವನು ಶಹಾಬುದ್ದೀನ ಮೊಹಮ್ಮದ ಘೋರಿಯ ಸಮಕಾಲೀನನಾಗಿದ್ದನು ಮತ್ತು ತನ್ನ ಸೋದರ ಪೃಥ್ವೀರಾಜನ ಪರಾಭವದ ನಂತರ ಘೋರಿಯ ಜೊತೆಗೂಡಿದನೆಂದು ನಂಬಲಾಗಿದೆ.[7]

ಮುಲ್ಲಾ ತಖಿಯಾನ ಪ್ರಕಾರ, ನರಸಿಂಹದೇವನು ಬಂಗಾಲದ ಲಕ್ಷ್ಮಣಸೇನನ ಅಡಿಯಲ್ಲಿ ಅಧೀನ ಸ್ಥಾನಕ್ಕೆ ಇಳಿಸಲ್ಪಟ್ಟನು. ಎರಡು ಬಲಿಷ್ಠ ರಾಜ್ಯಗಳಾದ ಗೌಡ ಮತ್ತು ಲಖ್ನೌತಿಗಳ ನಡುವೆ ಸಿಕ್ಕಿಹಾಕಿಕೊಂಡ ನರಸಿಂಹದೇವನ ಆಳ್ವಿಕೆಯಲ್ಲಿ ಕರ್ನಾಟ ರಾಜ್ಯದ ಸ್ಥಾನ ಬಲು ಅಸ್ಥಿರವೂ ದುರ್ಬಲವೂ ಆಗಿತ್ತು.[8] ಕೆಲವು ಮುಸ್ಲಿಮ ಅರಸರಿಗೆ ಕರ್ನಾಟ ದೊರೆಯು ಕೆಲವೊಂದು ನೇರ ಯಾ ಪರೋಕ್ಷ ಕಪ್ಪಗಳನ್ನು ಕೊಟ್ಟಿರುವ ಸಾಧ್ಯತೆಯಿದೆ. ರಾಜ್ಯದ ಗಾತ್ರ ಬಹುಮಟ್ಟಿಗೆ ಕುಗ್ಗಿದರೂ ಕರ್ನಾಟ ದೊರೆಯು ವೇತಸಿವೃತ್ತಿಯನ್ನು ಅನುಸರಿಸುತ್ತ ಮಿಥಿಲೆಯ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾದನು. ಪೂರ್ಣಿಯಾದ ಭಾಗವೊಂದು ಅವನು ಕೈತಪ್ಪಿತು. ಒತ್ತಡಕ್ಕೆ ಬಾಗುತ್ತ ಮತ್ತು ನೇರಗೊಳ್ಳುವ ಮೆದು ಬೆತ್ತದೊಂದಿಗೆ ಅವನ ನೀತಿಯನ್ನು ಹೋಲಿಸಬಹುದು.[9]

ನೇಪಾಳದಲ್ಲಿ ನರಸಿಂಹದೇವನು ತನ್ನ ರಕ್ತಸಂಬಂಧಿಗಳೊಂದಿಗೆ ಜಗಳ ಕಾಯ್ದುದರಿಂದ ಮಿಥಿಲಾ ಮತ್ತು ನೇಪಾಳ ಬೇರ್ಪಟ್ಟವು.[10] ಯಾವುದೆ ದೃಢ ಆಧಾರದ ಮೇಲೆ ಈ ಸಂಗತಿಯ ನಿಖರತೆಯನ್ನು ಪರೀಕ್ಷಿಸಲಾಗಿಲ್ಲ. ಕ್ರಿ.ಶ. ೧೧೮೭ ಮತ್ತು ೧೨೨೮ರ ಮಧ್ಯೆ ನೇಪಾಳ ಅರಸರ ಈ ಹೆಸರುಗಳು ದೊರೆಯುತ್ತವೆ :

೧. ಇಮ್ಮಡಿ ಗುಣಕರ್ಮದೇವ (ಕ್ರಿ.ಶ. ೧೧೮೭)
೨. ಲಕ್ಷ್ಮೀಕದೇವ (ಕ್ರಿ.ಶ. ೧೧೯೩)
೩. ವಿಜಯಕಾಮದೇವ (ಕ್ರಿ.ಶ. ೧೧೯೬ - ೯೭)
೪. ಮಲ್ಲ ರಾಜವಂಶದ ಸಂಸ್ಥಾಪಕ ಅರಿಮಲ್ಲದೇವ (ಕ್ರಿ.ಶ. ೧೨೨೧)
೫. ಅಭಯಮಲ್ಲ (ಕ್ರಿ.ಶ. ೧೨೨೩ - ೫೨)

ನೇಪಾಳ ಕೊಳ್ಳದ ಅರಸರು ಮಿಥಿಲೆಯ ಕರ್ನಾಟ ಪ್ರಭುತ್ವವನ್ನು ಒಪ್ಪಿಕೊಂಡರೊ ಇಲ್ಲವೊ ಸಂದೇಹಾಸ್ಪದವಾಗಿದೆ. ಆ ಕಾಲಕ್ಕೆ ಮಲ್ಲ ರಾಜವಂಶವಿನ್ನೂ ಬಹಳ ಪ್ರಬಲವಾಗಿರಲಿಲ್ಲ. ಧರ್ಮಮಲ್ಲ ಮತ್ತು ರೂಪಮಲ್ಲರು ನೇಪಾಳದ ಮಲ್ಲರ ಪೂರ್ವಜರೆಂದು ನಿಲ್ಲಿಸೀವ ಸ್ತಂಭಶಾಸನ ಸೂಚಿಸುತ್ತದೆ.[11] ಅರಿಮಲ್ಲದೇವನು ಈ ರಾಜವಂಶದ ಅತ್ಯಂತ ಮಹತ್ವದ ಮತ್ತು ಶಕ್ತಿಶಾಲಿ ಅರಸನಾಗಿದ್ದನು ಮತ್ತು ಕ್ರಿ.ಶ. ೧೨೦೧-೧೨೧೬ರ ಮಧ್ಯೆ ನೇಪಾಳವನ್ನು ಆಳಿದನೆಂದು ಹೇಳಲಾಗಿದೆ. ಅವನು ಮಿಥಿಲೆಯ ನರಸಿಂಹದೇವನ ಸಮಕಾಲೀನನಾಗಿದ್ದನು.[12] ಮಲ್ಲರು ಕರ್ನಾಟ ರಾಜವಂಶದೊಂದಿಗೆ ಯಾವುದೆ ಸಂಬಂಧ ಹೊಂದಿದ್ದರೆಂಬ ಬಗೆಗೆ ನಮಗೆ ಖಚಿತ ಮಾಹಿತಿಯಿಲ್ಲ. ನಮ್ಮ ಸದ್ಯದ ತಿಳಿವಿನ ಸ್ಥಿತಿಯಲ್ಲಿ, ಮಲ್ಲರ - ವಿಶೇಷತಃ ಅರಿಮಲ್ಲದೇವನ - ಅಧೀನದಲ್ಲಿ ನೇಪಾಳವು ತಿರಹತ್‌ನೊಂದಿಗೆ ಸಂಬಂಧ ಕಳಚಿಕೊಂಡಿತ್ತೆಂದು ಧಾರಾಳವಾಗಿ ತೀರ್ಮಾನಿಸಬಹುದು. ಹರಿಸಿಂಹದೇವನ ಮಹಾಮಂತ್ರಿ ಚಾಂದೇಶ್ವರನು ನೇಪಾಳದ ಮೇಲೆ ಹೊಸ ವಿಜಯಸರಣಿಯನ್ನು ಪ್ರಾರಂಭಿಸಿದನೆಂಬುದರಿಂದ ಮೇಲ್ಕಾಣಿಸಿದ ಸಂಗತಿ ದೃಢಪಡುತ್ತದೆ. ಮಹಾಮಂತ್ರಿ ಚಾಂದೇಶ್ವರನ ಬಡಾಯದ ಮಾತುಗಳಿಂದ ನೇಪಾಳವು ಕರ್ನಾಟರ ಪ್ರಭುತ್ವದಿಂದ ತನ್ನನ್ನು ಸ್ವತಂತ್ರಗೊಳಿಸಿಕೊಂಡಿತ್ತೆಂಬುದು ವಿಪುಲವಾಗಿ ಸಿದ್ಧಪಡುವುದು. ತರೈನ್‌ದ ಕೆಲವು ಪ್ರದೇಶಗಳು ಮಲ್ಲದೇವನ ವಂಶಜರ ಹಿಡಿತದಲ್ಲಿದ್ದವು ಮತ್ತು ಅವರು ತಮ್ಮ ಪ್ರಧಾನ ಶಾಖೆಯಿಂದ ಪ್ರತ್ಯೇಕವಾಗಿ ಆಳುತ್ತಿದ್ದರೆಂಬುದು ಸಂಭವನೀಯವಾಗಿದೆ.

ಮಿಥಿಲೆಯ ನರಸಿಂಹದೇವನ ಆಳ್ವಿಕೆಯು ಯಾವುದೆ ಐತಿಹಾಸಿಕ ಮಹತ್ವದ ಘಟನೆಯಿಲ್ಲದೆ ಬಂಜರಾಗಿತ್ತು. ಅವನೊಬ್ಬ ವೀರ ಯೋಧ ಮತ್ತು ಧೀರ ಅರಸನಾಗಿದ್ದನೆಂದು ಮಿಥಿಲೆಯ ಐತಿಹ್ಯ ಮತ್ತು ಜಾನಪದ ಸಾಹಿತ್ಯ ಬಣ್ಣಿಸಿವೆ. ಆದರೆ, ಭೌತಿಕ ಪ್ರಮಾಣ ಮತ್ತು ಘಟನೆಗಳ ಸೂಕ್ಷ್ಮ ಪರೀಕ್ಷೆಯಿಂದ ರಾಜಕೀಯ ವ್ಯವಹಾರಗಳಲ್ಲಿ ಅವನು ಸಾಧಾರಣ ಯೋಗ್ಯತೆಯುಳ್ಳವನಾಗಿದ್ದನೆಂದು ತೀರ್ಮಾನಿಸಬೇಕಾಗುತ್ತದೆ. ತನ್ನ ಆಳ್ವಿಕೆಯುದ್ದಕ್ಕೂ ಅವನಿಗೆ ಎಲ್ಲ ಕಡೆಗಳಿಂದಲೂ ಅನೇಕ ತೊಂದರೆಗಳು ಎದುರಾದವು. ಪರಿಸ್ಥಿತಿಯನ್ನು ಅವನು ಸಮರ್ಥವಾಗಿ ಎದುರಿಸಿದನೆಂದು ಮಾತ್ರ ಹೇಳಲೇಬೇಕು. ಕೆಲಮಟ್ಟಿಗೆ ಚಿಕ್ಕದಾದ ಮತ್ತು ಛಿನ್ನವಾದ ಮಿಥಿಲೆಯ ಸ್ವತಂತ್ರ ಸ್ವರೂಪವನ್ನು ಅವನು ಕಾಯ್ದುಕೊಂಡನು. ಮುಸ್ಲಿಮರ ಆಕ್ರಮಣಗಳನ್ನು ಅವನು ಜಾಣತನದಿಂದ ಎದುರಿಸಿದನು; ಅವರ ಮೈತ್ರಿ

ಸಾಧಿಸಿ ಮಿಥಿಲೆಯನ್ನು ಕಾಪಾಡಿದನು; ಮುಸ್ಲಿಮ ದಾಳಿಕಾರರಿಗೂ ಶರಣಾಗಿ ಕರಗಳನ್ನು ನೀಡಲು ಒಪ್ಪಿದನು. ಹಾಗೆ ಮಾಡುವ ಮೂಲಕ, ಪುನಃ ಪುನಃ ಜರುಗಬಹುದಾಗಿದ್ದ ಮುಸ್ಲಿಮ ದಾಳಿಗಳು ತನ್ನ ರಾಜ್ಯದ ಕೆಲ ಭಾಗಗಳ ಮೇಲೆ ಉಂಟುಮಾಡಬಹುದಾಗಿದ್ದ ಕ್ಷೋಭೆ ಮತ್ತು ಅಪಕೀರ್ತಿಗಳಿಂದ ಮಿಥಿಲೆಯನ್ನು ಬಚಾವು ಮಾಡಿದನು.

ಆ ಹೊತ್ತಿಗಾಗಲೆ ರಾಜಕೀಯ ವ್ಯವಸ್ಥೆಯ ಸ್ವರೂಪ ಬಹಳಷ್ಟು ಬದಲಾಗಿತ್ತು ಮತ್ತು ಪ್ರಚಲಿತ ವಿದ್ಯಮಾನಗಳು ಅವನೊಬ್ಬ ದುರ್ಬಲ ಅರಸನೆಂಬ ಉಪಾಧಿ ಗಳಿಸಲು ಸಾಕಷ್ಟಾಗಿ ತ್ತೆಂಬುದು ಕೆ.ಪಿ.ಜಯಸ್ವಾಲರ ಅಭಿಮತ. ಅನೇಕ ವೇಳೆ, ಅರಸನ ಚಟುವಟಿಕೆಗಳು ಆಡಳಿತ ವ್ಯವಹಾರ ನಿರ್ವಹಿಸುವಲ್ಲಿ ಅವನೊಬ್ಬ ಸಾಧಾರಣ ವ್ಯಕ್ತಿಯಾಗಿದ್ದು ಅವನಿಗೆ ದೂರದೃಷ್ಟಿ ಮತ್ತು ಜಾಣ್ಮೆ ಇರಲಿಲ್ಲವೆಂಬುದನ್ನು ಸೂಚಿಸುತ್ತವೆ.

ನರಸಿಂಹದೇವನು ತನ್ನ ಮನೆತನದ ಸಾಂಸ್ಕೃತಿಕ ಪರಂಪರೆಗಳನ್ನು ಯಶಸ್ವಿಯಾಗಿ ಮುಂದುವರಿಸಿದನೆಂದು ಮಾತ್ರ ಹೇಳಲೇಬೇಕು. ಅನೇಕ ಕೆರೆಗಳನ್ನು ತೋಡಿಸಲಾಯಿತು ಮತ್ತು ಬೃಹತ್ ದೇವಾಲಯಗಳನ್ನು ಕಟ್ಟಿಸಲಾಯಿತು. ಅವನ ವಿಖ್ಯಾತ ಮಂತ್ರಿಗಳೇರ್ವ ರಾದ ರಾಮಾದಿತ್ಯ ಮತ್ತು ಕರ್ಮಾದಿತ್ಯರು ಮಿಥಿಲೆಯನ್ನು ಸಾಂಸ್ಕೃತಿಕವಾಗಿ ಬೆಳೆಸುವಲ್ಲಿ ಸಹಯೋಗ ನೀಡಿದರು. ಕರ್ಮಾದಿತ್ಯನ ಬಗೆಗೆ ತಿಲಕೇಶ್ವರ ದೇವಾಲಯ ಶಾಸನದಿಂದ ತಿಳಿದುಬರುವುದು. ಇದು ಹವಿದಿಹ ಶಾಸನವೆಂದೂ ಪರಿಚಿತವಿದೆ.[13] ರಾಣಿ ಸೌಭಾಗ್ಯ ದೇವಿಯ ಆಶಯದಂತೆ ಹೈಹತ್ತದೇವಿಯ ಮೂರ್ತಿಯನ್ನು ನಿಲ್ಲಿಸಲಾಯಿತೆಂದು ಈ ಶಾಸನ ಉಲ್ಲೇಖಿಸುವುದು. ನರಸಿಂಹದೇವನ ಆಳ್ವಿಕೆಯಲ್ಲಿ ಸಂಸ್ಕೃತ ಲೇಖಕರಿಗೆ ಸರಕಾರದ ಪ್ರೋತ್ಸಾಹವಿತ್ತು. ಮಿಥಿಲಾ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಯನ್ನು ರೂಪಿಸಲು ಪ್ರಸ್ತುತ ಕಾಲಘಟ್ಟವು ಸಹಾಯಕವಾಗಿತ್ತು. ಜ್ಯೋತಿರೀಶ್ವರನ ವರ್ಣನರತ್ನಾಕರದಲ್ಲಿರುವ ಲೊರಿಕಾ ಲಾವಣಿಗಳು ಇದನ್ನು ಸಂದೇಹಾತೀತವಾಗಿ ಸಿದ್ಧಪಡಿಸುತ್ತವೆ. ಹವಿದಿಹ ಶಾಸನದ ಲಿಪಿಯೂ ಮೈಥಿಲಿ ಲಿಪಿಯೆ ಆಗಿದೆ.[14]

## ರಾಮಸಿಂಹದೇವ (ಕ್ರಿ.ಶ. ೧೨೨೭ - ೧೨೮೫)

ತನ್ನ ತಂದೆ ನರಸಿಂಹದೇವನ ನಂತರ ರಾಮಸಿಂಹದೇವನು ಕ್ರಿ.ಶ. ೧೨೨೭ ರಲ್ಲಿ ಪಟ್ಟಕ್ಕೆ ಬಂದನು. ನೇಪಾಳ ವಂಶಾವಳಿಯ ಪ್ರಕಾರ, ರಾಮಸಿಂಹದೇವನು ಮಾರ್ಚ್ ೮, ೧೦೮೮ ರಲ್ಲಿ ಜನಿಸಿದನು.[15] ಅವನ ಪೂರ್ವಿಕರ ಬಗೆಗಿದ್ದಂತೆಯೆ, ರಾಮಸಿಂಹದೇವನು ಯಾರೆಂಬ ಬಗೆಗೆ ಬಹಳ ವಾದವಿವಾದವಿದೆ. ಕರ್ನಾಟ ರಾಜವಂಶದ ಇದೇ ಹೆಸರಿನ ಇನ್ನೊಬ್ಬ ಅರಸನೇ ರಾಮಸಿಂಹದೇವನೆಂದು ಮನಮೋಹನ ಚಕ್ರವರ್ತಿ ಗಲಿಬಿಲಿಗೊಂಡಿರುವರು. ರಾಮಸಿಂಹ ದೇವನನ್ನು ಆಯಿನ್‌ವಾರ ರಾಜವಂಶದ ಅರಸ ರಾಮಭದ್ರನೊಂದಿಗೆ ಸಮೀಕರಿಸುವ ತಪ್ಪನ್ನು ಬೆಂಡಾಲ್ ಮಾಡಿರುವರು.[16] ಸುಧಿಕಲ್ಪತರು ಹಸ್ತಪ್ರತಿಯ ಅಂತ್ಯಪ್ರಶಸ್ತಿಯಲ್ಲಿ ಕಾಣಿಸಿಕೊಂಡಿರುವ ಮತ್ತು ಕ್ರಿ.ಶ. ೧೩೯೦ ಕ್ಕೆ ಸರಿಹೊಂದುವ ಸಂವತ್ ೧೪೪೭ ರಲ್ಲಿ ಉಚ್ಛ್ರಾಯಕ್ಕೆ ಬಂದನೆಂದು ಹೇಳಲಾದ ಇನ್ನೂ ಒಬ್ಬ ರಾಮಸಿಂಹದೇವನಿರುವನು. ಈ

ಅಂತ್ಯಪ್ರಶಸ್ತಿಯಲ್ಲಿ ಅವನನ್ನು "ಮಹಾನೃಪತಿ" ಎಂದು ಕರೆಯಲಾಗಿದೆ. ಈ ಸಾಮಗ್ರಿಗಳು ಮತ್ತು ಆಕರಗಳಿಂದಾಗಿ ರಾಮಸಿಂಹದೇವನ ಕಾಲದ ಬಗೆಗೆ ಗೊಂದಲ ಏರ್ಪಟ್ಟಿದೆ. ನೇಪಾಳ ಆಸ್ಥಾನದ ಪಟ್ಟಿಯಲ್ಲಿ ಅವನನ್ನು "ಮಹಾರಾಜಾಧಿರಾಜ", "ಭೂಪಾಲ", "ಮಿಥಿಲಾಧಿಪತಿ" ಎಂದು ಸಂಬೋಧಿಸಲಾಗಿದೆ. ಮಿಥಿಲೆಯ ಐತಿಹ್ಯದಲ್ಲಿ "ಭುಜಬಲಭೀಮ" ಮತ್ತು "ಭೀಮಪರಾಕ್ರಮ" ಎಂದು ಕರೆಯಲಾಗಿದೆ. *ಸುಧಿಕಲ್ಪತರು*[17]ವಿನಲ್ಲಿ ಬರುವ ರಾಮಸಿಂಹದೇವನನ್ನು ವಿದ್ವಾಂಸರು ಮಿಥಿಲೆಯ ಕರ್ನಾಟ ಅರಸನೆಂದು ಗುರುತಿಸಿರುವುದೇನೊ ಸರಿ. ಆದರೆ, ಅವನ ಕಾಲಾನುಕ್ರಮವನ್ನು ವೈಜ್ಞಾನಿಕವಾಗಿ ನಿರ್ಧರಿಸುವಲ್ಲಿ ಅವರು ಎಡವಿದ್ದಾರೆ.

ರಾಮಸಿಂಹದೇವನ ದಿನಾಂಕವನ್ನು ತಿಬೆಟಿ ಪ್ರವಾಸಿ ಧರ್ಮಸ್ವಾಮಿ ಚೆನ್ನಾಗಿ ಪ್ರಮಾಣೀಕರಿಸಿರುವನು ಮತ್ತು ಹಾಗಾಗಿ, ಕೆಲವು ವಿದ್ವಾಂಸರು ಕೊಟ್ಟಿರುವ ತಪ್ಪು ದಿನಾಂಕಗಳು ಈಗ ಗ್ರಾಹ್ಯವಲ್ಲ. ನೇಪಾಳಿ ಮತ್ತು ಮಿಥಿಲಾ ಐತಿಹ್ಯದ ಆಧಾರದ ಮೇಲೆ, ರಾಮಸಿಂಹದೇವನು ಕ್ರಿ.ಶ. ೧೨೨೭ ಮತ್ತು ೧೨೮೫ರ ಮಧ್ಯೆ ಊರ್ಜಿತಕ್ಕೆ ಬಂದನೆಂಬುದು ಸ್ಪಷ್ಟವಿದೆ. ಆದರೆ, ಮನಮೋಹನ ಚಕ್ರವರ್ತಿ ಅವನನ್ನು ಹರಿಸಿಂಹದೇವನಿಗಿಂತ ಎರಡು ಮೆಟ್ಟಿಲು ಕೆಳಗೆ ಇರಿಸುತ್ತಾರೆ.

ನೇಪಾಳದ ಪ್ರತಾಪಮಲ್ಲನ ಕ್ರಿ.ಶ. ೧೬೪೪ರ ಮತ್ತು ೧೬೫೪ರ ಎರಡು ಶಾಸನಗಳಲ್ಲಿ ರಾಮಸಿಂಹದೇವನು ನರಸಿಂಹದೇವನ ಮಗ ಮತ್ತು ಉತ್ತರಾಧಿಕಾರಿಯೆಂದೂ ಹರಿಸಿಂಹದೇವನ ಪೂರ್ವಿಕನೆಂದೂ ತೋರಿಸಲಾಗಿದೆ. ವಂಶಾವಳಿ ದಾಖಲೆಗಳೂ ಅದನ್ನೇ ದೃಢಪಡಿಸುತ್ತವೆ. ವಾಸ್ತವಿಕವಾಗಿ, ಮನಮೋಹನ ಚಕ್ರವರ್ತಿ ಸೃಷ್ಟಿಸಿದ ಗೊಂದಲವನ್ನು ತರುವಾಯದ ವಿದ್ವಾಂಸರು ಪ್ರಶ್ನಿಸದೆ ಅನುಸರಿಸಿದ್ದಾರೆ. ಎಲ್ಲ ಸಮಕಾಲೀನ ಆಕರಗಳ ಜಾಗರೂಕ ಅಧ್ಯಯನ ಮತ್ತು ಸೂಕ್ಷ್ಮ ಪರಿಶೀಲನೆಯಿಂದ *ಸುಧಿಕಲ್ಪತರು*ವಿನಲ್ಲಿ ಬರುವ ರಾಮಸಿಂಹದೇವನು ಸ್ಥಳೀಯ ದೊರೆಯಾಗಿದ್ದನೆಂದು ತಿಳಿದುಬರುತ್ತದೆ.[18] ನಾನ್ಯದೇವನ ಉತ್ತರಾಧಿಕಾರಿಗಳಲ್ಲಿ ರಾಮಸಿಂಹದೇವನು ನಾಲ್ಕನೆಯವನೆಂಬುದು ಸಿದ್ಧಪಟ್ಟಿದೆ. "ಕೌಟುಂಬಿಕ ಕಾಲಾನುಕ್ರಮಣಿಕೆಯಲ್ಲಿ ಅವನ ಸ್ಥಾನದ ಬಗೆಗಿನ ಒಂದಕ್ಕೊಂದು ತದ್ವಿರುದ್ಧವಾದ ಪ್ರಮಾಣದಿಂದಾಗಿ"[19] ಕಾಲಾನುಕ್ರಮಣಿಕೆಯಲ್ಲಿ ಅವನ ನಿಖರವಾದ ಸ್ಥಾನ ಅನಿಶ್ಚಿತವಾಗಿದೆಯೆಂಬುದು ನಿಜವಲ್ಲ. *ಸುಧಿಕಲ್ಪತರು* ಹಸ್ತಪ್ರತಿಯಂತೂ ರಾಮಸಿಂಹ ದೇವನ ಕಾಲಾನುಕ್ರಮದ ಸಮಸ್ಯೆಯನ್ನು ಬಗೆಹರಿಸುವುದಿಲ್ಲ. ಸದ್ಯದ ತಿಳುವಳಿಕೆಯ ಪರಿಸ್ಥಿತಿಯಲ್ಲಿ, ನಾವು ಮಿಥಿಲೆಯ ಕರ್ನಾಟ ಅರಸರ ಕಾಲಾನುಕ್ರಮವನ್ನು ಬದಲಿಸಲಾಗದು. ಶ್ರೀಕರನು ರಾಮಸಿಂಹದೇವನನ್ನು "ಮಿಥಿಲಮಹೇಂದ್ರ" ಎಂದು ಮತ್ತು ಪೃಥ್ವೀಧರನು "ಮಿಥಿಲಾಧಿಪತಿ" ಎಂದು ಕರೆದಿರುವರು. ವರ್ಧಮಾನನ ಮಗನಾದ ಮೈಥಿಲಿ ಲೇಖಕನೊಬ್ಬನು ರಚಿಸಿದ ಮುರಾರಿಯ *ಅನರ್ಘ್ಯರಾಘವ* ಹಸ್ತಪ್ರತಿಗೆ ಚಿತ್ರಾಕರ ಶುಕ್ಲ ಎಂಬವನು ಟೀಕೆ ಬರೆದಿರುವನು. ಆ ಚಿತ್ರಾಕರ ಶುಕ್ಲನು ರಾಮಸಿಂಹದೇವನ ಆಶ್ರಯದಲ್ಲಿ

ವರ್ಧಮಾನಕ್ಕೆ ಬಂದನೆಂದು ಹೇಳಲಾಗಿದೆ.[20] ಇಲ್ಲಿ, ರಾಮಸಿಂಹದೇವನನ್ನು ತುರುಷ್ಕ ಅರಸರನ್ನು ಸೋಲಿಸಿದನೆಂದು ಬಣ್ಣಿಸಲಾಗಿದೆ. ಪ್ರತಿಕಾರನ ಸಣ್ಣ ತಪ್ಪಿನಿಂದಾಗಿ ಅವನ ಹೆಸರಿನ ಉಚ್ಚಾರಣೆಯಲ್ಲಿ ಸಣ್ಣ ದೋಷವಾಗಿದೆ. ರಾಮಸಿಂಹದೇವನು ನರಸಿಂಹದೇವನ ಮಗನೆಂದು ಸ್ಥಾಪಿಸುವಲ್ಲಿ ಈ ಮಾಹಿತಿಯ ಅಂಶ ಅತ್ಯಂತ ಮಹತ್ವಪೂರ್ಣವಾಗಿದೆ. ಆದುದರಿಂದ, ಅವನನ್ನು ಹರಿಸಿಂಹದೇವನ ನಂತರ ಇರಿಸಲಾಗದು. ಟಿಬೆಟಿ ಪ್ರವಾಸಿ ಚಾಂಗ್ಲೊ-ತ್ಸಾ-ಬಾ-ಚೋಸ್-ಪ್ಯ-ದ್ಪಾಲ (ಧರ್ಮಸ್ವಾಮಿ) ನೀಡಿದ ಪ್ರಮಾಣವನ್ನಾಧರಿಸಿ ರಾಮಸಿಂಹದೇವನ ಕಾಲ ಅಂತಿಮವಾಗಿ ನಿರ್ಧಾರಿತವೆಂದು ಪರಿಗಣಿಸಬೇಕು. ಧರ್ಮಸ್ವಾಮಿ ಕ್ರಿ.ಶ. ೧೨೩೪ ಮತ್ತು ೧೨೩೬ರ ನಡುವೆ ಭಾರತದಲ್ಲಿದ್ದನು ಮತ್ತು ರಾಮಸಿಂಹದೇವನನ್ನು ಅವನ ಸಿಮರಾಂವಗಡ ರಾಜಧಾನಿಯಲ್ಲಿ ಕಂಡಿದ್ದನು. ಧರ್ಮಸ್ವಾಮಿಯ ಪ್ರಕಾರ, ಏಳು ವರ್ಷ ಮುಂಚೆ, ಅಂದರೆ ಕ್ರಿ.ಶ. ೧೨೨೭ ರಲ್ಲಿ ಅವನು ಸಿಂಹಾಸನವೇರಿದನು.[21] ರಾಮಸಿಂಹದೇವನು ೧೨೨೫ ರಲ್ಲಿ ಸಿಂಹಾಸನವೇರಿದನು ಮತ್ತು ೫೮ ವರ್ಷ ಆಳಿ ೧೨೮೫ ರಲ್ಲಿ ಕೊನೆಯುಸಿರೆಳೆದನು ಎಂದು ಠಾಕೂರ ಸೂಚಿಸುತ್ತಾರೆ.[22] ಬಹುಶಃ ಅವರು ತಮ್ಮ ಅಸಂಗತತೆಯನ್ನು ಲಕ್ಷಿಸಿದಂತಿಲ್ಲ. ಏಕೆಂದರೆ, ಸರಳ ಲೆಕ್ಕಾಚಾರವು ಸಹ ರಾಮಸಿಂಹದೇವನ ಆಳ್ವಿಕೆಯ ಅಂತ್ಯವನ್ನು ೧೨೮೩ಕ್ಕೆ ತಂದುನಿಲ್ಲಿಸುತ್ತದೆ. ಮೇಲಾಗಿ, ತಮ್ಮ ಅಭಿಪ್ರಾಯಕ್ಕೆ ಆಕರವನ್ನು ಸೂಚಿಸಿಲ್ಲವಾದ್ದರಿಂದ ಠಾಕೂರರ ಪಾಠ ಅಧಿಕೃತವಲ್ಲ. ಮೇಲ್ಕಾಣಿಸಿದ ಸಂಗತಿಗಳ ಹಿನ್ನೆಲೆಯಲ್ಲಿ, ಭಿನ್ನವಾದ ಹೊಸ ಆಧಾರ ದೊರೆಯುವವರೆಗೆ ರಾಮಸಿಂಹ ದೇವನ ಸಿಂಹಾಸನಾರೋಹಣ ದಿನಾಂಕವನ್ನು ಅಂತಿಮವಾಗಿ ಪರಿಹಾರವಾಗಿದೆಯೆಂದು ಪರಿಗಣಿಸಬೇಕು.

ಇಬ್ಬರೂ ನರಸಿಂಹದೇವರು ನೇಪಾಳದೊಂದಿಗೆ ಸಂಬಂಧ ಹೊಂದಿದ್ದರೆಂದು ಪೆಟೆಕ್ ಹೇಳುತ್ತಾರೆ. ಏಕೆಂದರೆ, ಈ ಹೆಸರುಗಳು ವಂಶಾವಳಿಗಳ ಪ್ರಾರಂಭಿಕ ಭಾಗದಲ್ಲಿ ಕಾಣಸಿಗುತ್ತವೆ.[23] ತುಕ್ಸಿ ವಶದಲ್ಲಿರುವ ವಂಶಾವಳಿಯು ರಾಮಸಿಂಹದೇವನನ್ನು ಪಶ್ಚಿಮ ನೇಪಾಳದಲ್ಲಿರುವ ಪಾಲ್ಪಾದ ಅರಸ ಮುಕುಂದಸೇನನು ಹೇಗೆ ಪದಚ್ಯುತಗೊಳಿಸಿದ ನೆಂಬುದನ್ನು ವರ್ಣಿಸುತ್ತದೆ. ಮುಕುಂದಸೇನನು ಕಣಿವೆಯ ಮೇಲೆ ದಾಳಿ ಮಾಡಿ ಅದನ್ನು ಕೊಳ್ಳೆ ಹೊಡೆದನೆಂದೂ, ಹಾಗಾಗಿ ಪಶುಪತಿ ದೇವತೆಯ ಕೋಪಕ್ಕೆ ತುತ್ತಾದನೆಂದೂ ಹೇಳಲಾಗಿದೆ.[24] ಅವನ ಸೈನ್ಯವನ್ನು ಮಹಾಮಾರಿ ಬೇನೆ ನಾಶಗೊಳಿಸಿತು ಮತ್ತು ಅವನು ಪಲಾಯನಮಾರ್ಗದಲ್ಲಿ ತೀರಿಕೊಂಡನು. ಡಿ.ಡಬ್ಲ್ಯೂ.ರೈಟ್ ಅದೇ ಕತೆಯನ್ನು ಹೇಳುತ್ತಾರೆ. ಆದರೆ, ಆ ಘಟನೆಯನ್ನು ಹಿಂದಕ್ಕೆ ಹರಿದೇವನ ಕಾಲಕ್ಕೆ ಒಯ್ಯುತ್ತಾರೆ. ಕಾಲಾನುಕ್ರಮಣಿಕೆಯ ಆಧಾರದ ಮೇಲೆ ಅದು ಅಸಾಧ್ಯವಾದುದು.[25] ತುಕ್ಸಿ ವಶದಲ್ಲಿರುವ ವಂಶಾವಳಿಯು ಮೂರು ಶಕೆಗಳನ್ನು ಪ್ರಸ್ತಾಪಿಸುತ್ತದೆ. ಪೆಟೆಕ್‌ರು ಸಂವತ್ ೧೧೬೦ನ್ನು ಸರಿಯಾಗಿಯೆ ಗಮನಿಸಿರುವರು ಮತ್ತು ಕ್ರಿ.ಶ. ೧೨೪೫ ಕ್ಕೆ ಸರಿಹೊಂದುವ ಶಕ ಸಂವತ್ಸರಕ್ಕೆ ಒಯ್ದಿರುವರು. ಪೆಟೆಕ್‌ರು ಈ ರೀತಿ ವಿಚಾರ ಮಾಡಲು ತಕ್ಕುದಾದ ಆಧಾರವಿದೆ. ಏಕೆಂದರೆ, ಆಗ ನೇಪಾಳ ಮತ್ತು

ತಿರಹತ್‌ಗಳಲ್ಲಿ ವಿಕ್ರಮ ಶಕೆ ಇನ್ನೂ ಬಳಕೆಗೆ ಬಂದಿರಲಿಲ್ಲ. ಕ್ರಿ.ಶ. ೧೨೪೫ನೆಯ ವರ್ಷವು ರಾಮಸಿಂಹದೇವನ ಕಾಲದೊಂದಿಗೆ ಸಮಕಾಲಿಕವಾಗಿದೆ. ಕ್ರಿ.ಶ. ೧೨೫೨ ರಲ್ಲಿ ರಾಮಸಿಂಹದೇವನ ಆಳ್ವಿಕೆ ಕೊನೆಗೊಂಡಿತೆಂದು ಪೆಟೆಕ್ ಊಹಿಸುತ್ತಾರೆ. ಆದರೆ, ಇದು ಸರಿಯಲ್ಲ. ಆ ಕಾಲದಲ್ಲಿ ಮಿಥಿಲೆಯ ರಾಜಕೀಯ ಸ್ಥಿತಿ ಕ್ಷೋಭೆಗೊಳಗಾಗಿತ್ತೆಂದು ಸ್ವೀಕರಿಸಲು ಏನೂ ಅಭ್ಯಂತರವಿಲ್ಲ. ಪೆಟೆಕ್‌ರ ಊಹೆಯು ತಿರಹತ್‌ನ ಶಾಶ್ವತ ಸ್ವಾಧೀನವನ್ನು ಸೂಚಿಸುವುದಿಲ್ಲವಾದುದರಿಂದ ಮುಕುಂದಸೇನನ ಆಕ್ರಮಣವು ಘಟ್ಟನೆಯ ದಾಳಿಯ ಸ್ವರೂಪದ್ದಾಗಿತ್ತು. ಆಗ ಅಭಯಮಲ್ಲನು ನೇಪಾಳವನ್ನು ಆಳುತ್ತಿದ್ದ. ಮುಕುಂದಸೇನನು ಪಶ್ಚಿಮ ನೇಪಾಳದ ರಾಜಕೀಯ ಸಾಹಸಿಗ ಮಾತ್ರವಾಗಿದ್ದನೆಂದು ಒಪ್ಪಿಕೊಳ್ಳಬೇಕು. ಮಿಥಿಲೆಯ ಅರಸನ ದೌರ್ಬಲ್ಯದ ಲಾಭ ಪಡೆದು ಅವನು ತಿರಹತ್‌ನ ಕದಡಿದ ಸ್ಥಿತಿಯ ಪ್ರಯೋಜನ ಪಡೆಯಬಯಸಿದ್ದ. ಆದರೆ, ಅದರಲ್ಲಿ ಅವನು ಯಶಸ್ಸು ಕಾಣಲಿಲ್ಲ. ಸಮಕಾಲೀನ ವೃತ್ತಾಂತಗಳಲ್ಲಿ ಹೇಳಿರುವಂತೆ, ನೇಪಾಲ ಗಂಭೀರ ಕ್ಷಾಮಕ್ಕೊಳಗಾಗಿತ್ತು ಮತ್ತು ಮುಸ್ಲಿಮರ ಮುನ್ನುಗ್ಗುವಿಕೆಗಳೂ ರಾಮಸಿಂಹದೇವನನ್ನು ಕಂಗಾಲಾಗಿಸಿದ್ದವು. ಸಹಜವಾಗಿಯೆ, ಮುಕುಂದಸೇನನು ಈ ಪ್ರದೇಶವನ್ನು ತನ್ನ ಅಧೀನಕ್ಕೊಳಪಡಿಸಲು ಮುಂದಾದನು. ಮುಸ್ಲಿಮ ದಾಳಿಗಳಾಗಬಹುದೆಂಬ ಭೀತಿಯಿಂದ ರಾಮಸಿಂಹದೇವನು ತನ್ನ ರಾಜಧಾನಿಯನ್ನು ಭದ್ರಪಡಿಸಿದನೆಂದು ಧರ್ಮಸ್ವಾಮಿ ಅಭಿಪ್ರಾಯಪಡುತ್ತಾನೆ. ಅವನು ಮುಕುಂದಸೇನನ ದುಷ್ಟ ಹೇತುಗಳ ವಿರುದ್ಧ ಮುನ್ನೆಚ್ಚರಿಕೆ ವಹಿಸಿರಬಹುದಾದ ಸಾಧ್ಯತೆಯೂ ಇದೆ. ಇದೂ ಅಲ್ಲದೆ, ಸಮಾರಂಭಗಳು ಮತ್ತು ಧಾರ್ಮಿಕ ಆಚರಣೆಗಳ ಅಸ್ಪಷ್ಟ ಸಂದರ್ಭಗಳಲ್ಲಿ ರಾಮಸಿಂಹದೇವನನ್ನು ನೇಪಾಳದ ಇತಿಹಾಸದಲ್ಲಿ ಹೆಸರಿಸಲಾಗಿದೆ. ಅವನನ್ನು ಅಪ್ಪ ರಾಮಸಿಂಹದೇವನೆಂದು ಕರೆಯಲಾಗಿದ್ದು, ಅಲ್ಲಿ ನೀಡಲಾದ ತೇದಿಯು ಕ್ರಿ.ಶ. ೧೨೪೪, ಮೇ ೨೪ ಕ್ಕೆ ಸರಿಹೊಂದುವ ಜೇಷ್ಠ ಕೃಷ್ಣ ಪ್ರತಿಪದ ಆಗಿದೆ.

ರಾಮಸಿಂಹದೇವನು ಧಾರ್ಮಿಕ ಸಾಹಿತ್ಯದ ನಿಷ್ಠಾವಂತ ಅನುಯಾಯಿಯೂ ಪೋಷಕನೂ ಆಗಿದ್ದನು. ಅವನು ಬಲು ದೂರದೃಷ್ಟಿಯುಳ್ಳ ಅರಸನಾಗಿದ್ದು ತನ್ನ ರಾಜ್ಯದಲ್ಲಿ ದಕ್ಷ ರೀತಿಯಲ್ಲಿ ಆಡಳಿತ ಸುಧಾರಣೆಗಳನ್ನು ತಂದನು. ಹಲವಾರು ಮಹತ್ವದ ಸಾಮಾಜಿಕ ಬದಲಾವಣೆಗಳಿಗೆ ಅವನು ಕಾರಣಕರ್ತನಾಗಿದ್ದನು. ಹಿಂದೂಗಳ ಮಾರ್ಗದರ್ಶನಕ್ಕಾಗಿ, ಸಮಾಜ ಮತ್ತು ಧರ್ಮಕ್ಕೆ ಸಂಬಂಧಿಸಿದ ಹಲವು ಮೂಲಭೂತ ನಿಯಮಗಳನ್ನು ರಚಿಸಿದನು. ತನ್ನ ಪ್ರಜೆಗಳಿಗಾಗಿ ಅವನು ಕೆಲವು ನೀತಿಸಂಹಿತೆಗಳನ್ನು ಹೊರಡಿಸಿದ. "ಹೊಸ ನೀತಿಸಂಹಿತೆಯನ್ನು ಜಾರಿಗೊಳಿಸುವಲ್ಲಿ ಉದ್ಭವಿಸುವ ಎಲ್ಲ ಸಮಸ್ಯೆಗಳನ್ನು ತೀರ್ಮಾನಿಸಲು" ಪ್ರತಿಯೊಂದು ಗ್ರಾಮದಲ್ಲಿ ಅಧಿಕಾರಿಯೊಬ್ಬನನ್ನು ನಿಯಮಿಸಿದನು.[26] ಗ್ರಾಮದ ಪ್ರಜೆಗಳ ಸಂರಕ್ಷಣೆಗಾಗಿ ಪೋಲಿಸ ಅಧಿಕಾರಿಗಳನ್ನೂ ನಿಯಮಿಸಿದನು. ಈ ಅಧಿಕಾರಿಗಳು ಪರಗಣದ ಮುಖ್ಯ ಕಂದಾಯ ವಸೂಲುಗಾರನಾಗಿದ್ದ ಚೌಧರಿಗೆ ಘಟನೆಗಳ

ಬಗೆಗೆ ನಿತ್ಯ ವರದಿ ಸಲ್ಲಿಸಬೇಕಿತ್ತು. ಈ ಅಧಿಕಾರಿಗಳು ಬಲು ಮಹತ್ವದವರಾಗಿದ್ದು ಅವರ ಸಂಬಳ ನಗದು ಹಣವಾಗಿರಲಿಲ್ಲ. ಅವರು ಅರಸನಿಗೆ ಸಲ್ಲಿಸಿದ ಸೇವೆಗಳಿಗಾಗಿ ಭೂಮಿಯನ್ನು ಕೊಡಲಾಗುತ್ತಿತ್ತು.

ಆಡಳಿತಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಬಗೆಗೆ ಕರ್ನಾಟರ ಕಾಲಘಟ್ಟವು ಮಾರ್ಗದರ್ಶಕವಾಗಿತ್ತು. ಗಂಗದೇವ ಮತ್ತು ರಾಮಸಿಂಹದೇವರ ಆಳ್ವಿಕೆಯಲ್ಲಿ ಜಾಗೀರ ಪದ್ಧತಿಯನ್ನು ಪ್ರಾರಂಭಿಸಲಾಯಿತು ಮತ್ತು ಕಾಲಕ್ರಮೇಣ ಅದು ಸ್ಥಿರಗೊಂಡಿತು. ಈ ರಾಜವಂಶದ ಸೇವೆಯಲ್ಲಿದ್ದ ವಿವಿಧ ಅಧಿಕಾರಿಗಳು ಈ ಯೋಜನೆಯ ಪ್ರಯೋಜನ ಪಡೆದುಕೊಂಡರು. ಮಿಥಿಲೆಯಲ್ಲಿ ಪಟವಾರಿ ಪದ್ಧತಿಯು ರಾಮಸಿಂಹದೇವನ ಆಳ್ವಿಕೆಯಲ್ಲಿ ಜಾರಿಗೆ ಬಂದಿತು. ಗ್ರಾಮಗಳಲ್ಲಿ ಅನೇಕ ಕೆರೆಗಳನ್ನು ತೋಡಲಾಯಿತು ಮತ್ತು ಮಿಥಿಲೆಯ ಆಸುಪಾಸಿನಲ್ಲಿ ಅನೇಕ ದೇವಾಲಯಗಳನ್ನು ಕಟ್ಟಲಾಯಿತು. ಅವನ ಪ್ರಜೆಗಳು ಅರಸನ ಉದಾರ ಗುಣದಿಂದಾಗಿ ಬಹಳ ಸುಖವಾಗಿದ್ದರು.

ರಾಮಸಿಂಹದೇವನ ಆಳ್ವಿಕೆಯು ಸಾಹಿತ್ಯ ಮತ್ತು ದರ್ಶನ ಕ್ಷೇತ್ರಗಳಲ್ಲಿ ಗಮನಾರ್ಹವಾದ ಮತ್ತು ರಭಸದ ಆಸ್ಫೋಟನೆ ಕಂಡಿತು. ಸಂಸ್ಕೃತ ಸಾಹಿತ್ಯದಲ್ಲಿ ಅವನನ್ನು ಕುರಿತ ಅನೇಕ ಉಲ್ಲೇಖಗಳಿವೆ. ಅವನ 'ಸದಸ್ಯ'ನು ಅಮರಕೋಶದ ಮೇಲೆ ಟೀಕೆ (ವ್ಯಾಖ್ಯಾಮೃತ) ಬರೆದನು. ಈ ಪಂಡಿತ ಟೀಕಾಕಾರನ ಹೆಸರು ಶ್ರೀಕರ. ಆಸ್ಥಾನವನ್ನಲಂಕರಿಸಿದ ಇತರ ಪಂಡಿತರಿದ್ದು ಅವರಲ್ಲಿ ಪ್ರಮುಖರೆಂದರೆ ಪೃಥ್ವೀಧರ, ರತ್ನೇಶ್ವರ ಮತ್ತು ಚಿತ್ರಧರ. ಅವನ ಆಳ್ವಿಕೆಯಲ್ಲಿ ರಚನೆಗೊಂಡ ಇನ್ನೂ ಅನೇಕ ಟೀಕೆಗಳು ಮತ್ತು ಪ್ರಕರಣ ಗ್ರಂಥಗಳಿದ್ದವು. ಆಡಳಿತ ವಿಷಯಗಳಲ್ಲಿ ಅರಸನಿಗೆ ಸಲಹೆ ನೀಡುತ್ತಿದ್ದ ಪಂಡಿತರೂ ಇದ್ದರು. ಅವರಿಗೆ ಮಂತ್ರಿಗಳೆನ್ನಲಾಗುತ್ತಿತ್ತು. ಇವನ ತಂದೆಗೆ ಸಲಹೆಗಾರರಾಗಿದ್ದ ಇಬ್ಬರು ಮಹತ್ವದ ಮಂತ್ರಿಗಳಾಗಿದ್ದ ರಾಮಾದಿತ್ಯ ಮತ್ತು ಕರ್ಮಾದಿತ್ಯರು ಇವನ ಆಳ್ವಿಕೆಯಲ್ಲೂ ಅದೇ ಹುದ್ದೆಯಲ್ಲಿ ಮುಂದುವರಿದರು. ಕರ್ಮಾದಿತ್ಯನು ರಾಮಸಿಂಹದೇವನ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದು ಹವಿದಿಹ ಶಾಸನದಿಂದ ತಿಳಿದುಬರುತ್ತದೆ. ರಾಮಸಿಂಹದೇವನು ತನ್ನ ಆಳ್ವಿಕೆಯುದ್ದಕ್ಕೂ ಮಿಥಿಲೆಯ ಸ್ವತಂತ್ರ ಸ್ಥಾನವನ್ನು ಕಾಪಾಡಿದಂತಿದೆ.

ರಾಮಸಿಂಹದೇವನು ಕಲೆ ಮತ್ತು ಸಾಹಿತ್ಯಗಳ ಮಹಾಪೋಷಕನಾಗಿದ್ದುದರಿಂದ ಅವನ ಆಳ್ವಿಕೆಯಲ್ಲಿ ಮಿಥಿಲೆಯು ಉತ್ತರ ಭಾರತದ ಸಂಸ್ಕೃತ ಪಂಡಿತರಿಗೆಲ್ಲ ಆಶ್ರಯತಾಣವಾಗಿತ್ತು. ರಾಮಸಿಂಹದೇವನ ಆಳ್ವಿಕೆಯು ರಾಜಕೀಯವಾಗಿ ಅಷ್ಟು ಮಹತ್ವದ್ದಾಗಿರಲಿಲ್ಲವಾದರೂ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಒಂದು ಮೈಲುಗಲ್ಲಾಗಿತ್ತು. ಅವನು ಸ್ವತಃ ಹಿಂದೂ ಜೀವನಪದ್ಧತಿಯ ಸಂಪ್ರದಾಯನಿಷ್ಠ ಅನುಯಾಯಿಯಾಗಿದ್ದನು. ಆದರೆ, ಇತರ ಧರ್ಮಗಳ ಬಗೆಗೆ ಸಹಿಷ್ಣುವಾಗಿರುವಷ್ಟು ಉದಾರಹೃದಯಿಯಾಗಿದ್ದನು. ಟಿಬೆಟ ಪ್ರವಾಸಿ ಧರ್ಮಸ್ವಾಮಿಯು ಬೌದ್ಧನಾಗಿದ್ದರೂ ಅವನನ್ನು ತನ್ನ ಆಸ್ಥಾನಕ್ಕೆ ಉಚಿತ ಮರ್ಯಾದೆಗಳೊಂದಿಗೆ ಬರಮಾಡಿಕೊಂಡನು. ರಾಮಸಿಂಹದೇವನು ಅವನಿಗೆ ಮಹಾಸ್ವಾಗತ

ನೀಡುವಷ್ಟು ಕೃಪಾಳುವಾಗಿದ್ದುದಲ್ಲದೆ ಅರಮನೆಯ ಪ್ರಧಾನ ಪುರೋಹಿತ ಹುದ್ದೆಯನ್ನೂ ನೀಡಿದನು. ಹಿಂದೂಗಳು ಮತ್ತು ಬೌದ್ಧರು ಪರಸ್ಪರ ಕಲಹ ಮಾಡದೆ ಸುಮಧುರ ಸಂಬಂಧ ಹೊಂದಿದ್ದರೆಂದು ಧರ್ಮಸ್ವಾಮಿಯ ಅಧಿಕೃತ ವೃತ್ತಾಂತಗಳಿಂದ ತಿಳಿದುಬರುವುದು. ಇದಕ್ಕೆ ಅತ್ಯುತ್ತಮ ನಿದರ್ಶನ ಅರಸನೇ ಆಗಿದ್ದ. ಹಾಗಿಲ್ಲದಿದ್ದ ಪಕ್ಷದಲ್ಲಿ, ಧರ್ಮಸ್ವಾಮಿಗೆ ಇಂಥ ಗೌರವಾನ್ವಿತ ಹುದ್ದೆ ದೊರಕುತ್ತಿರಲಿಲ್ಲ. ಇದರ ಫಲವಾಗಿ, ಹಿಂದೂ ಶ್ರೀಮಂತ ವರ್ಗದವರು ಬೌದ್ಧ ಮಠಗಳಿಗೆ ಸಹಾಯ ಮಾಡಿದರು ಮತ್ತು ಅದಕ್ಕೆ ಪ್ರತಿಯಾಗಿ ಬೌದ್ಧರು ಶಿವನ ಮತ್ತು ಕಾಳಿಯ ದೇವಾಲಯಗಳಿಗೆ ಹೋಗುತ್ತಿದ್ದರು. ಸಹಿಷ್ಣುತೆ ದೊಡ್ಡ ಪ್ರಮಾಣದ್ದಾಗಿತ್ತು.

ಮಿಥಿಲೆಯ ಕೇಂದ್ರಭಾಗದಲ್ಲಿ ಅನೇಕ 'ತಾಂತ್ರಿಕ' ಪಂಥಗಳು ಅಸ್ತಿತ್ವದಲ್ಲಿದ್ದುದನ್ನು ಧರ್ಮಸ್ವಾಮಿ ಪ್ರಸ್ತಾಪಿಸುವನು. ಅವನ ಅಭಿಪ್ರಾಯದಲ್ಲಿ, ವೈಶಾಲಿ ಸಂಪೂರ್ಣವಾಗಿ ನಿರ್ಜನ ರೂಪ ತಾಳಿತ್ತು. ಕರ್ನಾಟ ಅರಸರ ರಾಜಧಾನಿ ಸಿಮರಾಂವಗಡವೆಂದು ಗುರುತಿಸಲಾಗುವ 'ಪಾಟಾ'ದ ಈ ವರ್ಣನೆಯನ್ನು ಅವನು ನೀಡುವನು: 'ಪಾಟಾ' ಸುಮಾರು ಆರು ಲಕ್ಷ ಮನೆಗಳನ್ನು, ಏಳು ಗೋಡೆಗಳನ್ನು ಹೊಂದಿತ್ತು. ಆದರೆ, ಅರಮನೆಯು ಗೋಡೆಗಳ ಹೊರಗೆ ಇದ್ದು ವೈರಿದಾಳಿಯಿಂದ ಅದನ್ನು ಸಂರಕ್ಷಿಸಲು ವಿಶೇಷ ಭದ್ರತಾ ವ್ಯವಸ್ಥೆ ಮಾಡಲಾಗಿತ್ತು. ಅರಮನೆಗೆ ಹನ್ನೊಂದು ಮಹಾದ್ವಾರಗಳಿದ್ದು ಹನ್ನೆರಡು ಕಂದರಗಳು ಮತ್ತು ಅನೇಕ ವೃಕ್ಷಗಳ ಸಾಲುಗಳಿಂದ ಆವೃತ್ತವಾಗಿದ್ದವು. ನಗರದ ಮೇಲೆ ದಂಡೆತ್ತಿ ಬಂದು ಅದನ್ನು ತಲುಪಲು ದಯನೀಯವಾಗಿ ವಿಫಲರಾಗಿದ್ದ ತುರುಷ್ಕರ ಮಹತ್ವಾಕಾಂಕ್ಷಿ ದುಷ್ಟ ಹೇತುವಿನ ನಿರಂತರ ಅಪಾಯವಿದ್ದುದರಿಂದ ಭದ್ರತಾ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿತ್ತು. ಧರ್ಮಸ್ವಾಮಿಯು ಮೊದಲ ಬಾರಿಗೆ ಅರಸನನ್ನು ಅರಮನೆಯಲ್ಲಿ ಕಂಡಾಗ ಸಂಸ್ಕೃತ ಶ್ಲೋಕದಲ್ಲಿ 'ರಾಜಾ' ಎಂದು ಅಭಿವಂದಿಸಿದನು. ಈ ಬೌದ್ಧ ತಿಬೆಟಿ ಪ್ರವಾಸಿಯ ವರ್ತನೆ ಮತ್ತು ಪಾಂಡಿತ್ಯಗಳಿಂದ ಆಕರ್ಷಿತನಾದ ಅರಸನು ಅವನನ್ನು ತನ್ನ ಪುರೋಹಿತನಾಗುವಂತೆ ಕೇಳುವ ಕೃಪೆದೋರಿದನು.

ತುಘಾನಖಾನನು ಮಿಥಿಲಾ ರಾಜ್ಯವನ್ನು ಗೆದ್ದುಕೊಂಡು ಅರಸನನ್ನು ಸೆರೆಯಲ್ಲಿಟ್ಟನೆಂದು ಅಭಿಪ್ರಾಯಪಡಲಾಗಿದೆ. ಕರ್ನಾಟ ರಾಜನ ಪರಾಕ್ರಮನಿಷ್ಠ ಸೇವೆ ಮತ್ತು ಧೀರ ಸ್ವಭಾವವನ್ನು ಮೆಚ್ಚಿ, ನಂತರ ಅವನನ್ನು ಗೌರವದಿಂದ ಬಿಡುಗಡೆ ಮಾಡಲಾಯಿತೆಂದೂ ಹೇಳಲಾಗಿದೆ. ಅವನನ್ನು ಅರಸನಾಗಿಯೆ ದರ್ಭಾಂಗಾಕ್ಕೆ ಕಳಿಸಲಾಯಿತು.[37] ತಿಬೆಟಿ ಪ್ರವಾಸಿ ಧರ್ಮಸ್ವಾಮಿಯ[38] ಪ್ರತ್ಯಕ್ಷದರ್ಶಿ ವರದಿಯ ಹಿನ್ನೆಲೆಯಲ್ಲಿ ಈ ವೃತ್ತಾಂತ ನಿಜವಲ್ಲ. ತುರುಷ್ಕರು ಕರ್ನಾಟ ರಾಜಧಾನಿಯನ್ನು ತಲುಪಲೂ ವಿಫಲರಾಗಿದ್ದುದನ್ನು ಧರ್ಮಸ್ವಾಮಿ ರುಜುವಾತುಪಡಿಸುತ್ತಾನೆ. ಈ ಪ್ರಮಾಣವೂ ಸೇರಿದಂತೆ, ಅನರ್ಘ್ಯರಾಘವ ಟೀಕಾದ ಟೀಕಾಕಾರನ ಇನ್ನೊಂದು ಸ್ಥಳೀಯ ಆಕರವಿದೆ. ರಾಮಸಿಂಹದೇವನು ತನ್ನ ಮುಸ್ಲಿಮ ವೈರಿಯನ್ನು ಜಯಿಸಿದ್ದನೆಂದು ಟೀಕಾಕಾರನು ಸೂಚಿಸುತ್ತಾನೆ. ಹದಿಮೂರನೆಯ

ಶತಮಾನದಲ್ಲಿ ಬಿಹಾರ ಬಹುಮಟ್ಟಿಗೆ ಮುಸ್ಲಿಮ ಪ್ರಭುತ್ವಕ್ಕೊಳಪಟ್ಟಿತ್ತು. ಹಸಮುದ್ದೀನ ಇವಾಝ್‌ನು ಮಿಥಿಲೆಯಿಂದ ಕಪ್ಪಗಳನ್ನು ಕಿತ್ತುಕೊಳ್ಳುತ್ತಿದ್ದನೆಂಬುದನ್ನು ಒಪ್ಪಲಾಗಿದೆ. ಮಿಥಿಲೆಯ ಸುರಕ್ಷಿತೆ ಮತ್ತು ಭದ್ರತೆಯ ಸಮಸ್ಯೆ ಕುರಿತಂತೆ, ಮಿಥಿಲೆಯ ಸ್ವಾತಂತ್ರ್ಯವನ್ನು ಕಾಪಾಡುವ ಜವಾಬ್ದಾರಿ ರಾಮಸಿಂಹದೇವನ ಪಾಲಿಗಿತ್ತು. ಅವನ ಸ್ವತಂತ್ರ ಜಾಯಮಾನ ಮತ್ತು ದೃಷ್ಟಿಕೋನ ಮಿಥಿಲೆಯ ಮೇಲೆ ದಾಳಿ ಮಾಡಿದನೆಂದು ಹೇಳಲಾಗಿರುವ ತುಘ್ರಿಲ್ - ತುಘಾನನ ಲಕ್ಷ್ಯ ಸೆಳೆಯಿತು. ಈ ದಾಳಿಯಿಂದ ತುಘ್ರಿಲ್-ತುಘಾನನಿಗೆ ಹೇರಳ ಲೂಟಿ ಲಭಿಸಿತೆ ಹೊರತು ಶರಣಾಗತಿಯಲ್ಲ ಎಂದು ಜದೂನಾಥ ಸರಕಾರ ಅತ್ಯಂತ ಸರಿಯಾಗಿ ಹೇಳಿರುವರು.[29] ಗುಲಾಮ ವಂಶದ ಅರಸ ಬಲ್ಬನ್ ಕೂಡ ಮಿಥಿಲೆಯ ಗಡಿಗಳ ವರೆಗೆ ಧಾವಿಸಿದ್ದನು.[30] ಅವನು ಮಿಥಿಲಾ ಮಾರ್ಗವಾಗಿ ಲಖ್ನೌತಿಯ ಮುಘಿಸುದ್ದೀನನ ಮೇಲೆಯೂ ಸಾಗಿದನು. ಅವನ ಮುಂದರಿಕೆಯನ್ನು ಮಿಥಿಲಾ - ಲಖ್ನೌತಿ ಮಧ್ಯದಲ್ಲೆಲ್ಲೊ ತಡೆಯಲಾಯಿತು.

ಮೇಲಾಗಿ, ನಿಜ ಸಂಗತಿಯೇನೆಂದರೆ, ಬಿಹಾರ, ಔಧ ಮತ್ತು ಲಖ್ನೌತಿಗಳ ಮುಸ್ಲಿಮ ಮಂಡಲಾಧಿಪತಿಗಳಲ್ಲಿದ್ದ ಒಡಕುಗಳು ಮತ್ತು ತಮ್ಮತಮ್ಮ ರಾಜ್ಯಗಳನ್ನು ಭದ್ರಪಡಿಸುವಲ್ಲಿನ ಅನೇಕ ಆಂತರಿಕ ಸಮಸ್ಯೆಗಳು ಮಿಥಿಲೆಯತ್ತ ಸಾಗಲು ಮತ್ತು ಅದನ್ನು ವಶಪಡಿಸಿಕೊಳ್ಳಲು ಅವರಿಗೆ ಅವಕಾಶ ನೀಡಲಿಲ್ಲ. ರಾಮಸಿಂಹದೇವನಿಗೆ ಅಧ್ಯಾರೋಪಿಸಿರುವ "ಭುಜಬಲಭೀಮ" ಮತ್ತು "ಭೀಮಪರಾಕ್ರಮ"ಗಳಂಥ ಆಡಂಬರದ ಬಿರುದುಗಳು ಮತ್ತು ಹಾಗೆಯೇ, ಧರ್ಮಸ್ವಾಮಿಯ ಪ್ರಮಾಣವು ರಾಮಸಿಂಹದೇವನು "ಮುಸ್ಲಿಮ ಖಡ್ಗಗಳ ತೀಕ್ಷ್ಣ ಧಾರೆಗಳನ್ನು ಕುಂಠಿತಗೊಳಿಸುವಲ್ಲಿ" ಕೊಡುಗೆ ನೀಡಿದನೆಂದು ಅಭಿಪ್ರಾಯ ತಳೆಯಲು ಸಹಾಕಯವಾಗಿದೆ.[31] ಮಿಥಿಲೆಯ ಸ್ವಾತಂತ್ರ್ಯವನ್ನು ಸಾಧಿಸಲಾಯಿತು ಮತ್ತು ಕಾಪಾಡಲಾಯಿತು. ರಾಮಸಿಂಹದೇವನ ಯಾವುದೇ ವೀರಕೃತ್ಯಗಳ ಬಗೆಗೆ ನಮಗೇನೂ ತಿಳಿಯದೆಂಬುದು ನಿಜವಾದರೂ ಅವನು ತನ್ನ ರಾಜ್ಯವನ್ನು ಮತ್ತು ಹಿತಾಸಕ್ತಿಗಳನ್ನು ಸಂರಕ್ಷಿಸಲೋಸುಗ ಮುಸ್ಲಿಮ ವೈರಿಗಳೊಂದಿಗೆ ಕಾದಾಡಬೇಕಾಯಿತೆಂಬುದಂತೂ ನಿಶ್ಚಿತವಿದೆ. ಈ ತೊಡಕುಗಳಲ್ಲಿ ಅವನು ಶ್ಲಾಘನೀಯ ಯಶಸ್ಸು ಪಡೆದನು. ಇವೆಲ್ಲ ವಿವರಗಳನ್ನು ಪರಿಶೀಲಿಸಿದರೆ ರಾಮಸಿಂಹದೇವನು ಎಲ್ಲ ರೀತಿಯಲ್ಲೂ ಒಬ್ಬ ಯಶಸ್ವಿ ಅರಸನಾಗಿದ್ದನೆಂಬ ತೀರ್ಮಾನಕ್ಕೆ ಬರುವೆವು.

## ಶಕ್ತಿಸಿಂಹದೇವ ಅಥವಾ ಶಕ್ರಸಿಂಹದೇವ

ಶಕ್ತಿಸಿಂಹದೇವನ ಅಧಿಕಾರಾರೋಹಣವು ಕರ್ನಾಟ ರಾಜವಂಶದ ಇನ್ನೊಂದು ವಾದವಿವಾದವನ್ನು ಸೃಷ್ಟಿಸಿದೆ. ಶಕ್ರಸಿಂಹದೇವನು ರಾಮಸಿಂಹದೇವನ ತರುವಾಯ ಪಟ್ಟಕ್ಕೆ ಬಂದನೆಂದು ಮಿಥಿಲಾ ಐತಿಹ್ಯ ಸಾರುತ್ತದೆ.[32] ಶಕ್ತಿಸಿಂಹದೇವನು[33] ರಾಮಸಿಂಹದೇವನ ಉತ್ತರಾಧಿಕಾರಿಯೆಂಬುದು ಇನ್ನೊಂದು ಅಭಿಮತ. ಪ್ರತಾಪಮಲ್ಲನ ಶಾಸನದಲ್ಲಿ[34] ಶಕ್ತಿಸಿಂಹದೇವನನ್ನು ಉಲ್ಲೇಖಿಸಲಾಗಿದೆ. ಈ ಪ್ರಮಾಣವು ವಿರೋಧಾತ್ಮಕವಾಗಿರುವುದು

ನಿಸ್ಸಂದೇಹ. ಆದುದರಿಂದ, ರಾಮಸಿಂಹದೇವನ ತರುವಾಯದ ಉತ್ತರಾಧಿಕಾರದ ಸಮಸ್ಯೆಯನ್ನು ಚರ್ಚಿಸುವುದೊಳಿತು. ಸುವಿಖ್ಯಾತ ಇತಿಹಾಸಕಾರರು ಕೈಗೊಂಡ ಅನೇಕ ಸಂಶೋಧನೆಗಳ ಬಳಿಕವೂ ಕರ್ನಾಟ ಅರಸರ ಆಳ್ವಿಕೆಗೆ ಸಂಬಂಧಪಟ್ಟ ಮಿಥಿಲಾ ಕಾಲಾನು - ಕ್ರಮಣಿಕೆಯ ಒಟ್ಟು ಪ್ರಶ್ನೆ ಮಹಾ ಗೊಂದಲ ಸ್ಥಿತಿಯಲ್ಲಿಯೆ ಇದೆ. ಮಿಥಿಲಾ ಐತಿಹ್ಯವಲ್ಲದೆ ಕೈಸರನ ಖಾಸಗಿ ಗ್ರಂಥಾಲಯದಲ್ಲಿರುವ ಮತ್ತು ಕೆ.ಪಿ.ಜಯಸ್ವಾಲರು[35] ಪರಾಮರ್ಶಿಸಿರುವ ವಂಶಾವಳಿಯೂ ಶಕ್ರಸಿಂಹದೇವನು ರಾಮಸಿಂಹದೇವನ ಉತ್ತರಾಧಿಕಾರಿಯೆಂದು ಹೇಳುತ್ತದೆ. ಕೈಸರನ ವಶದಲ್ಲಿರುವ ವಂಶಾವಳಿ ಮತ್ತು ಮುದಿತಕುವಲಾಯಶ್ವ ತೀರ ವಿರುದ್ಧಾತ್ಮಕವಾದ ಅಭಿಪ್ರಾಯ ಮತ್ತು ವೃತ್ತಾಂತಗಳನ್ನು ಮುಂದಿಡುತ್ತವೆ. ಶಕ್ತಿಸಿಂಹದೇವ ಅಥವಾ ಶಕ್ರಸಿಂಹದೇವನ ಬದಲಾಗಿ ಅವು ಭಾವಸಿಂಹದೇವನೆಂಬುವನೊಬ್ಬನನ್ನು ಕಾಣಿಸುತ್ತವೆ. *ಕಾಶಿಕವಿವರಣಪಂಜಿಕಾ*[36] ಹಸ್ತಪ್ರತಿಯಲ್ಲಿ ಕ್ರಿ.ಶ. ೧೨೮೦, ನವೆಂಬರ್ ೧೮ ರಂದು ಮಿಥಿಲೆಯನ್ನಾಳುತ್ತಿದ್ದ ಅರಸ ವೀರಸಿಂಹದೇವನ ಹೆಸರು ಕಾಣಸಿಗುತ್ತದೆ. ಆದರೆ, ಮಿಥಿಲೆಯ ಇತಿಹಾಸದಲ್ಲಿ ವೀರಸಿಂಹನ ಯಾವ ಐತಿಹ್ಯವನ್ನೂ ಹೆಸರಿಸಲಾಗಿಲ್ಲ. ಹಾಗಾಗಿ, ಈ ಹೆಸರನ್ನು ಸ್ವೀಕರಿಸಲು ಬರುವುದಿಲ್ಲ.

''ರಾಮಸಿಂಹದೇವನ ಉತ್ತರಾಧಿಕಾರಿಯ ಹೆಸರುಗಳ ಹೊಯ್ದಾಟವು ಅಂತರ್ಯುದ್ಧದ ಕಾಲಾವಧಿಯನ್ನು ಸೂಚಿಸುವಂತಿದೆ''[37] ಎಂದು ಪೆಟೆಕ್‌ರು ಅಭಿಪ್ರಾಯಪಡುತ್ತಾರೆ. ಕರ್ನಾಟ ಕಾಲಾನುಕ್ರಮಣಿಕೆಯಲ್ಲಿ ನಮಗೆ ಗೊತ್ತಿರುವ ಕೆಲವೇ ಕೆಲವು ನಿಶ್ಚಿತ ದಿನಾಂಕಗಳಿವೆ:

೧. ಕ್ರಿ.ಶ. ೧೦೯೭ ರಲ್ಲಿ ನಾನ್ಯದೇವನ ಸಿಂಹಾಸನಾರೋಹಣ
೨. ಕ್ರಿ.ಶ. ೧೧೮೩ ರಲ್ಲಿ ರಾಮಸಿಂಹದೇವನ ಜನನ
(ಪೆಟೆಕ್, ಪುಟ ೧೯೪)
೩. ಕ್ರಿ.ಶ. ೧೨೨೭ ರಲ್ಲಿ ರಾಮಸಿಂಹದೇವನ ಸಿಂಹಾಸನಾರೋಹಣ
(ಧರ್ಮಸ್ವಾಮಿ)

ದಿನಾಂಕಗಳ ನಿಶ್ಚಿತತೆಯ ಬಗೆಗೆ ನೇಪಾಳಿ ಆಕರಗಳು ನಮ್ಮನ್ನು ಇನ್ನಷ್ಟು ಕಂಗೆಡಿಸುತ್ತವೆ. ಈ ಆಕರಗಳ ಪ್ರಕಾರ, ಶಕ್ತಿಸಿಂಹದೇವ ಮತ್ತು ಹರಿಸಿಂಹದೇವರ ಮಧ್ಯೆ ಭೂಪಾಲಸಿಂಹ ದೇವ ಅಥವಾ ಕರ್ಮಸಿಂಹದೇವನು ಅರಸನಾಗಿದ್ದ. ಕೈಸರನ ಬಳಿಯಿರುವ ವಂಶಾವಳಿಯನ್ನಾಧರಿಸಿ ಪೆಟೆಕ್‌ರು (ಪುಟ ೧೫) ಕರ್ನಾಟರ ಕಾಲಾನುಕ್ರಮಣಿಕೆಯನ್ನು ಸರಿಯಾಗಿ ರಚಿಸಿರುವುದು ಹೀಗೆ: ಕ್ರಿ.ಶ. ೧೦೯೭ ರಲ್ಲಿ ನಾನ್ಯದೇವನು ಸಿಂಹಾಸನವೇರಿದನು; ನರಸಿಂಹದೇವನ ತರುವಾಯ ರಾಮಸಿಂಹದೇವ, ರಾಮಸಿಂಹದೇವನ ತರುವಾಯ ಭಾವಸಿಂಹದೇವ; ಭಾವಸಿಂಹದೇವನ ತರುವಾಯ ಕರ್ಮಸಿಂಹದೇವ; ಕರ್ಮಸಿಂಹದೇವನ ತರುವಾಯ ಅವನ ಮಗ ಹರಿಸಿಂಹದೇವನು ಶಕ ೧೨೦೫ / ಕ್ರಿ.ಶ. ೧೨೮೩ ರಲ್ಲಿ ಅಧಿಕಾರಕ್ಕೆ ಬಂದನು. ತುಕ್ಸಿ ವಶದಲ್ಲಿರುವ ವಂಶಾವಳಿಯಲ್ಲಿ ರಾಮಸಿಂಹದೇವನವರೆಗಿನ ಕಾಲಾನುಕ್ರಮಣಿಕೆ ಮೇಲ್ಕಾಣಿಸಿದಂತೆಯೆ ಇದೆ. ಅದಾದ ಮೇಲೆ ಅದು ಒಮ್ಮೆಲೆ ಕೊನೆಗೊಳ್ಳುತ್ತದೆ. ತುಕ್ಸಿ

ಬಳಿಯಲ್ಲಿರುವ ವಂಶಾವಳಿಯಲ್ಲಿನ ಎರಡು ನಿಶ್ಚಿತ ದಿನಾಂಕಗಳೆಂದರೆ ಶಕ ೧೦೧೯ ಮತ್ತು ೧೨೦೯. ಅವು ಪರಿಶೀಲನೆಯಲ್ಲಿರುವ ಕಾಲಘಟ್ಟದ ಕಾಲಾನುಕ್ರಮಣಿಕೆಯನ್ನು ಉಚಿತ ಪರಿಪ್ರೇಕ್ಷ್ಯದಲ್ಲಿಡುತ್ತವೆ. ಆಧುನಿಕ ಸಂಶೋಧಕರು ಸಹ ಅತ್ಯಂತ ನಿಖರವಾದ ದಿನಾಂಕ ಒದಗಿಸುವ ಸ್ಥಿತಿಯಲ್ಲಿ ಇನ್ನೂ ಇಲ್ಲ.

ರಾಮಸಿಂಹದೇವನ ನಂತರ ಮಿಥಿಲೆಯ ಇತಿಹಾಸದಲ್ಲಿ ಅತ್ಯಂತ ಕುತೂಹಲಕರ ಮತ್ತು ಅತ್ಯಧಿಕ ಗಮನ ಸೆಳೆಯುವ ಅಂಶವೆಂದರೆ, ಅರಸನೆಂದು ಮಿಥಿಲಾ ಐತಿಹ್ಯಗಳಲ್ಲಿ ಶಕ್ತಿಸಿಂಹದೇವ ಅಥವಾ ಶಕ್ರಸಿಂಹದೇವನ ಉಲ್ಲೇಖ. ಅದಕ್ಕಿಂತ ಕಡಿಮೆ ಸಲ ಮಿಥಿಲೆಯ ಅರಸನೆಂದು ಭೂಪಾಲಸಿಂಹದೇವನನ್ನು ಉಲ್ಲೇಖಿಸಲಾಗಿದೆ. ನೇಪಾಳಿ ಐತಿಹ್ಯಗಳಲ್ಲಿ ಈ ಹೆಸರುಗಳಿಗೆ ಆಳ್ವಿಕೆ ಕಾಲವನ್ನು ಗೊತ್ತುಪಡಿಸಿಲ್ಲ. ಆದರೆ ಮಿಥಿಲಾ ಐತಿಹ್ಯದಲ್ಲಿ ವೀರಸಿಂಹದೇವನು ಕ್ರಿ.ಶ. ೧೨೬೦ ರಲ್ಲಿ ಮಿಥಿಲೆಯನ್ನಾಳುತ್ತಿದ್ದುದು ಕಂಡುಬರುತ್ತದೆ. ವಂಶವೃಕ್ಷಗಳು ಇಲ್ಲದುದರಿಂದ ನಾನ್ಯದೇವನ ಮರಣಾನಂತರ ಮಲ್ಲದೇವನು ಒಡೆಯನಾಗಿದ್ದ ತಿರಹತ್‌ನ ಭಾಗವನ್ನು ವೀರಸಿಂಹದೇವನು ಆಳುತ್ತಿದ್ದನೆಂದು ಗ್ರಹಿಸಬಹುದು. ಅವನು ಮಲ್ಲದೇವನ ವಂಶಜನಾಗಿದ್ದಿರಲೂಬಹುದು. ಹಾಗಾಗಿ, ಮಿಥಿಲಾ ಐತಿಹ್ಯದಲ್ಲಿ ಅವನನ್ನು ಕಡೆಗಣಿಸಿದಂತಿದೆ. ಅವನು ನಾನ್ಯದೇವನ ನೇರ ಉತ್ತರಾಧಿಕಾರದ ನೇರ ಸಾಲಿನಲ್ಲಿರದ್ದರಿಂದ ನೇಪಾಳಿ ಆಕರಗಳೂ ಸಹ ಅವನನ್ನು ಉಲ್ಲೇಖಿಸುವ ಗೊಡವೆಗೆ ಹೋಗಿಲ್ಲ. ಶಕ್ತಿಸಿಂಹದೇವನ ಬಗೆಗೂ ಗಂಭೀರ ಸಂದೇಹಗಳಿವೆ. ವಂಶಾವಳಿಯಲ್ಲಿ ಶಕ್ತಿಸಿಂಹದೇವನು ರಾಮಸಿಂಹದೇವನ ನೇರ ಸಂತತಿಯವನಾಗಿ ಬರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ, ಶಕ್ತಿಸಿಂಹದೇವನು ವೀರಸಿಂಹದೇವನ ಮತ್ತು ಮಲ್ಲದೇವನ ವಂಶಜನೆಂದು ಗ್ರಹಿಸಬಹುದು. ನಮಗಿಂದು ಇರುವ ತಿಳುವಳಿಕೆಯ ಸ್ಥಿತಿಯಲ್ಲಿ, ರಾಮಸಿಂಹದೇವನ ನಂತರ ಅಂತರ್ಯುದ್ಧವಾಗಿತ್ತೆಂಬ ಪೆಟೆಕ್‌ರ ಅಭಿಪ್ರಾಯವನ್ನು ಒಪ್ಪಲು ಸಾಧ್ಯವಿಲ್ಲ. ಶಕ್ರಸಿಂಹದೇವನು (ಶಕ್ತಿಸಿಂಹದೇವನು) ಮಿಥಿಲೆಯ ಪೂರ್ವ ಭಾಗದಲ್ಲಿ ಆಳುತ್ತಿದ್ದನು ಮತ್ತು ಹರಿಸಿಂಹದೇವನು ಸಿಮರಾಂಗಢದ ಪಿತ್ರಾರ್ಜಿತ ಪ್ರದೇಶದ ಮೇಲೆ ತನ್ನ ಪ್ರಭುತ್ವ ವಿಸ್ತರಿಸಿಕೊಂಡಿದ್ದನು ಎಂಬುದು ಮತ್ತೊಂದು ಸಂಭಾವ್ಯ ವಿವರಣೆ. ಭಾವಸಿಂಹದೇವನು ರಾಮಸಿಂಹದೇವನ ಮಗನೇ ಆಗಿದ್ದರೆ ಅವನು ನಿಶ್ಚಿತವಾಗಿಯೂ ತಂದೆಗಿಂತ ಮೊದಲ ಮೃತನಾದನು.

ಯಾವುದೆ ಐತಿಹ್ಯದಲ್ಲಿ ಭಾವಸಿಂಹದೇವನು ಸ್ಥಾನ ಪಡೆದಿಲ್ಲ. ಹೀಗೆ, ರಾಮಸಿಂಹ ದೇವನ ಮರಣಾನಂತರ ಉಂಟಾದ ಗೋಜಲು ಐತಿಹ್ಯದಲ್ಲಿ ಕಲಸುಮಲಸಾಗಿದೆ. ಅಲ್ಲೊಂದಿಲ್ಲೊಂದು ಸಣ್ಣಪುಟ್ಟ ವ್ಯತ್ಯಾಸಗಳನ್ನು ಬಿಟ್ಟರೆ ಈ ಐತಿಹ್ಯವನ್ನು ಅತ್ಯಂತ ವಿಶ್ವಾಸಾರ್ಹವಾಗಿ ಸಂರಕ್ಷಿಸಿಡಲಾಗಿದೆ. ಇನ್ನೂ ಒಂದು ಸಾಧ್ಯತೆಯುಂಟು. ಮಲ್ಲದೇವನ ಸಂತತಿಯವನಾದ ಶಕ್ತಿಸಿಂಹದೇವನು ಈ ಗೊಂದಲದ ಲಾಭ ಪಡೆದುಕೊಂಡಿರಬಹುದು. ಆದರೆ, ಅವನನ್ನು ಹರಿಸಿಂಹದೇವನು ಹೊಡೆದೋಡಿಸಿರಬಹುದು. ಹಾಗಾಗಿ, ವೃತ್ತಾಂತ ಕಾರರು ಹೀಗೆ ವಿಷಯವನ್ನು ಗೋಜಲಿಸಿಕೊಂಡಿರುವರು. ಅವನು ತಳೆದ ನಿರಂಕುಶ ನಿಲುವು,

ತತ್ಫಲವಾಗಿ ಅವನ ಸರದಾರರಲ್ಲಿ, ಆಸ್ಥಾನಿಕರಲ್ಲಿ ಉಂಟಾದ ರೋಷಪೂರ್ಣ ಭಾವನೆಗಳು ನಿಶ್ಚಿತವಾಗಿಯೂ ಅವನ ಆಳ್ವಿಕೆಯಲ್ಲಿ ಜರುಗಿದ ಅಸಾಮಾನ್ಯ ಘಟನೆಯೊಂದನ್ನು ಸೂಚಿಸುತ್ತವೆ. ಅದೇನಿದ್ದರೂ, ರಾಮಸಿಂಹದೇವನನ್ನು ಕ್ರಿ.ಶ. ೧೨೭೯ ಕ್ಕಿಂತ ಹಿಂದಕ್ಕೆ ತಳ್ಳುವಂತಿಲ್ಲ. ಕರ್ಮಸಿಂಹದೇವನು ಆವನ ಮೊಮ್ಮಗನೆನ್ನುವ ಮಟ್ಟಿಗೆ ನಾವು ಹೋದರೂ ಅವನನ್ನು ಶಕ್ರಸಿಂಹದೇವನು ಪದಚ್ಯುತಗೊಳಿಸಿದ್ದನ್ನು ಒಪ್ಪಬೇಕಾಗುತ್ತದೆ. ಶಕ್ರಸಿಂಹದೇವನ ಆರಂಭಿಕ ಯಶಸ್ಸು ಅವನನ್ನು ಗರ್ವಿಷ್ಠನನ್ನಾಗಿಸಿತು ಮತ್ತು ಇದರಿಂದ ಅವನ ಸರದಾರರಲ್ಲಿ ಅಸಮಾಧಾನ ಉಂಟಾಯಿತು. ತಾವು ಅಂತಿಮವಾಗಿ ಅಲಕ್ಷ್ಯಕ್ಕೊಳಪಡುವಷ್ಟರ ಮಟ್ಟಿಗೆ ಅರಸನ ಅಧಿಕಾರ ಮತ್ತು ಶಕ್ತಿ ಅಧಿಕಗೊಳ್ಳುವುದನ್ನು ಅವರು ಸಹಿಸದಾದರು. ಶಕ್ರಸಿಂಹದೇವನು ಸಕ್ಕೂರಿ (ಆಧುನಿಕ ಸಕೂರಿ) ಮತ್ತು ಸುತ್ತಮುತ್ತಲಿನ ಪ್ರದೇಶಗಳೊಂದಿಗೆ ತೃಪ್ತನಾಗಿದ್ದುದು ಸ್ಥಾಪಿತ ಸಂಗತಿಯಾಗಿದೆ. ಹರಿಸಿಂಹದೇವನು ಸಿಮರಾಂವಗಡದ ಬಳಿಯ ಪ್ರದೇಶದ ಪ್ರಭುವಾಗಿದ್ದನು. ಮಲ್ಲದೇವನ ವಂಶಜರು ಬೆಳಕಿಗೆ ಬರುವವರೆಗೆ ಸಮಸ್ಯೆ ನಿಗೂಢವಾಗಿಯೆ ಉಳಿಯುವುದು. ಲಭ್ಯವಿರುವ ವಿರಳ ಮಾಹಿತಿಯಾಧರಿಸಿ, ಬೇರೆ ವಂಶದವನಾಗಿದ್ದ ಶಕ್ರಸಿಂಹದೇವನು ಗಂಗದೇವ ಮತ್ತು ಮಲ್ಲದೇವರ ಎರಡು ಕರ್ನಾಟ ಮನೆತನಗಳೊಂದಿಗೆ ತನ್ನ ಸಂಬಂಧವನ್ನು ಸ್ಥಾಪಿಸಲೆತ್ನಿಸಿದರೂ ಜನರು ಮತ್ತು ಐತಿಹ್ಯ ಅವನನ್ನು ಮಿಥಿಲೆಯ ಅರಸನೆಂದು ಒಪ್ಪಿಕೊಳ್ಳಲಿಲ್ಲ.

ನೇಪಾಳ ಶಾಸನಗಳಲ್ಲಿ ಬರುವ ಶಕ್ತಿಸಿಂಹದೇವನನ್ನು ಸಕ್ಕೂರಿಯ ಪಾರಂಪರಿಕ ಸಂಸ್ಥಾಪಕನಾದ ಶಕ್ರಸಿಂಹದೇವನೆಂದು ಗೊಂದಲ ಮಾಡಿಕೊಳ್ಳಲಾಗಿದೆ.[38] ರಾಮಸಿಂಹ ದೇವನ ಮರಣಾನಂತರ ನಲವತ್ತರ ದಶಕದ ಆದಿಯಲ್ಲಿ ಅವನು ಸಿಂಹಾಸನವೇರಿದನೆಂದು ಗ್ರಹಿಸಲಾಗಿದೆ. ಅವನು ಅಲ್ಲಾವುದ್ದೀನ ಖಿಲ್ಜಿಯ ಸಮಕಾಲೀನನಾಗಿದ್ದನೆಂದೂ ಹೇಳಲಾಗಿದೆ. ಹಿಜರಿ ಶಕೆ ೫೯೭ (ಕ್ರಿ.ಶ. ೧೧೯೬) ರಲ್ಲಿ ಮಿಥಿಲೆಯ ಮೇಲೆ ಮುಸ್ಲಿಮ ದಾಳಿ ನಡೆಯಿತು ಮತ್ತು ಶೇಖ ಮೊಹಮ್ಮದ ಇಸ್ಮಾಯಿಲನು ಮುಸ್ಲಿಮ ಸೈನ್ಯದ ಮುಂದಾಳು ಹಾಗೂ ದಂಡನಾಯಕನಾಗಿದ್ದನೆಂದು ಹೇಳಲಾಗಿದೆ. ಮಿಥಿಲೆಯ ಕರ್ನಾಟರು ಮೊದಲ ಜಯ ಸಾಧಿಸಿದರು, ಆದರೆ ಅದೃಷ್ಟದ ಕೃಪೆ ಅಲ್ಪಕಾಲದ್ದಾಗಿತ್ತು. ಕೊನೆಯಲ್ಲಿ ಕರ್ನಾಟರು ದಾಳಿಕಾರರಿಗೆ ಕಪ್ಪ ಕೊಡಬೇಕಾಯಿತು. ಪ್ರಾರಂಭದಲ್ಲಿ ಮಿಥಿಲೆಯ ಹಿಂದೂ ಅರಸನನ್ನು ಸೆರೆಹಿಡಿಯಲಾಯಿತು, ನಿಯಮಿತವಾಗಿ ಕಪ್ಪ ಕೊಡಲು ಅವನು ಭರವಸೆಯಿತ್ತಾಗ ಅವನನ್ನು ಬಿಡುಗಡೆಗೊಳಿಸಿ ಅಲ್ಲಾವುದ್ದೀನ ಖಿಲ್ಜಿಯ ಹಿಂದೂ ಸೈನ್ಯದ ಮಹಾದಂಡ ನಾಯಕನಾಗಿ ನೇಮಿಸಲಾಯಿತೆಂದೂ ಅಭಿಪ್ರಾಯಪಡಲಾಗಿದೆ.[39] ಅವನು ರಣತಂಬೋರಿನ ರಾಜಾ ಹಮ್ಮೀರದೇವನ ವಿರುದ್ಧ ಅಲ್ಲಾವುದ್ದೀನ ಖಿಲ್ಜಿಗೆ ಸಹಾಯ ಮಾಡಿದನೆಂದು ಹೇಳಲಾಗಿದೆ. ಮುಸ್ಲಿಮ ಆಕ್ರಮಣಕಾರರ ಮತ್ತು ಮಿಥಿಲೆಯ ಶಕ್ರಸಿಂಹದೇವನ ಮಧ್ಯೆ ಪಾರಮ್ಯಕ್ಕಾಗಿ ಕಾದಾಟ ನಡೆದು ಶಕ್ರಸಿಂಹದೇವನು ಸೋತನೆಂದು ದರ್ಭಾಂಗಾದ ಮಸೀದೆ ಯೊಂದು ನೆನಪಿಸುತ್ತದೆ. ಇಲ್ಲದಿದ್ದರೆ, ಮಸೀದೆಯನ್ನು ಪೂರ್ತಿಗೊಳಿಸಲಾಗುತ್ತಿರಲಿಲ್ಲ. ಸಕ್ಕೂರಿ ಮತ್ತು ಸುಖಿದಿಘಿ ಇನ್ನೂ ಈ ಅರಸನನ್ನು ಸ್ಮರಿಸುತ್ತವೆ.

ಶಕ್ರಸಿಂಹದೇವನು ತನ್ನ ಮಂತ್ರಿಗಳಾದ ದೇವಾದಿತ್ಯ ಮತ್ತು ವೀರೇಶ್ವರರೊಂದಿಗೆ ಅಲ್ಲಾವುದ್ದೀನ ಖಿಲ್ಜಿಯ ದರಬಾರಿಗೆ ಹೋಗಿದ್ದನೆಂಬ ಕಥನವೊಂದನ್ನು ಮಿಥಿಲೆಯ ಐತಿಹ್ಯವೊಂದು ಸಂರಕ್ಷಿಸಿಟ್ಟಿದೆ. ಚಾಂದೇಶ್ವರನ *ಕೃತ್ಯಚಿಂತಾಮಣಿ* ಮತ್ತು *ಪ್ರಾಕೃತ ಪೈಂಗಲ*ಗಳಂಥ ಸಮಕಾಲೀನ ಸಾಹಿತ್ಯದಲ್ಲಿ ಹಮ್ಮೀರನನ್ನು ಉಲ್ಲೇಖಿಸಿರುವುದರಿಂದ ರಣತಂಬೋರಿನ ರಾಜಾ ಹಮ್ಮೀರದೇವನ ವಿರುದ್ಧ ಅಲ್ಲಾವುದ್ದೀನ ಖಿಲ್ಜಿಗೆ ಶಕ್ತಿಸಿಂಹ ದೇವನು ಮಾಡಿದನೆನ್ನಲಾದ ಸಹಾಯ ದೃಢಪಡುತ್ತದೆ. ಅಲ್ಲಾವುದ್ದೀನ ಖಿಲ್ಜಿಗೆ ನೀಡಲಾದ ಈ ಸಹಾಯಕೃತ್ಯವನ್ನು ಸಿದ್ಧಪಡಿಸುವ ಇನ್ನೊಂದು ಸಾಧ್ಯತೆಯುಂಟು. ಬಂಗಾಲದ ಸುಲ್ತಾನ ರುಕುನುದ್ದೀನ ಕೈಕಸ್‌ನ ಮಂಡಲಾಧಿಪತಿಯಿಂದ ತನ್ನನ್ನು ಸಂರಕ್ಷಿಸಿಕೊಳ್ಳಲು ಶಕ್ರಸಿಂಹದೇವನು ಅಲ್ಲಾವುದ್ದೀನ ಖಿಲ್ಜಿಗೆ ನೆರವು ನೀಡಿರಬಹುದು.

ಶಕ್ರಸಿಂಹದೇವನನ್ನು "ಹಮ್ಮೀರಧ್ವಾಂತಭಾನು" ಎಂದೂ ಕರೆಯಲಾಗುತ್ತಿತ್ತು. ಅಲ್ಲಾವುದ್ದೀನ ಖಿಲ್ಜಿಯು ದೇವಾದಿತ್ಯನಿಗೆ "ಮಂತ್ರಿರತ್ನಾಕರ" ಬಿರುದನ್ನಿತ್ತನು. ಶಕ್ರಸಿಂಹದೇವನು ಮಿಥಿಲೆಯ ಭಾಗವೊಂದನ್ನು ದಕ್ಷತೆಯಿಂದ ಆಳುತ್ತಿದ್ದನು ಮತ್ತು ಆದರಿಂದಾಗಿ ಅಲ್ಲಾವುದ್ದೀನ ಖಿಲ್ಜಿಯೊಂದಿಗೆ ಮಿತ್ರಸಂಬಂಧ ಸ್ಥಾಪಿಸಲು ಶಕ್ತನಾದನು ಎಂಬುದರಲ್ಲಿ ಸಂದೇಹವಿಲ್ಲ. ಅಲ್ಲಾವುದ್ದೀನ ಖಿಲ್ಜಿ ಸಾಧಿಸಿದ ನೇಪಾಳದ ವಿಜಯವನ್ನು ಒಪ್ಪುವುದಾದರೆ, ಶಕ್ರಸಿಂಹದೇವನೊಂದಿಗಿನ ಯುದ್ಧ ಮತ್ತು ತದನಂತರ ಅವನ ಸಹಕಾರದೊಂದಿಗೆ ಅಲ್ಲಾವುದ್ದೀನ ಖಿಲ್ಜಿಯು ನೇಪಾಳದೊಳಗೆ ನುಗ್ಗುವಲ್ಲಿ ಪ್ರಗತಿ ಸಾಧಿಸಿದನು ಮತ್ತು ಅವನ ಹೆಸರಿನಲ್ಲಿ ನಾಣ್ಯಗಳನ್ನು ಹೊರಡಿಸಲಾಯಿತು ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿದೆ. ಶಕ್ತಿಸಿಂಹದೇವ ಮತ್ತು ಅಲ್ಲಾವುದ್ದೀನ ಖಿಲ್ಜಿಯ ನಡುವಣ ಮೈತ್ರಿಯನ್ನು ಹಾಗೂ ರಾಜಾ ಹಮ್ಮೀರದೇವನ ವಿರುದ್ಧ ಜಂಟಿ ದಂಡಯಾತ್ರೆಯನ್ನು ಸೂಚಿಸಲು ಸದ್ಯಕ್ಕೆ ನಮಗೆ ಮಿಥಿಲೆಯ ಐತಿಹ್ಯಗಳು ಮತ್ತು ಮುಲ್ಲಾ ತಕಿಯಾ ನೀಡುವ "ಗೊಂದಲಾತ್ಮಕ ಮತ್ತು ರುಜುಪಡದ" ವರದಿಯನ್ನು ಬಿಟ್ಟು ಬೇರಾವ ಖಚಿತ ಪ್ರಮಾಣವಿಲ್ಲ.

ಸದ್ಯ ನಮಗಿರುವ ತಿಳುವಳಿಕೆಯ ಸ್ಥಿತಿಯಲ್ಲಿ, ಒಂದು ಮಹತ್ವದ ಆಂತರಿಕ ಪ್ರಮಾಣವನ್ನಾಧರಿಸಿ ನಾವು ಊಹೆಯೊಂದನ್ನು ಮಾಡಬಹುದು. ಬಂಗಾಲವು ಮಿಥಿಲೆಯ ಹೃದಯಪ್ರದೇಶದೊಳಕ್ಕೆ ತನ್ನ ಅಧಿಕಾರವನ್ನು ವಿಸ್ತರಿಸಿಕೊಂಡಿತು. ಮತ್ತು ಮಿಥಿಲೆಯ ಕರ್ನಾಟ ರಾಜ್ಯದ ವಿಸ್ತಾರ ಮತ್ತು ಗಾತ್ರ ಗಣನೀಯವಾಗಿ ಕುಗ್ಗಿದಂತಿತ್ತು. ಮೊಂಘಿರ ಜಿಲ್ಲೆಯ ಬೆಗುಸರಾಯಿ ಉಪವಿಭಾಗದಲ್ಲಿರುವ ಮಹೇಶ್ವರ ಗ್ರಾಮದ ಆಸುಪಾಸಿನಲ್ಲಿ ಗಂಡಕ ನದಿಯ ಉತ್ತರ ತೀರದ ಮೇಲೆ ಒಂದು ಭವ್ಯ ಕಟ್ಟಡದ ಪ್ರಸ್ತಾಪವನ್ನು ಬಿಹಾರದ ರುಕುನುದ್ದೀನ ಕೈಕಸ್‌ನ ಮಂಡಲಾಧಿಪತಿಯಾಗಿದ್ದ ಫಿರೂಜ ಐತಿಗಿನ್‌ನ ಮಹೇಶ್ವರ ಶಾಸನವು ಮಾಡುತ್ತದೆ. ಈ ಮಹತ್ವದ ಶಾಸನ ಪಾಠವನ್ನು ೧೯೫೬ ರಲ್ಲಿ ಆರ್.ಕೆ. ಚೌಧರಿ ಅವರು ಪುಣೆಯ ಭಂಡಾರಕರ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ ಬುಲೆಟಿನ್‌ಗಳಲ್ಲಿ ಕಂಡುಹಿಡಿದರು. ಶಾಸನ ದೊರಕಿದ್ದು ಮೊಂಘಿರ ಜಿಲ್ಲೆಯ ಬೆಗುಸರಾಯಿ ಉಪವಿಭಾಗದ

ಗಂಡಕ ತೀರದಲ್ಲಿರುವ ಮಹೇಶ್ವರ ಗ್ರಾಮದಲ್ಲಿ. ಬಂಗಾಲದ ಸುಲ್ತಾನನು ಈ ಪ್ರದೇಶದ ವರೆಗೆ ತನ್ನ ಅಧಿಕಾರ ವಿಸ್ತರಿಸಿದ್ದನು ಮತ್ತು ಸಹಜವಾಗಿಯೆ, ಕರ್ನಾಟರ ಅಧಿಕಾರವು ಗಣನೀಯವಾಗಿ ಮೊಟಕುಗೊಂಡಿದ್ದಿರಬೇಕೆಂದು ಕ್ರಿ.ಶ. ೧೨೯೦-೯೧ರ ಶಾಸನವು ಸೂಚಿಸುತ್ತದೆ. ಇಬ್ಬರ ನಡುವಿನ ಬಲಾಬಲ ಸ್ಪರ್ಧೆಯ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇಲ್ಲಿಯ ಫಿರೂಜ ಐತಿಗಿನ್‌ನ ಆಡಂಬರದ ಬಿರುದುಗಳು ಅವನು ಸಾಕಷ್ಟು ಬಲಶಾಲಿಯಾಗಿದ್ದುದನ್ನು ಸೂಚಿಸುತ್ತವೆ. ಅದು ಈಶಾನ್ಯ ಭಾರತದಲ್ಲಿ ದೊರೆತ ಅತಿ ಪ್ರಾಚೀನ ಶಾಸನಗಳಲ್ಲೊಂದು. ಅದರ ಆಧಾರದ ಮೇಲೆ, ಗಂಡಕ ಮತ್ತು ಗಂಗಾ ನದಿಗಳ ಮಧ್ಯದ ಕರ್ನಾಟ ರಾಜ್ಯದ ಬಹುಭಾಗವು ಬಲಾಢ್ಯ ಬಂಗಾಲ ಸುಲ್ತಾನನ ಕೈಸೇರಿತ್ತೆಂದು ನಂಬುವುದು ಯುಕ್ತವಾಗಿದೆ. ಮಿಥಿಲೆಯ ಹಿಂದೂ ಅರಸರು ಆಗ 'ವೇತಸಿವೃತ್ತಿ' ನೀತಿಯನ್ನು ಅನುಸರಿಸುತ್ತಿದ್ದರು. ಆದ್ದರಿಂದ ಶಕ್ತಿಸಿಂಹದೇವನು ಅಲ್ಲಾವುದ್ದೀನ ಖಿಲ್ಜಿಯಿಂದ ಪರಾಭವ ಗೊಂಡ ಬಳಿಕವೂ ಬಂಗಾಲದ ಸುಲ್ತಾನನ ಕೆಯ್ಯಾಲಿಯ ಎದುರು ಸಂರಕ್ಷಿಸಿಕೊಳ್ಳಲು ಅಲ್ಲಾವುದ್ದೀನ ಖಿಲ್ಜಿಯ ಮೈತ್ರಿ ಕೋರಿದ್ದು ಅಸಹಜವೇನಲ್ಲ. ಶಕ್ರಸಿಂಹದೇವನು ಮಲ್ಲದೇವನ ವಂಶಜನೆಂಬ ವಾದವನ್ನು ಒಪ್ಪುವುದಾದರೆ, ಅವನ ರಾಜ್ಯವು ತೀರಾ ಚಿಕ್ಕದಾಗಿತ್ತು, ಮುಸ್ಲಿಮರಿಂದ ಎಲ್ಲ ಕಡೆಯಿಂದಲೂ ನಿರಂತರ ಒತ್ತಡಕ್ಕೀಡಾಗಿತ್ತು ಮತ್ತು ಹಾಗಿದ್ದ ಪಕ್ಷದಲ್ಲಿ, ಅವನು ತನ್ನ ಸೇವೆಯನ್ನು ಅಲ್ಲಾವುದ್ದೀನ ಖಿಲ್ಜಿಗೆ ಸಲ್ಲಿಸಿದನು ಎಂದು ಊಹಿಸುವುದು ಉಚಿತ.

ಫಿರೋಜ ಐತಿಗಿನ್‌ನು ಗಂಡಕ ತೀರದ ಮೇಲೆ ದೊಡ್ಡ ಗೋಡೆಯನ್ನು ನಿಲ್ಲಿಸಿದುದು ಬಹುಶಃ ಮಿಥಿಲೆಯ ಕರ್ನಾಟ ಅರಸರ ಬದಿಯಿಂದ ಆಗಬಹುದಾದ ದಾಳಿಗಳನ್ನು ತಡೆಯಲೋಸುಗ. ಬಿಹಾರದಲ್ಲಿ ರುಕುನುದ್ದೀನ ಕೈಕಸ್‌ನ ಮಂಡಲಾಧಿಪತಿಯು ಉನ್ನತ ಬಿರುದುಗಳನ್ನು ಧರಿಸಿದುದು ಖಿಲ್ಜಿಗಳ ಬಗೆಗೆ ಬಲ್ಬನಿ ವಂಶಜರು ತಳೆದ ಭಾವನೆಯ ಪ್ರತೀಕವಾಗಿದೆ.[40] ಅದು ಏನೆ ಇರಲಿ, ಉತ್ತರ ಬಿಹಾರದ ಇತಿಹಾಸಕ್ಕೆ ಸಂಬಂಧಿಸಿದಂತೆ ಮಹೇಶ್ವರ ಶಾಸನವು ನಿಸ್ಸಂದೇಹವಾಗಿಯೂ ಒಂದು ವಿರಳ ಶೋಧವಾಗಿದೆ.[41] ಶಕ್ತಿಸಿಂಹದೇವನ ಮುಂದಾಳತ್ವದಲ್ಲಿ ಮಿಥಿಲೆಯ ಕರ್ನಾಟರ ವೈಭವ ನಿಶ್ಚಿತವಾಗಿಯೂ ಇಳಿಮುಖವಾದುದನ್ನು ಈ ಎಲ್ಲ ಪರಿಸ್ಥಿತಿಗಳು ವಿವರಿಸುತ್ತವೆ.

ಶಕ್ರಸಿಂಹದೇವನು ಧೈರ್ಯಶಾಲಿ ಹಾಗೂ ನಿರಂಕುಶ ಸ್ವಭಾವದ ಅರಸನಾಗಿದ್ದು ಅವನಿಗೆ ತನ್ನ ಪ್ರಜೆಗಳ ಹಿತದ ಪರಿವೆಯಿರಲಿಲ್ಲ. ಅವನು ದರ್ಪದ ಸ್ವಭಾವದವನೂ ಮುಂಗೋಪಿಯೂ ಆಗಿದ್ದನು. ಅವನು ನಿರಂಕುಶ ನಡತೆ ಮತ್ತು ಕಟುವಾದ ಮಾತುಗಳಿಂದ ತನ್ನ ಸರದಾರರ ಮನ ನೋಯಿಸಿದನು. ಅವನ ಮಂತ್ರಿಗಳಲ್ಲೊಬ್ಬನು ಅವನ ನಿರಂಕುಶತೆಗೆ ತಡೆಯೊಡ್ಡಲು ಏಳು ಪರಿಷ್ಕರ ಮಂಡಲಿಯನ್ನು ಸ್ಥಾಪಿಸಿದನು.[42] ಅರಮನೆಯೊಳಗೆ ಒಂದು ಬಗೆಯ ದಂಗೆ ನಡೆದು ಅರಸನು ನಿಜವಾದ ಅಧಿಕಾರ ಕಳೆದುಕೊಂಡನು. ಅವನ ಆಳ್ವಿಕೆ ಯಾವಾಗ ಮತ್ತು ಹೇಗೆ ಕೊನೆಗೊಂಡಿತೆಂದು ಖಚಿತವಾಗಿ ತಿಳಿಯದು. ಬಹುಶಃ ಆಗ ಇನ್ನೂ ಅಲ್ಪವಯಸ್ಕನಾಗಿದ್ದ ಹರಿಸಿಂಹದೇವನಿಗೆ ಸಿಂಹಾಸನ ಬಿಟ್ಟುಕೊಡುವಂತೆ

ಅರಮನೆಯ ದಂಗೆ ಒತ್ತಾಯಿಸಿದಂತಿದೆ. ವರಿಷ್ಠರ ಮಂಡಲಿಯು ಕಾರ್ಯಕಾರಿ ಅಧಿಕಾರ ಹೊಂದಿದ್ದುದು ಸಹಜ. ಹರಿಸಿಂಹದೇವನು ಪ್ರಾಪ್ತವಯಸ್ಕನಾಗಿ ಆಡಳಿತದ ಚುಕ್ಕಾಣಿ ಹಿಡಿಯುವ ವರೆಗೆ ವರಿಷ್ಠ ಮಂಡಲಿಯು ರಾಜಪ್ರತಿನಿಧಿಯಾಗಿ ಅಧಿಕಾರ ನಡೆಸಿತು.

## ಶಕ್ರಸಿಂಹದೇವನ ನಂತರದ ಉತ್ತರಾಧಿಕಾರ

ಪ್ರತಾಪಮಲ್ಲನ ಶಾಸನದಲ್ಲಿ ಶಕ್ತಿಸಿಂಹದೇವ ಮತ್ತು ಹರಿಸಿಂಹದೇವನ ಮಧ್ಯೆ ಭೂಪಾಲಸಿಂಹದೇವನೆಂಬ ಇನ್ನೊಬ್ಬ ಅರಸನ ಉಲ್ಲೇಖವಿದೆ.[43] ಆದರೆ ಮಿಥಿಲಾ ಐತಿಹ್ಯದಲ್ಲೆಲ್ಲೂ ಈತನ ಪ್ರಸ್ತಾಪವಿಲ್ಲ. ಮತ್ತು ನೇಪಾಳಿ ಆಕರಗಳಲ್ಲಿ ಅವನ ಆಳ್ವಿಕೆಯ ಅವಧಿಯನ್ನು ನಿಗದಿಪಡಿಸಿಲ್ಲ. ನೇಪಾಳ ವಂಶಾವಳಿಯಲ್ಲಿ ಹರಿಸಿಂಹದೇವನು ರಾಮಸಿಂಹದೇವನ ಉತ್ತರಾಧಿಕಾರಿಯೆಂದು ತೋರಿಸಲಾಗಿದ್ದರೆ ನೇಪಾಳಿ ಶಾಸನದಲ್ಲಿ ಅವನನ್ನು ಭೂಪಾಲಸಿಂಹದೇವನ ಮಗ ಮತ್ತು ಉತ್ತರಾಧಿಕಾರಿಯೆಂದು ತೋರಿಸಲಾಗಿದೆ ವಂಶಾವಳಿಗಳು ಗೊಂದಲಾತ್ಮಕ ಮತ್ತು ತಪ್ಪು ದಾರಿಗೆ ಎಳೆಯುವಂಥವಾಗಿದ್ದರೆ, ನೇಪಾಳಿ ಶಾಸನವು ಅತ್ಯಂತ ನಿಕಟವಾಗಿ ಮಿಥಿಲಾ ಐತಿಹ್ಯವನ್ನು ಅನುಸರಿಸುತ್ತದೆ. ಮಿಥಿಲೆಯ ಐತಿಹ್ಯಗಳಲ್ಲೊಂದರಲ್ಲಿ ಶಕ್ತಿಸಿಂಹದೇವನಿಗೆ ಭೂಪಾಲಸಿಂಹದೇವನೆಂಬ ಮಗನಿದ್ದನೆಂಬ ಉಲ್ಲೇಖವಿದೆ. ಭೂಪಾಲಸಿಂಹದೇವನು ಆಳಿದನೊ ಇಲ್ಲವೊ ಹೇಳುವುದು ಕಠಿಣವಿದೆ. ಪ್ರತಾಪಮಲ್ಲನ ಶಾಸನ, ಆಧುನಿಕ *ವಂಶಾವಳಿಗಳು* ಮತ್ತು ಕೆ.ಪಿ.ಜಯಸ್ವಾಲರು ಶಕ್ತಿಸಿಂಹದೇವ ಮತ್ತು ಹರಿಸಿಂಹದೇವನ ಮಧ್ಯೆ ಭೂಪಾಲಸಿಂಹದೇವನನ್ನು ಇಟ್ಟರೆ ಕೈಸರನಲ್ಲಿರುವ *ವಂಶಾವಳಿ* ಮತ್ತು *ಮುದಿತಕುವಲಾಯಶ್ವ* ಇವರೀರ್ವರ ಮಧ್ಯೆ ಕರ್ಮಸಿಂಹ ದೇವನನ್ನು ಇರಿಸುತ್ತದೆ. ಕೈಸರನಲ್ಲಿರುವ *ವಂಶಾವಳಿಯಲ್ಲಿ* ಭಾವಸಿಂಹದೇವನೆಂಬ ಮಗನಿದ್ದ ರಾಮಸಿಂಹದೇವನ ಪ್ರಸ್ತಾಪವಿದೆ. ಭಾವಸಿಂಹದೇವನ ಮಗನ ಹೆಸರು ಕರ್ಮಸಿಂಹದೇವನೆಂದಿದ್ದು ಅವನ ಮಗ ಹರಿಸಿಂಹದೇವನು ಶಕೆ ೧೨೦೫ ರಲ್ಲಿ ಸಿಂಹಾಸನವೇರಿದನು. ಭೂಪಾಲಸಿಂಹದೇವನ ಆಳ್ವಿಕೆಯನ್ನು ರುಜುಪಡಿಸುವ ಯಾವುದೆ ಅಂತ್ಯಪ್ರಶಸ್ತಿಯಾಗಲಿ ಸಾಹಿತ್ಯಕ ಯಾ ಶಾಸನಿಕ ಪ್ರಮಾಣವಾಗಲಿ ಇಲ್ಲ. ಒಂದು ವ್ಯತ್ಯಾಸವನ್ನು ಇಲ್ಲಿ ಗಮನಿಸಬೇಕು. ಪ್ರತಾಪಮಲ್ಲ ಶಾಸನವು ಕರ್ನಾಟ ರಾಜವಂಶದ ವಂಶವೃಕ್ಷವನ್ನು ನೀಡುತ್ತದೆಯೆ ಹೊರತು ಆ ರಾಜವಂಶದ ಆಳರಸರ ವಾಸ್ತವಿಕ ಹೆಸರುಗಳನ್ನು ನೀಡುವುದಿಲ್ಲ. ಆದರೆ *ವಂಶಾವಳಿಗಳು*, ಗೋಜಲಾಗಿದ್ದರೂ ಮಿಥಿಲೆಯ ಅರಸರ ಪಟ್ಟಿಯನ್ನು ಕೊಡುತ್ತವೆ. ಭೂಪಾಲಸಿಂಹದೇವ ಮತ್ತು ಕರ್ಮಸಿಂಹದೇವರ ನಡುವಿನ ಸಂಬಂಧವಾವುದೆಂಬುದೂ ನಮಗೆ ತಿಳಿಯದು. ಭೂಪಾಲಸಿಂಹದೇವನು ಹರಿಸಿಂಹದೇವನಿಗಿಂತ ಮೊದಲು ತೀರಿಕೊಂಡಂತಿದೆ. ಶಕ್ರಸಿಂಹದೇವನು ಅಥವಾ ಶಕ್ತಿಸಿಂಹದೇವನು ತನ್ನ ನಲವತ್ತನೆಯ ವರ್ಷದ ಆದಿಯಲ್ಲಿ ಮಿಥಿಲೆಯ ಸಿಂಹಾಸನವೇರಿದನು. ರಾಮಸಿಂಹದೇವನ ದೀರ್ಘ ಆಳ್ವಿಕೆಯ ಹಿನ್ನೆಲೆಯಲ್ಲಿ, ಅದು ತುಲನಾತ್ಮಕವಾಗಿ ತಡವಾದುದೆಂದೇ ಹೇಳಬೇಕು. ಶಕ್ರಸಿಂಹದೇವನ ಆಳ್ವಿಕೆಯ ಕಾಲಾವಧಿಯ ಬಗೆಗೆ ಖಚಿತವಾಗಿ ಹೇಳಲಾಗದು. ಲಕ್ಷ್ಮಣ ಸಂವತ್ ೧೪೯ ರದೆಂದು

ಕಾಲನಿರ್ಧರಿತ *ಭಟ್ಟಿಕಾವ್ಯ*ದ ಹಸ್ತಪ್ರತಿಯ (ನಂ.ಜಿ. ೪೭೯೫) ಅಂತ್ಯಪ್ರಶಸ್ತಿಯ ಆಧಾರವನ್ನು ಒಪ್ಪುವುದಾದರೆ, ಹರಿಸಿಂಹದೇವನು ಕ್ರಿ.ಶ. ೧೨೮೮/೧೨೭೬ ರಲ್ಲಿ ತನ್ನ ಆಳ್ವಿಕೆ ಆರಂಭಿಸಿದನು. ಈ ಆಧಾರವನ್ನು ಸಮರ್ಥಿಸುವ ಯಾವುದೆ ಸ್ಪಷ್ಟ ಮಾಹಿತಿ ಇಲ್ಲ. ಊಹೆ ಮಾಡಲೋಸುಗ ಈ ಏಕೈಕ ಪ್ರಮಾಣವನ್ನು ಯುಕ್ತವೆಂದು ಪರಿಗಣಿಸಿದ್ದಾದರೆ, ಹರಿಸಿಂಹದೇವನು ಸುಮಾರು ಐವತ್ತು ವರ್ಷ ಆಳಿದನೆಂದು ಒಪ್ಪಬೇಕಾಗುತ್ತದೆ. ಹಾಗಿದ್ದ ಪಕ್ಷದಲ್ಲಿ, ಅವನು ಅಲ್ಪವಯಸ್ಕನಾಗಿದ್ದಾಗಲೆ ಪಟ್ಟಕ್ಕೆ ಬಂದ ಸಾಧ್ಯತೆಯಿದೆ. ನಾನ್ಯದೇವನ ಸಂತತಿಯಲ್ಲಿ ಹರಿಸಿಂಹದೇವನು ಏಳನೆಯವನಾಗಿದ್ದರೂ ಕರ್ನಾಟ ರಾಜವಂಶದ ಆರನೆಯ ಮತ್ತು ಕೊನೆಯ ಅರಸನಾಗಿದ್ದನು.[44] ನೇಪಾಳಿ ಮತ್ತು ಮಿಥಿಲಾ ಐತಿಹ್ಯಗಳ ನಡುವೆ ಒಂದು ಅರ್ಥವಾಗದ ಅಂತರವಿದೆ. ಈ ನಿಗೂಢ ಪ್ರಶ್ನೆಗೆ ಸಾಧ್ಯತ: ಏಕೈಕ ಪರಿಹಾರ ಇಂತಿರಬಹುದು: ಭೂಪಾಲಸಿಂಹದೇವನು ಹರಿಸಿಂಹದೇವನಿಗಿಂತ ಮೊದಲು ಮೃತನಾದುದರಿಂದ ಮಿಥಿಲಾ ಐತಿಹ್ಯದಲ್ಲಿ ಅವನ ಉಲ್ಲೇಖವಿಲ್ಲ, ಅವನನ್ನು ನೇಪಾಳಿ ವಂಶಾವಳಿಯಲ್ಲಿ ಹೆಸರಿಸಿದ್ದರೂ ಕೂಡ. ಭೂಪಾಲಸಿಂಹದೇವನ ಆಳ್ವಿಕೆಯನ್ನು ರುಜುಪಡಿಸುವ ಯಾವುದ ಪ್ರಮಾಣವಿಲ್ಲ. ಭಾವಸಿಂಹದೇವ ಮತ್ತು ಕರ್ಮಸಿಂಹದೇವರ ಬಗೆಗೂ ಅಷ್ಟೆ. ಶಕ್ರಸಿಂಹದೇವನು ಯಾವ ವಂಶದವನೆ ಆಗಿರಲಿ, ಅವನ ನಂತರ ಹರಿಸಿಂಹದೇವನು ಅಧಿಕಾರಕ್ಕೆ ಬಂದುದಂತೂ ವಿವಾದಾತೀತ. ಈ ತೀರ್ಮಾನದೊಂದಿಗೆ, ಕಾಲಾನುಕ್ರಮಣಿಕೆಯಲ್ಲಿ ಅಲ್ಪ ವ್ಯತ್ಯಾಸವಿದ್ದರೂ ಹರಿಸಿಂಹದೇವನ ವರೆಗಿನ ಕರ್ನಾಟ ಉತ್ತರಾಧಿಕಾರದ ಸಮಸ್ಯೆ ಬಗೆಹರಿದಿದೆ ಎನ್ನಲಡ್ಡಿಯಿಲ್ಲ.

**ಟಿಪ್ಪಣಿಗಳು**

1. JIH, XXXIV p. 325.
2. JASB, (NS) XI pp. 412-13.
3. TM, pp. 266-67.
4. MTV, p. 115.
5. MD. p. 62, IA, (1880) p. 188 JBORS, X p. 46.
6. Todd, *Annals and Antiquities of Rajasthan*, p. 365.
7. ABOR, XXXV pp. 107-8
8. Ibid., p. 110.
9. Todd, *Annals and Antiquities of Rajasthan*, p. 110.
10. ST, p. 62. Cf. ABORI, p. 108
11. *Archaeological Report of the Terain Excavations*, p. 634.
12. *History of Bengal*-II. pp. 22-23. ABORI, XXXV p. 108. R.C. Mazumdar, *History and Culture of Indian People*, Vol. VI Cf. K.R. Kanungo : Arimalladeva, Cf. R.K. Choudhury : *Bihar and Nepal* in G.D. College, Bulletin No. 4.
13. R.K. Choudhury : *Inscriptions of Bihar.*
14. Ibid.

15. Cf. Petech. p. 193. Samvat 303 Chaitra Sukla Sri Narasimhadevasya putra Sri Ramsimhadevasajata : thow Thakura, Petech says, "The term Thakura is used in the Newari portions of all later Malla inscriptions and documents with the meaning of sovereign.
16. JASB, (NS) XI pp. 413. JASB, 1993, II p. 19.
17. IHQ, XXXI p. 287, JASB, (NS) XI pp. 413-432.
18. JHI, XXXIV pp. 323.325
19. *Proceedings of the Indian Historical Records Commission* (1951) p. 256.
20. K.P. Jayaswal, *Descriptive Catalogue of Mithila,* Vol. II. Introduction. pp. 10-11. Also the section *Kavyagranthari* No.2.
21. ABORI, XXXV p. 110 ff.
22. U. Thakur, *History of Mithila,* p. 266.
23. D.W. Wright, : *History of Nepal,* pp. 170-172.
24. Petech, pp. 194-195.
25. D.W. Wright, : *History of Nepal,* pp. 170-172.
26. MDG, Quoted in TM, p. 274.
27. ABORI, XXXV p. 112 fn.
28. Roerich, *Biography of Dharmaswami* (Patna 1959) pp. 58-59. Dharmaswami has referred to Muslim depradations in the regions of Vaisali in some details.
29. SHB, II p. 46.
30. Ibid., pp. 52, 61-62.
31. TM, p. 273.
32. MTV, pp, 118-121, MD, 63 *Mithila* (Weekly, now defunct) February 9, 1953.
33. ST, p. 63 GPP.
34. IA, 1880.
35. Kirpatrick : *An Account of the Kingdom of Nepal,* (London 1811) pp. 255-266.
36. JBORS, XX f;. 37. Rahula Sankrityayana; Sanskrit Palm Leaf Manuscript from Tibet - The colophon of the above manuscript reads, "Lakshmanadeva".
37. Petech p. 190.
38. BMI, p. 483.
39. Ibid., p. 484. The events related by Mulla Taqia are not to be rejected outright as R.C. Muzumdar thinks (Vide JBRS, XLIII p. 2). Mulla Taqia does not belong to a school of traditionalists rather he was a recorder and he must have based his account on some source now not available to us. It is true that his account is " Confused and Unconfirmed" (p.11). Petech doubts the authenticity of this date (p. 195). Cf. CS, p. 11.
40. CS, p.9.
41. ABORI, XXXVI p. 163 ff. *Inscriptions of Bengal,* Vol. IV.

42. D.G., p. 16.
43. IA, IX p. 188.
44. PIHRC, 1951, pp. 255-56.
MTV, p. 199 ff.
MD, 61 ff. BMI, p. 484.

□□

## ೨

# ಹರಿಸಿಂಹದೇವನ ಜೀವನ, ಸಾಧನೆಗಳು

ಹರಿಸಿಂಹದೇವನು ಕರ್ನಾಟ ರಾಜವಂಶದ ಕೊನೆಯ ಶ್ರೇಷ್ಠ ಅರಸನಾಗಿದ್ದನು. ನಿಸ್ಸಂದೇಹವಾಗಿಯೂ ನಾನ್ಯದೇವನ ನಂತರದ ಮಿಥಿಲೆಯ ಸರ್ವೋತ್ತಮ ಅರಸನಾಗಿದ್ದನು. ನೇಪಾಳಿ ಶಾಸನಗಳಲ್ಲಿ, ವಿದ್ಯಾಪತಿಯ *ಪುರುಷಪರೀಕ್ಷ*ದಲ್ಲಿ, ಪಂಜಿಗಳಲ್ಲಿ, ಪಾರಂಪರಿಕ ಶ್ಲೋಕಗಳಲ್ಲಿ ಮತ್ತು ವಿ.ಎಸ್.ಬಿ. ಹಸ್ತಪ್ರತಿ ನಂ. ೮೨೨೪ ರಲ್ಲಿ ಅವನ ಹೆಸರನ್ನು 'ಹರಿಸಿಂಹ' ಎಂದು ಬರೆಯಲಾಗಿದೆ. ಚಾಂದೇಶ್ವರನ *ಕೃತ್ಯರತ್ನಾಕರ*ದಲ್ಲಿ ಮಾತ್ರ 'ಹರಸಿಂಹ' ಎಂದು ಕಾಣಿಸಲಾಗಿದೆ.[1] ಇನ್ನು ಮುಂದೆ, ಅವನನ್ನು ಮಿಥಿಲೆಯ ಹರಿಸಿಂಹದೇವ ಎಂದು ಕಾಣಿಸಲಾಗುವುದು.

ಹರಿಸಿಂಹದೇವನ ಆಳ್ವಿಕೆಯು ಮಿಥಿಲೆಯ ಇತಿಹಾಸದಲ್ಲಿ ಮಾತ್ರವಲ್ಲದೆ ಈಶಾನ್ಯ ಭಾರತದ ಒಟ್ಟು ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿದೆ. ಈ ರಾಜವಂಶದ ಇತರ ಅರಸರ ಬಗೆಗಿರುವಂತೆಯೆ, ಇವನ ಆಳ್ವಿಕೆಯ ವೈಜ್ಞಾನಿಕ ಇತಿಹಾಸ ರಚಿಸಲು

ಯಾವುದೆ ಶಾಸನಿಕ ಇಲ್ಲವೆ ನಾಣ್ಯಾಧಾರಿತ ಪ್ರಮಾಣವಿಲ್ಲ. ನಮಗಿರುವ ಏಕೈಕ ಪ್ರಮಾಣವು ಸಾಹಿತ್ಯಾಧಾರಿತವಾದುದಾಗಿದೆ. ಅನೇಕ ವೇಳೆ ಸಾಹಿತ್ಯಿಕ ಆಕರಗಳು ಗೊಂದಲಾತ್ಮಕ ಮತ್ತು ದಾರಿ ತಪ್ಪಿಸುವಂಥವುಗಳಾಗಿರುತ್ತವೆ ಎಂದು ಬೇರೆ ಹೇಳಬೇಕಿಲ್ಲ. ವಿದ್ಯಾಪತಿಯ *ಪುರುಷಪರೀಕ್ಷ*ದಲ್ಲಿ ಅವನನ್ನು 'ಕರ್ನಾಟಕುಲಸಂಭವ' ಮತ್ತು 'ಕರ್ನಾಟ ವಂಶೋದ್ಭವ' ಎಂದು ಕರೆಯಲಾಗಿದೆ. ಚಾಂಡೇಶ್ವರನ *ಕೃತ್ಯರತ್ನಾಕರ*ದಲ್ಲಿ 'ಕರ್ನಾಟ ಚೂಡಾಮಣಿ' ಎಂದು ಕರೆಯಲಾಗಿದೆ. ಜ್ಯೋತಿರೀಶ್ವರ ಠಾಕೂರನ *ಧೂರ್ತ ಸಮಾಗಮ*ದಲ್ಲಿ 'ಹಿಂದುಪತಿ' ಎಂದು ಗ್ರಹಿಸಿದ್ದರೆ ಉಮಾಪತಿಯ *ಪಾರಿಜಾತ ಹರಣ ನಾಟಕ*ದಲ್ಲಿ 'ಹಿಂದುಪತಿ ಹರಿಸಿಂಹ' ಎಂದು ಕರೆಯಲಾಗಿದೆ. ವಿವಿಧ ರೀತಿಯಲ್ಲಿ ಮಿಥಿಲಾ ರಾಜ್ಯಕ್ಕೆ ಅಪಾರ ಕೊಡುಗೆಯ ದೃಷ್ಟಿಯಿಂದ ಅವನ ಆಳ್ವಿಕೆ ಗಮನಾರ್ಹವಾಗಿದೆ. ಎಲ್ಲ ಶ್ರೇಷ್ಠ ಅರಸರಂತೆ, ಅವನಿಗೂ "ಸದಾ ಕ್ರಿಯಾಶೀಲನಾಗಿರುವ" ಅಗತ್ಯವಿತ್ತು. ಅವನು ಮಿಥಿಲೆಯನ್ನು ಅನೇಕ ಕ್ಷೇತ್ರಗಳಲ್ಲಿ ಮಹತ್ತರವಾಗಿಸಲು ಸರ್ವ ಪ್ರಯತ್ನ ಮಾಡಿದನು. ಹರಿಸಿಂಹದೇವನಿಗೆ ತನ್ನವೆ ಮಿತಿಗಳಿದ್ದರೂ ಅವನನ್ನು ಮಿಥಿಲೆಯ ಶ್ರೇಷ್ಠತಮ ಅರಸರಲ್ಲೊಬ್ಬನೆಂದು ಪರಿಗಣಿಸತಕ್ಕದ್ದು.

ಮಿಥಿಲೆಯ ಐತಿಹ್ಯವನ್ನು ಅವಲಂಬಿಸುವುದಾದರೆ ಮತ್ತು ಪರಿಗಣಿಸುವುದಾದರೆ, ಹರಿಸಿಂಹದೇವನು ಕ್ರಿ.ಶ. ೧೨೯೪ ರಲ್ಲಿ ಜನಿಸಿದನು. ಆದರೆ ಈ ಅಭಿಪ್ರಾಯವು ಕ್ರಿ.ಶ. ೧೨೭೮ - ೭೯ಕ್ಕೆ ಸರಿಹೊಂದುವ ಲಕ್ಷ್ಮಣ ಸಂವತ್ಸರ ೧೫೯ರ ಶ್ರೀನಿವಾಸನ *ಭಟ್ಟಿಕಾವ್ಯಟೀಕಾ* (ವಿಎಸ್‌ಬಿ ಹಸ್ತಪ್ರತಿ ನಂ. ೪೭೯೫) ಹಸ್ತಪ್ರತಿಯಲ್ಲಿನ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿದೆ. ನಾವು ಈ ಪ್ರಮಾಣವನ್ನು ಸಾರಾಸಗಟಾಗಿ ತಿರಸ್ಕರಿಸಲು ಕಾರಣವಿಲ್ಲ. ಈ ಪ್ರಮಾಣವನ್ನಾಧರಿಸಿ, ಹರಿಸಿಂಹದೇವನ ಆಳ್ವಿಕೆಯ ಆದಿತಮ ದಿನಾಂಕವನ್ನು ತುಕ್ಕಿ ಬಳಿಯಿರುವ *ವಂಶಾವಳಿ*ಯ ಪ್ರಕಾರ ಕ್ರಿ.ಶ. ೧೨೭೯ ಎಂದು ನಿಶ್ಚಿತಗೊಳಿಸಬಹುದು. ತುಕ್ಕಿ ಬಳಿಯ *ವಂಶಾವಳಿ*ಯನ್ನು ಪರಿಗಣಿಸುವುದಾದರೆ, ಅವನ ಪಟ್ಟಾಧಿಕಾರವು ಶಕ ೧೨೦೫ / ಕ್ರಿ.ಶ. ೧೨೮೩ ರಲ್ಲಿ ಜರುಗಿತು. *ಪಂಜಿ* ಪದ್ಧತಿಯ ಸ್ಥಾಪನೆಯ ದಿನಾಂಕವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಮತ್ತು ಅದನ್ನು ಕ್ರಿ.ಶ. ೧೨೯೪ - ೯೫ ಎಂದು ನಿಗದಿಪಡಿಸಿದರೆ, ಹರಿಸಿಂಹದೇವನು ಆಡಳಿತಸೂತ್ರಗಳನ್ನು ಕ್ರಿ.ಶ. ೧೨೮೪ - ೮೫ ರಲ್ಲಿ ವಹಿಸಿಕೊಂಡನೆಂದು ಇಟ್ಟುಕೊಳ್ಳಬಹುದು. ಅದು ಏನೆ ಇದ್ದರೂ, ಮೂರು ತಲೆಮಾರುಗಳ ಮಂತ್ರಿಗಳಿಂದ ಸೇವೆ ಪಡೆದ ಆ ಅರಸನು ಸುಮಾರು ಐವತ್ತು ವರ್ಷಗಳ ಸುದೀರ್ಘ ಆಳ್ವಿಕೆ ನಡೆಸಿದುದು ಅಸಂಭವವಲ್ಲ. ಹರಿಸಿಂಹದೇವನು ಪಟ್ಟಕ್ಕೆ ಬಂದಾಗ ಅಲ್ಪವಯಸ್ಕನಾಗಿದ್ದನೆಂದು ಐತಿಹ್ಯ ನಂಬಿಸುವುದು. ಶಕ್ರಸಿಂಹದೇವನು ಅಥವಾ ಶಕ್ತಿಸಿಂಹದೇವನು ಬೇರೆ ವಂಶಕ್ಕೆ (ಮಲ್ಲದೇವನ ಸಂತತಿ) ಸೇರಿದವನು ಮತ್ತು ಅವನು ಎರಡೂ ಮನೆತನಗಳಿಗೆ ಸೇರಬಯಸಿದರೂ ಜನತೆ ಅವನನ್ನು ಮಿಥಿಲೆಯ ಅರಸನೆಂದು ಸ್ವೀಕರಿಸಲಿಲ್ಲ ಎಂಬ ವಾದವು ಇನ್ನೂ ಹೆಚ್ಚಿಗೆ ದೃಢಪಡುತ್ತದೆ. ಹಾಗಿದ್ದ ಪಕ್ಷದಲ್ಲಿ, ಭಟ್ಟಿಕಾವ್ಯದ ಟೀಕಾಕಾರನು ಹರಿಸಿಂಹದೇವನ

ಹೆಸರನ್ನು ಉಲ್ಲೇಖಿಸುತ್ತಿರಲಿಲ್ಲ. ಮೇಲೆ ಹೇಳಿರುವಂತೆ, ಅವನು ಕರ್ನಾಟ ರಾಜವಂಶದಲ್ಲಿ ಅದರ ಸಂಸ್ಥಾಪಕನಾದ ನಾನ್ಯದೇವನಿಂದ ಏಳನೆಯವನು. ಚಂದಾ ಝಾ ಪ್ರಕಾರ, ಹರಿಸಿಂಹದೇವನು ಕ್ರಿ.ಶ. ೧೨೯೪ ರಲ್ಲಿ ಜನಿಸಿ, ಕ್ರಿ.ಶ. ೧೩೦೭ ರಲ್ಲಿ ಪಟ್ಟಕ್ಕೆ ಬಂದನು.[2] ಪಟ್ಟಾಧಿಕಾರದ ದಿನಾಂಕ ಕ್ರಿ.ಶ. ೧೩೧೦ ಎಂದೆನ್ನುತ್ತಾರೆ ಕೆ.ಪಿ.ಜಯಸ್ವಾಲ.[3] ಲಭ್ಯ ಸಾಮಗ್ರಿಗಳು ಮತ್ತು ದಿನಾಂಕಗಳ ಆದ್ಯಂತ ವಿಶ್ಲೇಷಣೆಯಿಂದ ಹರಿಸಿಂಹದೇವನು ಕ್ರಿ.ಶ. ೧೨೮೪ - ೮೫ ರಲ್ಲಿ ಸಿಂಹಾಸನವೇರಿದನೆಂದು ತಿಳಿದುಬರುತ್ತದೆ. ಅದು ಅತ್ಯಂತ ಖಾತರಿಯ ಮತ್ತು ಸ್ವೀಕಾರಾರ್ಹ ತೇದಿಯೆಂದು ನನಗೆ ತೋರುತ್ತದೆ.

ಹರಿಸಿಂಹದೇವನು ದೇವಗಿರಿ ಯಾದವ ಅರಸ ರಾಮಚಂದ್ರನ ಸಮಕಾಲೀನನಾಗಿದ್ದನು ಮತ್ತು ಇಬ್ಬರ ನಡುವೆ ಪತ್ರಮೈತ್ರಿ ಇತ್ತೆಂಬುದು ವಿದ್ಯಾಪತಿಯ *ಪುರುಷಪರೀಕ್ಷ*ದಿಂದ ತಿಳಿಯುತ್ತದೆ.[4] ಹರಿಸಿಂಹದೇವನು ಗೋರಖಪುರದ ಅರಸ ಉದಯಸಿಂಹನ ಸಮಕಾಲೀನನಾಗಿದ್ದನೆಂಬ ಹೆಚ್ಚಿನ ಮಾಹಿತಿ ಅದೇ ಆಕರದಿಂದ ದೊರೆಯುತ್ತದೆ.[5] ಸಂದೇಹಾತೀತವಾಗಿಯೂ ಇವರೆಲ್ಲ ಅರಸರು ಹದಿನಾಲ್ಕನೆಯ ಶತಮಾನದ ಪ್ರಥಮ ಪಾದದಲ್ಲಿ ಊರ್ಜಿತರಿದ್ದರು ಮತ್ತು ಸಮಕಾಲೀನ ಅರಸರಲ್ಲಿ ಯಾವುದೇ ಸಂಬಂಧವಿದ್ದರೆ ಅದು ಸಹಜವೆ.

ಶಕ್ತಿಸಿಂಹದೇವನ ನಿರಂಕುಶ ವರ್ತನೆ ಅವನ ಸರದಾರರ ಮನಸ್ಸು ನೋಯಿಸಿತ್ತು ಮತ್ತು ಬಹುಶಃ ಅವರು ತಮ್ಮದೇ ವರಿಷ್ಠ ಮಂಡಲಿ ರಚಿಸಿಕೊಂಡು ಹರಿಸಿಂಹದೇವನು ಪ್ರಾಪ್ತವಯಸ್ಕನಾಗುವ ವರೆಗೆ ಆಡಳಿತಸೂತ್ರಗಳನ್ನು ಹಿಡಿದುಕೊಂಡಿದ್ದರೆಂಬುದನ್ನು ಈಗಾಗಲೆ ಚರ್ಚಿಸಲಾಗಿದೆ. ಅಲ್ಪವಯಸ್ಕ ಹರಿಸಿಂಹದೇವನನ್ನು ಅರಸನೆಂದು ಘೋಷಿಸಲಾಯಿತು. ವರಿಷ್ಠ ಮಂಡಲಿಯು ವಸ್ತುತಃ ಅಧಿಕಾರ ಚಲಾಯಿಸುತ್ತಿತ್ತು. ಆ ಮಂಡಲಿಯು ಸಾಕಷ್ಟು ರಾಜಕೀಯ ಶಕ್ತಿ ಹೊಂದಿದ್ದಂತೆ ತೋರುತ್ತದೆ. ಗಣೇಶ್ವರನು ಹರಿಸಿಂಹದೇವನ ಅತ್ಯಂತ ಸಮರ್ಥ ಮಂತ್ರಿಗಳಲ್ಲೊಬ್ಬನಾಗಿದ್ದನು.[6] ಅವನು ಗೃಹ ಖಾತೆಯನ್ನು ಹೊಂದಿದ್ದನು. ಗಣೇಶ್ವರನ *ಸುಗತಿಸೋಪಾನದ* ಪೀಠಿಕೆಯು ಮಿಥಿಲೆಯ ಸಂವೈಧಾನಿಕ ಇತಿಹಾಸದ ವಿವಿಧ ಅಂಶಗಳ ಮೇಲೆ ಸ್ವಾರಸ್ಯಕರ ಬೆಳಕು ಚೆಲ್ಲುತ್ತದೆ. ಗಣೇಶ್ವರನು ಮಿಥಿಲೆಯಲ್ಲಿ ಸಾಮಂತರ ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಿದ್ದನು ಮತ್ತು 'ಮಹಾರಾಜಾಧಿರಾಜ', 'ಮಹಾಸಾಮಂತ', 'ಮಹಾಮಟ್ಟಕ' ಮುಂತಾದ ಆಡಂಬರದ ಬಿರುದುಗಳನ್ನು ಧರಿಸಿದ್ದನು. *ಗಂಗಪಟ್ಟಿ*ಕದ ಅಂತ್ಯಪ್ರಶಸ್ತಿಯು ಕರ್ತೃವಾಗಿರುವ ಗಣೇಶ್ವರನನ್ನು 'ಮಹಾಸಾಮಂತಾಧಿಪ' ಎಂದು ಉಲ್ಲೇಖಿಸುತ್ತದ. ಇದು ಹಿಂದೊಮ್ಮೆ, ರಾಜವಂಶದ ಸಂಸ್ಥಾಪಕ ನಾನ್ಯದೇವ ಧರಿಸಿದ ಬಿರುದು. ಹರಿಸಿಂಹದೇವನ ಆಸ್ಥಾನದಲ್ಲಿ, ಗಣೇಶ್ವರನ ಹಿರಿತನದಲ್ಲಿ ಬಲಿಷ್ಠ ಸಾಮಂತಾಧಿಪತಿಗಳ ವರ್ಗವೊಂದು ಇತ್ತೆಂದು ಈ ಅಂತ್ಯಪ್ರಶಸ್ತಿ ಸೂಚಿಸುತ್ತದೆ.[7] ಹರಿಸಿಂಹದೇವನು ಅಲ್ಪವಯಸ್ಕನಿದ್ದಾಗ ಅವರು ತಮ್ಮ ಆಡಳಿತಾವಧಿಯಲ್ಲಿ ತಮ್ಮ ತಮ್ಮ ವಲಯಗಳಲ್ಲಿ ಸ್ಥಾನ ಭದ್ರಪಡಿಸಿಕೊಂಡರು.

ಅರಸನ ಅಪ್ಪಣೆಯಿಲ್ಲದೆ ಈ ಮಂತ್ರಿಗಳು ಮತ್ತು ಅಧಿಪತಿಗಳು ತಮಗೆ ಬೇಕಾದ ವ್ಯಕ್ತಿಗಳಿಗೆ ಭೂದತ್ತಿ, ಗ್ರಾಮದತ್ತಿ ನೀಡುತ್ತಿದ್ದುದು ಕಂಡುಬರುತ್ತದೆ.[೯] ಅವರಲ್ಲಿ ಗಣೇಶ್ವರ, ವೀರೇಶ್ವರ, ಚಾಂದೇಶ್ವರ, ದೇವಾದಿತ್ಯ ಮತ್ತಿತರ ಕೆಲವರು ಬಲು ಬಲಿಷ್ಠ ಮಂತ್ರಿಗಳಾಗಿದ್ದರು. ಚಾಂದೇಶ್ವರನು ಅತಿ ಬಲಿಷ್ಠ ಮಂತ್ರಿಯಾಗಿದ್ದನೆಂದು *ಪ್ರಾಕೃತಪೈಂಗಲಂ* 'ದಿಂದ ತಿಳಿದುಬರುತ್ತದೆ. ಅವಹತ್ತ ಸಾಹಿತ್ಯದ ಕವಿಯಾದ ಹರಿಬ್ರಹ್ಮನು ತನ್ನ ಆಶ್ರಯದಾತನಾದ ಚಾಂದೇಶ್ವರನ ಗೌರವಾರ್ಥ ರಚಿಸಿದ ಸ್ತವನಕವನವೊಂದರಲ್ಲಿ ಅವನನ್ನು ಬಲಿಷ್ಠ ಮತ್ತು ಪ್ರಭಾವಿ ಮಂತ್ರಿಯೆಂದು ಬಣ್ಣಿಸಿರುವನು. ಈ ಮಂತ್ರಿಗಳು ಅಪಾರ ಪ್ರಭಾವ ಹೊಂದಿದ್ದರೂ ರಾಜ್ಯದಲ್ಲಿ ಪ್ರತಿಯೊಂದನ್ನೂ ಅರಸನ ಹೆಸರಿನಲ್ಲಿ ಮಾಡಲಾಗುತ್ತಿತ್ತು. ಸಾಮಂತಾಧಿಪತಿಗಳು ವಿಪುಲ ಧನವನ್ನು ಶೇಖರಿಸಿದ್ದರು ಮತ್ತು ಸಾಧ್ಯವಾದಷ್ಟೂ ಅಧಿಕಾರ ಕಿತ್ತುಕೊಳ್ಳಲು ಪ್ರಯತ್ನಿಸಿದರು. ಹರಿಸಿಂಹದೇವನು ಅಲ್ಪವಯಸ್ಕನಾಗಿರುವ ವರೆಗೂ ಈ ಸಾಮಂತರು ತೂರಿಕೊಂಡರು. ಮತ್ತು ಅವರ ಭೌತಿಕ ಸಂಪತ್ತು ಬೆಳೆಯುತ್ತಲೆ ನಡೆಯಿತು. ಈ ಕಾಲದಲ್ಲಿ ಯಶಸ್ವಿ ಆಡಳಿತ ನಡೆಸಿದ ಶ್ರೇಯಸ್ಸು ದೇವಾದಿತ್ಯನದು. ಸಮಕಾಲೀನ ಸಂಸ್ಕೃತ ಗ್ರಂಥಗಳಲ್ಲಿ ಸಿಮರಾಮಪುರದ ಉಲ್ಲೇಖ ಕಂಡುಬರುವದು. ಆದರೆ, ಹರಿಸಿಂಹದೇವನು ಹರಿಸಿಂಹಪುರದಲ್ಲಿ ಎರಡನೆಯ ರಾಜಧಾನಿಯನ್ನು ಕಟ್ಟಿದನೆಂದು ಜನಪ್ರಿಯ ಐತಿಹ್ಯಗಳು ಸೂಚಿಸುತ್ತವೆ.[೧೦]

*ಸುಗತಿಸೋಪಾನದ* ಪೀಠಿಕಾಪದ್ಯವು ಮಿಥಿಲೆ ಮತ್ತು ಅದರ ಪಕ್ಕದಲ್ಲಿರುವ ರಾಜ್ಯಗಳ ಅಂದಿನ ರಾಜಕೀಯ ಪರಿಸ್ಥಿತಿಯ ಚಿತ್ರಣವನ್ನು ನೀಡುತ್ತದೆ. ದೇವಾದಿತ್ಯ, ಗಣೇಶ್ವರ ಮತ್ತು ಚಾಂದೇಶ್ವರರಂಥ ಸಾಮಂತಾಧಿಪರು ಹಮ್ಮೀರ, ಸುರತ್ರಾನ ಮತ್ತು ಮ್ಲೇಚ್ಛರ ವಿರುದ್ಧ ಯಶಸ್ವಿಯಾಗಿ ಹೋರಾಡಿದರೆಂದು ದಾಖಲಿಸಲಾಗಿದೆ. ಅದು ಗೌಡರನ್ನೂ ಉಲ್ಲೇಖಿಸುತ್ತ ಮುಸ್ಲಿಮರೊಂದಿಗಿನ ಸಂಬಂಧವನ್ನು ಉದಾಹರಿಸುತ್ತದೆ. ಗೌಡರ ಜೊತೆಗೆ ಯಾವ ರೀತಿಯ ಸಂಬಂಧವನ್ನು ಹರಿಸಿಂಹದೇವನು ಹೊಂದಿದ್ದನೆಂಬುದು ಖಚಿತವಿಲ್ಲ.

ಸಮಕಾಲೀನ, ಅದರಲ್ಲೂ ಮುಖ್ಯವಾಗಿ ಸಾಹಿತ್ಯಿಕ ಆಕರಗಳು ಬಂಗಾಲದ ಮುಸ್ಲಿಮ ದೊರೆಗಳಲ್ಲಿ ತೀವ್ರತರವಾದ ಒಡಕುಗಳಿದ್ದವೆಂಬುದನ್ನು ಸ್ಥಾಪಿಸುತ್ತವೆ. ಅವರ ಪ್ರಮುಖ ಅನಿಷ್ಟವೆಂದರೆ ಅಧಿಕಾರ ದಾಹವಾಗಿತ್ತು. ಈ ಪ್ರವೃತ್ತಿ ಬಂಗಾಲದ ಮುಸ್ಲಿಮರನ್ನು ಬಹುಮಟ್ಟಿಗೆ ದುರ್ಬಲಗೊಳಿಸಿತು. ಆದರೆ, ಇದು ತಾತ್ಕಾಲಿಕ ಸ್ವರೂಪದ ಸಮಸ್ಯೆಯಾಗಿತ್ತು. ಹರಿಸಿಂಹದೇವನು ಬಂಗಾಲದ ಪ್ರಾಂತಾಧಿಪತಿಯಾಗಿದ್ದ ಬಹಾದುರ ಶಾಹನ ಜೊತೆಗೆ ಸೇರಿಕೊಂಡಿದ್ದನೆಂದು ಮುಲ್ಲಾ ತಖಿಯಾ ಅಭಿಪ್ರಾಯಪಡುತ್ತಾನೆ. ಮಿಥಿಲೆಯನ್ನು ವಶಪಡಿಸಿಕೊಳ್ಳಲು ಘಿಯಾಸುದ್ದೀನ ತುಘಲಕನನ್ನು ಪ್ರೇರೇಪಿಸಿದ ಅಂಶಗಳಲ್ಲಿ ಇದೂ ಒಂದು. ಬಹುಶಃ ತನ್ನ ಬಂಡಾಯಗಾರ ಪ್ರಾಂತಾಧಿಪತಿಯ ಮಿತ್ರನಿಗೆ ಪಾಠ ಕಲಿಸುವ ಏಕೈಕ ಉದ್ದೇಶದಿಂದ ಹಾಗೆ ಮಾಡಿದನು. ಹರಿಸಿಂಹದೇವನು ಗೌಡ ರಾಜ್ಯದ ವಿರುದ್ಧ ದಂಡಯಾತ್ರೆ ಯೋಜಿಸಿದ್ದುದನ್ನು ಸಮರ್ಥಿಸುವ ಯಾವುದೆ ಖಚಿತ ಪ್ರಮಾಣವಿಲ್ಲ. ಆದರೆ, ಅದೇ ವೇಳೆಗೆ, ಅವನು ಸ್ವತಂತ್ರ ಸ್ವಭಾವದ ವ್ಯಕ್ತಿಯಾಗಿದ್ದುದನ್ನೂ ತಳ್ಳಿಹಾಕುವಂತಿಲ್ಲ.

ನಿಜವಾದ ರಾಷ್ಟ್ರಾಭಿಮಾನಿಯಾಗಿ ಅವನು, ಆಗಾಗ ಮಿಥಿಲೆಯ ಮೇಲೆ ದಾಳಿ ಮಾಡುತ್ತಿದ್ದ ಮುಸ್ಲಿಮರನ್ನು ಹಿಮ್ಮೆಟ್ಟಿಸಲು ಸರ್ವಪ್ರಯತ್ನ ಮಾಡಿದನು. ದಾಳಿಕಾರ ಮುಸ್ಲಿಮರ ಆಕ್ರಮಣಕಾರಿ ಹಂಚಿಕೆಯನ್ನು ಎದುರಿಸಲೋಸುಗ ಅವನು ಬಂಗಾಲದ ಬಂಡಾಯಗಾರ ಪ್ರಾಂತಾಧಿಪತಿ ಬಹಾದುರ ಶಾಹನೊಂದಿಗೆ ಮೈತ್ರಿ ಮಾಡಿಕೊಂಡಿರಬಹುದು. ಆ ಕಾಲದಲ್ಲಿ ಮಿಥಿಲೆಯು ಮುಸ್ಲಿಮರ ದವಡೆಗಳೊಳಗೆ ಸಿಲುಕಿತ್ತು ಮತ್ತು ಹರಿಸಿಂಹದೇವನು ಅದರ ರಕ್ಷಣೆಗೆ ಒದಗಿಬಂದನೆಂದು *ಧರ್ಮರತ್ನಾಕರದ* ಪದ್ಯವೊಂದು ಸೂಚಿಸುತ್ತದೆ. ಅವನು ಬಹುಶಃ ಮುಸ್ಲಿಮ ಅರಸನೊಬ್ಬನನ್ನು ಸೋಲಿಸಿದನು. ಈ ಸಂಗತಿಯನ್ನು ಚಾಂದೇಶ್ವರ ಮತ್ತು ಜ್ಯೋತಿರೀಶ್ವರರ ಬರವಣಿಗೆಗಳು ದೃಢಪಡಿಸುತ್ತವೆ. ಬಲಿಷ್ಠ ಮುಸ್ಲಿಮ ದಾಳಿಗಳಿಗೆ ಅವನು ತುತ್ತಾದನು ಮತ್ತು ದಾಳಿಗಳ ಉಬ್ಬರ ಇಳಿದ ಮೇಲೆ ಹರಿಸಿಂಹದೇವನು ತನ್ನ ರಾಜ್ಯವನ್ನು ಪುನರ್ವಶಪಡಿಸಿಕೊಂಡನು. ಮುಸ್ಲಿಮರನ್ನು ಹೊರದೂಡಿದ ಅಥವಾ ಅವರು ತಾವೇ ಹಿಂದೆ ಸರಿದ ಮೇಲೆ *ಧೂರ್ತಸಮಾಗಮ* ಮತ್ತು *ದಾನರತ್ನಾಕರ* ರಚಿತವಾದವೆಂಬುದನ್ನು ಸಿದ್ಧಪಡಿಸುವ ಸಾಹಿತ್ಯಿಕ ಆಕರಗಳಿವೆ. ನಿಜಕ್ಕೂ ಆ ಪ್ರಸಂಗವನ್ನು ಸ್ಮರಣಗೊಳಿಸಲೋಸುಗ *ಧೂರ್ತಸಮಾಗಮ ನಾಟಕವನ್ನು* ಪ್ರದರ್ಶಿಸಲಾಯಿತು.

ಹರಿಸಿಂಹದೇವನು ಯಶಸ್ಸು ಪಡೆಯದೆ ಹೋಗಿದ್ದರೆ *ಧೂರ್ತಸಮಾಗಮದ* ವರ್ಣನೆಗಳು ಇಷ್ಟೊಂದು ಪ್ರಶಂಸಾತ್ಮಕವಾಗಿರುತ್ತಿರಲಿಲ್ಲ. ಮ್ಲೇಚ್ಛರ (ಮುಸ್ಲಿಮರ) ಮೇಲೆ ಜಯ ಸಾಧಿಸಿದ ಗಳಿಗೆಯಲ್ಲಿ ಆ ನಾಟಕವನ್ನು ಹರಿಸಿಂಹದೇವನು ವೀಕ್ಷಿಸುತ್ತಿದ್ದಂತೆ ಅದರಲ್ಲೊಂದು ದೃಶ್ಯವಿದೆ. ಇಷ್ಟಂತೂ ಖಂಡಿತ; ಮಿಥಿಲೆಯ ಮೇಲೆ ಏರಿಬಂದ ಯಾವುದೋ ನೆರೆರಾಜ್ಯದ ಮುಸ್ಲಿಮರನ್ನು ಹರಿಸಿಂಹದೇವನು ಹಿಮ್ಮೆಟ್ಟಿಸಿದನು. ಮುಸ್ಲಿಮರನ್ನು ಹೊರಗಟ್ಟುವಲ್ಲಿ ಚಾಂದೇಶ್ವರನು ಸಕ್ರಿಯ ಪಾತ್ರ ವಹಿಸಿದನೆಂದು ಸಾಹಿತ್ಯಿಕ ಮೂಲಗಳು ತೋರ್ಪಡಿಸುತ್ತವೆ. ಆದರೆ, ಮುಸ್ಲಿಮರ ಹೊರದೂಡುವಿಕೆ ಅಥವಾ ಹಿಂದೆ ಸರಿಯುವಿಕೆ ತಾತ್ಕಾಲಿಕ ಸ್ವರೂಪದ್ದಾಗಿತ್ತು. ಮುಸ್ಲಿಮರು ಮಿಥಿಲೆಯ ವಿರುದ್ಧ ಉಪಕ್ರಮಗಳನ್ನು ಮುಂದುವರಿಸಿದರು. ಕೊನೆಯಲ್ಲಿ ಮುಸ್ಲಿಮರು ಹರಿಸಿಂಹದೇವನನ್ನು ಸೋಲಿಸಿದರು. ಮಿಥಿಲೆಯು ಭಾರತದ ಈಶಾನ್ಯ ಪ್ರದೇಶದಲ್ಲಿ ಸ್ವತಂತ್ರ ಹಿಂದೂ ರಾಜ್ಯವೆಂಬ ತೋರ್ಕೆಯನ್ನು ಕಳೆದುಕೊಂಡಿತು. ಜ್ಯೋತಿರೀಶ್ವರನ *ಧೂರ್ತಸಮಾಗಮದ* ಸುರತ್ರಾನ ಎಂಬವನು ಘಿಯಾಸುದ್ದೀನ ತುಘಲಕನೆಂದು ಕೆಲವು ವಿದ್ವಾಂಸರು ಗುರುತಿಸಿದ್ದಾರೆ. ಆದರೆ, ಈ ವಾದವು ಸಮಂಜಸವೆಂದು ತೋರದು.[11] ವಾಸ್ತವಿಕವಾಗಿ, *ಧೂರ್ತಸಮಾಗಮವು* ಘಿಯಾಸುದ್ದೀನ ತುಘಲಕನ ವಿಜಯಕ್ಕಿಂತ ಮುಂಚೆ ರಚಿತವಾಗಿತ್ತು. ಹಾಗಾಗಿ, ಈ ಗುರುತಿಸುವಿಕೆ ಹುರುಳಿಲ್ಲದ್ದು. *ಧರ್ಮರತ್ನಾಕರದಲ್ಲಿರುವ* ಪದ್ಯವು ಬಂಗಾಲದ ಸುಲ್ತಾನನ ಸೋಲನ್ನು ಪ್ರಸ್ತಾಪಿಸುತ್ತದೆ ಮತ್ತು ಆ ಸೋಲಿನ ಸ್ವಲ್ಪ ಶ್ರೇಯಸ್ಸನ್ನು ಗಣೇಶ್ವರನಿಗೆ ನೀಡಲಾಗಿದೆ ಎಂಬುದು ಕೆ.ಪಿ.ಜಯಸ್ವಾಲರ ವಿಚಾರ.[12]

ಮಿಥಿಲೆಯ ಹರಿಸಿಂಹದೇವನ ಆಳ್ವಿಕೆ ಅನೇಕ ಏರಿಳಿತಗಳನ್ನು ಕಂಡಿತು. ಹಾಗೆ ನೋಡಿದರೆ, ಅವನು ಅಸಾಧಾರಣ ಕಾಲದಲ್ಲಿ ಸಿಂಹಾಸನವೇರಿದ್ದನು. ನಿರಂತರವಾಗಿ

ಹೆಚ್ಚುತ್ತಿದ್ದ ಮುಸ್ಲಿಮರ ಅಧಿಕಾರದ ಹಿನ್ನೆಲೆಯಲ್ಲಿ, ಉತ್ತರ ಭಾರತದಲ್ಲಿ ಅವನ ಅಧಿಕಾರ ವಿಸ್ತರಣೆ ಬಹುಮಟ್ಟಿಗೆ ಶೂನ್ಯವಾಗಿದ್ದರೂ ರಾಮಸಿಂಹದೇವನ ಆಳ್ವಿಕೆಯ ಕಾಲದಲ್ಲಿ ದುರ್ಬಲಗೊಂಡಿದ್ದ ನೇಪಾಳದತ್ತ ಅವನು ವಿಶೇಷ ಗಮನ ಹರಿಸಿದ. ಹದಿನಾಲ್ಕನೆಯ ಶತಮಾನದ ಪ್ರಥಮ ಪಾದದಲ್ಲಿ ನೇಪಾಳದ ರಾಜಕೀಯ ಪರಿಸ್ಥಿತಿ ಅಸ್ಥಿರಗೊಂಡಿತ್ತು. ಹದಿಮೂರನೆಯ ಶತಮಾನದ ಕೊನೆಯ ದಶಕದಲ್ಲಿ ಎನ್.ಎಸ್. ೪೧೯ / ಕ್ರಿ.ಶ. ೧೨೯೮ ಅಥವಾ ಎನ್.ಎಸ್. ೪೧೧ / ಕ್ರಿ.ಶ. ೧೨೯೧ ರಲ್ಲಿ, ತಿರಹತ್‌ದ ಅರಸನು ನೇಪಾಳದ ಮೇಲೆ ದಾಳಿ ಮಾಡಿ ಭಟಗಾಂವವನ್ನು ವಶಪಡಿಸಿಕೊಂಡನು. ಆದರೆ, ಅವನು ತನ್ನ ವಿಜಯವನ್ನು ಭದ್ರಪಡಿಸಿಕೊಳ್ಳಲಾಗದೆ ಹಿಂತೆಗೆಯಬೇಕಾಯಿತು. ಕ್ರಿ.ಶ. ೧೩೧೧ ಕ್ಕೆ ಸರಿಹೊಂದುವ ಎನ್.ಎಸ್. ೪೩೧ ರಲ್ಲಿ 'ತಿರಹತಿಯಾ'ನು ಪುನಃ ಬಂದು ಪಾಟಾನ್ ಅನ್ನು ಗೆದ್ದುಕೊಂಡು ಇಡಿ ನಾಡನ್ನು ಕೊಳ್ಳೆಹೊಡೆದನು ಮತ್ತು ಧ್ವಂಸಗೊಳಿಸಿದನು.[13] ಈ ದಾಳಿಯು ನೇಪಾಳಿ ಅರಸ ಅನಂತಮಲ್ಲನ ಆಳ್ವಿಕೆಯಲ್ಲಿ (ಕ್ರಿ.ಶ. ೧೨೭೪-೧೩೧೦) ನಡೆಯಿತು. ಅವನ ಉಸ್ತುವಾರಿಯಲ್ಲಿ ಕಾಠಮಂಡುವಿನ ಕೇಂದ್ರ ಸರಕಾರ ಗಣನೀಯವಾಗಿ ದುರ್ಬಲಗೊಂಡಿತ್ತು. ಅನಂತಮಲ್ಲ ಮತ್ತು ಅವನ ಮಗನ ಆಳ್ವಿಕೆಯಲ್ಲಿ ನೇಪಾಳದಲ್ಲಿ ಅರಾಜಕತೆಯಿತ್ತೆಂದು ಡಿ.ಡಬ್ಲ್ಯೂ. ರೈಟ್ ಸೂಚಿಸಿರುವರು.[14] ನೇಪಾಳವು ಮತ್ಸ್ಯನ್ಯಾಯವನ್ನು ಅನುಭವಿಸುತ್ತಿದ್ದಾಗ ಸದೆಬಡೆಯಲು ವಿಸ್ತರಣವಾದಿಗಳಿಗೆ ಸುವರ್ಣಾವಕಾಶ ಪ್ರಾಪ್ತವಾಯಿತು. ನೇಪಾಳವು ಆಗಲೆ ಉತ್ತರ ಮತ್ತು ಪಶ್ಚಿಮಗಳಿಂದ ದಾಳಿ ಎದುರಿಸುತ್ತಿತ್ತು.[15] ಕ್ರಿ.ಶ. ೧೩೧೧ ರಲ್ಲಿ ತಿರಹತ್‌ವು ನೇಪಾಳದ ಮೇಲೆ ಮಾಡಿದ ದಾಳಿಯು ಚಾಂದೇಶ್ವರನು ಶ್ರೇಯಸ್ಸು ಸಾಧಿಸಿದ ದಾಳಿಯೊಂದಿಗೆ ಸಂಬಂಧಿತವಾಗಿದ್ದಿರಬಹುದು.[16]

ಇವೆರಡು ದಾಳಿಗಳು ಮತ್ತು ತದನಂತರ ನೇಪಾಳದ ಮೇಲೆ ಮಾಡಿದ ಲಗ್ಗೆಗಳಿಂದಾಗಿ ಅಲ್ಲಿಯ ರಾಜಕೀಯ ಸ್ಥಿರತೆ ಸಾಕಷ್ಟು ಕುಂದಿತ್ತು. ಆಂತರಿಕ ಅಸ್ತವ್ಯಸ್ತತೆ ಮತ್ತು ಗೊಂದಲಮಯತೆ ಎಲ್ಲ ಬದಿಯಿಂದಲೂ ನೇಪಾಳದ ಮೇಲೆ ದಾಳಿ ಮಾಡಲು ಅನುಕೂಲ ಒದಗಿಸಿದವು. ಚಾಂದೇಶ್ವರನ ನೇಪಾಳವಿಜಯವು *ಕೃತ್ಯರತ್ನಾಕರ* ಎಂಬ ಅವನೇ ರಚಿಸಿದ ನಾಟಕದ ವಸ್ತುವಾಗಿದೆ. ಚಾಂದೇಶ್ವರನು ಇಡಿ ನೇಪಾಳವನ್ನು ಜಯಿಸಿದನೆಂಬುದು ಪಾರಂಪರಿಕ ನಂಬಿಕೆ. ಅವನು ರಘುಕುಲದ ಅರಸರನ್ನು ಉಧ್ವಸ್ತಗೊಳಿಸಿದನು ಮತ್ತು ಆಶೀರ್ವಾದ ಪಡೆಯಲು ಪಶುಪತಿ ದೇವತೆಯ ಪಾದಕ್ಕೆ ಮಣಿದನೆಂದೂ ಹೇಳಲಾಗಿದೆ. ಬಹುಶಃ ಚಾಂದೇಶ್ವರನು ಹಾಗೆ ಮಾಡಿದ ಪ್ರಥಮನು. ಅವನು ಬಾಗಮತಿ ನದೀತೀರದಲ್ಲಿ ತುಲಾಪುರುಷ ಯಜ್ಞ ಮಾಡಿದನು. ಈ ಸಮಾರಂಭ ನಡೆದುದು ಶಾಲಿವಾಹನ ಶಕೆ ೧೨೩೬ / ಕ್ರಿ.ಶ. ೧೩೧೪ ರಲ್ಲಿ. ಆದರೆ, ಡಿ.ಆರ್.ರೆಗ್ಮಿ ಪ್ರಕಾರ, ಉಲ್ಲೇಖಿತ ಸ್ಥಳವು ನೇಪಾಳ ಕೊಳ್ಳದಲ್ಲಿತ್ತೊ ಅಥವಾ ನೇಪಾಳ ತರೈನವಲ್ಲಿತ್ತೊ ಖಾತರಿಯಿಲ್ಲ.[17] ಚಾಂದೇಶ್ವರನು ತನ್ನ ತೂಕಕ್ಕೆ ಸಮನಾದ ಸುವರ್ಣದಾನ ಪೂರ್ತಿಗೊಳಿಸಿದಾಗ ಎಲ್ಲೆಡೆ ಆನಂದೋಲ್ಲಾಸಗಳು ಮೊಳಗಿದವು. ಮಿಥಿಲೆಯಲ್ಲಿನ್ನೂ 'ತುಲಾಪುರುಷದಾನ'ದ ಬಳಕೆ ತಪ್ಪಿರಲಿಲ್ಲವೆಂಬುದು

ಇದರಿಂದ ಸೂಚಿತವಾಗುತ್ತದೆ. ಚಾಂದೇಶ್ವರನು ಸಾಧಿಸಿದ ನೇಪಾಳವಿಜಯವು ಹರಿಸಿಂಹದೇವನ ಕ್ಷುಬ್ಧ ಜೀವನದಲ್ಲಿ ಒಂದು ಕ್ಷಣಿಕ ಅವಸ್ಥೆಯಷ್ಟೆ ಆಗಿತ್ತು. ಆದರೆ, ನಾನ್ಯದೇವನ ಕಾಲದಿಂದಲೂ ಕರ್ನಾಟರು ನೇಪಾಳದ ಮೇಲೆ ಪ್ರಭುತ್ವ ಸ್ಥಾಪಿಸಿದುದು ಅತಿ ಮಹತ್ವದ ಸಂಗತಿಯಾಗಿತ್ತು. ಮಲ್ಲರು ತಮ್ಮ ಹಿಡಿತ ಸಾಧಿಸಿ ಕರ್ನಾಟ ಅಧಿಕಾರವನ್ನು ಅಲ್ಲಾಡಿಸಿದರು.[18] ಮತ್ತು ಚಾಂದೇಶ್ವರನು ಕ್ರಿ.ಶ. ೧೩೧೧ ಮತ್ತು ೧೩೧೪ರ ಮಧ್ಯೆ ನೇಪಾಳದ ಮೇಲೆ ತನ್ನ ಒಡೆಯ ಹರಿಸಿಂಹದೇವನು ಹೊಂದಿದ್ದ ಅಧಿಕಾರವನ್ನು ಪುನರ್ ಸ್ಥಾಪಿಸಿದನೆಂದು ಹೇಳಲಾಗಿದೆ. ನೇಪಾಳದ ಮೇಲೆ ಫಲಪ್ರದ ದಾಳಿಯನ್ನು ನಂಬುವುದರೂ ಹರಿಸಿಂಹದೇವನು ನೇಪಾಳದ ಮೇಲೆ ಪ್ರಭಾವಿ ಅಧಿಕಾರ ಹೊಂದಿದ್ದನೆಂದು ನಂಬಲು ಕಾರಣ ದೊರೆಯದು. ಕ್ರಿ.ಶ. ೧೩೧೮ ರಲ್ಲಿ ನೇಪಾಳವನ್ನಾಳುತ್ತಿದ್ದ ಠಾಕೂರಿ ರಾಜನೊಬ್ಬನ ಉಲ್ಲೇಖವಿದೆ. ಅವನು ಬಹಳ ದುರ್ಬಲ ಅರಸನಾಗಿದ್ದಿರಬಹುದಾದರೂ ಹರಿಸಿಂಹದೇವನಿಗೆ ಅವನ ಮೇಲೆ ಅಧಿಪತ್ಯವಿರಲಿಲ್ಲ.

ಕ್ರಿ.ಶ. ೧೨೯೦ರ ತರುವಾಯ ನೇಪಾಳದ ಮೇಲೆ ತಿರಹತ್ ದಾಳಿಯಿಡಲು ಆರಂಭಿಸಿದುದನ್ನು ಸ್ಥಾಪಿಸಲು ಉಲ್ಲೇಖಗಳುಂಟು. ನೇಪಾಳವು ಎಂದಾದರೂ ಮಿಥಿಲೆಯ ಕರ್ನಾಟ ಅರಸರ ಅಧಿಪತ್ಯಕ್ಕೊಳಪಟ್ಟಿತ್ತೆಂಬುದನ್ನು ಡಿ.ಆರ್.ರೆಗ್ಮಿ ಒಪ್ಪರು.[19] ಅವರನ್ನು ಮಿಥಿಲೆಯ ಇತಿಹಾಸಕಾರರೆಂದು ಕರೆವ ರೆಗ್ಮಿ ಅವರು ಆರ್.ಕೆ. ಚೌಧರಿ ಮತ್ತು ಯು.ಠಾಕೂರರೊಂದಿಗೆ ಭಿನ್ನಾಭಿಪ್ರಾಯ ಹೊಂದಿರುವರು. ರೆಗ್ಮಿ ಪ್ರಕಾರ, ಮಿಥಿಲೆಯ ಹರಿಸಿಂಹದೇವನು ನೇಪಾಳ ಕೊಳ್ಳವನ್ನು ಜಯಸಿದ್ದನೆಂದು ಹೇಳುವುದು ಬಹುತೇಕ ಆಧುನಿಕ ಭಾರತೀಯ ಇತಿಹಾಸಕಾರರ ವಾಡಿಕೆಯಾಗಿದೆ. ಘಿಯಾಸುದ್ದೀನ ತುಘಲಕನು ತನ್ನನ್ನು ರಾಜಧಾನಿಯಿಂದ ಉಚ್ಚಾಟನೆಗೊಳಿಸಿದ ಮೇಲೆ ಹರಿಸಿಂಹದೇವನು ಕ್ರಿ.ಶ. ೧೩೧೪ ಅಥವಾ ೧೩೨೪ ರಲ್ಲಿ ನೇಪಾಳದಲ್ಲಿ ಆಶ್ರಯ ಪಡೆದು, ಅದೇ ನೇಪಾಳವನ್ನು ಜಯಸಿದನೆಂದು ಈ ಇತಿಹಾಸಕಾರರು ಹೇಳುತ್ತಾರೆ.[20] ತುಲನಾತ್ಮಕವಾಗಿ, ಇತ್ತೀಚಿನ ಕೆಲವು ದಸ್ತೈವಜುಗಳಲ್ಲಿ ಹರಿಸಿಂಹದೇವನು ನೇಪಾಳದ ಮೇಲೆ ಕೈಕೊಂಡ ಆಕ್ರಮಣದ ಉಲ್ಲೇಖ ಸಾಮಾನ್ಯವಾಗಿದೆ. ತುಕ್ಸಿ ಬಳಿಯ ವಂಶಾವಳಿಯನ್ನು ಅವಲಂಬಿಸುವುದಾದರೆ, ಹರಿಸಿಂಹದೇವನು ನೇಪಾಳದ ಮಲ್ಲರ ವಿರುದ್ಧ ದಂಡಯಾತ್ರೆ ನಡೆಸಿದಂತೆ ತೋರುವುದು. ಆ ಕಾಲಕ್ಕಾಗಲೆ ಬಲಿಷ್ಠರಾಗಿದ್ದ ಮಲ್ಲರು ಬಹುಶಃ ಕರ್ನಾಟ ಪ್ರಭುತ್ವದ ಸಂಕೋಲೆಗಳನ್ನು ಕಿತ್ತೆಸೆದರು. ಸಿಮರಾಂವಗಡದಿಂದ ಕರ್ನಾಟರು ನೇಪಾಳ ಕೊಳ್ಳದ ಸ್ಥಳೀಯ ಅರಸರ ಮೇಲೆ ಪ್ರಭುತ್ವ ಸಾಧಿಸಿದರು. ಅಂದಿನ ಕಾಲದಲ್ಲಿ ನೇಪಾಳ ಕೊಳ್ಳವು ಗಂಡಕ ಮತ್ತು ಕೋಸಿ ನದಿಗಳ ಜಲಾನಯನ ಭೂಮಿಗಳ ಮಧ್ಯೆ ಚಾಚಿದ ಅತ್ಯಂತ ಸಣ್ಣ ಪ್ರದೇಶವಾಗಿತ್ತು; ಇಪ್ಪತ್ತು ಮೈಲು ಉದ್ದ ಮತ್ತು ಹನ್ನೆರಡು ಮೈಲು ಅಗಲ ಇದ್ದ ಅದು ಬಾಗಮತಿ ನದಿಯಿಂದ ನೀರುಣ್ಣುತ್ತಿತ್ತು.[21]

ನೇಪಾಳದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡ ನಂತರ ಮಲ್ಲರು ತರ್ರೈನ್ ಪ್ರದೇಶದಲ್ಲಿ ತಮ್ಮ ಅಧಿಕಾರ ವಿಸ್ತರಿಸಿದರು. ಮತ್ತು ಅನಂತಮಲ್ಲನ ಕಾಲಕ್ಕೆ ಅವರು

ಅದರ ಬಹುಭಾಗವನ್ನು ಸೆಳೆದುಕೊಂಡರೆಂದು ಹೇಳಲಾಗಿದೆ. ಅನಿರ್ದಿಷ್ಟ ಶಕೆಯ, ಆದರೂ ಕ್ರಿ.ಶ. ೧೨೩೪ ರದೆಂದು ಕಾಲನಿರ್ಧಾರಿತ, ಬಂಡೆಬರಹವೊಂದನ್ನು ಬಹಳ ಹಿಂದೆಯೆ ಕಂಡುಹಿಡಿಯಲಾಗಿದೆ. ಅದು ವಿಕ್ರಮ ಸಂವತ್ಸರದ್ದೆಂದು ಗ್ರಹಿಸುವ ಲೆವಿ ಅದರ ಕಾಲ ಕ್ರಿ.ಶ. ೧೧೭೭ ಎಂದು ನಿರ್ಧರಿಸಿದ್ದಾರೆ. ಪೆಟೆಕ್‌ರು ಅದಕ್ಕೆ ಸಹಮತಿಸುವುದಿಲ್ಲ. ಅವರು ಪ್ರಸ್ತುತ ಬಂಡೆಬರಹದ ಪಾಠವನ್ನು ತಿದ್ದಿದ್ದಲ್ಲದೆ, ರಿಪುಮಲ್ಲ ಮತ್ತು ಅವನ ಮಗ ಸಂಗ್ರಾಮಮಲ್ಲರ ಹೆಸರು ಒದಗಿಸುವ, ೧೨೩೪ ರದೆಂದು ಕಾಲನಿರ್ಧಾರಿತ ಇನ್ನೊಂದು ಬಂಡೆಬರಹವನ್ನು ಕಂಡುಹಿಡಿದಿರುವರು. ಈ ತೇದಿಯನ್ನು ಶಕ ಸಂವತ್ಸರವೆಂದು ಸ್ವೀಕರಿಸಲಾಗಿದ್ದು ಅದು ಕ್ರಿ.ಶ. ೧೩೧೨ ಆಗುತ್ತದೆ. ತರ್ಯನ್ ಪ್ರದೇಶದ ನಿಲ್ಸೀವದವರೆಗೆ ಮಲ್ಲರು ತಮ್ಮ ಅಧಿಕಾರ ವಿಸ್ತರಿಸಿಕೊಂಡದ್ದು ಈ ಬಂಡೆಬರಹದಿಂದ ಸ್ಪಷ್ಟವಿದೆ. ಹದಿಮೂರನೆಯ ಶತಮಾನದ ಕೊನೆಯ ಪಾದದಲ್ಲಿ ಮಲ್ಲರು ಪಾಟನ್ ಮತ್ತು ಭಟಗಾಂವ ಎಂಬೆರಡು ಶಾಖೆಗಳಲ್ಲಿ ವಿಭಜಿತರಾಗಿದ್ದರು. ಅದರಿಂದಾಗಿ, ಸಾಮಂತಾಧಿಪತಿಗಳ ಕೈ ಮೇಲಾಯಿತು. ಮತ್ತು ನಾಡು ಸಂದಿಗ್ಧ ಪರಿಸ್ಥಿತಿಯನ್ನು ಅನುಭವಿಸುವಂತಾಯಿತು. ಸಹಜವಾಗಿಯೆ, ಮಿಥಿಲೆಯಿಂದ ನಡೆಸಿದ ಯಾವ ಆಕ್ರಮಣಕ್ಕೆ ಹರಿಸಿಂಹದೇವನ ಮಂತ್ರಿ ಚಾಂದೇಶ್ವರನಿಗೆ ಶ್ರೇಯಸ್ಸು ನೀಡಲಾಗಿದೆಯೊ ಅದಕ್ಕೆ ಅರಾಜಕತೆ ಮತ್ತು ಗೊಂದಲ ಮಯತೆ ಪೋಷಕವಾಗಿದ್ದವು. ಈ ವಿಜಯವು ಹರಿಸಿಂಹದೇವನಿಗೆ ಕೊಳ್ಳದಲ್ಲಿ ನೆಲೆ ಒದಗಿಸಿತು. ಕ್ರಿ.ಶ. ೧೩೨೪-೨೫ ರಲ್ಲಿ ಘಿಯಾಸುದ್ದೀನ ತುಘಲಕನ ಕೈಯಲ್ಲಿ ಅನುಭವಿಸಿದ ಸೋಲಿನ ನಂತರ ಹರಿಸಿಂಹದೇವನು ನೇಪಾಳ ಪ್ರವೇಶಿಸಿದನೆಂದು ಕೈಸರ ಜಂಗ ಬಹಾದುರ ರಾಣಾ ಬಳಿಯಿರುವ *ವಂಶಾವಳಿ* ಮತ್ತು ತುಕ್ಸಿ ಬಳಿಯಿರುವ *ವಂಶಾವಳಿ* ಸೂಚಿಸುತ್ತವೆ. ಇಂಡಿಯಾ ಆಫೀಸ್ ಗ್ರಂಥಾಲಯದಲ್ಲಿರುವ ಹಸ್ತಪ್ರತಿಯ ಪದ್ಯದ ಕೊನೆಯರ್ಧದಲ್ಲಿ ಈ ಭಿನ್ನ ಪಾಠವಿದೆ: ''ದುರದ್ಯದೇಶಿತ ಪಟ್ಟಾತ್ ಗ್ರೀಮ ವಿವೇಶ''.[22]

ಈ ಶ್ಲೋಕಗಳ - ಅವು ಸಾಂಪ್ರದಾಯಿಕವಿರಲಿ, ಬೇರೆಯಾಗಿರಲಿ - ಆಧಾರದ ಮೇಲೆ ಆ ದಿನಾಂಕವು ಕ್ರಿ.ಶ. ೧೩೨೪, ಡಿಸೆಂಬರ ೭ಕ್ಕೆ ಸರಿಹೊಂದುವುದು. ಅದು ಬುಧವಾರ, ಶನಿವಾರವಲ್ಲ.[23] ನಿಗೂಢ ದೇವಿಯಾದ ತಳೆ'ಯನ್ನು ನೇಪಾಳಕ್ಕೆ ತಂದವನು ಹರಿಸಿಂಹದೇವನೆಂದು *ಜತಿಸಂಗ್ರಹ*[24] ಹಸ್ತಪ್ರತಿಯ ಅಂತ್ಯಪ್ರಶಸ್ತಿಯಲ್ಲಿ ಹೇಳಲಾಗಿದೆ. ಕಾಠಮಂಡುವಿನಲ್ಲಿಯ ಆಕೆಯ ದೇವಾಲಯ ಆ ಊರಿನಲ್ಲಿಯೆ ಅತಿ ಎತ್ತರವಾದುದು. ಭಟಗಾಂವ ಒಡ್ಡೋಲಗದಲ್ಲಿರುವ ಅದರ ಆರಾಧನಾಮಂದಿರದೊಳಕ್ಕೆ ಐರೋಪ್ಯರಿಗೆ ಪ್ರವೇಶವಿರಲಿಲ್ಲ. ನೇಪಾಳಿ ಐತಿಹ್ಯಗಳು ಕೂಡ ಈ ಪ್ರತಿಷ್ಠಾಪನೆಯನ್ನು ಹರಿಸಿಂಹದೇವನಿಗೆ ಆರೋಪಿಸುತ್ತವೆ. ದಾಳಿಯ ಕತೆಯನ್ನು ಒಟ್ಟಾರೆ ನಂಬದಿರುವ ಬೆಂಡಾಲ್ ಅವರು ಹರಿಸಿಂಹದೇವ ಮತ್ತು ಅವನ ಪೂರ್ವಜರು - ಅವರು ನೇಪಾಳ ಕೊಳ್ಳದ ಮೇಲೆ ಸಾರ್ವಭೌಮತ್ವ ಸಾಧಿಸಿದ್ದು ನಿಜವೆಂದರೂ - ಬಹುಮಟ್ಟಿಗೆ ನೇಪಾಳದ ನಾಮಮಾತ್ರ ಅರಸರಾಗಿದ್ದರೆಂದು ಒಪ್ಪುತ್ತಾರೆ.[25] ಹರಿಸಿಂಹದೇವನು ನೇಪಾಳಕ್ಕೆ ಹೊರಟುಹೋದುದಕ್ಕೆ

ಪರಿಸ್ಥಿತಿಗಳ ಒತ್ತಡ ಮತ್ತು ವಿಧಿ ಕಾರಣವಾಗಿದ್ದವು. ನೇಪಾಳವು ಅವನ ಪ್ರಭುತ್ವವನ್ನು ಆಗಲೆ ಒಪ್ಪಿಕೊಂಡಿತ್ತೆಂದು ಡಿ.ಆರ್.ರೆಗ್ಮಿ ಅಂಶಿಕವಾಗಿ ಒಪ್ಪುತ್ತಾರೆ.[26] "ಸಿಮರಾಂವಗಡದಿಂದ ಹೊರಹಾಕಲ್ಪಟ್ಟ ಹರಿಸಿಂಹದೇವನು ಮಾಘ ಶುಕ್ಲ ೩, ೪೬೬, ಅಂದರೆ ಕ್ರಿ.ಶ. ೧೩೨೬, ಜನವರಿ ೭ ರಂದು ದೇವಪಾಟನಕ್ಕೆ ಬಂದು ಬಹಳ ಸಂಪತ್ತು ಪಡೆದನು" ಎಂದು ನೇಪಾಳದಲ್ಲಿರುವ ಪ್ರಾಚೀನ ಕಾಲಾನುಕ್ರಮಣಿಯೊಂದು ಸೂಚಿಸುತ್ತದೆ. ಮುಸ್ಲಿಮ ಆಕರಗಳಿಗೆ ಹೋಲಿಸಿದರೆ ಈ ಕಾಲಾನುಕ್ರಮಣಿ ಒಂದು ವರ್ಷ ತರುವಾಯದ್ದಿದೆ. ಆದರೆ, ಹರಿಸಿಂಹದೇವನು ದೇವಪಾಟನಕ್ಕೆ ಆಗಮಿಸುವ ಮುನ್ನ ತರ್ಕೈನ್ ಪ್ರದೇಶದಲ್ಲಿ ಅಲೆದಾಡಿದನೆಂದು ಗ್ರಹಿಸಿದರೆ ಆ ಒಂದು ವರ್ಷದ ಅಂತರ ತುಂಬಿಕೊಳ್ಳುತ್ತದೆ. ಆದರೂ ಈ ತಪ್ಪು ಬಹಳ ಪ್ರಾಚೀನವಾಗಿದ್ದು ಯಾವ ಹಸ್ತಪ್ರತಿಯೂ ಶ್ಲೋಕದ ಭಿನ್ನಪಾಠ ಕೊಡುವುದಿಲ್ಲ.

ಕೈಸರನಲ್ಲಿರುವ, ತುಕ್ಸಿ ಬಳಿಯಿರುವ *ವಂಶಾವಳಿಗಳು* ಗುತ್ನದಲ್ಲಿ ಹರಿಸಿಂಹದೇವನ ಪ್ರವೇಶವನ್ನು ಉಲ್ಲೇಖಿಸುತ್ತವೆ. ಪೆಟೆಕ್ ಸಹ ನೇಪಾಳದಲ್ಲಿ ಅವನ ಪ್ರವೇಶವನ್ನು ಒಪ್ಪುವುದಿಲ್ಲ ಮತ್ತು ಅವನ ಅಂತ್ಯದ ಬಗೆಗೂ ತಿಳಿಯದು ಎಂದು ಸೂಚಿಸುತ್ತಾರೆ. ಡಿ.ಆರ್.ರೆಗ್ಮಿಯವರಲ್ಲಿರುವ *ವಂಶಾವಳಿಯ* ಪಾಠದಿಂದಲೂ ಅದೇ ತೀರ್ಮಾನಕ್ಕೆ ಬರಲಾಗುತ್ತದೆ. ಪೆಟೆಕ್ ಹೀಗೆ ಅಭಿಪ್ರಾಯಪಡುವರು: "ಅವನ (ಹರಿಸಿಂಹದೇವನ) ಮಗ ಜಗತಸಿಂಹದೇವನು ನಾಡಿನ ಉನ್ನತೋನ್ನತ ಕುಲೀನರಲ್ಲಿ ತನ್ನ ಸ್ಥಾನ ಪಡೆಯಬಹುದಾಗಿತ್ತು, ತರುವಾಯದ ಕಾಲಾನುಕ್ರಮಣಿಗಳು ಹರಿಸಿಂಹದೇವನನ್ನು - ಅವನೆಂದೂ ಅಲ್ಲಿ ಆಳದಿದ್ದರೂ - ರಾಜಮನೆತನದ ಪೂರ್ವಜ ಮತ್ತು ಭಟಗಾಂವದ ಅರಸನನ್ನಾಗಿ ಮಾಡಿದುದೇಕೆಂದು ಇದು ಸ್ಪಷ್ಟಪಡಿಸಬಹುದು. ತರುವಾಯದ ಮಲ್ಲರು ಮತ್ತು ಹರಿಸಿಂಹದೇವನ ಮಧ್ಯದ ಕೊಂಡಿಯನ್ನು ಇಲ್ಲಿ ಮಾತ್ರ ಕಾಣಬಹುದೇ ಹೊರತು ಬೇರೆಡೆಯಲ್ಲ".[27] ನಾಯಿಕಾದೇವಿಯೊಂದಿಗೆ ಜಗತಸಿಂಹನು ಮಾಡಿಕೊಂಡ ವಿವಾಹ ಮತ್ತು ಭಟಗಾಂವದಲ್ಲಿ ಅವನು ನಡೆಸಿದ ಆಳ್ವಿಕೆಯಿಂದ ಹರಿಸಿಂಹದೇವನು ಅಲ್ಲಿ ಆಳಿರಬಹುದೆಂದು ಸೂಚಿತವಾಗುವುದು. ನಾವು ಹರಿಸಿಂಹದೇವನ ಆಳ್ವಿಕೆಯನ್ನೆ ನಂಬದಿದ್ದರೆ, ಜಗತಸಿಂಹನು ಅವನ ಮಗನಾಗಿ ಅರಸೊತ್ತಿಗೆಯನ್ನು ಅನುಭವಿಸಿದ್ದು ಹೇಗೆ?[28] ನೇಪಾಳದೊಳಗೆ ಹರಿಸಿಂಹದೇವನ ಪ್ರವೇಶವು ಅವನು ಬಹುಕಾಲದಿಂದ ಅನುಭವಿಸುತ್ತಿದ್ದ ಅಧಿಕಾರದ ಭದ್ರಪಡಿಕೆಯೆ ಹೊರತು ಬೇರೇನಲ್ಲ. ಮೇಲೆಯೆ ತೋರುವಂತೆ, ಮಿಕ್ಕವರೆಲ್ಲ ಅವನ ಮಾಂಡಲಿಕರಾಗಿ ಆಳುತ್ತಿದ್ದರು. ಹಾಗಿಲ್ಲದಿದ್ದರೆ, *ವಂಶಾವಳಿಗಳು* ಅವನ ಉತ್ತರಾಧಿಕಾರಿಗಳನ್ನು ನೇಪಾಳದ ಅರಸನೆಂದು ಹೆಸರಿಸುವ ಕಾರಣವಿರಲಿಲ್ಲ. ನಮ್ಮ ಸಧ್ಯದ ತಿಳುವಳಿಕೆಯ ಸ್ಥಿತಿಯಲ್ಲಿ, ನೇಪಾಳದ ಮೇಲೆ ಹರಿಸಿಂಹದೇವನ ಆಳ್ವಿಕೆಯನ್ನು ಸಾರಾಸಗಟಾಗಿ ತಿರಸ್ಕರಿಸುವುದು ಕಠಿಣವಾಗಿದೆ. ಅದು ನೇಪಾಳದೊಂದಿಗೆ ಹರಿಸಿಂಹದೇವನ ಮರುಪ್ರವೇಶವಾಗಿತ್ತು. ಮತ್ತು ಅಲ್ಲಿಯ ಸಂಪನ್ಮೂಲಗಳು ಅವನು ದಿಲ್ಲಿಯ

ಸುಲ್ತಾನನನ್ನು ಪ್ರತಿರೋಧಿಸಲು ನೆರವಾದವು ಎಂದು ಆರ್.ಸಿ.ಮಜುಮದಾರ ಮುಂದು ವರೆದು ಸೂಚಿಸುತ್ತಾರೆ.[29]

ಎಲ್ಲ ಕಡೆಯಿಂದಲೂ ಬಲಿಷ್ಠ ಮುಸ್ಲಿಮ ಸೈನ್ಯಗಳೊಂದಿಗೆ ಹರಿಸಿಂಹದೇವನು ಸೆಣಸಬೇಕಾಯಿತೆಂದು ಸಂದರ್ಭಗಳು ಪ್ರಮಾಣ ಒದಗಿಸುತ್ತವೆ. ಘಿಯಾಸುದ್ದೀನ ತುಘಲಕನ ತಿರಹತ್ ಮೇಲಿನ ದಾಳಿಯನ್ನು ಉಲ್ಲೇಖಿಸುವ ಮುಸ್ಲಿಮ ಆಕರಗಳಲ್ಲೆಲ್ಲ - ಮುಲ್ಲಾ ತಕಿಯಾ ಒಂದನ್ನು ಬಿಟ್ಟು - ತಿರಹತ್ ಅರಸನ ಹೆಸರಿಲ್ಲದ್ದು ಎದ್ದು ಕಾಣುತ್ತದೆ. ಮಿಥಿಲಾ ನಾಡು ಮ್ಲೇಚ್ಛರ ಅಲೆಗಳ ಉಬ್ಬರದಿಂದ ಮುಚ್ಚಿಹೋಗಿದ್ದ ಸಂಗತಿಯನ್ನು ಚಾಂದೇಶ್ವರ, ಗಣೇಶ್ವರ ಮತ್ತು ಜ್ಯೋತಿರೀಶ್ವರರು ರುಜುಪಡಿಸುವರು. ಮುಸ್ಲಿಮ ಸುಲ್ತಾನನ ವಿರುದ್ಧ ಹರಿಸಿಂಹದೇವನು ಆರಂಭಿಕ ಯಶಸ್ಸು ಪಡೆದಿದ್ದನೆಂದು *ಧೂರ್ತಸಮಾಗಮ*ದಿಂದ ತಿಳಿದುಬರುತ್ತದೆ. ಮುಸ್ಲಿಮರ ಮೇಲಣ ಜಯಗಳ ಬಗೆಗಿನ ಉತ್ಪ್ರೇಕ್ಷೆಯ ಉಲ್ಲೇಖಗಳು ಆ ಪ್ರಸಂಗಕ್ಕೆ ಅನ್ವಯಿಸುವುದಿಲ್ಲ ಎಂಬುದು ತೀರ ಇತ್ತೀಚಿನ ಅಭಿಮತ. ಕ್ರಿ.ಶ. ೧೨೮೭ ರಲ್ಲಿ ಬಲ್ಬನ್‌ನ ಮರಣಾನಂತರ ಮಾಮಲುಕ ಸುಲ್ತಾನರ ಕೊನೆಯ ದಿನಗಳಲ್ಲಿ ಹರಿಸಿಂಹದೇವನು ಯಶಸ್ಸು ಸಾಧಿಸಿದನು.[30] ಇತ್ತೀಚಿಗೆ ಲಭ್ಯವಾದ ಕ್ರಿ.ಶ. ೧೨೯೦-೯೧ರ ಮಹೇಶ್ವರ ಶಾಸನದ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ.[31] ಉತ್ತರ ಬಿಹಾರದಲ್ಲಿ ಗಂಡಕ ತೀರದವರೆಗೆ ಕೈಕಸ್‌ನ ಅಧಿಕಾರ ವಿಸ್ತರಣೆಯು ಹಿಂದೂ ಮುಸ್ಲಿಮರ ಮಧ್ಯ ಸೆಣಸಾಟವನ್ನು ತ್ವರಿತಗೊಳಿಸಿತು. ಮತ್ತು ಫಿರೂಜ ಐತಿಗಿನ್‌ನು ಕರ್ನಾಟರ ವಿರುದ್ಧ ರಕ್ಷಣೆಗೆಂದು ಗಂಡಕ ತೀರದಲ್ಲಿ ಒಂದು ದೊಡ್ಡ ಕೋಟೆಯನ್ನು ಕಟ್ಟಿದನೆಂದು ತೋರುತ್ತದೆ. ಬಹುತೇಕವಾಗಿ, ಗೌಡರೊಂದಿಗೆ ಹರಿಸಿಂಹದೇವನ ಸಂಬಂಧವಿತ್ತೆಂದು *ಸುಗತಿಸೋಪಾನ*ದ ಕರ್ತೃವನ್ನು ಯೋಚಿಸಹಚ್ಚಿದ್ದು ಮತ್ತು ಜ್ಯೋತಿರೀಶ್ವರನಿಗೆ ಅವನ ನಾಟಕಕ್ಕೆ ವಸ್ತು ಒದಗಿಸಿದ್ದು ಈ ಘಟನೆಯೆ. *ಕೃತ್ಯರತ್ನಾಕರ*ದ ೪ ನೆಯ ಪದ್ಯವು ಹರಿಸಿಂಹದೇವನು ತನ್ನ ವೈರಿಗಳನ್ನು ಸದೆಬಡಿದನೆಂದು ಸೂಚಿಸಿದರೆ ೧೦ ನೆಯ ಪದ್ಯವು ವೀರೇಶ್ವರನು ವೈರಿಕೋಟೆಗೆ ಲಗ್ಗೆ ಹಾಕಿದ ನಂತರ ದಹಿವತದಲ್ಲಿ ದೊಡ್ಡ ಕೆರೆಯನ್ನು ತೋಡಿಸಿ ಶ್ರೋತ್ರಿಯರಿಗೆ ರಾಮಪುರ ಗ್ರಾಮವನ್ನು ದತ್ತಿ ನೀಡಿದನೆನ್ನುತ್ತದೆ. ಮ್ಲೇಚ್ಛರ ಪ್ರವಾಹದಲ್ಲಿ ಮುಳುಗಿಹೋಗಿದ್ದ ನಾಡನ್ನು ಕಾಪಾಡಿದ ಶ್ರೇಯಸ್ಸನ್ನು ಚಾಂದೇಶ್ವರನಿಗೂ ಕೊಡಲಾಗಿದೆ. ಇವೆಲ್ಲ ಘಟನೆಗಳು ಊಹಾತ್ಮಕ ಪ್ರಸ್ತಾಪಗಳ ಮೇಲೆ ನಿಂತಿವೆಯಾದರೂ ಘಿಯಾಸುದ್ದೀನ ತುಘಲಕನ ಆಗಮನವು ಆ ಕಾಲದ ಗಂಭೀರ ಇತಿಹಾಸಕ್ಕೆ ನೆಲೆಗಟ್ಟನ್ನು ಒದಗಿಸುತ್ತದೆ.

ಘಿಯಾಸುದ್ದೀನ ತುಘಲಕನು ಮಿಥಿಲೆಯ ಹರಿಸಿಂಹದೇವನನ್ನು ಸೋಲಿಸಿದ್ದ ಬಗೆಗೆ ಎಲ್ಲ ಮುಸ್ಲಿಮ ಮೂಲಗಳ ಸಹಮತವಿದೆ. ಇಸಾಮಿ ಮತ್ತು *ಬಸಾತಿನ್-ಉಲ್-ಉಂಸಾ*ದ ಲೇಖಕನ ಮಧ್ಯೆ ಗಮನಾರ್ಹ ಸಾದೃಶ್ಯವಿದೆ. ಇವೆರಡೂ ವೃತ್ತಾಂತಗಳು ತಿರಹತ್‌ನ ಕೋಟೆಯ ಪತನ ಮತ್ತು ತತ್ಪರಿಣಾಮವಾಗಿ ಅರಸನ ಸೆರೆಯ ಬಗೆಗೆ ಏನನ್ನೂ

ಹೇಳುವುದಿಲ್ಲ. *ಬಸಾತಿನ್-ಉಲ್-ಅಂಶಾ*ದ ಪ್ರಕಾರ, ತಿರಹತ್‌ನ ಅರಸನಲ್ಲಿ ಬಹು ದೊಡ್ಡ ಸೈನ್ಯ ಮತ್ತು ಕೋಟೆಯಿತ್ತು. ಅತಿ ಬಲಿಷ್ಠನಾಗಿರದಿದ್ದರೂ ಅವನಿಗೆ ತನ್ನ ಶಕ್ತಿಯ ಬಗೆಗೆ ಹೆಮ್ಮೆಯಿತ್ತು. ಅವನು ಹಿಂದಿನ ಅರಸರನ್ನು ಅಪಮಾನಿಸಿದ್ದನು ಮತ್ತು ಶರಣಾಗುವ ಮನಸ್ಥಿತಿಯಲ್ಲಿರಲಿಲ್ಲ. ಅವನ ಕೋಟೆಯು ಎಲ್ಲ ಬದಿಯಿಂದಲೂ ನೀರು ಮತ್ತು ಅರಣ್ಯದಿಂದ ಸುತ್ತುವರಿಯಲ್ಪಟ್ಟಿತ್ತು. ದಿಲ್ಲಿ ದರಬಾರದ ವಂಶಪರಂಪರಾಗತ ಸೇವಕನೂ ಸಾರ್ವಜನಿಕ ಪತ್ರಾಗಾರದ ಕಾರ್ಯದರ್ಶಿಯೂ ಆಗಿದ್ದ ಮೊಹಮ್ಮದ ಸದರ ಅಲಾ ಅಹ್ಮದ ಹಸನ ದಬೀರ ಈ ಹಸ್ತಪ್ರತಿಯ ಸಂಕಲನಕಾರನು. ಆ ಕೃತಿಯನ್ನು ಮೊಹಮ್ಮದ ಬಿನ್ ತುಘಲಕನ ಆಳ್ವಿಕೆಯ ಪ್ರಥಮ ವರ್ಷದಲ್ಲಿ ಸಂಕಲಿಸಲಾಯಿತು. ತುಘಲಕರಿಗೆ ವಿಜಯ ಪ್ರಾಪ್ತವಾದರೂ ಹರಿಸಿಂಹದೇವನು ದಾಳಿಕಾರರ ವಿರುದ್ಧ ಯಶಸ್ವಿಯಾಗಿ ಕಾದಾಡಿದಂತೆ ತೋರುತ್ತದೆ. ಹಸನ ದಬೀರನೊಟ್ಟಿಗೆ ಇಸಾಮಿಯನ್ನು ಓದಿದರೆ ಸ್ಪಷ್ಟ ಚಿತ್ರ ಗೋಚರಿಸುವುದು. ಹಸನ ದಬೀರನ ಪ್ರಕಾರ, ಘಿಯಾಸುದ್ದೀನ ತುಘಲಕನು ಸ್ಥಳೀಯ ಜನರಿಗೆ ಆಡಳಿತ ವಹಿಸಿಕೊಟ್ಟನು ಮತ್ತು ಇಸಾಮಿಯ ಪ್ರಕಾರ, ತಿರಹತ್‌ನಲ್ಲಿ ಸಾಮ್ರಾಟನ ಪ್ರತಿನಿಧಿಯಾಗಿ ಅಹಮ್ಮದನನ್ನು ಇಡಲಾಯಿತು. ಹರಿಸಿಂಹದೇವನನ್ನು ಸೆರೆಹಿಡಿಯಲಾಗ ಲಿಲ್ಲ, ಆದರೆ ಅವನು ಪರಾರಿಯಾದನೆಂದು ಇವೆರಡೂ ಮೂಲಗಳು ಸೂಚಿಸುತ್ತವೆ. ಈ ಘಟನೆಯ ನಂತರ, ಹರಿಸಿಂಹದೇವನು ತಿರಹತ್‌ನಲ್ಲಿ ತನ್ನ ಪ್ರಭುತ್ವವನ್ನು ಪುನರ್‌ಸ್ಥಾಪಿಸಲು ವಿಫಲನಾಗಿ ಕೊನೆಯಲ್ಲಿ ನೇಪಾಳದಲ್ಲಿ ನೆಲೆಸಿದನು. ಘಿಯಾಸುದ್ದೀನನ ನಿರ್ಗಮನಾನಂತರ ಹರಿಸಿಂಹದೇವನ ಪುನರಾಗಮನ ಘಟಿಸಿತೆಂದು ಬರನಿ, ಯಾಹ್ಯಾ ಮತ್ತು ನಿಜಾಮುದ್ದೀನರು ತಾಳಿದ ಮೌನವು ಸೂಚಿಸುವುದಿಲ್ಲ. *ಧೂರ್ತಸಮಾಗಮ*ದ ಘಟನೆಯನ್ನೂ ಅದರೊಂದಿಗೆ ಸಂಬಂಧಿಸಲಾಗದು. ತುಘಲಕ್‌ನಿಂದ ತಿರಹತ್‌ನ ಸ್ವಾಧೀನವನ್ನು ಯಾವುದೆ ದೀರ್ಘ ಕಾದಾಟವಿಲ್ಲದೆ ಸಾಧಿಸಬಹುದಿತ್ತಾದುದರಿಂದ ಈ ಲೇಖಕರು ಮೌನ ಧರಿಸಿರುವರು. ಈ ವಿಜಯವು ಮಿಥಿಲೆಯ ಸ್ವತಂತ್ರ ಕರ್ನಾಟ ರಾಜ್ಯದ ಮರಣಗಂಟೆ ಬಾರಿಸಿತು.

ರಾಜಕೀಯ ದೃಷ್ಟಿಕೋನದಿಂದ ನೋಡಿದರೆ, ಹರಿಸಿಂಹದೇವನ ಆಳ್ವಿಕೆಯು ಬಿರುಸಿನ ಚಟುವಟಿಕೆಗಳಿಂದ ತುಳುಕಾಡುತ್ತಿತ್ತು ಮತ್ತು ಅಲ್ಪಾವಧಿಯಲ್ಲಿಯೆ ಭಾರತದ ಈಶಾನ್ಯ ಭಾಗದ ರಾಜಕೀಯ ಇತಿಹಾಸದಲ್ಲಿ ಅವನು ಆಡಿದ ಪಾತ್ರ ಗೌಣವಾದುದಲ್ಲ. ನಾನ್ಯದೇವನಂತೆ ಅವನಿಗೂ ವಿಖ್ಯಾತ ವೈರಿಗಳು ಮತ್ತು ಗಮನಾರ್ಹ ಸಮಕಾಲೀನರಿದ್ದರು. ನಾನ್ಯದೇವನನ್ನು ಸ್ವತಂತ್ರ ಮಿಥಿಲಾ ರಾಜವಂಶದ ಸಂಸ್ಥಾಪಕನೆಂದು ಪರಿಗಣಿಸಲಾದರೆ, ಕೀರ್ತಿವಂತ ಹರಿಸಿಂಹದೇವನು "ಪ್ರತಿಕೂಲ ಪರಿಸ್ಥಿತಿಯಲ್ಲೂ ಇಂದಿಗೂ ಜೀವಂತವಿರುವ ಹೊಸ ವ್ಯವಸ್ಥೆಯಲ್ಲಿ ಮಿಥಿಲಾ ಸಮಾಜವನ್ನು ಸಂಘಟಿಸಿದ ಮಹಾ ಸಮಾಜ ಸುಧಾರಕ"ನೆಂದು ಮಿಥಿಲೆಯ ಚರಿತ್ರೆಯಲ್ಲಿ ಸ್ಥಾನ ಪಡೆದಿರುವನು.[32] ಅವನ ಆಳ್ವಿಕೆಯು ರಾಜಕೀಯವಾಗಿಯೂ ಸಮಾಜಿಕವಾಗಿಯೂ ಫಲಪ್ರದವಾಗಿತ್ತು. "ಮುಸ್ಲಿಮರ ಆಗಮನಕ್ಕಿಂತ ಮುಂಚೆ ಮಿಥಿಲೆಯ ಹಿಂದೂಗಳು ಮಾಡಿದ ಸಾಧನೆಯೇನೆಂದು ಕಲ್ಪಿಸಿಕೊಳ್ಳಲು" ಸಿಮರಾಂವಗಢದ

ಅವಶೇಷಗಳೆ ಸಾಕು. ಮತ್ತು ಅಲ್ಲಿರುವ ಅವಶೇಷಗಳು ''ಮುಸ್ಲಿಮ ಮತಾಂಧತೆ ಮತ್ತು ಹಿಂದೂ ಪ್ರತಿರೋಧದ ಮಧ್ಯೆ ಐದು ಶತಮಾನ ನಡೆದ ನಿರಂತರ ಕಾದಾಟ''ದ ಜೀವಂತ ಕತೆಗಳಾಗಿವೆ.[33]

ಸಾಮಾಜಿಕ ಕ್ಷೇತ್ರದಲ್ಲಿ ಹರಿಸಿಂಹದೇವನ ಸಾಧನೆಗಳು ಗಮನಾರ್ಹವಾಗಿವೆ. ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಅವನು ತಂದ ಸುಧಾರಣೆಗಳು ಅಂದಿನ ಮಿಥಿಲೆಯ ಜನತೆಯ ಜೀವನ ಮತ್ತು ಆಲೋಚನೆಯಲ್ಲಿ ಕ್ರಾಂತಿ ಉಂಟುಮಾಡಿದವು. ಮೈಥಿಲರು ತಮ್ಮ ಕಂದಾಚಾರ ಮತ್ತು ಸಂಪ್ರದಾಯಬದ್ಧತೆಗೆ ಪ್ರಖ್ಯಾತರಿರುವರು. ಗ್ರಿಯರ್ಸನ್‌ರ ಪ್ರಕಾರ, ಮಿಥಿಲೆಯು ಬೇರೆ ರಾಜ್ಯಗಳು ತನ್ನೊಂದಿಗೆ ಸಮಾನ ಆಧಾರದ ಮೇಲೆ ವ್ಯವಹರಿಸಲು ಅವಕಾಶ ನೀಡದಷ್ಟು ಅಹಂಕಾರಿಯಾಗಿತ್ತು, ತನ್ನ ಪರಂಪರಾಗತ ವಿಲಕ್ಷಣತೆಗಳನ್ನು ಬದಲಿಸದೆ ಸಾಗಿತು.[34] ಮಿಥಿಲೆಯಲ್ಲಿ ಕ್ರಿ.ಶ. ಹತ್ತನೆಯ ಶತಮಾನದಿಂದಲೂ ಅಸ್ತಿತ್ವದಲ್ಲಿತ್ತೆಂದು ನಂಬಲಾದ 'ಕುಲೀನತೆ'ಯ ವ್ಯವಸ್ಥೀಕರಣವನ್ನು ಮತ್ತು ಅದು ಸ್ಪಷ್ಟ ರೂಪ ತಾಳಿದ್ದನ್ನು ೧೪ನೆಯ ಶತಮಾನದ ಪ್ರಥಮ ಪಾದವು ಕಂಡಿತು. ಇಡಿ ಮಿಥಿಲಾ ಸಮಾಜವನ್ನು ಹೊಸ ಪದ್ಧತಿಯಲ್ಲಿ ಸಂಘಟಿಸಿದ ಶ್ರೇಯಸ್ಸು ಹರಿಸಿಂಹದೇವನದೆಂದು ಹೇಳಲಾಗಿದೆ.

ಈ ಸುಧಾರಣೆಗಳು ಮೇಲ್ನೋಟಕ್ಕೆ ಪ್ರಗತಿಪರವೆಂದು ಕೆಲವರಿಗೆ ತೋರಿದರೂ ಅವು ಅತ್ಯಂತ ಸಾಂಪ್ರದಾಯಿಕ ಸುಧಾರಣೆಗಳಾಗಿದ್ದವು. ಅವುಗಳ ತತ್ತರಿಸುವ ಪರಿಣಾಮಗಳನ್ನು ಇಂದು ಸಹ ಕಾಣಬಹುದು. ಸಾಂಪ್ರದಾಯಿಕ ಕತೆ ಹೀಗಿದೆ: ಹರಿನಾಥ ಉಪಾಧ್ಯಾಯ ಎಂಬುವನು ಮಾಡಿಕೊಂಡ ವಿವಾಹ ಶಾಸ್ತ್ರಸಮ್ಮತವಾಗಿರಲಿಲ್ಲ. ಗಂಡಹೆಂಡಿರ ಗೋತ್ರಗಳಲ್ಲಿ ಬಹಳ ವ್ಯತ್ಯಾಸವೇನೂ ಇರಲಿಲ್ಲ. ಆದರೂ ಸಹ, ಸಹಜವಾಗಿಯೆ, ಕಣ್ಣುತಪ್ಪಿನಿಂದಾದ ಈ ವಿವಾಹವು ಮಿಥಿಲಾ ಸಮಾಜದಲ್ಲಿ ಕಂಪನ ಹುಟ್ಟಿಸಿತು. ಕೊನೆಗೆ, ವಿಷಯವನ್ನು ಆಳರಸ ಹರಿಸಿಂಹದೇವನ ಗಮನಕ್ಕೆ ತರಲಾಯಿತು.[35] ಅರಸನು *ಪಂಜಿ*ಗಳನ್ನು ಪುನರ್ಘಟಿಸುವಂತೆ ತಕ್ಷಣ ಆಜ್ಞೆಯಿತ್ತನು. ಪುನರ್ಘಟನೆಯನ್ನು ಕ್ರಿ.ಶ. ೧೩೨೬ಕ್ಕೆ ಸರಿಹೊಂದುವ ಶಕ ೧೨೪೮ರಲ್ಲಿ ಪೂರ್ತಿಗೊಳಿಸಲಾಯಿತು.[36] ಇನ್ನೊಂದು ಐತಿಹ್ಯದಂತೆ, ಅದನ್ನು ಕ್ರಿ.ಶ. ೧೩೧೩ ರಲ್ಲಿ ಪೂರ್ತಿಗೊಳಿಸಲಾಯಿತು. ಮೈಥಿಲಿ ಬ್ರಾಹ್ಮಣರ ಮತ್ತು ಮೈಥಿಲಿ ಕಾಯಸ್ಥರ ವಂಶಾವಳಿಯನ್ನು ರಾಜಾಜ್ಞೆಯಂತೆ ಸಿದ್ಧಪಡಿಸಲಾಯಿತು. ಮತ್ತು ಇವತ್ತಿಗೂ ಅವೆರಡೂ ಸಮುದಾಯಗಳು ಅದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿರುವವು. ಬ್ರಾಹ್ಮಣರನ್ನು ನಾಲ್ಕು ವರ್ಗಗಳಲ್ಲಿ ವಿಭಜಿಸಲಾಗಿತ್ತು:[37] ೧. ಶ್ರೋತ್ರಿಯರು ೨. ಜೋಗ್ಯರು ೩. ಪಂಜಿಬಧರು ೪. ಜೈಬರರು. ಈ ವರ್ಗಗಳನ್ನು ವಿವಾಹ ನಿಯಮಗಳಲ್ಲೂ ಸೇರ್ಪಡಿಸಲಾಯಿತು. ಇದು ಕೊನೆಯಲ್ಲಿ ಪಂಜಿಕಾರರು ಮತ್ತು ಘಟಕರನ್ನು ಸೃಷ್ಟಿಸಿತು. ಪಂಜಿಕಾರರು ಪಂಜಿಯನ್ನು ನೋಡಿಕೊಳ್ಳುತ್ತಿದ್ದರು ಮತ್ತು ವಿವಾಹ ಸಮಯದಲ್ಲಿ ಅಥವಾ 'ಸಿದ್ಧಾಂತ ಸಮಾರಂಭ' ಸಂದರ್ಭದಲ್ಲಿ ಹಕ್ಕುಪತ್ರ (ಅಶ್ವಜನಪತ್ರ) ವನ್ನು ನೀಡುತ್ತಿದ್ದನು. ಬ್ರಾಹ್ಮಣರಂತೆಯೆ, ಕಾಯಸ್ಥರನ್ನೂ ಅವರ 'ಮೂಲಾ'ಗಳನ್ನನುಸರಿಸಿ

'ಭಲಾಮಾನುಸರು' ಮತ್ತು 'ಗೃಹಸ್ಥರು' ಎಂದು ವರ್ಗೀಕರಿಸಲಾಯಿತು. ಠಾಕೂರರು ಅಭಿಪ್ರಾಯಪಡುವಂತೆ 'ಮೂಲಾ'ಗಳನ್ನು ಕಾಯಸ್ಥರ ಮೇಲೆ ಹೇರಲಾಗಿತ್ತೆಂಬುದು ಅಸಂಭವನೀಯ ಎನಿಸುವುದು.[38] ಆದರೆ, ಅವರನ್ನು ಹನ್ನೆರಡು ಮಹತ್ವದ 'ಮೂಲಾ'ಗಳಲ್ಲಿ ವಿಭಜಿಸಿರುವ ಸಾಧ್ಯತೆಯಿದೆ. ಈ ಹನ್ನೆರಡು 'ಮೂಲಾ'ಗಳಿಗೆ ನಾನ್ಯದೇವನ ಜೊತೆ ಕರ್ನಾಟದಿಂದ ಮಿಥಿಲೆಗೆ ಆಗಮಿಸಿದ ಹನ್ನೆರಡು ವ್ಯಕ್ತಿಗಳ ಹೆಸರಿಟ್ಟಿರಬಹುದು.[39]

ಬ್ರಾಹ್ಮಣರಂತೆಯೆ ಕಾಯಸ್ಥರನ್ನೂ ನಾಲ್ಕು ಪ್ರಮುಖ ವರ್ಗಗಳಲ್ಲಿ ವಿಭಜಿಸಲಾಗಿತ್ತು: ೧. ಶ್ರೀಧರದಾಸನ ಮನೆತನ ಸೇರಿದಂತೆ ಕರ್ನಾಟ ನಾಡಿನಿಂದ ಬಂದ ಹನ್ನೆರಡು ಕಾಯಸ್ಥರನ್ನು ಮೊದಲ ವರ್ಗದಲ್ಲಿ ಇರಿಸಲಾಯಿತು; ೨. ಕರ್ನಾಟ ರಾಜವಂಶ ಸ್ಥಾಪನೆಗೊಂಡ ನಂತರ ಮಿಥಿಲೆಯಲ್ಲಿ ನೆಲೆಸಲು ಆಹ್ವಾನಿಸಲಾದ ಇಪ್ಪತ್ತು ಮನೆತನಗಳನ್ನು ಎರಡನೆಯ ವರ್ಗದಲ್ಲಿ ಇರಿಸಲಾಯಿತು; ೩. ತದನಂತರ ಮಿಥಿಲೆಗೆ ಬಂದ ಮೂವತ್ತು ಮನೆತನಗಳನ್ನು ಮೂರನೆಯ ವರ್ಗದಲ್ಲಿ ಇರಿಸಲಾಯಿತು; ೪. ಕರ್ನಾಟ ರಾಜವಂಶದ ಆಳ್ವಿಕೆಯಲ್ಲಿ ಕೊನೆಗೆ ನೆಲೆಸಿದ ಮನೆತನಗಳನ್ನು ನಾಲ್ಕನೆಯ ವರ್ಗದಲ್ಲಿ ಇರಿಸಲಾಯಿತು. ಶ್ರೀಧರದಾಸನ ವಂಶಜನಾದ ಸೂರ್ಯಕರ ಠಾಕೂರನು *ಪಂಜಿ* ವ್ಯವಸ್ಥೆಯನ್ನು ಸಂಘಟಿಸುವಲ್ಲಿ ಮಹತ್ವದ ಪಾತ್ರ ವಹಿಸಿದನು. ನಾನ್ಯದೇವನೊಂದಿಗೆ ಬಂದ ಹನ್ನೆರಡು ಕಾಯಸ್ಥರೆಂದರೆ ಲಕ್ಷ್ಮೀಕರ, ಪ್ರಭಾಕರ, ದೇವಿ, ಪುಣ್ಯಕರದೇವ, ಶ್ರೀಕರ, ಶ್ಯಾಮ, ಶಲಾಖಿನದೇವ, ಶ್ರೀಪತಿ, ಶ್ರೀವಾಮ, ಹರಿಹರ, ರತಿಕರ ಮತ್ತು ರತ್ನದೇವ. ಇವರಲ್ಲಿ ಕೊನೆಯವನು ಮಿಥಿಲೆಯ ಕರ್ಣ ಕಾಯಸ್ಥರ ಮೂಲ ಪುರುಷನೆಂದು ಹೇಳಲಾಗಿದೆ. ಬ್ರಾಹ್ಮಣರಿಗಿರುವಂತೆಯೆ, ಕಾಯಸ್ಥರಿಗೂ ತಮ್ಮದೇ *ಪಂಜಿಕಾರರಿರುವರು*. ಈ *ವಂಶಾವಳಿ*ಗಳನ್ನು ಮಿಥಿಲೆಯ ಕ್ಷತ್ರಿಯರೂ ಇತರ ಜಾತಿಯವರೂ ನಡೆಸಿಕೊಂಡು ಬಂದಿದ್ದರು ಮತ್ತು ತರುವಾಯದಲ್ಲಿ ಈ ಪದ್ಧತಿಯನ್ನು ಕೈಬಿಡಲಾಯಿತೆಂದು ನಂಬಲಾಗಿದೆ.[40] ಈಗ ಅದನ್ನು ಬ್ರಾಹ್ಮಣರು ಮತ್ತು ಕಾಯಸ್ಥರು ಮಾತ್ರ ಬಲು ಜೋಪಾನದಿಂದ ಕಾಯ್ದುಕೊಂಡು ಬಂದಿದ್ದಾರೆ. *ಪಂಜಿ*ಗಳ ಪುನರ್ಘಟನೆಯಲ್ಲಿ ಸಾಧ್ಯವಾದಷ್ಟೂ ರಕ್ತಶುದ್ಧಿಯನ್ನು ಕಾಯ್ದುಕೊಳ್ಳುವುದು ಮತ್ತು ನಿಷಿದ್ಧ ಶ್ರೇಣಿಗಳ ಸಂಬಂಧ ಮತ್ತು ವಿವಾಹ ತಪ್ಪಿಸುವುದೆ ಹರಿಸಿಂಹದೇವನ ದೃಷ್ಟಿಕೋನವಾಗಿತ್ತು.[41] ನಂತರದಲ್ಲಿ ಕುಲೀನತಾ ಪಂಥದ ಉದಯವಾಯಿತು. ಅದು ಬ್ರಾಹ್ಮಣರನ್ನು ಮತ್ತು ಕಾಯಸ್ಥರನ್ನು ಅವರವರ ಸಾಮಾಜಿಕ, ಆರ್ಥಿಕ, ರಾಜಕೀಯ ಮುಂತಾದ ಅಂತಸ್ತನ್ನಾಧರಿಸಿ ಅನೇಕ ಪಂಗಡ ಮತ್ತು ಉಪಪಂಗಡಗಳಲ್ಲಿ ವಿಭಜಿಸಿತು. ಅವುಗಳಲ್ಲಿರುವ ವಿವಿಧ ಬಗೆಯ ಪರಿಗಣನೆಗಳನ್ನು ಅನುಸರಿಸಿ ಈ ಪಂಗಡ, ಉಪಪಂಗಡಗಳು ಕಟ್ಟುನಿಟ್ಟಾದ ಶ್ರೇಷ್ಠತಾ ಕ್ರಮದಲ್ಲಿವೆ.[42]

ಹರಿಸಿಂಹದೇವನ ಆಳ್ವಿಕೆಯಲ್ಲಿ ಕಂದಾಚಾರದ ಸಾಮಾಜಿಕ ವ್ಯವಸ್ಥೆಯನ್ನು ಸಂರಕ್ಷಿಸಲೋಸುಗ *ಸ್ಮೃತಿ*ಗಳ ಮೇಲೆ ಗ್ರಂಥಗಳನ್ನು ಮತ್ತು ನಿಬಂಧಗಳನ್ನು ಮಿಥಿಲೆಯಲ್ಲಿ ಬರೆಯಲಾಯಿತು ಮತ್ತು ಸಂಕಲಿಸಲಾಯಿತು. ಈ ಗ್ರಂಥಗಳಲ್ಲಿ, ನಾಲ್ಕೂ ವರ್ಣಗಳ ಹಕ್ಕುಬಾಧ್ಯತೆಗಳನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಆಧುನಿಕ ದೃಷ್ಟಿಕೋನದಿಂದ ನೋಡಿದರೆ,

ಹಳೆಯ ನಿಯಮಗಳನ್ನು ಪುನಃ ಪುನಃ ವಿಮರ್ಶಿಸಲಾಯಿತು ಮತ್ತು ಸಾಂಪ್ರದಾಯಿಕ ನಿಯಮಗಳು ಮತ್ತು ಆಚರಣೆಗಳನ್ನು ಪಾಲಿಸುವಂತೆ ಜನರಿಗೆ ಉಪದೇಶ ನೀಡಲಾಯಿತೆಂದು ಹೇಳಬಹುದು. ಹರಿಸಿಂಹದೇವನ ಪ್ರಖ್ಯಾತ ಮಂತ್ರಿಯಾಗಿದ್ದ ಚಾಂದೇಶ್ವರನು ರತ್ನಾಕರ ಗಳೆಂದು ಕರೆಯಲಾದ ಅನೇಕ ಸಂಹಿತೆಗಳನ್ನು ರಚಿಸಿದನು. ಜೀವನದ ಎಲ್ಲ ಅಂಶಗಳನ್ನು ಕೂಲಂಕೂಷವಾಗಿ ಚರ್ಚಿಸಿದ್ದಲ್ಲದೆ ಹರಿಸಿಂಹದೇವನ ಓಲಗದಲ್ಲಿ ಅಂಥ ವಿಷಯಗಳ ಮೇಲೆ ಅವನ ಮಂತ್ರಿಗಳು ಅವನಿಗೆ ಸಲಹೆ ನೀಡುತ್ತಿದ್ದರೆಂದು ಈ ರತ್ನಾಕರಗಳಿಂದ ತೋರುತ್ತದೆ. ಹಿಂದೂ ಧರ್ಮದ ಎಲ್ಲ ಅಂಶಗಳನ್ನು ಅಳವಡಿಸಿಕೊಂಡು ಮಹತ್ವದ ತತ್ವಗಳನ್ನು ಹರಿಸಿಂಹದೇವನ ಆಳ್ವಿಕೆಯಲ್ಲಿ ಸ್ಥಾಪಿಸಲಾಯಿತು. *ಕೃತ್ಯರತ್ನಾಕರವು* ಹಿಂದೂ ನಾಗರಿಕ ಕಾನೂನುಗಳನ್ನು ವಿವರಿಸುತ್ತದೆ. ಕರ್ನಾಟ ಅರಸರ ಪರಂಪರೆಗನುಗುಣವಾಗಿ ಹರಿಸಿಂಹದೇವನೂ ಅನೇಕ ದೇವಾಲಯಗಳನ್ನು ಕಟ್ಟಿಸಿದನು ಮತ್ತು ತನ್ನ ಪ್ರಜೆಗಳ ಕಲ್ಯಾಣಕ್ಕಾಗಿ ಕೆರೆ ಬಾವಿಗಳನ್ನು ತೋಡಿಸಿದನು. ಅವನು ತನ್ನ ಹೆಸರಿನಲ್ಲಿ ಹರಿಸಿಂಹಪುರವನ್ನು ಸ್ಥಾಪಿಸಿದನೆಂದು ಹೇಳಲಾಗಿದೆ. ಬಹುಶಃ ಅದು ಅವನ ಎರಡನೆಯ ರಾಜಧಾನಿಯಾಗಿತ್ತು. ತನ್ನ ರಾಜ್ಯದ ಎಲ್ಲ ಬದಿಗಳಿಂದ ನಡೆದ ಭಾರಿ ಮುಸ್ಲಿಮ ದಾಳಿಗಳಿಂದಾಗಿ ಕೊನೆಯಲ್ಲಿ ತನ್ನ ತಾಯ್ನಾಡಿಗೆ ವಿದಾಯ ಹೇಳಬೇಕಾಯಿತಾದರೂ ಹರಿಸಿಂಹದೇವನು ತನ್ನ ಮನೆತನದ ಪಾರಂಪರಿಕ ವೈಭವವನ್ನು ಕಾಪಾಡಿದನು. ನಿಜ ಹೇಳಬೇಕೆಂದರೆ, ಅವನ ನಿರ್ಗಮನದಿಂದ ಸ್ವತಂತ್ರ ಹಿಂದೂ ರಾಜ್ಯ ಕೊನೆಯುಸಿರೆಳೆಯಿತು.

## ಹರಿಸಿಂಹದೇವನ ಮೌಲ್ಯಮಾಪನ

ಹರಿಸಿಂಹದೇವನು ಕರ್ನಾಟ ರಾಜವಂಶದ ಕೊನೆಯ ಅರಸನಾಗಿದ್ದನು ಹಾಗೂ ವಿಖ್ಯಾತನಾಗಿದ್ದನು ಎಂಬುದನ್ನು ಈಗಾಗಲೆ ಚರ್ಚಿಸಲಾಗಿದೆ. ಸುತ್ತಲೆಲ್ಲ ಘಟನೆಗಳಿಂದ ತುಂಬಿ ತುಳುಕುತ್ತಿದ್ದ ಅವನ ಕ್ಷುಬ್ಧ ರಾಜಕೀಯ ಜೀವನವು ಮಿಥಿಲೆಯ ಜನಜೀವನ ಹಾಗೂ ಸಂಸ್ಕೃತಿಯ ಮೇಲೆ ಶಾಶ್ವತ ಮುದ್ರೆಯನ್ನೊತ್ತಿತ್ತು. ವಿಜೇತ ಮತ್ತು ಆಡಳಿತಗಾರ ನಾಗಿ ಅಲ್ಲದೆ ದಯಾಳು ಅರಸನಾಗಿಯೂ ಅವನನ್ನು ಈಶಾನ್ಯ ಭಾರತದ ಮಹಾ ಅರಸರಲ್ಲೊಬ್ಬನೆಂದು ಮುಂದಿನ ತಲೆಮಾರುಗಳು ನೆನಪಿಡುವುವು. ಗೋರಖಪುರ ಮತ್ತು ದೇವಗಿರಿಯ ಅರಸರೊಂದಿಗೆ ಅವನು ಹೊಂದಿದ್ದ ಸಂಬಂಧವು ಇಂಥ ಸಂಬಂಧಗಳ ರಾಜತಾಂತ್ರಿಕ ಅರಿವು ಅವನಿಗಿದ್ದುದನ್ನು ಸೂಚಿಸುತ್ತದೆ. ಅವನು ಯೋಧನಾಗಿದ್ದನಲ್ಲದೆ ಸಮರ್ಥ ರಾಜಕೀಯ ಮುತ್ಸದ್ದಿಯೂ ಆಗಿದ್ದನು. ಅವನು ಮಹಾ ಸುಧಾರಕ ಹಾಗೂ ಕಲೆ, ಪಾಂಡಿತ್ಯಗಳ ಆಶ್ರಯದಾತನಾಗಿದ್ದನು. ಅವನ ಆಸ್ಥಾನದಲ್ಲಿ ಪಂಡಿತರ ಮತ್ತು ರಾಜನೀತಿಜ್ಞರ ಪುಂಜವೆ ಇತ್ತು. ಅವರಲ್ಲಿ ಪ್ರಮುಖರಾದವರೆಂದರೆ ದೇವಾದಿತ್ಯ, ವೀರೇಶ್ವರ, ಚಾಂದೇಶ್ವರ, ಜ್ಯೋತಿರೀಶ್ವರ, ಉಮಾಪತಿ, ಸೂರ್ಯಕರ, ಗಣೇಶ್ವರ ಮತ್ತು ಇನ್ನೂ ಅನೇಕರು. ಕಣ್ಣು ಕೋರೈಸುವ ಈ ತೇಜಸ್ವಿಗಳು ಭಾರತೀಯ ಇತಿಹಾಸದ ಮೇಲ್ಪಂಕ್ತಿ ಯುಗದ ಯಾವುದೆ ಆಸ್ಥಾನಕ್ಕೆ ಭೂಷಣಪ್ರಾಯರಾಗಬಲ್ಲವರು. ಅವನು ಮಹಾ

ಸಂಗೀತಪ್ರೇಮಿಯಾಗಿದ್ದನು. ಮತ್ತು ಸಂಗೀತ ಧಾಟಿಗಳು ಅವನನ್ನು ಪುಳಕಿತಗೊಳಿಸುತ್ತಿದ್ದವು ಎಂಬುದು *ಪುರುಷಪರೀಕ್ಷ*ದಿಂದ ಸ್ಪಷ್ಟಪಡುತ್ತದೆ. ಅವನ ಆಳ್ವಿಕೆಯ ಸ್ಮರಣಾರ್ಹ ಘಟನೆಗಳನ್ನು ಆಚರಿಸಲು ನಟರು ಮತ್ತು ಕಲಾವಿದರು ಅಭಿನಯಿಸಿದ, ಹಾಡುಗಳನ್ನು ಹಾಡಿದ ನಿದರ್ಶನಗಳುಂಟು. ಧಾರ್ಮಿಕ ಸಾಹಿತ್ಯ, ನಾಟಕ, ಕಾವ್ಯ, ಸಂಗೀತ, ವಿಮರ್ಶೆ, ಶೃಂಗಾರಗೀತೆ ಮತ್ತು ನಿಬಂಧಗಳು ವಿಪುಲವಾಗಿ ಅವನ ಆಸ್ಥಾನದಲ್ಲಿ ರಚಿಸಲ್ಪಟ್ಟವು. ಮೈಥಿಲಿ ಸಾಹಿತ್ಯ ಜನ್ಮ ತಳೆದದ್ದು, ನಂತರ ಸ್ಪಷ್ಟ ರೂಪ ತಾಳಿದ್ದು ಅವನ ಆಳ್ವಿಕೆಯಲ್ಲಿಯೆ. ನೇಪಾಳದಲ್ಲಿ ಅವನ ಪ್ರವೇಶದಿಂದ ಅಲ್ಲಿ ಮೈಥಿಲಿ ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಸಂಪ್ರದಾಯಗಳ ವಿಸ್ತರಣೆಗೆ ಅವಕಾಶ ಒದಗಿತು. ತರುವಾಯದಲ್ಲಿ ಅಲ್ಲಿಗೆ ಅವನ ಜೊತೆಗೂಡಿ ವಿದ್ವಾಂಸರ ತಂಡ ಹೋಯಿತು. ತಿರಹತ್‌ನಲ್ಲಿ "ಮುಸ್ಲಿಮರ ಆಗಮನಕ್ಕಿಂತ ಮುಂಚೆ ಆ ಹಿಂದೂ ಮಿಥಿಲನು ಸಾಧಿಸಿದ್ದು ಏನು ಎಂದು ಕಲ್ಪಿಸಿಕೊಳ್ಳಲು" ಸಿಮರಾಂವಗಡದ ಅವಶೇಷಗಳೆ ಸಾಕು ಎಂದು ಸರಿಯಾಗಿಯೆ ಎತ್ತಿತೋರಿಸಲಾಗಿದೆ. ಮಿಥಿಲೆಯ ಮೇಲೆ ಮುಸ್ಲಿಮ ದಾಳಿಯ ಕೆಟ್ಟ ಗಾಳಿಯನ್ನು ಹರಿಸಿಂಹದೇವನು ಎದುರಿಸಬೇಕಾದುದು ನಿಜ. ನೇಪಾಳ ಕೊಳ್ಳದತ್ತ ಅವನು ಸರಿಯಬೇಕಾಗಿ ಬಂದಿತಾದರೂ ಶೂರ ಮತ್ತು ದಯಾಳು ಅರಸನಾದ ಅವನ ಹಿರಿಮೆಯನ್ನು ಕಡೆಗಣಿಸಲಾಗದು.

**ಟಿಪ್ಪಣಿಗಳು**

1. India Office Catalogue N. 1387.
2. Chanda Jha p. 68.
3. JBORS, XXII BR, Introduction p. 16. This contention is baseless.
4. GPP, p. 47. JOT, No.2, RR, Introduction, p. 16. vide Tales 2, 8 and 11.
5. PP, (Tale) p. 22.
6. GPP, p. 47.
7. JIH, XXXIV p. 326.
8. Cf. *Selected Papers of the 'All India Maithili Writers Conference*, 1956.
9. ABORI, XXXV p. 114. Cf. R.K. Choudhury, *Harisimhadeva of Mithila* (a reassessment of facts).
10. ABORI, XXXV pp. 91-121, *Prakrtapaingalama*, pp. 107, 184-88.
11. ST, p. 67 MTV, p. 135.
12. RR, p. 18 fn.
13. VK, p. 10, quoted in Petech pp. 215-216.
14. OP. Cit pp. 167-177.
15. D.R. Regmi, *Medieval Nepal*, II.
16. RR, p. 22.
17. D.R. Regmi, *Medieval Nepal*, p. 273.
18. ABORI, XXXV p. 117.
19. D.R. Regmi, *Medieval Nepal*, p. 271.

20. Ibid., p. 272.
21. DHNI, I pp. 185-186. Levi, II pp. 62-68, IGI, XIX p. 25 ff.
22. CSMPIO, II p. 1414, No. 775.
23. POC, II p. 564.
24. CSMPIO, II p. 1411, No. 7767.
25. JASB, LXXII (1903) p. 14. Petech, p. 112.
26. D.R. Regmi, *Medieval Nepal*, p. 273.
27. Petech p. 116.
28. Ibid, p. 115.
29. IBRS, XLIII p. 5.
30. JBRS, XXXVI p. 163 ff. Cf. C.S. pp. 9-11.
31. ABORI, XXXVI p. 163 ff.
32. U. Thakur, TM, p. 278.
33. JASB, IV p. 121.
34. LSI, V. Part II p. 4.
35. JBORS, III p. 516.
36. BMI, p. 494.
37. JBORS, III p. 516.
38. U. Thakur, TM, p. 362.
39. MD, II p. 15 ff.
40. MD, II p. 16. HML, I pp. 30-38.
41. JBORS, XXXIII p. 55.
42. U. Thakur, TM, p. 380.

❑❑

೮

# ಕ್ರಿ.ಶ. ೧೩೨೫ ರವರೆಗಿನ ಮಿಥಿಲೆಯಲ್ಲಿ ಮುಸ್ಲಿಮ ಪ್ರಭುತ್ವ ವಿಸ್ತರಣೆ

ಸಾಕಷ್ಟು ಕಾಲದ ವರೆಗೆ ಮಿಥಿಲೆಯು ಮುಸ್ಲಿಮ ಆಕ್ರಮಣಗಳಿಂದ ತುಲನಾತ್ಮಕವಾಗಿ ಮುಕ್ತವಾಗಿತ್ತು. ಕೆಲವು ವೇಳೆ, ಬಿಹಾರದ ಭಾಗವಾಗಿ ಮಿಥಿಲೆಯು ಅನೇಕ ವರ್ಷಗಳವರೆಗೆ ಅಖಿಲ ಭಾರತ ಮಹತ್ವ ಅನುಭವಿಸಿತು.[1] ಪ್ರಾಚೀನತೆ ಮತ್ತು ಐತಿಹಾಸಿಕ ಸ್ವಾರಸ್ಯ ಹೊಂದಿದಾಗ್ಯೂ, ಇದುವರೆಗೆ ಮಿಥಿಲೆಯ ಸಂಪೂರ್ಣ ಇತಿಹಾಸ ಹೊರಬಂದಿಲ್ಲ. ವಿಶೇಷತಃ ಕರ್ನಾಟ ರಾಜವಂಶದ ಬಹುವಿಧ ಅಂಶಗಳ ಬಗೆಗೆ ಅಸಾಧಾರಣ ಕತ್ತಲೆ ಆವರಿಸಿದೆ. ತರುವಾಯದ ಆಕರಗಳ ಪ್ರಕಾರ,[2] ಅಸಹ್ಯ ಶರೀರ ಮತ್ತು ಸಾಮಾನ್ಯ ವಂಶದವನಾಗಿದ್ದರೂ ಸಾಹಸಿ, ಧೈರ್ಯಶಾಲಿ ಹಾಗೂ ಚಾಣಾಕ್ಷನಾಗಿದ್ದ ಬಖ್ತಿಯಾರ ಖಿಲ್ಜಿಯು ಮಹಾನಂದಾ ನದಿಯ ಪಶ್ಚಿಮ ಪ್ರದೇಶದ ಕೆಲ ಭಾಗಗಳನ್ನು ಗೆದ್ದುಕೊಂಡಂತಿದೆ. ತನ್ನ ಸ್ಥಾನ ಭದ್ರಪಡಿಸಿಕೊಂಡ ಮೇಲೆ ಬಖ್ತಿಯಾರ ಖಿಲ್ಜಿಯು

ಮಿಥಿಲೆಯ ಮೇಲೆ ಕಣ್ಣಿಟ್ಟನು. ಆದರೆ, ಬಖ್ತಿಯಾರನ ವಿಜಯಗಳ ವ್ಯಾಪ್ತಿಯ ಬಗೆಗೆ ವಿದ್ವಾಂಸರಲ್ಲಿ ವಾದವಿದೆ. ಅವನು ದಕ್ಷಿಣ ಬಿಹಾರವನ್ನು ವಶಪಡಿಸಿಕೊಂಡ ಬಗೆಗೆ ಸಾಮಾನ್ಯವಾಗಿ ಸಹಮತವಿದ್ದರೆ ಉತ್ತರ ಬಿಹಾರದ ಮೇಲಿನ ಅವನ ಅಧಿಕಾರದ ಬಗೆಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಬಖ್ತಿಯಾರನು ಆಗ್ನೇಯ ಮಿಥಿಲೆಯನ್ನು ವಶಪಡಿಸಿಕೊಂಡನೆಂದು ಬ್ಲಾಕ್‌ಮನ್‌ನು ಯಾವುದೇ ಪ್ರಮಾಣವನ್ನು ಉಲ್ಲೇಖಿಸದೆ ಹೇಳುತ್ತಾನೆ.[3] *ತುಘಲಕ್-ಇ-ನಾಸಿರಿಯ* ಕರ್ತೃವಾದ ಮಿನ್ಹಾಜನು ಈ ಬಗೆಗೆ ಮೌನ ತಾಳಿರುವನು. ಬಖ್ತಿಯಾರನು ಬಂಗಾಲಕ್ಕೆ ಹೋದುದು ಬಹುಶಃ ಝಾರ್ಖಂಡ ಮೂಲಕವೆಂದು ಕಾನುಂಗೊ ತಮ್ಮ *ಹಿಸ್ಟರಿ ಆಫ್ ಬೆಂಗಾಲ್*ದಲ್ಲಿ ಅಭಿಪ್ರಾಯಪಡುವರು. ಆದರೆ, ಆ ಅಭಿಪ್ರಾಯ ವಿಶ್ವಾಸಾರ್ಹವಲ್ಲ. ಅದು ಗೊಂದಲಾತ್ಮಕವಾದುದೆಂದು ಎಸ್.ಎಚ್.ಅಸ್ಕರಿ ಸಿದ್ಧಪಡಿಸಿರುವರು.[4] ಆದಾಗ್ಯೂ, ಹದಿನಾರನೆಯ ಶತಮಾನದ ಮುಲ್ಲಾ ತಖಿಯಾ ಈ ಬಗೆಗೆ ಮಹತ್ವದ ಪ್ರಮಾಣವೊಂದನ್ನು ಒದಗಿಸುತ್ತಾನೆ. ಕ್ರಿ.ಶ. ೧೨೦೧-೦೨ ರಲ್ಲಿ ಬಂಗಾಲದ ಮೇಲೆ ಮಿಂಚಿನ ದಾಳಿಯಿಡುವುದಕ್ಕಿಂತ ಮುಂಚೆ ಬಖ್ತಿಯಾರ ಖಿಲ್ಜಿಯು ತಿರಹತ್‌ನ ಮೇಲೂ ಆಕ್ರಮಣ ಮಾಡಿ ಕರ್ನಾಟ ರಾಜವಂಶದ ಅರಸನನ್ನು ತನ್ನ ಮಾಂಡಲಿಕನನ್ನಾಗಿ ಮಾಡಿಕೊಂಡನೆಂದು ಮುಲ್ಲಾ ತಖಿಯಾ ಹೇಳುತ್ತಾನೆ.[5]

ಯಾವುದೆ ಸಮಕಾಲೀನ ಪ್ರಮಾಣವಿಲ್ಲದಿದ್ದರೂ ಮುಲ್ಲಾ ತಖಿಯಾನ ಭಿನ್ನ ಕಥನವನ್ನು ಒಪ್ಪಬಹುದು. ಏಕೆಂದರೆ, ಬಖ್ತಿಯಾರನು ತಿರಹತ್‌ನಲ್ಲಿ ನುಗ್ಗಿದ ದಿನಾಂಕಗಳ ಬಗೆಗೆ ಅವನು ಖಚಿತ ಮಾಹಿತಿ ಒದಗಿಸುತ್ತಾನೆ. ಅವನು ಮಿಥಿಲೆಯ ಕರ್ನಾಟ ಅರಸರ ಹೆಸರುಗಳನ್ನು ಕೊಡುತ್ತಾನೆ. ನಿಜಕ್ಕೂ, ಅವನ *ಬಯಾಝ್* ಒಂದು ಮಹತ್ವದ ಮಾಹಿತಿಮೂಲವಾಗಿದ್ದು ಅದರ ಸಹಾಯದಿಂದ ಮಿಥಿಲೆಯ ಈ ಕಾಲಘಟ್ಟದ ಇತಿಹಾಸ ವನ್ನು ಪುನಾರಚಿಸಬಹುದು. ಕರ್ನಾಟ ರಾಜವಂಶದ ಮೂರನೆಯ ಅರಸ ನರಸಿಂಹದೇವನು ಬಂಗಾಲದ ಲಕ್ಷ್ಮಣಸೇನನ ಅಧೀನದಲ್ಲಿದ್ದನು ಹಾಗೂ ಬಖ್ತಿಯಾರ ಖಿಲ್ಜಿಯ ಮಾಂಡಲಿಕ ನಾಗಲೇಬೇಕಾಗಿತ್ತು ಎಂದು ಮುಲ್ಲಾ ತಖಿಯಾ ಅಭಿಪ್ರಾಯ ಪಡುವನು.[6] ಲಖನೌತಿ, ತಾಂಡಾ, ತಾಜಪುರ, ಘೋರಾಘಾಟ, ಬರಕಾಬಾಬಾದ ಮತ್ತು ಮಿಥಿಲೆಯ ತೀರ ಪೂರ್ವ ಅಂಚು, ಅಂದರೆ ಆಧುನಿಕ ಪೂರ್ಣಿಯಾ ಜಿಲ್ಲೆಯವರೆಗೆ ಬಖ್ತಿಯಾರನ ಬಿಗಿ ಹಿಡಿತವಿತ್ತು. ಮೇಲ್ಕಾಣಿಸಿದ ಘಟನೆಗಳ ಹಿನ್ನೆಲೆಯಲ್ಲಿ ಮನಮೋಹನ ಚಕ್ರವರ್ತಿ ಅವರ ತೀರ್ಮಾನ ಗಳನ್ನು ಒಪ್ಪುವದು ಸಾಧ್ಯ. ಚಕ್ರವರ್ತಿ ಹೇಳುತ್ತಾರೆ: "ಹದಿಮೂರನೆಯ ಶತಮಾನದಲ್ಲಿ ಮಿಥಿಲೆಯು ಮುಸಲ್ಮಾನ ದುರಾಕ್ರಮಣಗಳ ಪ್ರವಾಹದಿಂದ ಸಾಮಾನ್ಯವಾಗಿ ಪಾರಾಯಿತು. ಮಹಮ್ಮದೀಯರು ಲಖನೌತಿಗೆ ಸಾಗುವ ಮಾರ್ಗದಲ್ಲಿ ಬಿಹಾರ ಮೂಲಕ ದಿಢದಿಂದ ಹೊರಟರು ಮತ್ತು ಗಂಗಾನದಿಯ ಉತ್ತರಕ್ಕೆ ಹೋಗಲೆತ್ನಿಸಲಿಲ್ಲ."[7] ಮಿಥಿಲೆಯ ಒಂದು ಭಾಗವು, ಅದರ ಗಾತ್ರವೇನೆ ಇರಲಿ, ಆರಂಭಿಕ ಮುಸ್ಲಿಮ ದಾಳಿಗಾರರ ಅಧೀನಕ್ಕೊಳಪಟ್ಟಿ ದ್ದಂತೂ ಸ್ಪಷ್ಟವಿದೆ. ತರುವಾಯದ ಘಟನೆಗಳಿಂದ ಸ್ಪಷ್ಟಪಡುವಂತೆ ಆದೊಂದು ರೀತಿಯ

ಸಡಿಲ ಪ್ರಭುತ್ವವಾಗಿದ್ದಿರಬಹುದೆಂಬ ಸಂಗತಿಯನ್ನು ಪೂರ್ತಿಯಾಗಿ ತಳ್ಳಿಹಾಕುವಂತಿಲ್ಲ. ತರುವಾಯದ ಅರಸರು ಮಿಥಿಲೆಯ ಮೇಲೆ ಅಧಿಕಾರ ಸ್ಥಾಪಿಸಲು ಹೊಸ ವಿಜಯಗಳಿಗೆ ಕೈಹಾಕಬೇಕಾಯಿತು.

ದಕ್ಷಿಣ ಬಿಹಾರದ ಬಹುಭಾಗದ ಮೇಲೆ ಪ್ರಭುತ್ವ ಪಡೆದುದಲ್ಲದೆ ಬಖ್ತಿಯಾರನು ಗಂಡಕ ನದೀಮುಖದಿಂದ ಕೋಸಿ ನದೀಮುಖದವರೆಗಿನ ಗಂಗಾನದಿಯ ಉತ್ತರ ತೀರದ ಪ್ರದೇಶವನ್ನು ಹಿಡಿದುಕೊಂಡನು. ಉತ್ತರ ಮೊಂಘೀರದ ಭಾಗಗಳು, ಭಾಗಲಪುರ ಮತ್ತು ಪೂರ್ಣಿಯಾ ಅವನ ವಶದಲ್ಲಿದ್ದಿರಬಹುದು. ಪೂರ್ಣಿಯಾವು ತಿರಹತ್‌ನ ಪೂರ್ವ ಗಡಿಯಾಗಿತ್ತು. ಮಿಥಿಲೆಯ ಅರಸ ನರಸಿಂಹದೇವನು ತನ್ನ ರಾಜ್ಯವನ್ನು ಹೆಚ್ಚಿನ ಆಕ್ರಮಣಗಳಿಂದ ಮತ್ತು ಅಂತಿಮ ವಿನಾಶದಿಂದ ರಕ್ಷಿಸಲೋಸುಗವೆ ಬಖ್ತಿಯಾರನಿಗೆ ಕಪ್ಪ ಕೊಡುತ್ತಿದ್ದ. ಅಲಿ ಮರ್ದಾನನಿಗೆ ಬಿಹಾರದ ಮೂಲಕ ಹಾದುಹೋಗಲು ಕೊಟ್ಟದ್ದರಿಂದ ಆ ಇಡಿ ಪ್ರದೇಶ ಮುಸ್ಲಿಮ ಅಧಿಕಾರಕ್ಕೊಳಪಟ್ಟಿರಬೇಕೆಂದು ಎಸ್.ಎಚ್. ಅಸ್ಕರಿ ನಂಬುತ್ತಾರೆ. ಆದರೆ, ಅವರ ತೀರ್ಮಾನ ಒಂದು ಊಹೆಯಾಗಿದೆ, ಅಷ್ಟೆ. ಬಖ್ತಿಯಾರನು ಇಡಿ ಮಿಥಿಲೆಯನ್ನು ಆಕ್ರಮಿಸಿಕೊಂಡಿದ್ದನೆಂಬ ಬಗೆಗೆ ಗಟ್ಟಿ ಪ್ರಮಾಣವಿಲ್ಲ ಮತ್ತು ಅದು ಬಖ್ತಿಯಾರನ ಮಾಂಡಲಿಕ ರಾಜ್ಯವಾಗಿದ್ದ ಬಗೆಗೆ ಇರುವ ಉಲ್ಲೇಖವೆಲ್ಲ ಮುಲ್ಲಾ ತಖಿಯಾನ ಏಕೈಕ ಪ್ರಮಾಣವನ್ನಾಧರಿಸಿದ್ದಾಗಿದೆ. 'ಪ್ರಭುತ್ವ' ಎಂಬ ಪದವೆ ಉತ್ಪ್ರೇಕ್ಷಿತವಾದಂತಿದ್ದರೂ ಮಿಥಿಲೆಯ ಸೋಲನ್ನು ನಮ್ಮ ಸದ್ಯದ ತಿಳಿವಿನ ಸ್ಥಿತಿಯಲ್ಲಿ ತಳ್ಳಿಹಾಕುವಂತಿಲ್ಲ.

ಸ್ಥಳೀಯ ಹಾಗೂ ಪಾರಂಪರಿಕ ಮೂಲಗಳು ಮಿಥಿಲೆಯ ಮತ್ತು ದಿಲ್ಲಿಯ ಅರಸರ ನಡುವಣ ಸಂಪರ್ಕದ ಬಗೆಗೆ ಹೇಳುತ್ತವೆ. ವಿದ್ಯಾಪತಿಯ *ಪುರುಷಪರೀಕ್ಷ*ದ ಪ್ರಕಾರ, ದಿಲ್ಲಿಯ ಅರಸನು ಸಾಗರದಿಂದ ಸಾಗರದವರೆಗೆ ಆಳಿದನು ಮತ್ತು ಇಬ್ಬರು ತರುಣ ಅರಸರು - ಕರ್ನಾಟ ರಾಜವಂಶದ ಹರಿಸಿಂಹದೇವ ಮತ್ತು ಚಾಚಿಕದೇವ ಚೌಹಾಣ -ಅವನಿಗೆ ಅಪಾರ ಸಹಾಯ ಮಾಡಿದರು.[8] ಶಹಾಬುದ್ದೀನ ಮೊಹಮ್ಮದ್ ಘೋರಿಯೆ ಆ ಸುಲ್ತಾನನೆಂದು ತೋರುತ್ತದೆ. ನರಸಿಂಹದೇವನು ಮೊಹಮ್ಮದ ಘೋರಿಯ ದರಬಾರಿಗೆ ಹೋದನು ಮತ್ತು ಅವನ ಪರವಾಗಿ ಕಾದಾಡಿದನು ಎಂದು ಹೇಳಲಾಗಿದೆ.[9] "ವಶಪಡಿಸಿಕೊಳ್ಳಲಾಗದ ಪ್ರತಿಕೂಲ ಪ್ರದೇಶದಲ್ಲಿ ಪೀಡಿಸದೆ ಅವನಿಗೆ ಹಾಯ್ದುಹೋಗಗೊಟ್ಟಿರಲಿಕ್ಕಿಲ್ಲ" ಎಂಬ ಎಸ್.ಎಚ್. ಅಸ್ಕರಿ ಅವರ ದೃಢ ಹೇಳಿಕೆಯುಂಟು.[10] ಅದನ್ನು ಒಪ್ಪುವುದಾದರೆ, ನರಸಿಂಹದೇವ ಮತ್ತು ಮೊಹಮ್ಮದ ಘೋರಿ ನಡುವಣ ಸೌಹಾರ್ದಯುತ ಸಂಬಂಧವು ಅಲಿ ಮರ್ದಾನನ ದಾರಿಯನ್ನು ಸುಗಮಗೊಳಿಸಿರಬಹುದು. ಹಾಗೆ ನೋಡಿದರೆ, ಅಲಿ ಮರ್ದಾನನಿಗೆ ಸುಲಭವಾಗಿ ದಾರಿ ಮಾಡಿಕೊಟ್ಟದ್ದು ಈ ಮೈತ್ರಿಭಾವನೆಯೆ. ಈ ದೃಷ್ಟಿಕೋನ ಪೂರ್ತಿಯಾಗಿ ಅಗ್ರಾಹ್ಯವಲ್ಲ.

ಮುಂದೆ ಬಖ್ತಿಯಾರನು ಟಿಬೆಟಿನ ಮೇಲೆ ದಂಡಯಾತ್ರೆ ಕೈಗೊಂಡನು. ಆ ಕಾಲಕ್ಕೆ ಪೂರ್ವ ಸರಹದ್ದಿನ ರಕ್ಷಣೆಯನ್ನು ಅಲಿ ಮರ್ದಾನನಿಗೆ ಒಪ್ಪಿಸಲಾಯಿತು. ದಿಲ್ಲಿಯಿಂದ ಬರುತ್ತಿದ್ದ ಅಲಿ ಮರ್ದಾನನನ್ನು ಇವಾಝ್‌ನು ಎದುರುಗೊಂಡ ಕೋಸಿ ನದಿಯ ಬದಿಯು ಬಖ್ತಿಯಾರನ ಭೂಪ್ರದೇಶದ ಗಡಿಯಾಗಿತ್ತು." ಅವನ ಮರಣಾನಂತರ ಬಖ್ತಿಯಾರನ ರಾಜ್ಯಕ್ಕೆ ಏನಾಯಿತೆಂದು - ಅದು ದಿಲ್ಲಿಯ ಸುಲ್ತನತ್ತಿಗೆ ಸೇರಿಹೋಯಿತೊ ಅಥವಾ ಲಖನೌತಿ ರಾಜ್ಯಕ್ಕೊ - ತಿಳಿಯದು. ಆಕರಗಳು ಮತ್ತು ಪ್ರಮಾಣಗಳು ಪರಸ್ಪರ ವಿರುದ್ಧಾತ್ಮಕವೂ ಗೊಂದಲಾತ್ಮಕವೂ ಆಗಿವೆ. ಟಿಬೆಟ ದಂಡಯಾತ್ರೆ ಅತಿ ದೊಡ್ಡ ವೈಫಲ್ಯವಾಯಿತು. ಅದು ಪೂರ್ವ ಭಾರತದ ಹಿಂದೂ ರಾಜ್ಯಗಳಿಗೆ ಕೊಂಚ ವಿರಾಮ ಒದಗಿಸಿತು. ಬಖ್ತಿಯಾರನ ಸೈನಿಕರು ಸ್ಥೈರ್ಯಗೆಟ್ಟರು ಮತ್ತು ಕ್ರಿ.ಶ. ೧೨೦೬ ರಲ್ಲಿ ಅಲಿ ಮರ್ದಾನನು ಬಖ್ತಿಯಾರನನ್ನು ಕೊಂದನು. ಬಖ್ತಿಯಾರನ ಮಗ ಇಖ್ತಿಯಾರುದ್ದೀನ ಮೊಹಮ್ಮದನು ಬಿಹಾರ ಮತ್ತು ಮಿಥಿಲೆಯ ಮೇಲೆ ದಾಳಿಯಿಟ್ಟನೆಂದು ಹೇಳಲಾಗಿದೆ. ಮಿಥಿಲೆಯು ಸಂಪೂರ್ಣವಾಗಿ ಮುಸ್ಲಿಮ ಅಧಿಕಾರಕ್ಕೆ ಒಳಪಟ್ಟದ್ದೆ ಆಗಿದ್ದರೆ ಅದರ ಮೇಲೆ ಹೊಸ ದಾಳಿಗಳ ಅಗತ್ಯವಿರಲಿಲ್ಲ.

ಬಖ್ತಿಯಾರನ ಮರಣದೊಂದಿಗೆ ಅಲಿ ಮರ್ದಾನನನ್ನು ಮಂಡಲಾಧಿಪತಿಯಾಗಿ ನೇಮಿಸಲಾಯಿತು ಮತ್ತು ಬಖ್ತಿಯಾರನ ರಾಜ್ಯ ಸದ್ದಿಲ್ಲದೆ ಸುಲ್ತಾನ ಐಬಕ್‌ನ ಪ್ರಭುತ್ವಕ್ಕೊಳಪಟ್ಟಿತು. ಸಾಮಾನ್ಯತಃ ಈಶಾನ್ಯ ಭಾರತ, ವಿಶೇಷತಃ ಮಿಥಿಲಾ, ದಿಲ್ಲಿ ಅರಸನಿಗೆ ಹೂವಿನ ಹಾಸಿಗೆಯಾಗಿರಲಿಲ್ಲ. ಮಿಥಿಲೆಯು ದಿಲ್ಲಿಯ ಪ್ರಶ್ನಾತೀತ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿರಲಿಲ್ಲ. ಅದು ತನ್ನ ಸ್ವಾತಂತ್ರ್ಯವನ್ನು ಸಂರಕ್ಷಿಸಲು ಸರ್ವಪ್ರಯತ್ನ ಮಾಡಿತು. ಔಧ ಮತ್ತು ಲಖನೌತಿಗಳ ಮಧ್ಯೆ ಸಿಲುಕಿದ್ದುದರಿಂದ ಮಿಥಿಲೆಯ ಅಸ್ತಿತ್ವವು ಸದಾ ಮುಸ್ಲಿಮ ಸ್ವಾಧೀನದ ಅಪಾಯಕ್ಕೊಳಗಾಗಿತ್ತು. ಸಾಮಾನ್ಯ ವೈರಿಯನ್ನು ಎದುರಿಸಲು ಸಮಾನಮನಸ್ಕ ಹಿಂದೂ ರಾಜ್ಯಗಳನ್ನು ಒಂದುಗೂಡಿಸುವಂಥ ಯಾವುದೆ ಆಧುನಿಕ ಸಂಪರ್ಕಸಾಧನ ಇರಲಿಲ್ಲ. ಭಾರತದಲ್ಲಿ ಮುಸ್ಲಿಮ ಅರಸರ ಕಾಯಂ ಅಭ್ಯುದಯವನ್ನು ಹಿಂದೂ ಅರಸರು ಗ್ರಹಿಸಿರಲಿಲ್ಲ.

ಬಖ್ತಿಯಾರನ ಅಪಮಾನಕರ ಮತ್ತು ದುಃಖಕರ ಅಂತ್ಯವು ಹೊಸ ದಾರಿಗಳನ್ನು ಸೃಷ್ಟಿಸಿತು. ಅವನ ಮಹತ್ವಾಕಾಂಕ್ಷಿ ಮತ್ತು ದುಃಖಕರ ಅಂತ್ಯವು ಹೊಸ ದಾರಿಗಳನ್ನು ಸೃಷ್ಟಿಸಿತು ಮತ್ತು ಮಹತ್ವಾಕಾಂಕ್ಷಿ ಸಾಹಸಿಗರು ನೆರೆ ರಾಜ್ಯಗಳ ಮೇಲೆ ಆಸೆಗಣ್ಣು ಬೀರಲು ಎಡೆಮಾಡಿತು. ಮಿಥಿಲಾ ರಾಜ್ಯದ ಸ್ವತಂತ್ರ ಅಂತಸ್ತು ಲಖನೌತಿಯ ದೊರೆಗಳಿಗೆ ಕಣ್ಣುಕಿಸುರಾಗಿತ್ತು. ಮನೆಮಾತಾಗಿದ್ದ ಬಿಹಾರದ ಕಣಜದ ಮೇಲಿನ ಆಸೆಯನ್ನು ಅವರೆಂದೂ ಬಿಡಲಿಲ್ಲ.

*ತಬಾಖಿತ್-ಇ-ನಾಸಿರಿ* ಪ್ರಕಾರ, ಕುತುಬುದ್ದೀನ ಐಬಕನು ಮಂಡಲಾಧಿಪತ್ಯವನ್ನು ವಹಿಸಿಕೊಟ್ಟ ನಂತರ ಅಲಿ ಮರ್ದಾನನು ಲಖನೌತಿಯತ್ತ ಸಾಗಿದನು. ಅವನು ಕೋಸಿ

ನದಿಯನ್ನು ದಾಟಿದಾಗ ಹುಸ್ಸಮುದ್ದೀನ ಇವಾಝ್‌ನು ಅಲಿ ಮರ್ದಾನನಿಗೆ ಭವ್ಯ ಸ್ವಾಗತ ನೀಡಲು ದೇವಿಕೋಟದಿಂದ ಇಷ್ಟು ದೂರ ಬಂದನು. ಇದಕ್ಕೆ ಯಾವುದೆ ವಿರೋಧ ಒಡ್ಡಿದ ಬಗೆಗೆ ಪ್ರಮಾಣವಿಲ್ಲ. ಇದರಿಂದ, ಕೋಸಿ ನದಿಯ ಹರಿವಿನಗುಂಟ ಇದ್ದ ಮಿಥಿಲೆಯ ಚಿಕ್ಕ ಆದರೆ ನಗಣ್ಯ ಭಾಗವೊಂದು ಬಹುಶಃ ಮುಸ್ಲಿಮ ಹಿಡಿತದಲ್ಲಿತ್ತೆಂಬ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ರಾಜಮಹಾಲ ಗುಡ್ಡಗಳಿಂದ ಹಳೆಯ ಕೋಸಿ ನದಿಯ ಕೆಳ ಹರಿವಿನವರೆಗಿನ (ಅದು ಲಖನೌತಿ ಮತ್ತು ಮಿಥಿಲಾ ರಾಜ್ಯಗಳ ನಡುವಣ ಸ್ವೀಕೃತ ಗಡಿಯಾಗಿತ್ತು) ಇಡಿ ಭೂಪ್ರದೇಶವನ್ನು ಹುಸ್ಸಮುದ್ದೀನ ಇವಾಝ್‌ನು ಆಳುತ್ತಿದ್ದನೆಂದು ನಂಬಲಾಗಿದೆ.[12]

ಕ್ರಿ.ಶ. ೧೨೦೭ ರಲ್ಲಿ ಕುತುಬುದ್ದೀನನ ಔಧ ಮಂಡಲಾಧಿಪತಿ ರೂಮೀಗೆ ಲಖನೌತಿ ಮೇಲೆ ದಂಡೆತ್ತಿ ಹೋಗಲು ಆಜ್ಞಾಪಿಸಲಾಯಿತು. ರೂಮೀಯು ಕೋಸಿ ನದಿಯನ್ನು ದಾಟಿದಾಗ ಹುಸ್ಸಮುದ್ದೀನ ಇವಾಝ್‌ನು ಅವನನ್ನು ಎದುರುಗೊಳ್ಳಲು ಧಾವಿಸಿದನು ಮತ್ತು ತನ್ನ ಸೇವೆಯನ್ನು ಅವನಿಗೆ ಒಪ್ಪಿಸಿದನೆಂದು ಹೇಳಲಾಗಿದೆ.[13] ಹುಸ್ಸಮುದ್ದೀನ ಇವಾಝ್‌ನು ಅಲಿ ಮರ್ದಾನನನ್ನು ಕಿತ್ತೆಸೆದು ನೆರೆರಾಜ್ಯಗಳಾದ ಜ್ಯನಗರ, ವಂಗ, ಕಾಮರೂಪ ಮತ್ತು ಮಿಥಿಲೆಗಳಿಂದ ಕಪ್ಪಗಳನ್ನು ಕಿತ್ತುಕೊಂಡನು. ಹೀಗೆಂದು ಹೇಳಿಕೊಂಡುದು ಅಸ್ಪಷ್ಟ ಸ್ವರೂಪದ್ದಾಗಿದ್ದು ಬಡಾಯಿ ಮಾತುಗಳಂತಿವೆ ಎಂದು ಎಚ್.ಸಿ.ರೈ ಅಭಿಪ್ರಾಯಪಡುತ್ತಾರೆ.[14] ಮಿಥಿಲೆಯಲ್ಲಿ ಇವಾಝ್‌ನ ಆಳ್ವಿಕೆಯ (ಕ್ರಿ.ಶ. ೧೨೧೩-೧೨೨೭) ಸ್ವರೂಪದ ಬಗೆಗೆ ನಾವು ಸ್ಪಷ್ಟ ಅಭಿಪ್ರಾಯ ತಾಳುವ ಸ್ಥಿತಿಯಲ್ಲಿಲ್ಲ. ಅವನ ರಾಜ್ಯದಲ್ಲಿ ಆಧುನಿಕ ಪೂರ್ಣಿಯಾ ಜಿಲ್ಲೆ ಸೇರ್ಪಡೆಯಾದುದರಿಂದ ಮಿಥಿಲೆಯ ಪೂರ್ವ ಭಾಗದ ಮೇಲೆ ಅವನ ಪ್ರಭುತ್ವವಿತ್ತೆಂದು ಧಾರಾಳವಾಗಿ ಊಹಿಸಬಹುದು. ಅವನು ತನ್ನ ರಾಜ್ಯದ ಗಡಿಯನ್ನು ಉತ್ತರ ಬಿಹಾರದಲ್ಲಿ ಗಂಡಕ ನದಿಯವರೆಗೆ ಚಾಚಿದನೆಂದು ಹೇಳಲಾಗಿದೆ.

ಮುಲ್ಲಾ ತಖಿಯಾನ ದೃಢ ಅಭಿಪ್ರಾಯದಲ್ಲಿ, ಮಿಥಿಲೆಯ ಕರ್ನಾಟ ಅರಸ ನರಸಿಂಹದೇವನು ಇವಾಝ್‌ನಿಗೆ ಕೊಡಲೊಪ್ಪಿದ ಕಪ್ಪಮೊತ್ತವನ್ನು ಕಳಿಸುವುದನ್ನು ಮುಂದುವರಿಸಿದನು ಮತ್ತು ತತ್ಪರಿಣಾಮವಾಗಿ ಅವನು ತನ್ನ ರಾಜ್ಯವನ್ನು ಬಾಹ್ಯ ಒತ್ತಡಗಳು ಮತ್ತು ದಾಳಿಗಳಿಂದ ಸಂಪೂರ್ಣವಾಗಿ ಮುಕ್ತವಾಗಿಟ್ಟನು. ಕೋಸಿ ನಾಡಿನ ಅಂದಿನ ಅರಸನು ಮುಸ್ಲಿಮ ಅರಸರೊಂದಿಗೆ 'ವೇತಸಿವೃತ್ತಿ' ನೀತಿಯನ್ನು ಅನುಸರಿಸಿದನು.[15] ಒಬ್ಬನ ದೌರ್ಬಲ್ಯ ಇನ್ನೊಬ್ಬನ ಸುವರ್ಣಾವಕಾಶವಾಗಿತ್ತು. ಕಾನುಂಗೋನ ಈ ಕೆಳಗಿನ ಹೇಳಿಕೆ ಗಮನಯೋಗ್ಯವಾಗಿದೆ: "ಮಿಥಿಲೆಯ ಹಳೆಯ ಕರ್ನಾಟ ರಾಜ್ಯವು ಅರಿಮಲ್ಲದೇವನ ಮರಣಾನಂತರದ ಕಾಲದಲ್ಲಿ ತುಂಡುತುಂಡಾಗತೊಡಗಿತ್ತು. ಔಧದ ಮುಸ್ಲಿಮ ಪ್ರಾಂತಗಳು ಮತ್ತು ಲಖನೌತಿ ಭೂಪ್ರದೇಶದ ಮಧ್ಯೆ ಇದ್ದ ಬಯಲುಪ್ರದೇಶಗಳನ್ನು ಹಿಡಿದಿಟ್ಟುಕೊಳ್ಳಲಾಗದ ಹತಾಶೆಯಲ್ಲಿ ಮುಳುಗಿದ ಈ ಅರಸರು ನೇಪಾಳ ಕೊಳ್ಳದಲ್ಲಿ ಪರಿಹಾರ ಕಂಡುಕೊಂಡರು. ಪೂರ್ವ ತಿರಹತ್‌ನ ಅರಸನು ಲಖನೌತಿಯ ಪ್ರಭಾವಕ್ಕೊಳಗಾಗದೆ

ಗತ್ಯಂತರವಿರಲಿಲ್ಲ."[16] ಮೇಲ್ಕಂಡ ಹೇಳಿಕೆಗೆ ನೆಲೆ ಇಲ್ಲ ಮತ್ತು ಈ ತೀರ್ಮಾನದ ನಿರರ್ಥಕತೆಯನ್ನು ಇತ್ತೀಚಿನ ಸಂಶೋಧಕರು ಈಗಾಗಲೆ ಎತ್ತಿತೋರಿಸಿರುವರು. ಕಾನುಂಗೊ ಉಲ್ಲೇಖಿಸಿರುವ ಕಾಲಾವಧಿಯಲ್ಲಿ ಅರಿಮಲ್ಲದೇವನು ಮಿಥಿಲೆಯ ಅರಸನಾಗಿರಲಿಲ್ಲ ಹಾಗೂ ಮಿಥಿಲೆಯ ಮೇಲೆ ಯಾವುದೆ ಕಾಲಕ್ಕೆ ತನ್ನ ಅಧಿಕಾರ ವಿಸ್ತರಿಸಿಕೊಂಡಿರಬಹುದಾದ ಆ ಹೆಸರಿನ ಅರಸನಾರೂ ಇರಲಿಲ್ಲ ಎಂಬುದನ್ನಿಲ್ಲಿ ಎತ್ತಿತೋರಿಸಬೇಕು. ಎಸ್.ಎಚ್.ಅಸ್ಕರಿ ಅವರೂ ಕಾನುಂಗೊ ಅವರ ಗೊಂದಲಾತ್ಮಕ ಹೇಳಿಕೆಯನ್ನು ಲಕ್ಷಿಸಿಲ್ಲ.[18] ಪೂರ್ವ ಪ್ರಾಂತಗಳ ಮೇಲೆ ಅಧಿಪತ್ಯಕ್ಕಾಗಿ ಇವಾಝ್ ಹೆಣಗಿದುದರಲ್ಲಿ ಸಂದೇಹವಿಲ್ಲ. ಇದು ಇಲ್ತುತ್‌ಮಿಶ್‌ನ ಕೋಪ ಕೆರಳಿಸಿತು. ಅವನು ಅದನ್ನು ಸುಲ್ತಾನ ಘಿಯಾಸುದ್ದೀನ ಖಿಲ್ಜಿಯಿಂದ ಕಿತ್ತುಕೊಳ್ಳಲು ಬಿಹಾರದ ಮೇಲೆ ದಂಡು ಕಳಿಸಿದ. ಕಾನುಂಗೊರ ಹೇಳಿಕೆ ನಿರಾಧಾರವಾಗಿದ್ದುದರಿಂದ ಸಂಪೂರ್ಣವಾಗಿ ತಪ್ಪು ದಾರಿಗೆ ಎಳೆಯುವಂಥದೆಂದು ಆರ್.ಸಿ.ಮಜುಮದಾರ ಸಾಧಿಸುತ್ತಾರೆ. ಅವರು ಹೇಳುತ್ತಾರೆ: "....ತುಂಡುಗಳಾಗಿ ತಿರಹತ್ ಒಡೆದುಹೋಗಿತ್ತೆಂದು ತೋರಿಸಲು ಆಧಾರವಿಲ್ಲ."[19]

ಇವಾಝ್‌ನ ರಾಜಕೀಯ ಮಹತ್ವಾಕಾಂಕ್ಷೆಗಳು ಹೆಚ್ಚಿದ ಸಂದರ್ಭದಲ್ಲಿ, ಸುಲ್ತಾನ ಇಲ್ತುತ್‌ಮಿಶ್‌ನು ದಿಲ್ಲಿಯ ಸಾಮ್ರಾಜ್ಯದ ಸಿಂಹಾಸನದ ಮೇಲೆ ತನ್ನ ಸ್ಥಾನ ಭದ್ರಪಡಿಸಿಕೊಂಡು, ನಂತರ ಪೂರ್ವ ಪ್ರಾಂತಗಳತ್ತ ಲಕ್ಷ್ಯ ತಿರುಗಿಸಿದ. ಕ್ರಿ.ಶ. ೧೨೨೫ ರಲ್ಲಿ ಬಿಹಾರ ಮತ್ತು ಬಂಗಾಲಗಳನ್ನು ವಶಪಡಿಸಿಕೊಳ್ಳಲೋಸುಗ ತಾನೆ ಸ್ವತಃ ಸೈನ್ಯದೊಂದಿಗೆ ದಂಡೆತ್ತಿ ಬಂದ. ಸಮಕಾಲೀನ ಇತಿಹಾಸಕಾರ ಮಿನ್ಹಾಜ್-ಉಸ್-ಸಿರಾಜ್ ನು ಹೇಳುತ್ತಾನೆ: 'ಘನ ಸುಲ್ತಾನನು ರಾಜಧಾನಿ ದಿಲ್ಲಿಯಿಂದ ಲಖನೌತಿಯತ್ತ ಹಲವಾರು ಸಂದರ್ಭಗಳಲ್ಲಿ ಸೈನ್ಯ ಕಳಿಸಿ ಬಿಹಾರವನ್ನು ವಶಪಡಿಸಿಕೊಂಡನು ಮತ್ತು ಅಲ್ಲಿ ತನ್ನದೇ ಅಮೀರರನ್ನು ನೇಮಿಸಿದನು."[20] ಸುಲ್ತಾನನ ಮುನ್ನಡೆಯನ್ನು ಬಿಹಾರದಲ್ಲಿ ಕೆಲಕಾಲ ತಡೆಯಲಾಯಿತೆಂದು ಗ್ರಹಿಸಲಾಗಿದೆ. ಆದರೆ, ಇವಾಝ್‌ನ ಮೇಲೆ ಅವನ ಅಂತಿಮ ವಿಜಯ ಅಲ್ಪ ಕಾಲದ್ದು ಮತ್ತು ಮೇಲುಮೇಲಿನದಾಗಿತ್ತು. ಇಬ್ಬರ ನಡುವೆ ಒಪ್ಪಂದವಾಯಿತೆಂದು ಹೇಳಲಾಗಿದೆ; ಒಪ್ಪಂದದ ಪ್ರಕಾರ, ಇವಾಝ್‌ನು ಭಾರಿ ಪರಿಹಾರಧನ ಕೊಡಬೇಕಾಯಿತು ಮತ್ತು ದಿಲ್ಲಿಯ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಬೇಕಾಯಿತು. ಅವನು ಸುಲ್ತಾನ ಇಲ್ತುತ್‌ಮಿಶ್‌ನಿಗೆ ಕಾಣಿಕೆಯಾಗಿ ೩೮ ಆನೆಗಳನ್ನು ಮತ್ತು ೮೦ ಸಾವಿರ 'ಟಂಕ'ಗಳ ನಗದನ್ನು ಕಳಿಸಿಕೊಟ್ಟನೆಂದು ಹೇಳಲಾಗಿದೆ. ಇದರಿಂದ, ದರ್ಭಂಗಾವು ಸಾಮ್ರಾಜ್ಯದ ಭೂಪ್ರದೇಶವೆ ಆಗಿತ್ತೆಂದು ಕಂಡುಬರುತ್ತದೆ. ಘಿಯಾಸ್‌ನು (ಇವಾಝ್‌ನು) ಆಜ್ಞೆ ಪಾಲಿಸುವಂತೆ ಮಾಡಲಾಯಿತು. ಇಲ್ತುತ್‌ಮಿಶ್‌ನು ತನ್ನದೇ ಹೆಸರಿನಲ್ಲಿ[21] 'ಸಿಕ್ಕಾ' ಮತ್ತು 'ಖುತ್ಬಾ' ಹೊರಡಿಸಿ ದಿಲ್ಲಿಗೆ ಮರಳಿದನು. ಅವನು ಬಂಗಾಲದಿಂದ ಬಿಹಾರವನ್ನು ಬೇರ್ಪಡಿಸುವಲ್ಲಿ ಯಶಸ್ವಿಯಾದನು. ಮತ್ತು ಬಿಹಾರದ ಆಡಳಿತ ನೋಡಿಕೊಳ್ಳಲು ಅಲ್ಲಾವುದ್ದೀನ ಮಲಿಕ್ ಜಾನಿಯನ್ನು ನೇಮಿಸಿದನು. ಇಲ್ತುತ್‌ಮಿಶ್‌ನ ನಿರ್ಗಮನದಿಂದ ಉತ್ತೇಜಿತಗೊಂಡು ಇವಾಝ್‌ನು

ಜಾನಿಯನ್ನು ಬಿಹಾರದಿಂದ ಹೊರದೂಡಿದ. ಆ ಭೂಪ್ರದೇಶದ ಮೇಲೆ ತನ್ನ ಅಧಿಕಾರ ಪುನರ್‌ಸ್ಥಾಪಿಸುವಲ್ಲಿ ಮಿಥಿಲಾ ಅರಸ ನರಸಿಂಹದೇವನು ಇವಾಝ್‌ಸಿಗೆ ನೆರವಾದನೆಂದು ಮುಲ್ಲಾತಖಿಯಾ ತಿಳಿಸುವನು. ಇಬ್ಬರ ಮಧ್ಯೆ ಒಂದು ರೀತಿಯ ಮೈತ್ರಿ ಇದ್ದು ಇಬ್ಬರೂ ಪೂರ್ವದಲ್ಲಿ ದಿಲ್ಲಿ ಸಲ್ತನತ್ತಿನ ವಿಸ್ತರಣೆಯನ್ನು ವಿರೋಧಿಸುತ್ತಿದ್ದರೆಂದು ಕಾಣುತ್ತದೆ. ಇಬ್ಬರೂ ತಮ್ಮ ತಮ್ಮ ರಾಜ್ಯಗಳ ಸ್ವಾತಂತ್ರ್ಯದ ಫಲವನ್ನು ಅನಂದಿಸುತ್ತಿದ್ದುದರಿಂದ ಅದು ಸಹಜ ತಾನೆ! ಹಾಗಾಗಿ, ಸ್ವಾಭಾವಿಕವಾಗಿಯೆ, ದಿಲ್ಲಿ ಸಲ್ತನತ್ತನ್ನು ವಿರೋಧಿಸುವ ಪ್ರಶ್ನೆ ಉದ್ಭವಿಸಿದಾಗೆಲ್ಲ ತಿರಹತ್‌ನ ಹಿಂದೂ ರಾಜ್ಯ ಮತ್ತು ಬಂಗಾಲದ ಮುಸ್ಲಿಮ ರಾಜ್ಯ ಒಟ್ಟುಗೂಡಿ ತಮಗಿಬ್ಬರಿಗೂ ಸಾಮಾನ್ಯವಾಗಿದ್ದ ವೈರಿಯೊಂದಿಗೆ ಕಾದಾಡಲು ಇಷ್ಟಪಟ್ಟರು.

ಬಿಹಾರದ ಪದಚ್ಯುತ ಮಂಡಲಾಧಿಪತಿ ಮಲಿಕ್ ಜಾನಿಯು ಔಧದ ಹಿಂದೂ ಬಂಡುಕೋರರನ್ನು ಸದೆಬಡಿಯುವಲ್ಲಿ ನಿರತನಾಗಿದ್ದ ಅರಸನಾದ ನಾಸೀರುದ್ದೀನ ಮುಹಮ್ಮದನ ಜೊತೆಗೂಡಿದನು. ಕ್ರಿ.ಶ. ೧೨೨೭ ರಲ್ಲಿ ತನ್ನ ಉಚ್ಚಾಟನೆಯ ಎರಡು ವರ್ಷಾನಂತರ ಜಾನಿಯು ದಿಲ್ಲಿಯ ಸಾಮ್ರಾಟನ ಹಿರಿಯ ಮಗನಾದ ನಾಸೀರುದ್ದೀನ ಮುಹಮ್ಮದನನ್ನು ಮಿಥಿಲೆಯ ಗಡಿಗೆ ತಂದನು ಮತ್ತು ಅಲ್ಲಿ ದೊಡ್ಡ ಸೈನ್ಯವನ್ನು ಸಜ್ಜುಗೊಳಿಸಿದನು. ಆ ಸಮಯದಲ್ಲಿ ಇವಾಝ್‌ನು ಯೋಜಿತ ಪೂರ್ವ ಬಂಗಾಲ ವಿಜಯದಲ್ಲಿ ನಿರತನಾಗಿದ್ದನು. ಅವನು ಶೀಘ್ರವೆ ತನ್ನ ಪೂರ್ವ ದಂಡಯಾತ್ರೆಯಿಂದ ಮರಳಿದನು. ಆದರೆ, ಪರಿಸ್ಥಿತಿ ಬಿಗಡಾಯಿಸಿ ಅವನ ಗೈರುಹಾಜರಿಯಲ್ಲಿ ಅವನ ವಿರುದ್ಧವೆ ತಿರುಗಿತ್ತು. ಘನಘೋರ ಯುದ್ಧ ಜರುಗಿ ಆವನನ್ನು ಸೋಲಿಸಿ, ಸೆರೆಹಿಡಿದು ಕ್ರಿ.ಶ. ೧೨೨೭ ರಲ್ಲಿ ತಲೆಹೊಡೆಯಲಾಯಿತು. ನಾಸೀರುದ್ದೀನನು ಔಧ, ಬಿಹಾರ ಮತ್ತು ಬಂಗಾಲಗಳನ್ನು ಸೇರಿಸಿಕೊಂಡು ಲಖನೌತಿಯಲ್ಲಿ ತನ್ನ ರಾಜಧಾನಿಯನ್ನು ಸ್ಥಾಪಿಸಿದನು. ಕ್ರಿ.ಶ. ೧೨೨೯ ರಲ್ಲಿ ಅವನ ತಂದೆ ಆವನಿಗೆ ಮಲಿಕ್-ಅರ್ಸ್-ಶರ್ಖ (ಪೂರ್ವದ ದೊರೆ) ಎಂಬ ಬಿರುದನ್ನಿತ್ತನು ಮತ್ತು ಗೌರವ ವಸ್ತ್ರವನ್ನು ಕಳಿಸಿದನು. ಆದರೆ, ಅದೇ ವರ್ಷ ಅರಸ ಸತ್ತನು. ಏತನ್ಮಧ್ಯೆ, ಇವಾಝ್‌ನ ನಿಕಟ ಸಂಬಂಧಿಕನಾದ ಇಖ್ತಿಯಾರುದ್ದೀನ ಬಾಲ್ಕಾನು ಬಂಗಾಲದ ಸ್ವಾತಂತ್ರ್ಯವನ್ನು ಘೋಷಿಸಿದನು. ಇಲ್ತುತ್‌ಮಿಶ್‌ನು ಇನ್ನೊಂದು ದಂಡಯಾತ್ರೆಯನ್ನು ಮುನ್ನಡೆಸಿ, ಅವನನ್ನು ಸೋಲಿಸಿ ಮಲಿಕ್ ಜಾನಿಯನ್ನು ಬಂಗಾಲದ ಮತ್ತು ಮಲಿಕ್ ಸೈಫುದ್ದೀನ್ ಐಬಕ್‌ನನ್ನು ಬಿಹಾರದ ಮಂಡಲಾಧಿಪತಿಗಳನ್ನಾಗಿ ನಿಯಮಿಸಿದನು. ಈ ಬಗೆಗೆ ಯು.ಠಾಕೂರರ ವಾದವನ್ನೊಪ್ಪುವುದು ಕಠಿಣವಾಗಿದೆ. ಅವರು ರಿಯಾಝ್‌ನನ್ನು ಅವಲಂಬಿಸಿ ಹೀಗೆನ್ನುತ್ತಾರೆ: "ಮುಘಲಪೂರ್ವ ಕಾಲದಲ್ಲಿ ಮುಸಲ್ಮಾನ - ಬಂಗಾಲ ರಾಜ್ಯವು ಬಹುಮಟ್ಟಿಗೆ ಇಡಿ ಉತ್ತರ ಬಿಹಾರವನ್ನು ಒಳಗೊಂಡಿತ್ತು."[22] ಆದರೆ, ನಮಗೆ ಲಭ್ಯವಿರುವ ಸಂಗತಿಗಳು ಆ ಕಾಲದ ಬೇರೆಯೆ ಸ್ಥಿತಿಯನ್ನು ಸೂಚಿಸುತ್ತವೆ.

ತನ್ನ ರಾಜ್ಯದ ಅಖಂಡತೆ ಮತ್ತು ಸ್ವಾತಂತ್ರ್ಯ ಕಾಪಾಡಿಕೊಳ್ಳಲು ಇವಾರ್‌ಖ್‌ನೊಂದಿಗಿನ ತನ್ನ ಆರೋಪಿತ ಭಾಗಿತ್ವಕ್ಕಾಗಿ ನರಸಿಂಹದೇವನು ಇಲ್ತುತ್‌ಮಿಶ್‌ನ ಕ್ಷಮೆ ಯಾಚಿಸಿದ. ಹೀಗೆ, ಅವನು ತನ್ನ ಚಾಣಾಕ್ಷತೆಯಿಂದ ಮಿಥಿಲೆಯ ಸ್ವಾತಂತ್ರ್ಯ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾದನು. ಯಾವಾಗಲೂ ಎರಡೂ ಬದಿಯಿಂದ ಅಪಾಯವಿದ್ದಾಗ್ಯೂ ಕರ್ನಾಟ ರಾಜ್ಯವು ಆಶ್ಚರ್ಯಕರವಾಗಿ ಬಚಾವಾಯಿತು. ಮುಲ್ಲಾ ತಖಿಯಾನನ್ನು ಆಧರಿಸಿ, ಮಿಥಿಲೆಯು ಸ್ವತಂತ್ರ ರಾಜ್ಯವಾಗಿಯೆ ಮುಂದುವರಿಯಿತೆಂದೂ ಮುಸ್ಲಿಮರೊಂದಿಗೆ ಅಧೀನತೆಯ ರೂಪದಲ್ಲಾಗಲಿ ಮೈತ್ರಿ ರೂಪದಲ್ಲಾಗಲಿ ಅದು ಹೊಂದಿದ್ದ ಸಂಪರ್ಕವು ಮುಖ್ಯತಃ ರಾಜತಾಂತ್ರಿಕ ಅನುಕೂಲಕ್ಕೋಸುಗವೆ ಆಗಿತ್ತೆಂದೂ ದೃಢವಾಗಿ ಹೇಳಬಹುದು. ಈ ಸಂಗತಿಗಳ ಹಿನ್ನೆಲೆಯಲ್ಲಿ ಕಾನುಂಗೊ ಅವರ ದೃಢಾಭಿಪ್ರಾಯಗಳನ್ನು ನಂಬಲು ಕಷ್ಟವಾಗುತ್ತದೆ. ನರಸಿಂಹದೇವನು ಸ್ವತಂತ್ರ ಅರಸನಾಗಿ ಕ್ರಿ.ಶ. ೧೨೨೭ ರವರೆಗೆ ಆಳಿದನು. ಅವನ ತರುವಾಯ ಅಧಿಕಾರಕ್ಕೆ ಬಂದ ಅವನ ಮಗ ರಾಮಸಿಂಹದೇವನು ಸುದೀರ್ಘ ಕಾಲ ಆಳಿದನು. ಆಗಾಗ ದಾಳಿಗಳು ನಡೆದರೂ, ಯಾವುದೆ ದೃಷ್ಟಿಯಿಂದಲೂ ಮಿಥಿಲೆಯ ಸ್ವತಂತ್ರ ಸ್ಥಾನಮಾನವನ್ನು ಪ್ರಶ್ನಿಸಲಾಗದು. ಖಂಡಿತವಾಗಿಯೂ ಅದನ್ನು ಮುಘಲಪೂರ್ವ ಕಾಲದ ಬಂಗಾಲದಡಿ ತರಲಾಗದು. ಇಲ್ತುತ್‌ಮಿಶ್‌ನ ಆಳ್ವಿಕೆಯಲ್ಲಿ ಬಂಗಾಲದಿಂದ ಬಿಹಾರದ ಬೇರ್ಪಡಿಕೆಯು ಐತಿಹಾಸಿಕ ಮಹತ್ವದ ಘಟನೆಯಾಗಿತ್ತು. ಬುದ್ಧಿವಂತ ಆಡಳಿತಗಾರನಾಗಿದ್ದ ಇಲ್ತುತ್‌ಮಿಶ್‌ನು ಎಲ್ಲಕ್ಕೂ ಮುಂಚೆಯೆ ಅದರ ಮಹತ್ವವನ್ನು ಮನಗಂಡನು. ಅವನ ಆಳ್ವಿಕೆಯು ಬಹುಕಾಲದ್ದಾಗಿರದಿದ್ದರೂ, ಆಡಳಿತದ ದೃಷ್ಟಿಯಿಂದ ತರುವಾಯದ ಮುಸ್ಲಿಮ ಅರಸರು ಬಿಹಾರವನ್ನು ಪ್ರತ್ಯೇಕ ಘಟಕವಾಗಿ ಇಟ್ಟುಕೊಂಡುದನ್ನು ನೋಡಿದರೆ ಅದು ಬಹಳ ಮಹತ್ವದ ಘಟನೆಯನ್ನು ಸೃಷ್ಟಿಸಿತೆಂದೇ ಹೇಳಬೇಕು. ಕ್ರಿ.ಶ. ೧೨೩೬ ರಲ್ಲಿ ಇಲ್ತುತ್‌ಮಿಶ್ ಸತ್ತಾಗ ಈ ಕಾಲಘಟ್ಟದ ಕ್ಷಿತಿಜದಲ್ಲಿ ತುಘ್ರಿಲ್ ತುಘಾನನು ಉದಯಿಸಿದುದು ಕಂಡುಬರುತ್ತದೆ.

ಇಲ್ತುತ್‌ಮಿಶ್‌ನ ಮರಣಾನಂತರ ಬಿಹಾರ ಮತ್ತು ಬಂಗಾಲಗಳನ್ನು ಅನೇಕ ಮಂಡಲಾಧಿಪತಿಗಳು ಆಳಿದರು. ಬಿಹಾರ ಮತ್ತು ಲಖನೌತಿಗಳ ಮಂಡಲಾಧಿಕಾರತ್ವ ಬಲು ಆಕರ್ಷಕವಾಗಿತ್ತು. ಆ ಕಾಲಘಟ್ಟವು ಚಿಕ್ಕಪುಟ್ಟ ಜಗಳಗಳು ಮತ್ತು ಬಿಕ್ಕಟ್ಟುಗಳಿಂದ ತುಂಬಿತ್ತು. ಇಲ್ತುತ್‌ಮಿಶ್‌ನ ದುರ್ಬಲ ಉತ್ತರಾಧಿಕಾರಿಗಳು ಅವುಗಳನ್ನು ನಿಯಂತ್ರಿಸಲು ಅಶಕ್ತರಾಗಿದ್ದರು. ಈ ಕಾಲಘಟ್ಟದಲ್ಲಿ ಮಿಥಿಲೆಯೂ ಅವರ ದಾಳಿಗಳಿಂದ ಮುಕ್ತವಾಗಿತ್ತು.[೨]

ತಿರಹತ್‌ನಲ್ಲಿ ಮುಸ್ಲಿಮ್ ಅಧಿಕಾರ ವಿಸ್ತರಣೆಯ ಮಧ್ಯೆ ಕಾಣಿಸಿಕೊಂಡ ಮುಂದಿನ ಪ್ರಮುಖ ವ್ಯಕ್ತಿಯೆಂದರೆ ಮಲಿಕ್ ಇಜ್ಜುದ್ದೀನ ಅಬ್ದುಲ್ ಫತಾ ತುಘ್ರಿಲ್ ತುಘಾನ. ಖತಾ-ಖಿತಾಯಿ ತುರ್ಕನಾಗಿದ್ದ ಅವನು "ಅನೇಕ ಸದ್ಗುಣಗಳು ಮತ್ತು ಉದಾತ್ತ ಸ್ವಭಾವದಿಂದ ಅಲಂಕೃತನಾಗಿದ್ದನು." ಇಲ್ತುತ್‌ಮಿಶ್‌ನ ಮಾಜಿ ಗುಲಾಮನಾಗಿದ್ದ ಅವನು ಅನೇಕ ಹುದ್ದೆಗಳಲ್ಲಿ - ಸಾಕಿ-ಖಾಸ್ (ದೊರೆಗಳಿಗೆ ಮದ್ಯ ಹಂಚುವ ಆಪ್ತ), ಶಾಹಿ-

ದೊವತದಾರ್ (ಸಾಮ್ರಾಟನ ಬರಹಸಂಪುಟ ಪಾಲಕ), ಬದೌನನ ಸಾಮಂತ, ಸೈಫುದ್ದೀನ ಐಬಕ್‌ನು ಬಂಗಾಲಕ್ಕೆ ವರ್ಗಾವಣೆ ಹೊಂದಿದ ನಂತರ ಬಿಹಾರದ ಮಂಡಲಾಧಿಪತಿ - ಸುಲ್ತಾನನ ಸೇವೆ ಮಾಡಿದ್ದನು. ಅವನು ಮಂಡಲಾಧಿಪತಿಯಾಗಿದ್ದ ಅವಧಿ ಬಹಳ ಮಹತ್ವದ್ದಾಗಿದೆ. ಅವನು ಲಖನೌತಿಯ ಮೇಲೆ ಹಿಡಿತ ಕಾಯ್ದುಕೊಂಡದ್ದಲ್ಲದೆ ಬಿಹಾರದ ಮೇಲೂ ತನ್ನ ಪ್ರಶ್ನಾತೀತ ಅಧಿಕಾರವನ್ನು ಚಲಾಯಿಸಿದನು. ಇಂತು, ಬಿಹಾರ ತನ್ನ ಪ್ರತ್ಯೇಕ ಗುರುತನ್ನು ಕೆಲಕಾಲ ಕಳೆದುಕೊಂಡಿತು.

ತುಘ್ರಿಲ್ ತುಘಾನನು (ಕ್ರಿ.ಶ. ೧೨೩೬-೧೨೪೫) ಬಿಹಾರದ ಮಂಡಲಾಧಿಪತಿಯಾಗಿ ತನ್ನ ಅಧಿಕಾರವನ್ನು ಕ್ರಮಬದ್ಧಗೊಳಿಸಿಕೊಂಡನು. ಸುಲ್ತಾನಾ ರಜಿಯಾಳಿಂದ ತನ್ನ ಸ್ಥಾನಮಾನದ ಔಪಚಾರಿಕ ಮನ್ನಣೆ ಪಡೆದುಕೊಳ್ಳುವ ಮೂಲಕ ಅದನ್ನು ಸಾಧಿಸಿದ.[24] ಹಿಜರಿ ಶಕೆ ೬೪೦ / ಕ್ರಿ.ಶ. ೧೨೪೨ರ ಅವನ ಬಿಹಾರ ಶಾಸನಗಳಿಂದ ಅವನು ದೊಡ್ಡ ಮಹತ್ವಾಕಾಂಕ್ಷೆಯುಳ್ಳ ವ್ಯಕ್ತಿಯಾಗಿದ್ದುದು ಕಂಡುಬರುತ್ತದೆ. ತುಘ್ರಿಲ್ ತುಘಾನನು ಮಿಥಿಲೆಯೊಳಕ್ಕೆ ಯಶಸ್ವಿ ದಾಳಿಗಳನ್ನು ನಡೆಸಿದನು. ಅದರಿಂದ ಸಮೃದ್ಧ ಕೊಳ್ಳೆ ಲಭಿಸಿತು, ಶರಣಾಗತಿಯಲ್ಲ.[25] ಅವನು ಆಕ್ರಮಣ ಪಥವನ್ನನುಸರಿಸುತ್ತ ತನ್ನ ದಂಡಯಾತ್ರೆಯನ್ನು ಒಡಿಸಾದ ಮೇಲೆ ಮುನ್ನಡೆಸುತ್ತ ಔಧದಲ್ಲಿಯ ಕಾರಾ ಮಾಣಿಕಪುರದವರೆಗೆ ತನ್ನ ಆಳ್ವಿಕೆಯನ್ನು ವಿಸ್ತರಿಸಿದ. ಔಧದ ಮಂಡಲಾಧಿಪತಿಯಾಗಿದ್ದ ತಮರಖಾನನು ಮಿಥಿಲೆಯೂ ಸೇರಿದಂತೆ ಎಲ್ಲ ಪೂರ್ವ ನಾಡುಗಳ ಮೇಲೆ ದಾಳಿಯಿಟ್ಟು ಹೇರಳ ಕೊಳ್ಳೆಯನ್ನು ದೋಚಿದ. ಒಡಿಯಾರನ್ನು ಹಿಮ್ಮೆಟ್ಟಿಸುವಲ್ಲಿ ತುಘಾನನಿಗೆ ನೆರವು ನೀಡಲೋಸುಗ ಲಖನೌತಿಗೆ ಸಾಗಲು ಅವನಿಗೆ ಆದೇಶಿಸಲಾಯಿತು.[26] ಬಿಹಾರದ ಮಂಡಲಾಧಿಪತಿಯಾಗಿ ತುಘ್ರಿಲ್ ತುಘಾನನು ಮಿಥಿಲೆಯ ಮೇಲೆ ದಾಳಿ ಮಾಡಿದನೆಂದು ಗ್ರಹಿಸಲಾಗಿದೆ. ಮಿಥಿಲೆಯು ಸ್ವತಂತ್ರ ರಾಜ್ಯವಾಗಿದ್ದುದರಿಂದ ಅದನ್ನು ತನ್ನ ನಿಯಂತ್ರಣಕ್ಕೆ ಒಳಪಡಿಸುವುದು ಅಗತ್ಯವೆಂದು ತುಘಾನನು ಪರಿಗಣಿಸಿದ್ದನೆಂದು ಇದರಿಂದ ಧಾರಾಳವಾಗಿ ಸಿದ್ಧಪಡುವುದು. ಇದು ತುಘಾನನ ಅಪಯಶಸ್ಸು. ಆ ಮೇಲೆ ಸುಲ್ತಾನಾ ರಜಿಯಾಳ ಆಳ್ವಿಕೆಯ ಕಾಲಕ್ಕೆ ಮಿಥಿಲೆಯ ಅರಸನು ತನ್ನ ಸ್ಥಾನ ಭದ್ರಪಡಿಸಿಕೊಂಡ. ಮುಲ್ಲಾ ತಕಿಯಾ ಹೇಳುವಂತೆ, ಕರ್ನಾಟ ಅರಸ ನರಸಿಂಹ ದೇವನು ತನ್ನ ಸ್ಥಾನವನ್ನು ದೃಢಪಡಿಸಿಕೊಂಡನು ಮತ್ತು ಅವಿಧೇಯತೆ ತೋರಿದ್ದರಿಂದ ತುಘಾನನ ದಾಳಿಗೆ ಆಹ್ವಾನವಿತ್ತನು. ತುಘಾನನು ಅವನನ್ನು ಸೆರೆಹಿಡಿದು ತನ್ನೊಂದಿಗೆ ಲಖನೌತಿಗೆ ಕರೆದೊಯ್ದನು.[27] ಆದರೆ, ತದನಂತರದಲ್ಲಿ ತುಘಾನನು ನರಸಿಂಹದೇವನನ್ನು ಬಿಡುಗಡೆಗೊಳಿಸಿ ಮಿಥಿಲೆಯ ಅರಸನನ್ನಾಗಿ ಪುನರ್‌ಸ್ಥಾಪಿಸಿದನು. ಮುಲ್ಲಾ ತಕಿಯಾ ಇಲ್ಲಿ ತಪ್ಪು ಹೇಳಿದಂತಿದೆ. ಏಕೆಂದರೆ, ನರಸಿಂಹದೇವನು ಕ್ರಿ.ಶ. ೧೨೨೬ ರಲ್ಲಿ ಮರಣಿಸಿದನು ಮತ್ತು ಈ ಘಟನೆ ಕ್ರಿ.ಶ. ೧೨೩೬ ರದು; ಆಗ ಅವನ ಮಗ ರಾಮಸಿಂಹದೇವನು ಮಿಥಿಲೆಯ ಅರಸನಾಗಿದ್ದ. ರಾಮಸಿಂಹದೇವನ ಆಳ್ವಿಕೆಯ ಸಂಗತಿಯನ್ನು ಕ್ರಿ.ಶ. ೧೨೩೬ ರಲ್ಲಿ ಟಿಬೆಟಿ ಪ್ರವಾಸಿ ಧರ್ಮಸ್ವಾಮಿಯ ಭೇಟಿಯು ಇನ್ನೂ ಹೆಚ್ಚು ಸಮರ್ಥಿಸುತ್ತದೆ. ತಬಾಖಿತ್-ಇ-

ನಾಸಿರಿ ಮಿಥಿಲೆಯ ಅರಸನ ತಥಾಕಥಿತ ಬಂಧನವನ್ನು ಉಲ್ಲೇಖಿಸುವುದಿಲ್ಲ. ಮಿಥಿಲೆಯೊಳಕ್ಕೆ ತುಘಾನನ ಅತಿಕ್ರಮಣಗಳನ್ನು ಒಪ್ಪುವ ರಿಯಾಧ್ಘ್ ಕೂಡ ಅವನು ಅದನ್ನು ಪೂರ್ತಿಯಾಗಿ ವಶಪಡಿಸಿಕೊಂಡ ಬಗೆಗೆ ಮತ್ತು ಆಳರಸನನ್ನು ಸೆರೆಹಿಡಿದ ಬಗೆಗೆ ಚಕಾರವೆತ್ತುವುದಿಲ್ಲ.

ಮಿನ್ಹಾಚ್‌ನು ನಿರ್ದಿಷ್ಟವಾಗಿ ಮಿಥಿಲೆಯ ಅರಸನ ಹೆಸರನ್ನು ಹೇಳುವುದಿಲ್ಲವಾದರೂ ಅವನು ರಾಮಸಿಂಹದೇವನಲ್ಲದೆ ಬೇರಾರೂ ಅಲ್ಲವೆಂಬುದು ಖಚಿತವಿದೆ. ಎಸ್.ಎಚ್. ಅಸ್ಕರಿ ಈ ವಿಷಯವನ್ನು ಕ್ರಿ.ಶ. ೧೩೩೦ ರಲ್ಲಿ ಆಳುತ್ತಿದ್ದ ಅರಸನೊಂದಿಗೆ ಗೋಜಲು ಮಾಡಿಕೊಂಡಿರುವರು.[28] ರಾಮಸಿಂಹದೇವನು ಮಿಥಿಲೆಯ ಸ್ವತಂತ್ರ ಸ್ಥಾನಮಾನವನ್ನು ಕಾಯ್ದುಕೊಂಡನೆಂದು ಹೇಳಲಾಗಿದೆ ಮತ್ತು ಸಮಕಾಲೀನ ರಾಜಕೀಯದಲ್ಲಿ ಅವನು ಅಪಾರ ಮಹತ್ವದ ವ್ಯಕ್ತಿಗಳಲ್ಲೊಬ್ಬನೆಂದು ಪರಿಗಣಿತನಾಗಿರುವನು. ಈ ಅಂಶವು ಇತ್ತೀಚಿಗೆ ತಿಬೆಟಿನಲ್ಲಿ ಕಂಡುಹಿಡಿಯಲಾದ ಆಕರದಿಂದ ಸ್ಪಷ್ಟಪಡುತ್ತದೆ. ಅದು ರಾಮಸಿಂಹದೇವನು ಸ್ವತಂತ್ರ ಅರಸನಾಗಿದ್ದನೆಂಬ ನಮ್ಮ ವಾದವನ್ನು ದೃಢಪಡಿಸುತ್ತದೆ. ಆ ಆಕರವು ಪ್ರತ್ಯಕ್ಷದರ್ಶಿ ಪ್ರಮಾಣವಾಗಿದ್ದು ತುಘಾನನಿಂದ ಅವನ ಬಂಧನವನ್ನು ಉಲ್ಲೇಖಿಸುವುದಿಲ್ಲ.

ಈ ವೃತ್ತಾಂತದ ಲೇಖಕನಾದ ಧರ್ಮಸ್ವಾಮಿಯು ಸಿಮರಾಂವಗಡದಲ್ಲಿ ರಾಮಸಿಂಹದೇವನೊಂದಿಗೆ ಇದ್ದನು ಮತ್ತು ಕೋಟೆಯನ್ನು ಕುರಿತ ಅವನ ವರ್ಣನೆ ಅದ್ಭುತವಾಗಿದೆ. ರಾಮಸಿಂಹದೇವನಿಗೆ ಎಲ್ಲ ಕಡೆಗಳಿಂದಲೂ ತುರುಷ್ಕರ ಒತ್ತಡ ವಿದ್ದುದರಿಂದ ಅವನು ಕೋಟೆಗಳನ್ನು ಭದ್ರಪಡಿಸಲು ವಿಶೇಷ ಗಮನ ನೀಡಿದನೆಂಬುದನ್ನು ಧರ್ಮಸ್ವಾಮಿ ಒಪ್ಪುತ್ತಾನೆ. ಎಸ್.ಎಚ್. ಅಸ್ಕರಿ ಗೊಣಗುವಂತೆ, ಅವನ ಕಾಲದ ಬಗೆಗೆ ಏನೂ ಕಷ್ಟವಿಲ್ಲ. ಅವನ ಆಳ್ವಿಕೆ ಕ್ರಿ.ಶ. ೧೨೨೭ ರಿಂದ ೧೨೮೫ ರವರೆಗೆ ವ್ಯಾಪಿಸಿತ್ತು. ಆಗಾಗ ಬಂದ ದಾಳಿಕಾರರು ಮಿಥಿಲೆಯಿಂದ ವಿಪುಲ ಲೂಟಿಯನ್ನು ದೋಚಿದರೂ ಅದನ್ನು ಶರಣಾಗತಿ ಮಾಡಿಕೊಳ್ಳಲಾಗಲಿಲ್ಲ ಎಂಬುದನ್ನು ಸದ್ಯದ ಪರಿಸ್ಥಿತಿಯಲ್ಲಿ ಒಪ್ಪಬಹುದು. ಮಿಥಿಲೆಯು ಸ್ವತಂತ್ರವಾಗಿದ್ದುದರಿಂದಾಗಿಯೆ ಮೇಲಿಂದ ಮೇಲೆ ದಾಳಿಗಳನ್ನು ಏರ್ಪಡಿಸಲಾಯಿತು. ಇಲ್ಲದಿದ್ದರೆ ಇಂಥ ದಾಳಿಗಳ ಅವಶ್ಯಕತೆಯೇ ಇರುತ್ತಿರಲಿಲ್ಲ. ಮಿಥಿಲೆಯನ್ನು ತುಘಲಕರ ಆಳ್ವಿಕೆಯ ಕಾಲದವರೆಗೆ ಅದನ್ನು ಮಣಿಸಲು ಬಂಗಾಲಕ್ಕಾಗಲಿ ದಿಲ್ಲಿಗಾಗಲಿ ಸಾಧ್ಯವಾಗಲಿಲ್ಲ. ಮಿಥಿಲೆಯ ರಾಜಕೀಯ ಜೀವನದಲ್ಲಿ ಕಷ್ಟ ಸಂಕಷ್ಟಗಳ ಸ್ಪಷ್ಟ ಲಕ್ಷಣಗಳಿದ್ದವು. ಆದರೆ, ಘಿಯಾಸುದ್ದೀನ ತುಘಲಕನ ಆಗಮನದ ವರೆಗೆ ಮಿಥಿಲೆಯು ಎಲ್ಲವನ್ನೂ ಧೈರ್ಯ ನಿರ್ಧಾರಗಳಿಂದ ತಡೆಗಟ್ಟಿತು. ಕ್ರಿ.ಶ. ೧೩೨೪-೨೫ ರಲ್ಲಿ, ಮಿಥಿಲೆಯ ರಾಜವಂಶವು ಅಂತಿಮವಾಗಿ ಪತನಗೊಳ್ಳುವ ವರೆಗೆ ಅದರ ವೈಭವವು ಅಪಾರ ಯಾತನೆ ಮತ್ತು ನಿರಂತರ ಅಪಮಾನಕ್ಕೆ ತುತ್ತಾಗಿದ್ದಿತು.

ಪೂರ್ವ ಭಾರತದಲ್ಲಿ, ಅದರಲ್ಲೂ ಮಿಥಿಲೆಯಲ್ಲಿ, ಘಟನೆಗಳು ಮಿಂಚಿನ ವೇಗದಲ್ಲಿ ಜರುಗುತ್ತಿರುವಾಗ ದಿಲ್ಲಿ ದರಬಾರ ಕೂಡ ಕ್ರಾಂತಿಕಾರಿ ಬದಲಾವಣೆಗಳನ್ನು ಕಂಡಿತು.

ಸುಲ್ತಾನನಿಗೆ ಬಂಗಾಲ ನಿರಂತರ ತಲೆನೋವಾಗಿತ್ತು ಮತ್ತು ಔಧ ಕೂಡ ಅವನ ಸಂಪೂರ್ಣ ನಿಯಂತ್ರಣದಲ್ಲಿರಲಿಲ್ಲ. ಎರಡರ ಮಧ್ಯೆ ಸ್ವತಂತ್ರ ಮಿಥಿಲೆಯಿತ್ತು. ಅಂದಿನ ಉತ್ತರ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಅಸಂಗತವಾಗಿದ್ದ ಅದು, ಪೂರ್ವ ಪಶ್ಚಿಮಗಳೆರಡಕ್ಕೂ ಶಾಶ್ವತ ತೊಂದರೆಯ ಮೂಲವಾಗಿತ್ತು. ಬಲ್ಬನ್ ಅಧಿಕಾರಕ್ಕೆ ಬಂದುದು ಗುಲಾಮ ರಾಜವಂಶದ ಇತಿಹಾಸದಲ್ಲಿ ಒಂದು ಮಹತ್ವದ ತಿರುವು. ಏಕೆಂದರೆ, ಅವನು ಬಂಡುಕೋರರನ್ನು ದಮನ ಮಾಡಿದುದಲ್ಲದೆ ದಿಲ್ಲಿ ರಾಜ್ಯವನ್ನು ಭದ್ರಪಡಿಸಿಕೊಂಡನು. ಕ್ರಿ.ಶ. ೧೨೫೩ ರಲ್ಲಿ ಉಲಘ್ ಖಾನನು ತಿರಹತ್‌ನ ಅಂಚಿನಲ್ಲಿರುವ ಬಿಶಾನಪುರದ ವರೆಗೆ ಮುಂದುವರಿದು ಅಪಾರ ಕೊಳ್ಳೆಯೊಂದಿಗೆ ರಾಜನ ಬಿಡಾರಕ್ಕೆ ಹಿಂತಿರುಗಿದುದನ್ನು ಈ ಕಾಲಾವಧಿ ಕಂಡಿತು.[29] ಅರಾಜಕತೆ ಮತ್ತು ಗೊಂದಲಮಯತೆಯ ಸ್ಥಿತಿಯಲ್ಲಿದ್ದ ಔಧ ಪ್ರಾಂತವನ್ನು ಹಿಡಿದುಕೊಳ್ಳುವಂತೆ ಬಲ್ಬನ್‌ನ ಅಧಿಕಾರದ ಉಚ್ಛ್ರಾಯವು ಮುಘಿಸುದ್ದೀನ ನನ್ನು ಪ್ರೇರಿಸಿತು. ಕ್ರಿ.ಶ. ೧೨೫೭ ರಷ್ಟೊತ್ತಿಗೆ ಬಲ್ಬನ್‌ನು ಅದರ ಬಂಡಕೋರ ಮಂಡಲಾಧಿಪತಿ ಮಲಿಕ್ ಮಸೂದ್ ಜಾನಿಯನ್ನು ಹೊರಗಟ್ಟಿ ತನ್ನ ರಾಜ್ಯದ ಸರಹದ್ದನ್ನು ಮಿಥಿಲೆಯ ಸರಹದ್ದಿನವರೆಗೆ ಬೆಳೆಸಿದನು.[30]

ದಿಯಾರೆ-ಇ-ಬಾಂಗಲಾ ಎಂಬ ಭೌಗೋಲಿಕ ಘಟಕದ ದೊಡ್ಡ ಭಾಗವು ಅದುವರೆಗೆ ತನ್ನ ಸ್ವತಂತ್ರ ಅಸ್ತಿತ್ವವನ್ನು ಕಾಪಾಡಿಕೊಂಡುದನ್ನು ಮುಸ್ಲಿಮ ಆಕರಗಳು ರುಜುಪಡಿಸುತ್ತವೆ. ಮತ್ತು ಆ ಪ್ರದೇಶವನ್ನು ವಶಪಡಿಸಿಕೊಳ್ಳಲು ಬಲ್ಬನ್‌ನು ಬುಘ್ರಾಖಾನನಿಗೆ ಆಜ್ಞೆಯಿತ್ತುದು ಕಂಡುಬರುತ್ತದೆ. ಈ ಭೌಗೋಲಿಕ ಘಟಕವನ್ನು ದರ್ಭಂಗಾದ ಭಾಗವೆಂದು ಗುರುತಿಸ ಬೇಕೊ ಬೇಡವೊ ಎಂಬುದು ಮಿಥಿಲೆಯ ಇತಿಹಾಸದ ಸಮಸ್ಯೆಯಾಗಿದೆ. ಗರ್ಹಿ ಕಣಿವೆಯ (ತೆಲಿಯಾ ಗರ್ಹಿ) ಸುತ್ತಲಿನ ಪ್ರದೇಶವು ಬಂಗಾಲಕ್ಕೆ ಮಹಾದ್ವಾರ (ದ್ವಾರ ಬಂಗ) ಆಗಿದ್ದು ಅದನ್ನು ದಿಯಾರೆ-ಇ-ಬಾಂಗಲಾ ಎಂದು ಸುಲಭವಾಗಿ ಕರೆಯಬಹುದು. ಗರ್ಹಿಯ ಸಾಕಷ್ಟು ಭಾಗವು ಪೂರ್ಣಿಯಾ ಜಿಲ್ಲೆಯಲ್ಲಿದ್ದುದರಿಂದ ಆ ಪ್ರದೇಶವನ್ನು ಪೂರ್ವ ಮಿಥಿಲಾ ರಾಜ್ಯದ ಭಾಗವೆಂದು ಪರಿಗಣಿಸಬಹುದು. ಪುರ್ಣಿಯಾಕ್ಕೆ ಹೋಗುವ ಹಾದಿ ದರ್ಭಾಂಗಾದ ಮೂಲಕವೆ ಇದ್ದುದರಿಂದ ಬಹುಶಃ ಅದನ್ನು ದಿಯಾರೆ-ಇ-ಬಾಂಗಲಾ, ದ್ವಾರೆ-ಇ-ಬಂಗ ಅಥವಾ ದರ್ಭಂಗ ಎಂದು ಕರೆದಿರುವ ಸಾಧ್ಯತೆಯಿದೆ. ಇದಕ್ಕೆ ಭಿನ್ನವಾದ ಪರಿಹಾರ ಸ್ಥಾಪಿತವಾಗುವ ವರೆಗೆ, 'ದರ್ಭಂಗಾ' ಎಂಬ ಹೆಸರು ಹೇಗೆ ಬಂತೆಂಬ ಪ್ರಶ್ನೆಗೆ ಇದುವೆ ಸೂಕ್ತ ಉತ್ತರ.

ಬಲ್ಬನ್‌ನು ಬಿಹಾರ ಮತ್ತು ಬಂಗಾಲಗಳನ್ನು ಬೇರ್ಪಡಿಸಿದನೆಂದು ಹೇಳಲಾಗಿದೆ. ಬಿಹಾರವು ದಿಲ್ಲಿಗೆ ನಿಷ್ಠವಾಗಿತ್ತೆಂಬುದೂ ಸಾಮ್ರಾಜ್ಯದ ಅಧಿಕಾರಿಯೊಬ್ಬನ ಅಧೀನದಲ್ಲಿ ತ್ತೆಂಬುದೂ ಸ್ಥಾಪಿತವಾಗಿದೆ.[31] ಲಖನೌತಿಯನ್ನು ದಿಲ್ಲಿಯ ಒಂದು ಪ್ರಾಂತ ವನ್ನಾಗಿ ಮಾಡಲಾಯಿತು. ಮಂಗೋಲರ ಬಗೆಗೆ ತನ್ನ ಮನಸ್ಸು ಮಗ್ನವಾಗಿದ್ದುದರಿಂದ ಬಲ್ಬನ್‌ನು ಈ ದೂರಪೂರ್ವ ಪ್ರಾಂತದ ಕಡೆಗೆ ಸಾಕಷ್ಟು ಗಮನ ಕೊಡಲು ಸಾಧ್ಯವಾಗಲಿಲ್ಲ. ಅಷ್ಟರಲ್ಲಿ

ಮುಘಿಸುದ್ದೀನನು (ಕ್ರಿ.ಶ. ೧೨೭೧-೧೨೮೧) ಅವನ ಅಧಿಕಾರವನ್ನು ಮಾನ್ಯ ಮಾಡುವ ಬದಲಾಗಿ ತನ್ನ ಸೈನ್ಯವನ್ನು ಸಜ್ಜುಗೊಳಿಸಿಕೊಂಡು[೧೧] ಬಿಹಾರದ ಮೇಲೆ ತ್ವರಿತವಾಗಿ ಹೆಜ್ಜೆಯಿಟ್ಟ. ಅವನು ನಾಣ್ಯಗಳನ್ನು ಹೊರಡಿಸಿದನಲ್ಲದೆ ತನ್ನ ಹೆಸರಿನಲ್ಲಿ 'ಖುತ್ಬಾ' ಓದಿಸಿದ. ಅವನನ್ನು ಹಿಂದಕ್ಕಟ್ಟಲು ಕ್ರಿ.ಶ. ೧೨೭೮ ರಲ್ಲಿ ಪ್ರಥಮ ದಂಡಯಾತ್ರೆಯನ್ನು ಔಧದ ಮಂಡಲಾಧಿಪತಿ ಮಲಿಕ ತುರ್ಮಾತಿಯ ನೇತೃತ್ವದಲ್ಲಿ ಸಂಘಟಿಸಲಾಯಿತು. ತರುವಾಯದಲ್ಲಿ ಅವನ ಜೊತೆಗೆ ತಮಾರಖಾನ ಶಮ್‌ಶಿ ಮತ್ತು ಮಲಿಕ ತಾಜುದ್ದೀನ ಬಂದು ಸೇರಿಕೊಂಡನು. ಸಾಮ್ರಾಜ್ಯದ ಸೈನ್ಯಗಳು ಸರಯೂ ನದಿ ದಾಟಿ ಮಿಥಿಲಾ ಮಾರ್ಗವಾಗಿ ಮುನ್ನಡೆದವು. ಸೈನ್ಯಗಳ ಮುನ್ನಡೆಯನ್ನು ಮಿಥಿಲಾ ಮತ್ತು ಲಖನೌತಿ ಮಧ್ಯದಲ್ಲೆಲ್ಲೊ ತಡೆಯಲಾಯಿತು.[೧೨] ಹೋರಾಟದಲ್ಲಿ ಸಾಮ್ರಾಜ್ಯದ ಸೈನ್ಯಗಳು ಹೀನಾಯವಾಗಿ ಸೋತವು.

ಮುಲ್ಲಾ ತಖಿಯಾ ತನ್ನ ಮಿಥಿಲಾ ವೃತ್ತಾಂತದಲ್ಲಿ ಬಲ್ಬನ್‌ನ ಬಗೆಗೆ ಯಾವುದೆ ಉಲ್ಲೇಖ ಮಾಡುವುದಿಲ್ಲ. ಸಾಮ್ರಾಜ್ಯದ ಸೈನ್ಯವು ಮಿಥಿಲೆಯ ಸ್ಥಾನಮಾನಕ್ಕೆ ಧಕ್ಕೆ ಉಂಟುಮಾಡದೆ ಅದರ ಮಾರ್ಗವಾಗಿ ಹಾದುಹೋಗಿರಬಹುದು, ಅಷ್ಟೆ. ಮುಲ್ಲಾ ತಖಿಯಾನು ಇಲ್ತುತ್‌ಮಿಶ್ ಮತ್ತು ರಜಿಯಾ ಕುರಿತು ವಿವರವಾದ ವೃತ್ತಾಂತ ನೀಡಿ ಬಲ್ಬನ್‌ನ ಆಳ್ವಿಕೆಯ ಬಗೆಗೆ ಏನೂ ಹೇಳದಿರುವುದು ಕುತೂಹಲಕರವಾಗಿದೆ. ಲಖನೌತಿಯ ಮಂಡಲಾಧಿಪತಿಯನ್ನು ಮಣಿಸಿ ದಿಲ್ಲಿ ಸಾಮ್ರಾಜ್ಯದ ನಿಯಂತ್ರಣಕ್ಕೆ ಒಳಪಡಿಸುವುದೆ ಬಲ್ಬನ್‌ನ ಮುಖ್ಯ ಗುರಿಯಾಗಿದ್ದರಿಂದ ಬಹುಶಃ ಸಾಮ್ರಾಜ್ಯಶಾಹಿಗಳು ಮಿಥಿಲೆಯತ್ತ ಲಕ್ಷ್ಯಗೊಡಲಿಲ್ಲ. ರಾಮಸಿಂಹದೇವನ ತಾಟಸ್ಥ್ಯವನ್ನು ಅಸಾಧ್ಯವೆಂದು ಬಗೆಯುವಂತಿಲ್ಲ. ಯು.ಠಾಕೂರರು[೧೩] ಮನಮೋಹನ ಚಕ್ರವರ್ತಿಯವರನ್ನು[೧೪] ಮಾತ್ರ ಅವಲಂಬಿಸಿ "ನಾಡಿನ ಪ್ರಾಕೃತಿಕ ಗಡಿಗಳು ವೈರಿಗಳನ್ನು ತಡೆಗಟ್ಟಿದವು" ಎಂದು ಹೇಳುವುದನ್ನು ಖಚಿತಪಡಿಸಲಾಗದು.

"ಆ ನಾಡು ದುಸ್ಸಾಧ್ಯ ಅಡೆತಡೆಗಳನ್ನು ಒಡ್ಡಿದ್ದ" ಪಕ್ಷದಲ್ಲಿ ಸಾಮ್ರಾಜ್ಯದ ಸೈನ್ಯವು ಆ ಮಾರ್ಗವನ್ನೆ ಏಕೆ ಆಯ್ಕೆ ಮಾಡಿಕೊಂಡಿತೆಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಬಗೆಗೆ, ಮಿಥಿಲೆಯ ಸ್ವಾತಂತ್ರ್ಯವನ್ನು ಸಂರಕ್ಷಿಸಿದ್ದು ಪ್ರಾಕೃತಿಕ ಅಡೆತಡೆಗಳಲ್ಲ. ಅದಕ್ಕೆ ಕಾರಣ ಕ್ರಿ.ಶ. ೧೩೨೪-೨೫ ರಲ್ಲಿ ತಾನು ಅಂತಿಮವಾಗಿ ಪತನಗೊಳ್ಳುವ ವರೆಗೆ ಮಿಥಿಲೆಯು ಅನುಸರಿಸಿದ "ವೇತಸಿವೃತ್ತಿ"ಯೆ ಎಂದಿಟ್ಟುಕೊಳ್ಳಬಹುದು. ಕ್ರಿ.ಶ. ೧೨೭೯ ರಲ್ಲಿ ಔಧದ ಮಂಡಲಾಧಿಪತಿ ಮಲಿಕ್ ಬಹಾದುರನೂ ಲಖನೌತಿಗೆ ಸಾಗಲು ಅದೇ ಮಾರ್ಗವನ್ನು ಅನುಸರಿಸಿದನು. ಅವನನ್ನೂ ದುಸ್ಸಹವಾಗಿ ಸೋಲಿಸಲಾಯಿತು. ಆಗ ಸ್ವತಃ ಸುಲ್ತಾನನೆ ಜವಾಬ್ದಾರಿ ವಹಿಸಿಕೊಂಡನು. ಆ ಕಾದಾಟದಲ್ಲಿ ಮುಘಿಸುದ್ದೀನನು ಸೋತು ಮರಣವನ್ನಪ್ಪಿದನು.

ಕ್ರಿ.ಶ. ೧೨೮೨ ರಲ್ಲಿ ರಾಜಕುಮಾರ ಬುಘ್ರಾಖಾನನನ್ನು ಲಖನೌತಿಯ ಮಂಡಲಾಧಿಪತಿಯನ್ನಾಗಿ ಮಾಡಲಾಯಿತು. ಅವನು ಸುಮಾರು ಆರು ವರ್ಷ ಅಧಿಕಾರದಲ್ಲಿದ್ದ. ಬಲ್ಬನ್‌ನ

ಮರಣಾನಂತರ ಸಿಂಹಾಸನಕ್ಕೆ ಕೈಕುಬಾದ್ ಆಯ್ಕೆಯಾದುದು ತಿಳಿಯುತ್ತಲೆ ಬುಘ್ರಾಖಾನನು ಔಧವನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ದೊಡ್ಡ ಸೈನ್ಯದೊಂದಿಗೆ ಹೊರಟು ಬಿಹಾರ ಪ್ರಾಂತ್ಯವನ್ನು ಪ್ರವೇಶಿದ.[36] ಅವನು ಉತ್ತರ ಬಿಹಾರದೊಳಗಿಂದ ಹಾದುಹೋಗುವ ಮಾರ್ಗವನ್ನು ಅನುಸರಿಸಿದನೆಂದೂ ಹೇಳಲಾಗಿದೆ. ಬುಘ್ರಾಖಾನನು ತನ್ನ ಮೊಂಡುತನದ ಮಗನನ್ನು ಎಚ್ಚರಿಸಲು ಅವನ ಮೇಲೆ ದಂಡೆತ್ತಿ ಸಾಗಿದನು ಮತ್ತು ಸರನ್ ಸರ್ಕಾರದಲ್ಲಿರುವ ಘಾಗ್ರಾವರೆಗೆ ಮುನ್ನಡೆದನು. ಈ ತಂದೆ - ಮಗನ ಮುಖಾಮುಖಿಯನ್ನು ಅಮೀರ ಖುಸ್ರೊ ತನ್ನ *ಕಿರಾನ-ಅಸ್-ಸೈದಿನ್*‌ನಲ್ಲಿ ಅಮರಗೊಳಿಸಿರುವನು. ಮುಸ್ಲಿಮ ದಿನಚರಿಯಲ್ಲೂ ಅದರ ಉಜ್ವಲ ವಿವರಣೆಯಿದೆ.[37] ತಂದೆ ಬುಘ್ರಾಖಾನ ಮತ್ತು ಮಗ ಕೈಕುಬಾದ ಮಧ್ಯೆ ನಡೆದ ಸುದೀರ್ಘ ಮಾತುಕತೆ ಸಮಾಧಾನ ತಂದಿತು. ಬುಘ್ರಾಖಾನನು ತನ್ನ ಮಗನ ಪರವಾಗಿ ಸಿಂಹಾಸನದ ಮೇಲಿನ ತನ್ನ ಹಕ್ಕನ್ನು ಬಿಟ್ಟುಕೊಟ್ಟ. ಅವನು ಬಂಗಾಲದ ಮಂಡಲಾಧಿಪತ್ಯವನ್ನು ಉಳಿಸಿಕೊಂಡ.[38] ಬಿಹಾರ ಪ್ರಾಂತವನ್ನೂ ಇಟ್ಟುಕೊಂಡ.

ನಾಸೀರುದ್ದೀನ ಬುಘ್ರಾಖಾನನ ತರುವಾಯ ಅಧಿಕಾರಕ್ಕೆ ಬಂದ ಸುಲ್ತಾನ ರುಕ್ನುದ್ದೀನ ಕೈಕಸ್ ಕ್ರಿ.ಶ. ೧೨೯೧ ರಿಂದ ೧೩೦೧ ರವರೆಗೆ ಆಳಿದನೆಂದು ಹೇಳಲಾಗಿದೆ. ಅವನನ್ನು ಬಂಗಾಲ ಮತ್ತು ಉತ್ತರ ಬಿಹಾರದ ಭಾಗವೊಂದರ ಪ್ರಭುವೆಂದು ಒಪ್ಪಿಕೊಳ್ಳಲಾಗಿತ್ತು. ಕರ್ನಾಟ ಕಾಲಘಟ್ಟದ ಇತಿಹಾಸಕ್ಕೆ ಸಂಬಂಧಿಸಿದಂತೆ ರುಕ್ನುದ್ದೀನನ ಕಾಲದ ಲಖಿಸರಾಯಿ ಶಾಸನಕ್ಕೆ[39] ಅಪಾರ ಮಹತ್ವ ಪ್ರಾಪ್ತವಾಗುತ್ತದೆ. ಬಂಗಾಲದ ಭಾಗವಾಗಿದ್ದ ಬಿಹಾರವು ಪುನಃ ಸ್ವತಂತ್ರ ಹಾಗೂ ಪ್ರತ್ಯೇಕ ಸ್ಥಾನಮಾನ ಪಡೆದುಕೊಂಡಿತೆಂದು ಈ ಆಕರದಿಂದ ತಿಳಿದುಬರುತ್ತದೆ. ಬಿಹಾರದ ಮಂಡಲಾಧಿಪತಿ ಇಖ್ತಿಯಾರುದ್ದೀನ ಫಿರೂಜ ಐತಿಗಿನ್ ಅಸ್ ಸುಲ್ತಾನಿ ಮತ್ತು ಉಪಮಂಡಲಾಧಿಪತಿ ಜಿಯಾವುದ್ದೀನ ಉಲುಘಖಾನರ ಹೆಸರುಗಳೂ ಆ ಶಾಸನದಲ್ಲಿವೆ. ಅದು ದಿಲ್ಲಿಯ ಸುಲ್ತಾನ ಅಲ್ಲಾವುದ್ದೀನ ಖಿಲ್ಜಿಯನ್ನು ಉಲ್ಲೇಖಿಸುವುದಿಲ್ಲ. ಆದರೆ, ಬಂಗಾಲದ ಸುಲ್ತಾನ ರುಕ್ನುದ್ದೀನ ಕೈಕಸ್‌ನಿಗೆ ಬಿಹಾರದ ನಿಷ್ಠೆಯನ್ನು ದಾಖಲಿಸುತ್ತದೆ. ಮೇಲಾಗಿ, ಬಿಹಾರದ ಮಂಡಲಾಧಿಪತಿಯು ಉನ್ನತ ಬಿರುದುಗಳನ್ನು ಧರಿಸಿದ್ದುದು[40] ಬಲ್ಬನಿ ವಂಶಸ್ಥರು ಖಿಲ್ಜಿ ಚಕ್ರಾಧಿಪತ್ಯದ ಬಗೆಗೆ ತಳೆದ ಮನೋಭಾವವನ್ನು ತೋರ್ಪಡಿಸುತ್ತದೆ. ಬಿರುದುಗಳು ಇಂತಿವೆ: 'ತುರ್ಕ ಮತ್ತು ಪರ್ಷಿಯನ್ನರ ರಾಜಾಧಿರಾಜ', 'ಭಕ್ತರ ಒಡೆಯನ ಅನುಚರ', 'ಘನತೆವೆತ್ತ ಖಾಖಿನ್', 'ಪೂರ್ವದ ಮತ್ತು ಚೀನದ ಪ್ರಭು' ಮತ್ತು 'ಎರಡನೆಯ ಸಿಕಂದರ' ಮುಂತಾದ ಪ್ರಶಸ್ತಿಗಳ ಧಾರಣವು ಬಲ್ಬನ್ ವಂಶಕ್ಕೆ ಸೇರಿದ ಅರಸರ ಸ್ವತಂತ್ರ ಮನೋಭಾವವನ್ನು ಸೂಚಿಸುತ್ತದೆ.[41] ಕ್ರಿ.ಶ. ೧೨೯೩ಕ್ಕೆ ಸರಿಹೊಂದುವ ಹಿಜರಿ ಶಕೆ ೬೯೨ರ ದೆಂದು ಕಾಲನಿರ್ಧಾರಿತ, ಬಿಹಾರದ ಅತಿ ಪ್ರಾಚೀನ ಶಾಸನಗಳಲ್ಲೊಂದಾಗಿರುವ, ಇತ್ತೀಚಿಗೆ ಕಂಡುಹಿಡಿದ ಮಹೇಶ್ವರ ಶಾಸನವು[42] ಫಿರೋಜ ಐತಿಗಿನ್‌ನ ಹಕ್ಕುಸಾಧನೆಯನ್ನು ದೃಢಪಡಿಸುತ್ತದೆ. ಮಹೇಶ್ವರ ಶಾಸನದಲ್ಲಿರುವ ಹಿಸ್ನ-ಇ-ಹಸೀನ (ಅಭೇದ್ಯ ದುರ್ಗ) ಎಂಬ ಶಬ್ದಗಳನ್ನು ಅಲಕ್ಷಿಸುವಂತಿಲ್ಲ. ಮೊಂಘೀರ

ಜಿಲ್ಲೆಯ ವರೆಗೆ ಮತ್ತು ಗಂಗಾ ನದಿಯ ಎರಡೂ ಬದಿಗಳಿಂದ ಗಂಡಕ ನದಿಯ ಸಮೀಪದ ವರೆಗಿನ ಬಿಹಾರವು ಕೈಕಸ್ ರಾಜ್ಯದ ಅಂಗವಾಗಿತ್ತೆಂಬುದು ಈ ಶಾಸನದಿಂದ ಸ್ಪಷ್ಟಪಡುತ್ತದೆ. ಬುಘ್ರಾಖಾನ ಮತ್ತು ಅವನ ಉತ್ತರಾಧಿಕಾರಿ ಕೈಕಸ್‌ರು ಬಿಹಾರದೊಳಗಿನ ಆ ಪ್ರದೇಶದ ವರೆಗೆ ಬಂಗಾಲ ರಾಜ್ಯದ ಗಡಿಯನ್ನು ವಿಸ್ತರಿಸಿದರು. ಈ ಅಂಶದ ಬಗೆಗೂ ಮುಲ್ಲಾ ತಖಿಯಾ ಮೌನ ತಳೆದಿರುವನು. ರುಕ್ನುದ್ದೀನ ಕೈಕಸ್‌ನ ರಾಜ್ಯದ ವಿಸ್ತಾರವು ಅವನು ದುರ್ಬಲ ಅರಸನಾಗಿರಲಿಲ್ಲವೆಂಬುದನ್ನು ಸ್ಪಷ್ಟಪಡಿಸುವುದು.

ಅಲ್ಲಾವುದ್ದೀನ ಖಿಲ್ಜಿಗೆ ಕೈಕಸ್‌ನು ನಿಷ್ಠೆ ಹೊಂದಿದ್ದನೆಂಬ ವೂಲ್ಸಿ ಹೇಗ್‌ರ ದೃಢಾಭಿಪ್ರಾಯವು ನಮ್ಮ ಸದ್ಯದ ತಿಳುವಳಿಕೆಯ ಸ್ಥಿತಿಯಲ್ಲಿ ಗ್ರಾಹ್ಯವಲ್ಲ.[43] ಆಡಂಬರದ ಬಿರುದುಗಳು ದಿಲ್ಲಿ ಮತ್ತು ಬಂಗಾಲಗಳ ನಡುವಣ ಸಂಬಂಧ ಬಿಗಡಾಯಿಸಿದುದನ್ನು ಸೂಚಿಸುತ್ತವೆಂದು ಯಾಝುದಾನಿ ಹೇಳುತ್ತಾರೆ. ಬಿಹಾರದಲ್ಲಿ ಫಿರೂಜ ಐತಿಗಿನ್ ನ ಅಧಿಕಾರ ಪ್ರಶ್ನಾತೀತವಾಗಿತ್ತೆಂದು ತೋರುತ್ತದೆ. ಗಾತ್ರ ಎಷ್ಟಾದರೂ ಇದ್ದಿರಲಿ, ಆ ಪ್ರದೇಶವು ಬಂಗಾಲ ಪ್ರದೇಶಕ್ಕಿಂತ ಪ್ರತ್ಯೇಕ ಸ್ಥಾನಮಾನ ಪಡೆದಿದ್ದವೆಂದು ತರ್ಕಿಸಲು ಲಖಿಸರಾಯಿ ಮತ್ತು ಮಹೇಶ್ವರ ಶಾಸನಗಳಲ್ಲಿ ಕಂಡುಬರುವ ಆಡಂಬರದ ಬಿರುದುಗಳು ಉತ್ತೇಜನ ನೀಡುತ್ತವೆ. ಬಲ್ಬನ್ ಸತ್ತಾಗ ಜರುಗಿದ ಘಟನೆಗಳನ್ನು ಗಣನೆಗೆ ತೆಗೆದುಕೊಂಡರೆ ಅದು ಅಸಂಗತ ಅಥವಾ ಅಸ್ವಾಭಾವಿಕ ಎನಿಸದು. ಬಿಹಾರದ ಮಂಡಲಾಧಿಪತಿಯು ತನ್ನ ಹಾಗೂ ಬಿಹಾರದ ಸ್ವತಂತ್ರ ಸ್ಥಾನಮಾನವನ್ನು ಘೋಷಿಸುವ ಅವಕಾಶವನ್ನು ಕಳೆದುಕೊಳ್ಳಲಿಲ್ಲ. ಹಾಗಾಗಿ, ಬಿರುದುಗಳನ್ನು ಅಧ್ಯಯನಿಸಬೇಕೆಂಬ ಒತ್ತು ಬಹಳ ಸ್ವಾರಸ್ಯಕರವಾಗಿದೆ. ಲಖನೌತಿಯ ಆಡಳಿತವನ್ನು ವಹಿಸಿಕೊಂಡ ನಂತರ ಅವನನ್ನು ಸುಲ್ತಾನ ಶಮಸುದ್ದೀನ ಫಿರೂಜ್ ಶಾಹ ಎಂದು ಕರೆಯಲಾಯಿತು. ಅವನು ತಾಜುದ್ದೀನ ಹಾತಿಮಖಾನನನ್ನು ಬಿಹಾರದ ಮಂಡಲಾಧಿಪತಿಯಾಗಿ ನಿಯಮಿಸಿದನು. ಮಂಡಲಾಧಿಪತಿಯು ಈ ಹಿಂದೆ ಸ್ವತಃ ಫಿರೂಜ ಐತಿಗಿನ್‌ನು ಆಳುತ್ತಿದ್ದ ಪ್ರದೇಶದ ಆಡಳಿತ ನೋಡಿಕೊಳ್ಳುವುದನ್ನು ಮುಂದುವರಿಸಿದನು.

ಮಿಥಿಲೆಯ ಗಾತ್ರವು ಬಹಳಷ್ಟು ಕುಗ್ಗಿದಾಗ್ಯೂ, ನಡೆದ ಎಲ್ಲ ಘಟನೆಗಳು ಮಿಥಿಲೆಯು ಸ್ವತಂತ್ರ ಸ್ಥಾನಮಾನ ಉಳಿಸಿಕೊಂಡುದನ್ನು ಸೂಚಿಸುತ್ತವೆ. ಮಿಥಿಲೆಯ ಒಂದಿಷ್ಟು ಭಾಗವು ಕ್ರಿ.ಶ. ೧೨೯೧ - ೯೨ರಲ್ಲಿ ಮುಸ್ಲಿಮರ ವಶಕ್ಕೊಳಪಟ್ಟಿದ್ದುದು ಸ್ಪಷ್ಟವಾಗಿ ಸಿದ್ಧಪಡುತ್ತದೆ. ಆಗ ಶಕ್ರಸಿಂಹದೇವನು ಮಿಥಿಲೆಯನ್ನು ಆಳುತ್ತಿದ್ದನೆಂದು ಭಾವಿಸಲಾಗಿದೆ. ಅವನಿಗೆ ಅಲ್ಲಾವುದ್ದೀನ ಖಿಲ್ಜಿ ಜೊತೆಗೆ ಮೈತ್ರಿ ಸ್ಥಾಪಿಸಿದ ಶ್ರೇಯಸ್ಸು ನೀಡಲಾಗಿದೆ. ಆ ಪ್ರದೇಶದ ಮೇಲೆ ಹಲವಾರು ದಾಳಿಗಳಾದವು. ಶಕ್ರಸಿಂಹದೇವನ ಚಟುವಟಿಕೆಗಳ ಬಗೆಗೆ ತಿಳಿದಿರುವುದು ಸ್ವಲ್ಪ. ಅವನ ಆಳ್ವಿಕೆಯ ಅವಧಿಯ ಬಗೆಗೂ ಖಚಿತತೆ ಇಲ್ಲ. ದಿಲ್ಲಿಯ ಖಿಲ್ಜಿಗಳೊಂದಿಗೆ ಅವನು ನಿಕಟ ಸಂಬಂಧ ಹೊಂದಿದ್ದನೆಂದು ಐತಿಹ್ಯ ಹೇಳುತ್ತದೆ. ಮುಲ್ಲಾ ತಖಿಯಾನ ಪ್ರಕಾರ, ಈ ಕಾಲದಲ್ಲಿ ಮಿಥಿಲೆಯ ಮೇಲೆ ನಡೆದ ದಾಳಿಯ ಚಿಕ್ಕ ವಿವರವೊಂದಿದೆ. ದಾಳಿಯ ದಿನಾಂಕ ಕ್ರಿ.ಶ. ೧೨೯೭ಕ್ಕೆ ಸರಿಹೊಂದುವ ಹಿಜರಿ ಶಕೆ ೬೯೭.[44]

ಬಿಹಾರದಲ್ಲಿ, ಇನ್ನೂ ವಿಶೇಷವಾಗಿ ಮಿಥಿಲೆಯಲ್ಲಿ, ಖಿಲ್ಜಿ ಆಳ್ವಿಕೆಯ ವಿಸ್ತರಣೆಯನ್ನು ತೋರಿಸುವ ಶಾಸನಿಕ ಅಥವಾ ಇತರ ದಾಖಲೆಗಳ ಕೊರತೆಯಿದೆ. ನಮ್ಮ ಮಾಹಿತಿಯ ಮೂಲ ಆಕರವೆಂದರೆ ಮುಲ್ಲಾ ತಖಿಯಾನ ಬಿಯಾಜ್[44] ಅಧಿಕೃತ ಮಾರ್ಗದರ್ಶಿಯಾಗಿರುವ ಅದು ಶಕ್ರಸಿಂಹದೇವನ ಕಾಲದವರೆಗೆ ಮಿಥಿಲೆಯ ಅರಸರ ವಿರುದ್ಧ ನಾಲ್ಕು ಯುದ್ಧಗಳು ಜರುಗಿದುದನ್ನು ತಿಳಿಸುತ್ತದೆ. ಮಖಿಬರಾ ಸಮೀಪದ ಮೊದಲೆರಡು ಕಾದಾಟಗಳಲ್ಲಿ ಮಿಥಿಲೆಯ ಅರಸನು ಅಲ್ಲಾವುದ್ದೀನ ಖಿಲ್ಜಿಯ ಸೈನ್ಯವನ್ನು ಸೋಲಿಸಿದನು. ತದನಂತರ, ಶಕ್ರಸಿಂಹದೇವನು ಸಂಸ್ಥಾಪಿಸಿದ ಊರು ಸಕೂರಿಯಲ್ಲಿ ಮೂರನೆಯ ಯುದ್ಧವನ್ನು ಮಾಡಲಾಯಿತು. ಕ್ರಿ.ಶ. ೧೨೯೭ಲಕ್ಕೆ ಸರಿಹೊಂದುವ ಹಿಜರಿ ಶಕೆ ೬೯೭ ರಲ್ಲಿ ನಡೆದ ನಾಲ್ಕನೆಯ ಹಾಗೂ ಕೊನೆಯ ಯುದ್ಧದಲ್ಲಿ ಮಿಥಿಲೆಯ ಅರಸನನ್ನು ಸೆರೆಹಿಡಿಯಲಾಯಿತು. ಮುಲ್ಲಾ ತಖಿಯಾನ ಅಭಿಪ್ರಾಯದಲ್ಲಿ, ಮಖಿಬರಾ ಬಳಿಯಲ್ಲಿ ಖಿಲ್ಜಿಗಳ ಸೋಲು ಗಂಭೀರ ಸ್ವರೂಪದ್ದಾಗಿತ್ತು ಮತ್ತು ಹತಾತ್ತನೆ ರಾತ್ರಿಯಲ್ಲಿ ಜರುಗಿದ ಆಕ್ರಮಣದಲ್ಲಿ ಮುಸ್ಲಿಮರು ಬಹಳ ನಷ್ಟ ಅನುಭವಿಸಬೇಕಾಯಿತು. ಅಲಾವುದ್ದೀನನು ಶೇಖ ಇಸ್ಮಾಯಿಲನಿಗೆ ಹೆಚ್ಚಿನ ಸೈನ್ಯ ಕಳಿಸಿದ ಪರಿಣಾಮವಾಗಿ ಮಿಥಿಲೆಯ ಅರಸನನ್ನು ಸೋಲಿಸಿ ಸೆರೆಹಿಡಿದು ದಿಲ್ಲಿಗೆ ಕಳಿಸಲಾಯಿತು. ಅಲಾವುದ್ದೀನನ ಸೈನ್ಯದ ದಂಡನಾಯಕನಾಗಿ ಶಕ್ರಸಿಂಹದೇವನನ್ನು ತನ್ನ[45] ಹಿಂದೂ ವೈರಿಗಳ ವಿರುದ್ಧ[46] ನಿಯಮಿಸಲಾಯಿತೆಂದು ಮುಲ್ಲಾ ತಖಿಯಾ ಮುಂದುವರಿದು ಹೇಳುತ್ತಾನೆ. ಶಕ್ರಸಿಂಹದೇವನು ರಣತಂಬೋರಿನ ರಾಜಾ ಹಮ್ಮೀರದೇವನ ವಿರುದ್ಧ ಕಾದಾಡಿದನು ಮತ್ತು ಹಾಗಾಗಿ, ಅಲಾವುದ್ದೀನ ಖಿಲ್ಜಿಯ ವಿಶ್ವಾಸ ಗಳಿಸಿಕೊಂಡನು. ಶಕ್ರಸಿಂಹದೇವನ ಮುಖ್ಯ ಶಕ್ತಿಯ ಒರೆಗಲ್ಲಾಗಿದ್ದವನು ಅವನ ಮಂತ್ರಿ ವೀರೇಶ್ವರ.[47]

ಅಲಾವುದ್ದೀನ ಖಿಲ್ಜಿ ಮತ್ತು ಶಕ್ರಸಿಂಹದೇವನ ಅಥವಾ ಶಕ್ತಿಸಿಂಹದೇವನ ನಡುವಣ ಮೇಲ್ಕಾಣಿಸಿದ ಮೈತ್ರಿಯ ವೃತ್ತಾಂತವು ಮಿಥಿಲಾ ಐತಿಹ್ಯದಲ್ಲಿ ಜೀವಂತವಿದೆ.[48] ಮಧ್ಯಯುಗೀನ ಭಾರತೀಯ ಇತಿಹಾಸದಲ್ಲಿ, ಅಲಾವುದ್ದೀನನು ರಣತಂಬೋರನ್ನು ಗೆದ್ದುದು ಒಂದು ಮೈಲುಗಲ್ಲಾಗಿದೆ. ಏಕೆಂದರೆ, ದಿಲ್ಲಿಗೆ ಸಮೀಪವಾಗಿದ್ದ ಅದನ್ನು ಅವನು ರಾಜಪೂತರೊಂದಿಗೆ ಬಲಪರೀಕ್ಷೆ ಕೈಕೊಳ್ಳುವ ಪ್ರಥಮ ರಾಜ್ಯವಾಗಿ ಆಯ್ಕೆ ಮಾಡಿದನು. ಆ ಘಟನೆಗಳನ್ನು ವಿದ್ಯಾಪತಿಯು ತನ್ನ ಪುರುಷಪರೀಕ್ಷದಲ್ಲಿ ಪುಷ್ಟೀಕರಿಸಿದ್ದಾನೆ.[49] ಕತೆಗಳು ಸಂಪೂರ್ಣ ಸತ್ಯವನ್ನು ಒಳಗೊಂಡಿರುವುದಿಲ್ಲವಾದರೂ ವಿದ್ಯಾಪತಿಯು ಈ ಕತೆಯನ್ನು ರಚಿಸುವಾಗ ತನ್ನೆದುರಿಗಿದ್ದ ಕೆಲವು ದೃಢ ಸಾಮಗ್ರಿಗಳನ್ನು ಬಳಸಿಕೊಂಡಿದ್ದನೆನ್ನುವುದು ಆ ಕೃತಿಯ ಪರಿವಿಡಿಯ ಪರಿಶೀಲನೆಯಿಂದ ಸ್ಪಷ್ಟಪಡುತ್ತದೆ.[50] ಮಿಥಿಲೆಯ ಅರಸ ಶಕ್ರಸಿಂಹದೇವ ಮತ್ತು ಅಲಾವುದ್ದೀನ ಖಿಲ್ಜಿಯ ನಡುವೆ ಇದ್ದ ಸಂಬಂಧದ ಬಗೆಗೆ ಮುಲ್ಲಾ ತಖಿಯಾ ಒತ್ತಿಹೇಳುವುದನ್ನು ಶುದ್ಧ ಕಲ್ಪನೆಯೆಂದು ಸಾರಾಸಗಟಾಗಿ ತಿರಸ್ಕರಿಸುವಂತಿಲ್ಲ. ಅಲಾವುದ್ದೀನನ ದರಬಾರಿಗೆ ಮಿಥಿಲೆಯ ಅರಸನು ತನ್ನ ಮಂತ್ರಿಗಳಾದ ದೇವಾದಿತ್ಯ ಮತ್ತು ವೀರೇಶ್ವರರೊಂದಿಗೆ ಹೋದನೆಂದು ಹೇಳಲಾಗಿದೆ. ಚಾಂದೇಶ್ವರನು ಮಾಡಿದ ಹಮ್ಮೀರನ

ವರ್ಣನೆಯನ್ನು ತಿರಸ್ಕರಿಸಲಾಗದು. ಏಕೆಂದರೆ, ಚಾಂದೇಶ್ವರನು ಸ್ವತ: ಆ ಕಾಲದ ಮಹತ್ವದ ವ್ಯಕ್ತಿಗಳಲ್ಲೊಬ್ಬನಾಗಿದ್ದನು. ಮತ್ತು ರಾಜಕೀಯ ವ್ಯವಹಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದನು. ಐತಿಹಾಸಿಕ ದೃಷ್ಟಿಕೋನದಿಂದ ಆ ಕಾಲಘಟ್ಟದ ಜೌಲ್ಯಮಾಪನದಲ್ಲಿ ಅವನ ಅಭಿಪ್ರಾಯಕ್ಕೆ ಪ್ರಾಮುಖ್ಯತೆ ನೀಡಲೇಬೇಕು. ಮಿಥಿಲೆಯ ಅರಸ ಶಕ್ರಸಿಂಹದೇವನು ಅಲಾವುದ್ದೀನನಿಗೆ ಸಲ್ಲಿಸಿದ ಆರ್ಥಿಕ ನೆರವನ್ನೂ ಮುಲ್ಲಾ ತಖಿಯಾ ಉಲ್ಲೇಖಿಸುತ್ತಾನೆ.[51]

ಅಲಾವುದ್ದೀನನು ಇಡಿ ಬಿಹಾರವನ್ನು ಗೆದ್ದಿದ್ದನೆಂಬುದು ಪ್ರಸಿದ್ಧ ಇತಿಹಾಸಕಾರ ಫೆರಿಸ್ತಾನ ಅಭಿಮತ.[52] ಅಮೀರ ಖುಸ್ರೋನ ಪ್ರಕಾರ, ಕರ್ರಾ ಗೆದ್ದುಕೊಂಡ ಮೇಲೆ ಅಲಾವುದ್ದೀನನು "ಆ ನೆಲವನ್ನು ರಕ್ತದಿಂದ ಟ್ಯೂಲಿಪ್ ಗಿಡದಷ್ಟು ಕೆಂಪಾಗಿಸಲೋಸುಗ"[53] ಬಿಹಾರವೆಂಬ ಉದ್ಯಾನದ ಮೇಲೆ ಏರಿಹೋದನು.

ಮಿಥಿಲೆಯ ಸ್ವಾತಂತ್ರ್ಯದ ಬಗೆಗೆ ಮುಲ್ಲಾ ತಖಿಯಾ ಹೇಳಿಕೆ ಮತ್ತು ಮಿಥಿಲಾ ಐತಿಹ್ಯ ಇವುಗಳ ಹಿನ್ನೆಲೆಯಲ್ಲಿ, ಮಿಥಿಲೆಯು ತನ್ನ ಸ್ವತಂತ್ರ ಸ್ಥಾನಮಾನ ಸಂರಕ್ಷಿಸುವಲ್ಲಿ ಯಶಸ್ವಿಯಾಗಿತ್ತೆಂದು ಸಾಧಿಸುವುದು ಅನುಚಿತವಾಗಲಿಕ್ಕಿಲ್ಲ.[54] ಅದು ಅಲಾವುದ್ದೀನನ್ನು ಬೇಸ್ತು ಬೀಳಿಸಿದ ರಾಜ್ಯಗಳಲ್ಲೊಂದು. ದಕ್ಷನದಲ್ಲಿ, ಮಿಥಿಲೆಯಲ್ಲಿ, ಜಾಜನಗರ ಮತ್ತು ಗೊಂದವಾನಾಗಳಲ್ಲಿ ಹಿಂದೂಗಳು ಶಕ್ತಿಶಾಲಿ ಅರಸರಾಗಿ ಇನ್ನೂ ಉಳಿದಿದ್ದರೆಂದು ನಾವು ಬಲ್ಲೆವು.[55] ಈ ಸನ್ನಿವೇಶದಲ್ಲಿ ಮಿಥಿಲಾ ರಾಜ್ಯದ ಕೇಂದ್ರಭಾಗದಲ್ಲಿದ್ದ ಬೆಗುಸರಾಯಿ ಜಿಲ್ಲೆಗಳ ವರೆಗೆ ಹಬ್ಬಿದ್ದ ಬಂಗಾಲ ಸುಲ್ತಾನನ ಪ್ರಭುತ್ವವು ಮಿಥಿಲಾ ಅರಸನು ದಿಲ್ಲಿ ಸಾಮ್ರಾಟನ ಮೈತ್ರಿ ಬೆಳೆಸುವಂತೆ ಮಾಡಿತೆಂದು ಹೇಳಬಹುದು. ಬೇರೆ ತೀರ್ಮಾನಕ್ಕಿಂತ ಇದೇ ಸುಸಂಗತವೆಂದು ನಮ್ಮ ಸದ್ಯದ ತಿಳುವಳಿಕೆ. ಅಲ್ಲದೆ, ಬಂಗಾಲವು ವಿರುದ್ಧವಾಗಿದ್ದರಿಂದ ಅಲಾವುದ್ದೀನನ ಸಾಮ್ರಾಜ್ಯಶಾಹಿ ತರಿತ್ರಕ್ಕೆ ಪೂರ್ವ ಭಾರತದಲ್ಲಿ ಉತ್ತೇಜನದ ಆವಶ್ಯಕತೆಯಿತ್ತು. ಅಲಾವುದ್ದೀನ ಮತ್ತು ಶಕ್ರಸಿಂಹದೇವನ ಮಧ್ಯೆ ಬಲಪರೀಕ್ಷೆ ನಡೆದು ನಂತರ ಇಬ್ಬರ ನಡುವೆ ಮೈತ್ರಿಯುಂಟಾಯಿತು. ಇದು ಪಶ್ಚಿಮದಲ್ಲಿ ಚೌಹಾಣನ ವಿರುದ್ಧ ಹೋರಾಡಲು ಮತ್ತು ಬಂಗಾಲದ ವೈರಿ ಅರಸನನ್ನು ನಿಯಂತ್ರಣದಲ್ಲಿಡಲು ಮಿಥಿಲೆಯೊಂದಿಗೆ ಮೈತ್ರಿ ಮಾಡಿಕೊಳ್ಳಬೇಕಾದ ಆವಶ್ಯಕತೆಯನ್ನು ಅಲಾವುದ್ದೀನನು ಮನಗಂಡನೆಂದು ಸೂಚಿಸುತ್ತದೆ. ಮುಲ್ಲಾ ತಖಿಯಾ ಈ ಅಂಶವನ್ನು ದೃಢಪಡಿಸುತ್ತಾನೆ. ಈ ಮೈತ್ರಿಯ ಹಿನ್ನೆಲೆಯಲ್ಲಿ, ಎಲ್ಲ ಪ್ರತಿಕೂಲತೆಗಳಿದ್ದಾಗ್ಯೂ ಮಿಥಿಲೆಯ ಅರಸನು ತನ್ನ ರಾಜ್ಯದ ಸ್ವತಂತ್ರ ಸ್ಥಾನಮಾನವನ್ನು ಯಶಸ್ವಿಯಾಗಿ ಕಾಯ್ದುಕೊಂಡನು. ಸೌಹಾರ್ದಯುತ ಸಂಬಂಧ ಎರಡೂ ಪಕ್ಷಗಳವರಿಗೆ ಹಿತಕಾರಿಯಾಗಿ ಪರಿಣಮಿಸಿತು.

ಆದರೆ, ಮಿಥಿಲಾ ನಾಡಿನಲ್ಲಿ ಮೇಲಿಂದ ಮೇಲೆ ದಾಳಿಗಳು ಜರುಗಿದ್ದುದು ನಿಜವಿತ್ತು. ಈ ಸಂಗತಿಯನ್ನು ಸಮಕಾಲೀನ ಸಾಹಿತ್ಯಿಕ ಮೂಲಗಳು ದೃಢಪಡಿಸುತ್ತವೆ. ಮುಲ್ಲಾ ತಖಿಯಾನ ವಿಚಾರಸರಣಿಯನ್ನು ದೃಢಪಡಿಸುವ ಯಾವುದೆ ಹೊಸ ಸಾಮಾಗ್ರಿ ಈ ಕಾಲಘಟ್ಟದ ವೈಜ್ಞಾನಿಕ ಇತಿಹಾಸವನ್ನು ಕೊಡಬಲ್ಲದು.

ಮೇಲ್ಕಾಣಿಸಿದ ವಿವರಗಳ ಹಿನ್ನೆಲೆಯಲ್ಲಿ, ಈ ಕಾಲಘಟ್ಟದ ಇತಿಹಾಸದ ಬಗೆಗೆ ನಾವು ಎಸ್.ಎಚ್.ಅಸ್ಕರಿ ಅವರೊಂದಿಗೆ ಸಹಮತಿಸಬಹುದು. ಆ ಪಂಡಿತ ಪ್ರೊಫೆಸರ್ ಹೇಳುತ್ತಾರೆ: “ಅವರ (ಬಿಹಾರದ) ಅರಸನು ಮುಹಮ್ಮದ ಬಿನ್ ಬಖ್ತಿಯಾರ ಖಿಲ್ಜಿಯ ಕಾಲದಿಂದ ಆರಂಭಿಸಿ ಘಿಯಾಸುದ್ದೀನನು ತಿರಹತ್ ಮಾರ್ಗವಾಗಿ ಮಾಡಿದ ಬಂಗಾಲದ ಮೇಲಿನ ಆಕ್ರಮಣ (ಹಿಜರಿ ಶಕೆ ೭೨೨ / ಕ್ರಿ.ಶ. ೧೩೨೪) ದವರೆಗೆ ದಿಲ್ಲಿ ಪ್ರಭುಗಳಿಗೆ ಸ್ಥೂಲವಾಗಿ ಶರಣಾಗಿ ಅಥವಾ ಪೈಪೋಟಿ ಮನಸ್ಥಿತಿಯೊಂದಿಗೆ ಹಾಗೂ ಸ್ವತಂತ್ರನಾಗಿ ಬಂಗಾಲಕ್ಕೆ ನಿಷ್ಠೆ ತೋರಿದನು.’[16] ಮಿಥಿಲೆಯ ಭಾಗಗಳೂ ಮುಸ್ಲಿಮರ ನೇರ ನಿಯಂತ್ರಣಕ್ಕೊಳಪಟ್ಟಿದ್ದರಿಂದ, ಬಿಹಾರದ ಅನ್ಯ ಭಾಗಗಳಿಗೆ ಅನ್ವಯಿಸುವಂತೆಯೆ ಈ ಇತಿಹಾಸವು ಮಿಥಿಲೆಗೂ ಅನ್ವಯಿಸುತ್ತದೆ. ರೋಹಟಾಸ್ ಪ್ರದೇಶದಲ್ಲೂ ಹಿಂದೂ ರಾಜ್ಯದ ಕುರುಹುಗಳು ಕಂಡುಬಂದಿವೆ.[17] ಈ ಕಾಲದಲ್ಲಿ ಬಿಹಾರ ಮತ್ತು ಬಂಗಾಲಗಳ ಪ್ರತ್ಯೇಕ ಅಸ್ತಿತ್ವವನ್ನು ದಿಲ್ಲಿ ಅರಸರು ಮಾನ್ಯ ಮಾಡಿದ್ದರು ಮತ್ತು ಬಿಹಾರವು ಲಖನೌತಿಗೆ ಮಟ್ಟಿಲೆಂಬುದನ್ನು ಮನಗಂಡಿದ್ದರು. ನಂತರ, ಘಿಯಾಸುದ್ದೀನ ತುಘಲಕನ ಕಾಲದಲ್ಲಿ ದಿಲ್ಲಿ ಅರಸರ ಬಿಟ್ಟೂಬಿಡದ ಪ್ರಯತ್ನಗಳು ಬಂಗಾಲದ ವಿಜಯದಲ್ಲಿ ಫಲಿಸಿದವು. ಘಿಯಾಸುದ್ದೀನನು ಸ್ವತಂತ್ರ ಮಿಥಿಲಾ ರಾಜ್ಯವನ್ನು ನಾಶಗೊಳಿಸಿ ದಿಲ್ಲಿ ಸಲ್ತನತ್ತಿಗೆ ಸೇರಿಸಿಕೊಂಡನು. ಕ್ರಿ.ಶ. ೧೩೨೪ ರಲ್ಲಿ ಅವನ ಮಿಥಿಲಾ ದಾಳಿಯೊಂದಿಗೆ ಸ್ವತಂತ್ರ ಮಿಥಿಲಾ ರಾಜ್ಯದ ಜೀವಯಾತ್ರೆ ಕೊನೆಗೊಂಡು ಮುಸ್ಲಿಮ ಆಳ್ವಿಕೆಯ ಇತಿಹಾಸ ಆರಂಭಗೊಳ್ಳುವುದು. ಮಿಥಿಲೆಯ ಅರಸರ ಕಣ್ಣುಮುಚ್ಚಾಲೆಯ ಮುತ್ಸದ್ದಿತನ ಮತ್ತು ರಾಜಕೀಯ ಬುದ್ಧಿವಂತಿಕೆ ಕೂಡ ಘಿಯಾಸುದ್ದೀನ ತುಘಲಕನ ಘೋರ ಆಕ್ರಮಣದಿಂದ ಮಿಥಿಲೆಯನ್ನು ಬಚಾವು ಮಾಡದಾದವು: ಈ ಕಾಲಘಟ್ಟದಲ್ಲಿ ಮಿಥಿಲೆಯಲ್ಲಿ ಮುಸ್ಲಿಮ ಅಧಿಕಾರದ ವಿಸ್ತರಣೆ ಪರಾಕಾಷ್ಠೆ ತಲುಪಿತು.

ತುಘಲಕ ರಾಜವಂಶದ ಸಂಸ್ಥಾಪಕ ಘಿಯಾಸುದ್ದೀನನ ಆಳ್ವಿಕೆಯಲ್ಲಿ ಸಾಮ್ರಾಜ್ಯದ ಸೈನ್ಯಗಳು ಬಂಗಾಲಕ್ಕೆ ಸಾಗುವ ಮಾರ್ಗದಲ್ಲಿ ಅವುಗಳನ್ನು ಬಿಹಾರ, ವಿಶೇಷತಃ ಮಿಥಿಲೆ, ಮತ್ತೊಮ್ಮೆ ಕಂಡವು. ಹಾತಿಮಖಾನನ ಸೋದರ ಬಹಾದುರಖಾನನು ತನ್ನ ತಂದೆಯ ಆಳ್ವಿಕೆಯ ಕಾಲದಲ್ಲಿ ಹಲವು ಬಾರಿ ಬಂಡೆದ್ದಿದ್ದನು. ತನ್ನ ಬಂಡಕೋರ ಮಂಡಲಾಧಿಪತಿಯ ವರ್ತನೆಯಿಂದ ಪ್ರಚೋದನೆಗೊಂಡು ಮತ್ತು ಕುಪಿತನಾಗಿ ಸುಲ್ತಾನ ಘಿಯಾಸುದ್ದೀನ ತುಘಲಕನು ಕ್ರಿ.ಶ. ೧೩೨೪-೨೫ ರಲ್ಲಿ ಬಿಹಾರ ಮಾರ್ಗವಾಗಿ ಬಂಗಾಲದ ಮೇಲೆ ದಂಡೆತ್ತಿ ಹೋದನು. ಬಂಗಾಲದಿಂದ ಹಿಂತಿರುಗುವಾಗ ಅವನು ಮಿಥಿಲೆಯ ಕರ್ನಾಟ ರಾಜವಂಶದ ಕೊನೆಯ ಮಹಾ ಅರಸ ಹರಿಸಿಂಹದೇವನು ಆಳುತ್ತಿದ್ದ ಮಿಥಿಲೆಯನ್ನು ವಶಪಡಿಸಿಕೊಂಡನು. ಈ ಕಾಲಘಟ್ಟದಲ್ಲಿ ಮಿಥಿಲೆಯಲ್ಲಿದ್ದ ಮುಸ್ಲಿಮ ಅಧಿಕಾರದ ವಿಸ್ತರಣೆಯನ್ನು ಚರ್ಚಿಸಲು ನಾವು ಸಮಕಾಲೀನ ಸಾಹಿತ್ಯ ಮೂಲಗಳನ್ನೆ - ವಿಶೇಷತಃ ಶಾಸನಗಳು ಹಾಗೂ ನಾಣ್ಯಗಳ ಪ್ರಮಾಣದ ಅಭಾವದಲ್ಲಿ - ಅವಲಂಬಿಸಬೇಕಿದೆ. ಐತಿಹ್ಯ ಮತ್ತು ಸಾಹಿತ್ಯಕ ಮೂಲಗಳ ಪ್ರಕಾರ, ಹರಿಸಿಂಹದೇವನು ಹಲವಾರು ಮುಸ್ಲಿಮ ದಾಳಿಗಳ ಒತ್ತಡವನ್ನು ಸಹಿಸಬೇಕಾಯಿತು

ಮತ್ತು ಅವನ ಆಳ್ವಿಕೆಯಲ್ಲಿ ಮಿಥಿಲೆಯ ಮೇಲೆ ಮೊದಲ ಉಲ್ಲೇಖಿತ ದಾಳಿ ಜರುಗಿತು. ತನ್ನ ಶತ್ರುಗಳನ್ನು ಪೂರ್ತಿ ಮಣಿಸಿದ ಮೇಲೆ ಅವನು ಮಿಥಿಲೆಯ ಇಡಿ ಪ್ರದೇಶವನ್ನು ಆಳುತ್ತಿದ್ದನೆಂದು ಹೇಳಲಾಗಿದೆ.[೫೯] ಅಮಾತ್ಯಶ್ರೇಷ್ಠನಾಗಿದ್ದ ವೀರೇಶ್ವರನು ವೈರಿ ಕೋಟೆಗೆ ಲಗ್ಗೆ ಹಾಕಿದ ನಂತರ ಪ್ರಮುಖ ನಗರವಾಗಿದ್ದ ದಹಿವತದಲ್ಲಿ ಒಂದು ದೊಡ್ಡ ಕೆರೆಯನ್ನು ತೋಡಿಸಿದನು ಮತ್ತು ಅಲ್ಲಿ ಒಂದು ಉನ್ನತ ಅರಮನೆಯನ್ನು ಕಟ್ಟಿಸಿದನು. ಅವನು ಬ್ರಾಹ್ಮಣರನ್ನು ನೆಲೆಗೊಳಿಸಿದನು ಮತ್ತು ಶ್ರೋತ್ರಿಯರಿಗೆ ರಾಮಪುರದಂಥ ನಗರಗಳನ್ನು ದತ್ತಿ ನೀಡಿದನು.[೬೦] ಮಹಾ ಮುತ್ಸದ್ದಿ, ನಿಪುಣ ಲೇಖಕ, ಯುದ್ಧ ಮತ್ತು ಶಾಂತಿಯ ಅತಿ ಯಶಸ್ವಿ ಮಂತ್ರಿಯಾಗಿದ್ದ ಚಾಂದೇಶ್ವರನು ವಿರೇಶ್ವರನ ಮಗ. ಅವನು ನೇಪಾಳದ ಅರಸನನ್ನು ಸೋಲಿಸಿದನೆಂದು ಹೇಳಲಾಗಿದೆ.[೬೧] *ವಿವಾದರತ್ನಾಕರ* ಹಸ್ತಪ್ರಶಸ್ತಿಯ ಅಂತ್ಯ ಪ್ರಶಸ್ತಿಯಿಂದ, ಶಕ ೧೨೩೬ / ಕ್ರಿ.ಶ. ೧೩೧೪ ರಲ್ಲಿ ನೇಪಾಳದ ಬಾಗಮತಿ ತೀರದಲ್ಲಿ ತುಲಾಪುರುಷ ಮಹಾದಾನವನ್ನು ಆಚರಿಸಲಾಯಿತೆಂದು ತಿಳಿದುಬರುತ್ತದೆ. ಡಿ.ಆರ್.ರೆಗ್ಮಿ ಅವರಿಗೆ ಈ ಅಂತ್ಯಪ್ರಶಸ್ತಿಯ ಅಸ್ತಿತ್ವವನ್ನೂ ಅಲ್ಲಗೊಳಿಸುವ ತವಕ.[೬೨] ಮ್ಲೇಚ್ಛರ ಪ್ರವಾಹದಲ್ಲಿ ಮುಳಗಿಹೋಗಿದ್ದ ಪೃಥ್ವಿಯನ್ನು ಚಾಂದೇಶ್ವರನು ರಕ್ಷಿಸಿದನೆಂದು *ದಾನರತ್ನಾಕರ*[೬೩]ದ ಅಂತ್ಯಪ್ರಶಸ್ತಿಯು ದೃಢವಾಗಿ ಹೇಳುತ್ತದೆ. ಅದು ಯಾವದೋ ಮಹಮ್ಮದೀಯ ದಂಡನಾಯಕನ ಸೋಲಿನ ಉಲ್ಲೇಖವಾಗಿರಬಹುದು.

ಮೇಲಿನ ಮಾತುಗಳಲ್ಲಿಯ ಅತ್ಯುಕ್ತಿಗಳನ್ನು ತೆಗೆದುಹಾಕಿದ ನಂತರವೂ ಒಂದಂಶವಂತೂ ನಿಶ್ಚಿತವಿದೆ. ಅದೆಂದರೆ, ಅವನ ಆಳ್ವಿಕೆಯಲ್ಲಿ ಮುಸ್ಲಿಮ ದಾಳಿಗಳಿದ್ದವೆಂಬುದು. ಈ ಹೇಳಿಕೆಯನ್ನು ಬೇರೆ ಬೇರೆ ಐತಿಹ್ಯಗಳು ಸಮರ್ಥಿಸುತ್ತವೆ. ಮತ್ತು ಒಂದೆಡೆ ಸುಲ್ತಾನನ ಮೇಲೆ ಹರಿಸಿಂಹದೇವನು ವಿಜಯ ಪಡೆದನೆಂದು ಹೇಳಲಾಗಿದೆ.[೬೪] *ಧೂರ್ತಸಮಾಗಮ* ಮತ್ತು *ದಾನರತ್ನಾಕರ* ರಚಿತವಾದುದು ಮುಸ್ಲಿಮರನ್ನು ಹಿಮ್ಮೆಟ್ಟಿಸಿದ ನಂತರ ಅಥವಾ ಅವರು ಸ್ವಇಚ್ಛೆಯಿಂದ ಹಿಂತೆಗೆದ ನಂತರವಾದುದರಿಂದ, ದಾಳಿಗಳ ಅಲೆ ಇಳಿದ ಮೇಲೆ ಹರಿಸಿಂಹದೇವನು ತನ್ನ ರಾಜ್ಯವನ್ನು ಮರಳಿ ಪಡೆದನೆಂದು ಎಸ್.ಕೆ. ಚಟರ್ಜಿ ನಂಬುತ್ತಾರೆ.[೬೫] ಕೆ.ಡಿ.ಜಯಸ್ವಾಲರ ಪ್ರಕಾರ, *ದಾನರತ್ನಾಕರ* ಕಾವ್ಯವು ಬಂಗಾಲ ಸುಲ್ತಾನನ ಬಗೆಗಿದೆ. ಆದರೆ, ಅವನ *ಸುಗತಿಸೋಪಾನ*ದಲ್ಲಿ ಅದರ ಶ್ರೇಯಸ್ಸನ್ನು ಗಣೇಶ್ವರನಿಗೆ ನೀಡಲಾಗಿದೆ.[೬೬] ಈ ವಾದವನ್ನು ಯೋಗ್ಯವೆಂದು ಗ್ರಹಿಸಲಾಗದು. ಮುಲ್ಲಾ ತಕಿಯಾನ ವೃತ್ತಾಂತದಿಂದ ಸ್ಪಷ್ಟವಿರುವಂತೆ ಬಂಗಾಲದ ಸುಲ್ತಾನನು ಹರಿಸಿಂಹದೇವನೊಂದಿಗೆ ಸೌಹಾರ್ದದಿಂದಿದ್ದನು. ಈ ಬಗೆಗೆ, *ಧೂರ್ತಸಮಾಗಮ*ದಲ್ಲಿ ಬರುವ ಸುರತ್ರಾಣನು ಘಿಯಾಸುದ್ದೀನ ತುಘಲಕನೇ ಎಂಬ ಎಸ್.ಕೆ. ಸಿಂಗ್‌ರ[೬೭] ಹೇಳಿಕೆಗೆ ಅಧಿಕೃತತೆಯ ಲವಲೇಶವಿಲ್ಲ. ಘಿಯಾಸುದ್ದೀನ ತುಘಲಕನ ಆಗಮನದೊಂದಿಗೆ ರಾಜಕೀಯ ಕ್ಷಿತಿಜದಲ್ಲಿ ಸಮತೂಕದ ಇತಿಹಾಸದ ನೆಲೆಗಟ್ಟು ಆರಂಭಗೊಳ್ಳುತ್ತದೆ. ಕ್ರಿ.ಶ. ೧೩೨೪ ರಲ್ಲಿ ಘಿಯಾಸುದ್ದೀನ ತುಘಲಕನು ಮಿಥಿಲೆಯ ಮೇಲೆ ದಾಳಿ ಮಾಡಿದ ಬಗೆಗೆ ವಿವಿಧ ಆಕರಗಳಲ್ಲಿ ಬೇರೆ ಬೇರೆ ವೃತ್ತಾಂತಗಳು

ಲಭ್ಯವಿವೆ. ಈ ಕಾಲಘಟ್ಟದ ಇತಿಹಾಸದಲ್ಲಿ ತೊಡಗಿರುವ ಬಹುತೇಕ ಎಲ್ಲ ವಿದ್ವಾಂಸರು ಈ ಅಭಿಪ್ರಾಯವನ್ನು ಒಪ್ಪುತ್ತಾರೆ.

ಈ ಸಂಬಂಧದಲ್ಲಿ, ಈಗ ಬ್ರಿಟಿಷ್ ಮ್ಯೂಜಿಯಮ್‌ನಲ್ಲಿ ಸಂರಕ್ಷಿಸಿಟ್ಟಿರುವ ಅಪರೂಪದ ಪಾರ್ಸಿ ಹಸ್ತಪ್ರತಿ *ಬಸಾತಿನ್-ಅಲ್-ಉಂಶ್*‌ವನ್ನು ಪ್ರಸ್ತಾಪಿಸಲೇಬೇಕು.[೬೮] ಐತಿಹಾಸಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನಕ್ಕಿಂತ ಅಧಿಕ ಮಹತ್ವಪೂರ್ಣವಾಗಿರುವ *ಬಸಾತಿನ್-ಅಲ್-ಉಂಶ್* ಅಲಂಕಾರಿಕ ಗದ್ಯದಲ್ಲಿ ಬರೆದ ಹಿಂದೂ ಕತೆಯಾಗಿರುವುದು. ಅದರಲ್ಲಿ ದಿಲ್ಲಿ ನಿವಾಸಿ ಮುಹಮ್ಮದ ಸದರ ಅಲಾ ಅಹಮ್ಮದ ಹುಸೇನ ದಬೀರನು ಅರಬ್ಬಿ ಮತ್ತು ಪಾರ್ಸಿ ಪದ್ಯಗಳನ್ನು ಸೇರಿಸಿರುವನು. ಅವನು ತುಘಲಕ್‌ನ ದರಬಾರದ ವಂಶಾನುಗತ ಸೇವಕನೂ ರಾಯಭಾರ ಕಚೇರಿಯ ಕಾರ್ಯದರ್ಶಿಯೂ ಆಗಿದ್ದನು.[೬೯] ತುಘಲಕನು ಮಿಥಿಲೆಯ ಮೇಲೆ ಮಾಡಿದ ದಾಳಿಯನ್ನು ವಿವರಿಸುವ ಭಾಗವು ಬಹಳ ಮಹತ್ವಪೂರ್ಣವಾಗಿದೆ. ಅದು ಪ್ರತ್ಯಕ್ಷದರ್ಶಿ ವಿವರಣೆಯಾಗಿರುವುದರಿಂದ ಅದರ ಪ್ರಾಮಾಣ್ಯವನ್ನು ಪ್ರಶ್ನಿಸುವಂತಿಲ್ಲ. ಘಿಯಾಸುದ್ದೀನ ತುಘಲಕ ಮತ್ತು ಅವನ ತಿರಹತ್ ಆಕ್ರಮಣದ ಬಗೆಗೆ ಈ ಕೃತಿಯಲ್ಲಿ ಯಾವ ಮಾಹಿತಿ ಲಭ್ಯವಿದೆ ಎಂಬುದರಲ್ಲಿ ಅದರ ಅರ್ಹತೆ ಅಡಗಿದೆ. ಈ ಕೃತಿಯಲ್ಲಿ ವೃತ್ತಾಂತವು ವಾಸ್ತವಿಕವಾಗಿರದೆ ಸಾಹಿತ್ಯಿಕವಾಗಿದೆ. ಆದರೆ, ಫೆರಿಸ್ತಾನ ವೃತ್ತಾಂತವು ಮುಖ್ಯವಾಗಿ ಇಸಾಮಿಯ *ಫತಹ-ಉಸ್-ಸಲಾತಿನ್*‌ನ್ನು ಅವಲಂಬಿಸಿದೆ. ಅವನು ಅದನ್ನು ಹೆಸರಿಸುತ್ತಾನೆ ಮತ್ತು ಅದನ್ನು ಬರ್ನಿಯ ಪುಸ್ತಕಕ್ಕಿಂತ ಏಳೆಂಟು ವರ್ಷ ಮುಂಚೆಯೆ ಪೂರ್ತಿಗೊಳಿಸಲಾಗಿತ್ತು. ಬಸಾತಿನ್‌ದ ಕರ್ತೃವು ಪೂರ್ವ ದಂಡಯಾತ್ರೆಯಲ್ಲಿ ತುಘಲಕ ಸುಲ್ತಾನನ ಪರಿವಾರದಲ್ಲಿದ್ದನು. ತನ್ನ ಮರುಪ್ರಯಾಣದಲ್ಲಿ ಉಷ್ಣ ಮತ್ತು ಸಂಕಷ್ಟಗಳನ್ನು ಅನುಭವಿಸಿ ಸುದೀರ್ಘ ಅನಾರೋಗ್ಯ ತಂದುಕೊಂಡನು. ಮತ್ತು ಅವನು ಜೀವದಾಶೆ ಬಿಡಬೇಕಾಯಿತು. ಆದರೆ, ಅವನು ತನ್ನ ಹುಟ್ಟೂರು ದಿಲ್ಲಿಯ ಹಿತಕರ ಹವೆಯಿಂದ ಮತ್ತು ವಿಶೇಷತಃ ಮಹಾವೈದ್ಯ ಮುಹಮ್ಮದ ಖಿಚಾಂಡಿಯ ಗಮನಾರ್ಹ ಪರಿಣತಿಯಿಂದ ಬದುಕುಳಿದನು.

ಮುಹಮ್ಮದ್ ಬಿನ್ ತುಘಲಕನ ಆಳ್ವಿಕೆಯ ಮೊದಲನೆಯ ವರ್ಷದಲ್ಲಿ ರಚಿತವಾಯಿತೆಂಬುದರಿಂದ *ಬಸಾತಿನ್-ಅಲ್-ಉಂಶ*ಗೆ ಮಹತ್ವ ಪ್ರಾಪ್ತವಾಗಿದೆ. ಅದೊಂದು ಶ್ರೇಷ್ಠ ಸಾಹಿತ್ಯಕೃತಿಯೆಂದು ಪರಿಗಣಿತವಾಗಿದೆ. ಕೆಳಗೆ ನೀಡಲಾಗಿರುವ ಕೆಲವು ಉದ್ಧೃತ ಭಾಗಗಳು ಮಿಥಿಲೆಯ ಮೇಲಿನ ಆಕ್ರಮಣದ ಮಾರ್ಗವನ್ನು ಸ್ಫುಟವಾಗಿ ವರ್ಣಿಸುತ್ತದೆ. ಯುದ್ಧದ ಮತ್ತು ಮಿಥಿಲೆಯ ಅರಸನನ್ನು ಬೆನ್ನಟ್ಟಿದ ವಿವರಗಳೂ ಸ್ವಾರಸ್ಯಕರವಾಗಿದೆ.

ಆ ಹಸ್ತಪ್ರತಿಯ ೧೦ ನೆಯ ಪಾನು ಹೀಗೆ ತಿಳಿಸುತ್ತದೆ: ಲಖನೌತಿ, ಸೋನಾರಗಾಂವ ಮತ್ತು ಹೊರವಲಯಗಳನ್ನು ವಶಪಡಿಸಿಕೊಂಡ ನಂತರ ಘಿಯಾಸುದ್ದೀನ ತುಘಲಕನು ಧನ, ಗಜಗಳು, ಅಶ್ವಗಳ ರೂಪದಲ್ಲಿ ವಿಪುಲ ಕೊಳ್ಳೆ ಪಡೆದ ಮೇಲೆ ಅಲ್ಲಾನ ಹೆಸರಿನಲ್ಲಿ ಕಲ್ಮಾ ಮತ್ತು ಶರಿಯತ್ ಘೋಷಿಸುವ ಉದ್ದೇಶದಿಂದ ಮಿಥಿಲೆಯತ್ತ ಸಾಗಿದನು. ವಿಶಾಲ,

ದೂರದ ಮತ್ತು ಅತ್ಯಂತ ರಮಣೀಯ ರಾಜ್ಯವಾಗಿದ್ದ ತಿರಹತ್ ಅನ್ನು ಮಣಿಸಿ ವಶಪಡಿಸಿಕೊಳ್ಳುವುದೆ ಏಕೈಕ ಹೇತುವಾಗಿತ್ತು. ಮಿಥಿಲೆಯ ರಾಯನು ಬಲಶಾಲಿ ಸೈನ್ಯ ಹಾಗೂ ಕೋಟೆಯನ್ನು ಹೊಂದಿದ್ದನು. ಅವನು ಬಹಳ ಶಕ್ತಿಶಾಲಿಯಾಗಿರದಿದ್ದರೂ ಸ್ವಾಭಿಮಾನಿಯಾಗಿದ್ದನು. ಹಿಂದಿನ ಸುಲ್ತಾನರ ವಿರುದ್ಧ ದಂಗೆಯೆದ್ದಿದ್ದನು ಮತ್ತು ಹಲವಾರು ಸಂದರ್ಭಗಳಲ್ಲಿ ಅವರ ಪ್ರಭುತ್ವವನ್ನು ಅಪಮಾನಿಸಲೆತ್ನಿಸುತ್ತಿದ್ದನು. ಅವನು ಶರಣಾಗತನಾಗಲಿಲ್ಲ ಮತ್ತು ಕೊನೆಯವರೆಗೆ ಮಿಥಿಲೆಯ ಸ್ವಾತಂತ್ರ್ಯವನ್ನು ಕಾಪಾಡಲು ವ್ಯರ್ಥ ಪ್ರಯತ್ನಪಟ್ಟನು. ಅರಸನು ವಿಜಯಿ ತುಘಲಕನ ಸೆರೆಯಾಳುಗಳು ಮತ್ತು ಸೈನ್ಯದ ಬಗೆಗೆ ಅರಿತಾಗ ನಡುಗಲಾರಂಭಿಸಿದನು. ಈ ಹಂತದಲ್ಲಿ ಹಸ್ತಪ್ರತಿಯು ತುಘಲಕ ಸೈನ್ಯದ ಪ್ರಕಾರಗಳನ್ನು ಚರ್ಚಿಸುತ್ತದೆ. ಗಜದಳ ಆ ಪ್ರದೇಶವನ್ನು ತುಳಿಯತೊಡಗಿತು ಮತ್ತು ಎಷ್ಟೊಂದು ಎರ್ರಾಬಿರ್ರಿ ಚಲಿಸಿತೆಂದರೆ ರಾಯನಿಗೆ ಅನ್ಯ ಮಾರ್ಗವಿರಲಿಲ್ಲ. ಅವನ ಬುದ್ಧಿಗೆ ಮಂಕು ಕವಿಯಿತು. ತನ್ನ ಪ್ರದೇಶದಲ್ಲಿ ಇರುವುದು ಜಾಣತನವೆಂದು ಅವನಿಗೆ ತೋರಲಿಲ್ಲ. ಆದುದರಿಂದ, ಅವನು ಉತ್ತರದ ಗುಡ್ಡಗಾಡುಗಳಿಗೆ ಓಡಿಹೋದನು.

ಅರಸನು ವೇಗದ ಕುದುರೆಯ ಸಹಾಯದಿಂದ ಪಾರಾಗಲು ಸಮರ್ಥನಾದನೆಂದು ಪಾನು ೧೧ ವರ್ಣಿಸುತ್ತದೆ. ಅವನು ಒಂದು ಗವಿಯಲ್ಲಿ ಅಡಗಿಕೊಂಡನು. ಸಾಮ್ರಾಟ ತುಘಲಕನು ಅಗತ್ಯ ಏರ್ಪಾಡು ಮಾಡಲು ಕೆಲ ದಿನಗಳ ವರೆಗೆ ಒಂದು ದೊಡ್ಡ ಪಟ್ಟಣದಲ್ಲಿದ್ದ. ತಿರಹತ್ ಕೋಟೆಯು ಸುತ್ತಲೂ ನೀರು ಮತ್ತು ಕಾಡುಗಳಿಂದ ಆವೃತವಾಗಿತ್ತು. ಕಾಡುಗಳಲ್ಲಿ ಅವಿತಿದ್ದವರನ್ನೆಲ್ಲ ಸಾಮ್ರಾಟ ತುಘಲಕನು ಕೊಲ್ಲಿಸಿದನು. ಅದೇ ವೇಳೆ, ತನ್ನ ಪ್ರಭುತ್ವ ಒಪ್ಪಿಕೊಂಡವರಿಗೆ ಅಪಾರ ಔದಾರ್ಯ ತೋರಿದನು. ತಕ್ಷಣ ಅವನು ಆಡಳಿತದ ಹೊಣೆಯನ್ನು ಆ ಪ್ರದೇಶದ ಜನರಿಗೆ ವಹಿಸಿಕೊಟ್ಟು ಆತಂಕಮುಕ್ತನಾದನು. ಈ ಘಟನೆಯ ನೆನಪಿಗಾಗಿ ತುಘಲಕಾಬಾದ ಯಾ ತಿರಹತ್ ಎಂಬ ನಗರವನ್ನು ಸ್ಥಾಪಿಸಿದನು.

ಅಗತ್ಯ ಏರ್ಪಾಡುಗಳನ್ನು ಮಾಡಿದ ಮೇಲೆ ಸಾಮ್ರಾಟನು ದಿಲ್ಲಿಗೆ ಹೊರಟನೆಂದು ಪಾನು ೧೨ ತೋರಿಸುತ್ತದೆ. ಹಸ್ತಪ್ರತಿಯ ಲೇಖಕನು ಸಾಮ್ರಾಟನ ಪರಿವಾರದ ಸದಸ್ಯನಾಗಿದ್ದು ಅವನೊಂದಿಗೆ ಪ್ರಯಾಣ ಮಾಡುತ್ತಿದ್ದನೆಂಬುದನ್ನು ನಾವಿಲ್ಲಿ ನೆನಪಿಡಬೇಕು. ತೀಕ್ಷ್ಣ ಹವೆಯಿಂದಾಗಿ ಅವನು ಇಲ್ಲಿ ಅನುಭವಿಸಬೇಕಾದ ಉಷ್ಣ, ಬಿಸಿಗಾಳಿ ಮತ್ತು ಕಡುಕಷ್ಟಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಾನೆ.

ಆ ಇಡಿ ಘಟನೆಯನ್ನು ಎಸ್.ಎಚ್.ಅಸ್ಕರಿ ಈ ಶಬ್ದಗಳಲ್ಲಿ ಇಡುತ್ತಾರೆ: "ಅಲ್ಲಿಯ ರಾಯನು ತನ್ನ ಹೇರಳ ಸಂಪನ್ಮೂಲ, ಸಂಖ್ಯಾಬಲ, ಕೋಟೆಯ ಭದ್ರತೆ ಮತ್ತು ತನ್ನ ವ್ಯಕ್ತಿತ್ವಬಲದಿಂದಾಗಿ ಅಭಿಮಾನ ಮತ್ತು ಸೊಕ್ಕಿನ ಟೊಪ್ಪಿಗೆಯನ್ನು ತನ್ನ ತಲೆಯಿಂದ ತೆಗೆಯಲಿಲ್ಲ. ಮತ್ತು ತನ್ನ ಮೊಂಡತನ ಮತ್ತು ವಿದ್ರೋಹದ ಖಡ್ಗವನ್ನು ಹರಿತಗೊಳಿಸಿದನು. ವಕ್ರವಾಗಿ ವರ್ತಿಸುವುದನ್ನು ರೂಢಿಸಿಕೊಂಡಿದ್ದ ಅವನು ಸೋತು ಶರಣಾಗುವ ಒಲವನ್ನೆಂದೂ ತೋರಲಿಲ್ಲ. ವಿಜಯಪತಾಕೆಯ ಆಗಮನದ ಸುದ್ದಿ ತಿಳಿಯುತ್ತಲೆ, ವಿಜಯಿ ಸೈನ್ಯದ

ಕಾರ್ಯದಿಂದ ಎಷ್ಟೊಂದು ಭಿಯಭೀತನಾದನೆಂದರೆ ಅವನ ದೇಹವೆಲ್ಲ ಡೇರೆಯ ಗುಡಾರದಂತೆ ಕಂಪಿಸತೊಡಗಿತು.''[೫]

ಇಸಾಮಿ ಹೇಳುತ್ತಾನೆ: "ಮರುದಿನ ಸುಲ್ತಾನನು ಕೋಸಿ ನದಿ ದಂಡೆಯಿಂದ ತಿರಹತ್‌ನತ್ತ ಹೊರಟನು. ತಿರಹತ್‌ನ ಅರಸನು ಸುಲ್ತಾನ ಬರುತ್ತಿರುವುದನ್ನು ಕೇಳಿದಾಕ್ಷಣ ಅರಣ್ಯದಲ್ಲಿ ಅಡಗಿಕೊಂಡನು. ಸಾಮ್ರಾಜ್ಯದ ಸೈನ್ಯ ಅರಣ್ಯದ ಹೊರವಲಯವನ್ನು ತಲುಪಿತು. ಅರಣ್ಯ ಕಂಡು ಸುಲ್ತಾನನಿಗೆ ಆಶ್ಚರ್ಯವಾಯಿತು. ಅವನು ಸ್ವತಃ ಕುದುರೆಯಿಂದಿಳಿದು ಕೈಯಲ್ಲಿ ಕೊಡಲಿ ತೆಗೆದುಕೊಂಡು ದಾರಿ ಮಾಡಿಕೊಳ್ಳಲೋಸುಗ ಒಂದು ಹಳೆಯ ಮರವನ್ನು ಕಡಿದನೆಂದು ಹೇಳಲಾಗಿದೆ. ಆ ಕೂಡಲೆ ಸೈನಿಕರು ಕೊಡಲಿಗಳ ಸಹಾಯದಿಂದ ಸೈನ್ಯಕ್ಕೆ ದಾರಿ ಮಾಡಿಕೊಳ್ಳಲಾರಂಭಿಸಿದರು. ಎರಡುಮೂರು ದಿನಗಳಲ್ಲಿ ದಾರಿ ಸಿದ್ಧವಾಗಿ ಸಾಮ್ರಾಜ್ಯದ ಸೈನ್ಯವು ತಿರಹತ್‌ನ ಕೋಟೆ ತಲುಪಿತು. ಕೋಟೆಯ ಸುತ್ತಲೂ ನೀರು ತುಂಬಿದ ಏಳು ಆಳವಾದ ಕಂದಕಗಳಿದ್ದವು. ಎರಡುಮೂರು ವಾರಗಳವರೆಗೆ ತನ್ನ ಸೈನಿಕರನ್ನು ಎಡಕ್ಕೆ, ಬಲಕ್ಕೆ ಕಳಿಸಿ ಹಿಂದೂಗಳು ಎಲ್ಲಿಯೆ ಇರಲಿ ಅವರ ಮೇಲೆ ಆಕ್ರಮಣ ಮಾಡಲು ಮತ್ತು ಅವರು ಶರಣಾಗುವಂತೆ ಕೊಳ್ಳೆ ಹೊಡೆಯಲು ಸುಲ್ತಾನನು ಆಜ್ಞೆಯಿತ್ತನು. ಇದಾದ ಮೇಲೆ ಅವನು ನಾಸೀರುದ್ದೀನನನ್ನು ರಾಜಛತ್ರದೊಂದಿಗೆ ಲಖನೌತಿಗೆ ಕಳಿಸಿದನು. ಸುಲ್ತಾನನು ತಬ್ಲಿಖಾನನ ವೀರ ಮಗನಾದ ಅಹಮ್ಮದನನ್ನು ತಿರಹತ್‌ನಲ್ಲಿ ಬಿಟ್ಟು ಮರುದಿನ ಬಿಡಾರದಿಂದ ಹೊರಟು ಎರಡುಮೂರು ತಿಂಗಳಲ್ಲಿ ರಾಜಧಾನಿ ತಲುಪಿದನು.''

ತುಘಲಕನು ಮಿಥಿಲೆಯನ್ನು ವಶಪಡಿಸಿಕೊಂಡ ವಿಷಯದಲ್ಲಿ ಮೇಲಿನೆರಡು ವೃತ್ತಾಂತಗಳು ಬಹಳ ಮಹತ್ವಪೂರ್ಣವಾದವುಗಳು. ಈ ಘಟನೆಯನ್ನು ಬರ್ನಿ ಉಲ್ಲೇಖಿಸುತ್ತಾನಾದರೆ *ತಾರೀಖ-ಇ-ಮುಬಾರಕಶಾಹಿ*ಯಲ್ಲಿ ಆ ಪ್ರಸಂಗವನ್ನು ಪೂರ್ತಿಯಾಗಿ ಕೈಬಿಡಲಾಗಿದೆ ಮತ್ತು ನಿಜಾಮುದ್ದೀನನು ಬರ್ನಿಯ ಹೇಳಿಕೆಯನ್ನು ಬರಿ ಪುನರುಕ್ತಿಸುತ್ತಾನೆ. ಆದರೆ, *ಬಸಾತಿನ್-ಅಲ್-ಉನ್ಸ್* ಮತ್ತು ಇಸಾಮಿಯ ವೃತ್ತಾಂತಗಳನ್ನು ಫೆರಿಸ್ತಾ ಸಮರ್ಥಿಸುತ್ತಾನೆ. ಕೋಟೆಯ ಮತ್ತು ಅರಣ್ಯದ ಬಗೆಗಿನ ವಿವರಗಳ ಬಗೆಗೆ ಇಸಾಮಿ ಮತ್ತು ಫೆರಿಸ್ತಾರಲ್ಲಿ ಸಾಮಾನ್ಯ ಅಂಶಗಳು ಬಹಳಷ್ಟಿವೆ.

ಘಿಯಾಸುದ್ದೀನ ತುಘಲಕನು ಮಿಥಿಲೆಯನ್ನು ಕೊಳ್ಳೆ ಹೊಡೆದ ಪ್ರಥಮ ದಿಲ್ಲಿಯ ಅರಸನಾಗಿದ್ದನು. ಅವನು ತಿರಹತ್ ಕೋಟೆಗೆ ಲಗ್ಗೆ ಹಾಕಿದನು. ಮತ್ತು ಸುಲ್ತಾನನು ದಿಲ್ಲಿಗೆ ಮರಳಿದ ಮೇಲೆ ತಿರಹತ್‌ನ ಆಡಳಿತವನ್ನು ಮಲಿಕ್ ತಬ್ಲಿಖಾ ಅವನ ಮಗ ಅಹಮ್ಮದಖಾನನ ಕೈಗೆ ಒಪ್ಪಿಸಲಾಯಿತು. ತಿರಹತ್‌ಉ ದಿಲ್ಲಿಯ ಆಶ್ರಿತ ರಾಜ್ಯವಾಯಿತು. ಮತ್ತು ಮುಹಮ್ಮದ ಬಿನ್ ತುಘಲಕನು ಟಂಕಸಾಲೆಯಿಂದ ಹೊರಡಿಸಿದ ನಾಣ್ಯಗಳು ಇನ್ನೂ ಇವೆ. ಈ ನಾಣ್ಯಗಳು ಅನನ್ಯವಾಗಿವೆ. ಏಕೆಂದರೆ, ಅವು ಅದೇ ಮೌಲ್ಯದ ಬೆಳ್ಳಿ ನಾಣ್ಯಗಳ ಬದಲು ಹಿತ್ತಾಳೆ ನಾಣ್ಯಗಳನ್ನು ಬಳಸುವಂತೆ ಜನರನ್ನು ಒತ್ತಾಯಿಸುವ ಹುಚ್ಚು ಪ್ರಯತ್ನಗಳ ಜೀವಂತ ನಿದರ್ಶನಗಳಾಗಿವೆ. ಮುಹಮ್ಮದ ಬಿನ್ ತುಘಲಕನು ತಿರಹತ್

ಅನ್ನು ದಿಲ್ಲಿ ಸಲ್ತನತ್ತಿಗೆ ಸೇರಿಸಿಕೊಂಡದ್ದು ಮತ್ತು ತನ್ನ ಹಿಡಿತ ಬಲಗೊಳಿಸಲು ಅದರ ಮೇಲೆ ಭಾರಿ ಒತ್ತಡ ಹೇರಿದುದು ಬಂಗಾಲದ ಮೇಲಿನ ತನ್ನ ದಂಡಯಾತ್ರೆಗಳ ಮಾರ್ಗದಲ್ಲಿ. ತಿರಹತ್‌ನಲ್ಲಿ ಮುಸ್ಲಿಮ ಅಧಿಕಾರದ ವಿಸ್ತರಣೆ ಕ್ರಿ.ಶ. ೧೩೨೪ ರವರೆಗೂ ಸಾಗಿತು ಮತ್ತು ಅದು ಕರ್ಣಾಟ ರಾಜವಂಶ ತಲೆಯೆತ್ತದಂತೆ ಮಾಡಿ ಕೊನೆಗೆ ನಿರ್ನಾಮ ಮಾಡಿತು. ಮುಸ್ಲಿಮರೊಂದಿನ ಸಂಪರ್ಕವು ತಿರಹತ್‌ನ ಸಮಾಜೊ - ಆರ್ಥಿಕ ಕ್ಷೇತ್ರಗಳಲ್ಲಿ ಬಹು ಆಯಾಮ ಬದಲಾವಣೆಗಳನ್ನು ತಂದಿತಾದರೂ ಮಿಥಿಲೆಯ ಸ್ವತಂತ್ರ ಹಿಂದೂರಾಜ್ಯವೆಂಬ ರೂಪ ಅಂತಿಮವಾಗಿ ಕುಸಿಯಿತು.

**ಟಿಪ್ಪಣಿಗಳು**

1. Cf. R.R. Diwakar *Bihar Through the Ages*, p. 380.
2. Cf. Riyaz, p. 147.
3. Op. cit. p. 211.
4. Cf. S.H. Askari. CS, (1954).
5. Cf. R.K. Choudhury, *The Karnatas of Mithila - Annals* XXXV. p. 91 ff. *Harisimhadeva of Mithila.*
6. Ibid., p. 92.
7. Manmohan Chakravarty JASB, (1915) p. 407.
8. CPP. Tale 4, Article Vidyapati's *Purusapariksha - An Important Source of India's Political History.*
9. MTV, p. 115.
10. CS, 1964 p. 7.
11. Riyaz, pp. 9-10.
12. SHB, II pp. 9-10.
13. ABOI, XXXVI p. 109.
14. DHNI, I p. 374.
15. SHB, II pp. 29. Cf. ED, II p. 319.
16. SHB, II pp. 22-23.
17. ABORI, XXXV.
18. CS, (1954).
19. R.C. Muzumdar HCIP, IV pp. 432-33.
20. R.R. Diwakar, *Bihar Through the Ages*, p. 385.
21. TP, p. 46.
22. U. Thakur TM, p. 398.
23. R.R. Diwakar, *Bihar Through the Ages*, p. 386.
24. *Bihar Inscriptions.* His titles-*Ghayas-Al-Islam Wal Muslim in Mughis-al-muluk-wal-Sulatin Abil-Fateh-Tughril-as-Sultan.*
25. SHB II p. 46.
26. TM, (Persian Text) p. 247. Cf. Riyaz, (p. 77 ff.)

27. Mithila, 9th February, 1953. Cf. R.K.Choudhury, *Mithila ka Rajanitika Itihas.*
28. CS, p. 10 fn. For Correct identification. Cf. *Annals* XXXV p. 110.
29. ED, II p. 375.
30. SHB II p. 52.
31. EIM, (1909-10) p. 113 Cf, *Mongyr Inscription of Balban.* 677 A.H.
32. TMS, p. 30-31 : Cf. TFS, p. 83
33. SHB, II p. 61.
34. TM, pp. 272-73. Contradictory Statement on p. 402.
35. JASB, (1915) p. 407.
36. Amir Khusrau, *Quran-us-Saidin.*
37. Riyaz, p. 88-9.
38. Ibid, p. 88-90. Cf. SB, p. 48-50.
39. EIM, (1817-19) p. 8 ff.
40. CS (1954) p. 9.
41. BTA, p. 389.
42. *Annals*-XXXVI p. 163. ff. Edited by R.K. Choudhury.
43. CHI, p. 261.
44. MT, Cf. MTV. He believes that Sakrasimhadeva ruled for 12 years.
45. CS, p. 11. (1954). S.H. Askari has expressed natural doubt about the identitfication of Ismail. But Mulla Taqia has got to be relied upon till fress and further evidences are forthcoming.
46. Taqia's account is confirmed by Baski, Cf. BMI, pp. 484-7.
47. For details BMI, pp. 486-7. He associates the touchstone tale with Alauddin. Also BMI, pp. 495-6.
48. MTV, p. 119. Chandeswara in his *Krtyaratnakara* calls Devaditya as 'Hamirdhwantabhanu' and also Mantriratnakara by Alauddin.
49. Cf. TM, p. 276.
50. JOT, I No. 4.
51. *Mithila,* 9th February, 1958.
52. Briggs, I p. 366.
53. ED, III p. 543.
54. BMI, Makes a mention of Hamir episode but does not make any reference to the invasion of Mithila.
55. HMT, p. 79.
56. CS, (1954) p. 10.
57. EI, XXII p. 222.
58. Chandeswara, *Krtyarantnakara,* Verse 4.
59. Ibid, Verse 7.
60. *Krtyarantnakara,* Verse 9-10.
61. Chandeswara, *Krtyarantnakara,* Verse 15.

62. D.R. Regmi, *Medieval Nepal*, Vol. II p. 3.
63. R. Mitra, Notices, VI p. 135.
64. NDC, p. 66.
65. S.K. Chatterji & Babua Misra *Varnaratnakara*, XVII.
66. Introductory Verse 4. Cf. Annals XXXV pp. 115-16.
67. St, p. 67 XXXX. Similar view has been expressed by P. Jha in MTV, p. 135, who holds that Harisimhadeva was taken to Delhi and released later on. There is no doubt that before the recorded tughluq invasion, some sort of contest took place between the Karnatas and the Muslim kings (identification is not possible in the present state) and that Harisimhadeva was victorious. The problem of his being taken to Delhi is not supported by all these sources.
68. R.K. Choudhury expresses thanks to Meredith Owen, Assistant Keeper of British Museum and R.S. Sharma of the Patna University. Another copy of the MSS is preserved in the Indian Department of the Leningrad Library and is believed to be an earlier edition than the British Musuem....
69. R.R. Diwakar, *Bihar through the Ages*, p. 411.
70. JBRS, XLVIII pp. 11-12.
71. R.C. Muzumdar, English Translation in JBRS XLVII p. 3.

❑❑

೯

# ಕರ್ನಾಟರ ಅವನತಿ

ಹರಿಸಿಂಹದೇವನ ಆಳ್ವಿಕೆಯು ಮಿಥಿಲೆಯ ಇತಿಹಾಸದಲ್ಲಿ ಒಂದು ನಿರ್ಣಾಯಕ ತಿರುವು. ರಾಜಕೀಯ ದೃಷ್ಟಿಕೋನದಿಂದ, ಅವನ ಆಳ್ವಿಕೆಯು ತೀವ್ರತರ ಘಟನೆಗಳಿಂದ ತುಂಬಿತುಳುಕುತ್ತಿತ್ತು ಮತ್ತು ನಾಲ್ಕು ದಶಕಗಳ ಅಲ್ಪಾವಧಿಯಲ್ಲಿ ಅವನು ಈಶಾನ್ಯ ಭಾರತದ ಇತಿಹಾಸದಲ್ಲಿ ಮಹತ್ವದ ಪಾತ್ರವಹಿಸಿದನು. ರಾಜಕೀಯ ಹಾಗೂ ಸಾಮಾಜಿಕ ಇತಿಹಾಸದ ಎರಡೂ ಕ್ಷೇತ್ರಗಳಲ್ಲಿ ಅವನ ಸಾಧನೆಗಳು ಅಸಾಧಾರಣವಾಗಿದ್ದವು. ಅವನ ಕ್ಷುಬ್ಧ ರಾಜಕೀಯ ಜೀವನ ಅಂದಿನ ಪೂರ್ವ ಭಾರತದ ಇತಿಹಾಸದ ಮೇಲೆ ಶಾಶ್ವತ ಮುದ್ರೆಯನ್ನೊತ್ತಿದೆ. ಮುಸ್ಲಿಮರ ಆಗಮನಕ್ಕಿಂತ ಪೂರ್ವದಲ್ಲಿ ಮಿಥಿಲೆಯ ಹಿಂದೂಗಳು ಸಾಧಿಸಿದುದನ್ನು ಕಲ್ಪಿಸಿಕೊಳ್ಳಲು ಸಿಮರಾಂವಗಡ ಅವಶೇಷಗಳೆ ಸಾಕು ಎಂಬ ದೃಢ ಹೇಳಿಕೆ ಸರಿಯಾದುದೆ ಆಗಿದೆ.[1] ಹರಿಸಿಂಹದೇವನ ತರುವಾಯದ ಕರ್ನಾಟರ ಬಗೆಗೆ ನಮಗೆ ಗಟ್ಟಿ ಮಾಹಿತಿಯಿಲ್ಲ

ಮತ್ತು ಅವರ ಅವನತಿಯ ಕಾರಣಗಳೇನೆಂದು ನಿಸ್ಸಂದಿಗ್ಧವಾಗಿ ಹೇಳುವ ಸ್ಥಿತಿಯಲ್ಲಿ ನಾವಿಲ್ಲ.

ಮಿಥಿಲೆಯ ಕರ್ನಾಟರು ಸುಮಾರು ಎರಡೂಕಾಲು ಶತಮಾನ (ಕ್ರಿ.ಶ. ೧೦೯೭-೧೩೨೪-೨೫) ಆಳಿದರು. ಘಿಯಾಸುದ್ದೀನ ತುಘಲಕನು ತಿರಹತ್ ಮೇಲೆ ಮಾಡಿದ ದಾಳಿ ಕರ್ನಾಟರ ಮರಣಗಂಟೆಯಾಯಿತೆಂದು ತೋರುತ್ತದೆ. ಹರಿಸಿಂಹದೇವನು ನೇಪಾಳಕ್ಕೆ ಹೋಗಿ ಅಲ್ಲಿಯೆ ನೆಲೆಸಿದನು ಮತ್ತು ಅವನ ಉತ್ತರಾಧಿಕಾರಿಗಳು ನೇಪಾಳವನ್ನು ಎರಡುಮೂರು ನೂರು ವರ್ಷ ಆಳಿದರೆಂದು ಹೇಳಲಾಗಿದೆ. ಡಿ.ಆರ್.ರೆಗ್ಮಿ ಮತ್ತು ಇನ್ನಿತರ ಇತಿಹಾಸಕಾರರು ನೇಪಾಳ ಇತಿಹಾಸದ ಈ ಅಂಶವನ್ನು ಇತ್ತೀಚಿಗೆ ಪ್ರಶ್ನಿಸಿದ್ದಾರೆ. ಹರಿಸಿಂಹದೇವನ ಉತ್ತರಾಧಿಕಾರಿಗಳಾದ ಮತಿಸಿಂಹದೇವ ಮತ್ತು ಇತರರು ನೇಪಾಳವನ್ನು ಆಳಿದರು ಮತ್ತು ಆ ಪ್ರದೇಶದ ಮೇಲೆ ಅವರ ಪ್ರಭುತ್ವವನ್ನು ಚೀನಿ ಸಾಮ್ರಾಟರು ಸಮ್ಮತಿಸಿದ್ದರು. ಪರ್ಸೀವಲ್ ಲಂಡನ್ ಮತ್ತು ರಾಹುಲ ಸಾಂಕೃತಾಯನರು ನೇಪಾಳ ಇತಿಹಾಸದ ಬಗೆಗಿನ ಈ ಮಹತ್ವದ ಅಂಶವನ್ನು ಚರ್ಚಿಸಿರುವರು.[೨] ನೇಪಾಳದಲ್ಲಿ ಹರಿಸಿಂಹದೇವನ ನಂತರದ ಉತ್ತರಾಧಿಕಾರದ ಕ್ರಮ ಇಂತಿದೆ: ೧. ಮತಿಸಿಂಹದೇವ ೨. ಶಕ್ತಿಸಿಂಹದೇವ ಮತ್ತು ೩. ಶ್ಯಾಮಸಿಂಹದೇವ. ಚೀನಿ ರಾಯಭಾರವು ಮತಿಸಿಂಹನ ಅರಸೊತ್ತಿಗೆಗೆ ಅಧಿಕೃತ ಮುದ್ರೆಯೊತ್ತಿತ್ತು. ಚೀನಿ ಸಾಮ್ರಾಟನ ಈ ಸದ್ಭಾವನೆಗೆ ಪ್ರತಿಯಾಗಿ ನೇಪಾಳಿ ಅರಸನು ಪೀಕಿಂಗ್‌ಗೆ ಸುವರ್ಣಕಲಶ ಮತ್ತು ಪವಿತ್ರ ಗ್ರಂಥಗಳನ್ನು ಕಾಣಿಕೆಯಾಗಿ ಕಳಿಸಿದನು. ರಾಯಭಾರದ ವಿನಿಮಯ ಪುನಃ ಕ್ರಿ.ಶ. ೧೩೯೦ ಮತ್ತು ೧೪೧೩ ರಲ್ಲಿ ಜರುಗಿತು. ಶ್ಯಾಮಸಿಂಹದೇವನು ಸಹ ಚೀನಿ ಸಾಮ್ರಾಟನಿಂದ ತನ್ನ ಸಿಂಹಾಸನಾರೋಹಣವನ್ನು ದೃಢಪಡಿಸುವ ಮೊಹರು ಒತ್ತಿದ ಪತ್ರ ಪಡೆದನೆಂದು ಹೇಳಲಾಗಿದೆ. ಹಾಗೆ ನೋಡಿದರೆ, ಚೀನಿ ಸಾಮ್ರಾಟನು ಹರಿಸಿಂಹದೇವನ ಉತ್ತರಾಧಿಕಾರಿಗಳನ್ನು ನೇಪಾಳದ ನಿಜವಾದ ಅರಸರೆಂದು ಪರಿಭಾವಿಸಿದ್ದನು. ನೇಪಾಳದ ರಾಜಕೀಯ ಕ್ಷಿತಿಜದಿಂದ ಶ್ಯಾಮಸಿಂಹದೇವನ ನಿರ್ಗಮನದ ನಂತರ ಮಲ್ಲರು ನೇಪಾಳದ ಮೇಲೆ ಪುನಃ ಅಧಿಕಾರ ಸ್ಥಾಪಿಸಿ ಭದ್ರಪಡಿಸಿಕೊಂಡರು. ಇದನ್ನು ಇತಿಹಾಸಕಾರರು ಕರ್ನಾಟ - ಮಲ್ಲ ರಾಜವಂಶವೆಂದು ಬಣ್ಣಿಸಿರುವರು. ಈರ್ವರ ನಡುವಣ ವಿವಾಹಮೈತ್ರಿಯು ನೇಪಾಳದ ಕಾದಾಡುತ್ತಿದ್ದ ಎರಡೂ ರಾಜವಂಶಗಳನ್ನು ಒಂದುಗೂಡಿಸಿತು.

ಕ್ರಿ.ಶ. ೧೪೧೩ರ ಪಾಟಾನ್ ಶಾಸನವು ಜಯಸ್ಥಿತಿಮಲ್ಲನ ಮಕ್ಕಳು ಭಟಗಾಂವದಲ್ಲಿ ಕರ್ನಾಟರೊಂದಿಗೆ ಪಾಲುದಾರರಾಗಿದ್ದರೆಂದು ತಿಳಿಸುತ್ತದೆ. ಹರಿಸಿಂಹದೇವನ ವಂಶಜನಾದ ಜಯಸ್ಥಿತಿಮಲ್ಲನು ಬಿಜ್ಜಳದೇವಿಯನ್ನು ವಿವಾಹವಾದನು ಮತ್ತು ಈ ವಿವಾಹಸಂಬಂಧ ಅವನ ಸ್ಥಾನವನ್ನು ಬಲಪಡಿಸಿತು. ತಮ್ಮ ಪಿತ್ರಾರ್ಜಿತವನ್ನು ಕಳೆದುಕೊಂಡಿದ್ದರೂ ಕರ್ನಾಟರು ನೇಪಾಳದಲ್ಲಿ ಸಾಕಷ್ಟು ಕಾಲ ಚೆನ್ನಾಗಿ ಕೆಲಸ ಮಾಡಿದರು. ಜಯಸ್ಥಿತಿಮಲ್ಲ ಹಾಗೂ ಅವನ ಉತ್ತರಾಧಿಕಾರಿಗಳು ತಾವು ಹರಿಸಿಂಹದೇವನ ವಂಶಜರೆಂದು ಹೇಳಿಕೊಂಡರು

ಮತ್ತು ಅವರ ಹೇಳಿಕೆಯನ್ನು ಸಮರ್ಥಿಸಲು ಇಡಿ ವಂಶಾವಳಿಯನ್ನು ತಿದ್ದುಪಡಿ ಮಾಡಲಾಯಿತು.[3]

ತಿರಹತ್‌ನ ಕೋಟೆಗೆ ತುಘಲಕರು ಲಗ್ಗೆ ಹಾಕಿದರು ಮತ್ತು ಮುಹಮ್ಮದ ಬಿನ್ ತುಘಲಕನ ಕಾಲಕ್ಕೆ ತಿರಹತ್‌ಉ ದಿಲ್ಲಿಯ ಸಲ್ತನತ್ತಿನ ಭಾಗವಾಯಿತು. ಅದು ತುಘಲಕರ ಟಂಕಸಾಲೆನಗರವಾಯಿತು. ಮತ್ತು ಅದನ್ನು ತುಘಲಕಪುರ ಉರ್ಫ್ ತಿರಹತ್ ಎಂದು ಕರೆಯಲಾಯಿತು. ಕ್ರಿ.ಶ. ೧೩೪೬ರ ಬೇಡಿಬಾನಾ ಶಾಸನವು ಸ್ಪಷ್ಟಪಡಿಸುವಂತೆ ಚಂಪಾರಣ ಜಿಲ್ಲೆಯಲ್ಲಿ ತುಘಲಕರು ತಮ್ಮ ಆಡಳಿತದ ಒಂದು ಕೇಂದ್ರವನ್ನು ಸ್ಥಾಪಿಸಿದರು.[4] ಸಿಮರಾಂವಗಡದ ಆಸುಪಾಸಿನಲ್ಲಿ ಕರ್ನಾಟರು ಏನೇ ಪ್ರಭಾವ ಹೊಂದಿದ್ದರೂ ಅವರನ್ನು ಮುಹಮ್ಮದ ಬಿನ್ ತುಘಲಕ ಮತ್ತು ಅವನ ಉತ್ತರಾಧಿಕಾರಿಗಳು ಸಂಪೂರ್ಣವಾಗಿ ಹೊಡೆದಟ್ಟಿದರು. ನೇಪಾಳಕ್ಕೆ ಸ್ಥಳಾಂತರಗೊಂಡು ಅಲ್ಲಿಯೆ ನೆಲೆಸಿದರೆಂದು ಭಾವಿಸಲಾದ ಕರ್ನಾಟರ ದಾಳಿಗಳಿಂದ ಗಡಿಗಳನ್ನು ಸಂರಕ್ಷಿಸುವದೆ ಬೇಡಿಬಾನಾದಲ್ಲಿ ಆಡಳಿತ ಕೇಂದ್ರವನ್ನು ಸ್ಥಾಪಿಸುವ ಮೂಲ ಉದ್ದೇಶವಾಗಿತ್ತು. ತುಘಲಕಿ ಅಧಿಕಾರಗಳನ್ನು ತಿರಹತ್‌ನುದ್ದಕ್ಕೂ ನಿಯಮಿಸಲಾಯಿತು. ತುಘಲಕರು ತಿರಹತ್ ಮತ್ತು ಉತ್ತರ ಬಿಹಾರದ ಇತರ ಭಾಗಗಳಲ್ಲಿ ಭದ್ರಗೊಂಡರು. ಈ ಸಂಗತಿಯನ್ನು ಉತ್ತರ ಬಿಹಾರದಲ್ಲಿಯ ಫಿರೋಜ ತುಘಲಕನ ಇನ್ನೊಂದು ಶಾಸನ ರುಜುಪಡಿಸುತ್ತದೆ. ಕರ್ನಾಟರ ವಂಶಜರು ತಾವು ಕಳೆದುಕೊಂಡಿದ್ದ ಅಧಿಕಾರವನ್ನು ಪುನಃ ಪಡೆಯಲು ಹೋರಾಟ ಮುಂದುವರಿಸಿದರಾದರೂ ಕರ್ನಾಟರನ್ನು ಮಿಥಿಲೆಯಿಂದ ಉಚ್ಚಾಟಿಸಲಾಯಿತೆಂಬುದನ್ನು ಉತ್ತರ ಬಿಹಾರದಲ್ಲಿ ದೊರಕಿದ ತುಘಲಕ ನಾಣ್ಯಗಳ ಮತ್ತು ಶಾಸನಗಳ ಪ್ರಮಾಣವು ಸ್ಪಷ್ಟಪಡಿಸುತ್ತದೆ.

ಹರಿಸಿಂಹದೇವನ ನಂತರ ಮಿಥಿಲೆಯ ರಾಜಕೀಯ ಪರಿಸ್ಥಿತಿ ನೈರಾಶ್ಯಮಯ ಗೊಂದಲ ಹಾಗೂ ಅರಾಜಕತೆಯಿಂದ ಕೂಡಿತ್ತು. ಚಾಂದೇಶ್ವರನ ಯಜ್ಞವನ್ನು ಮತ್ತು ಅವನು ಚೀವೇಶ್ವರ ಹಾಗೂ ಮತ್ತಿತರ ಗ್ರಂಥಕರ್ತರನ್ನು ಗೌರವಿಸಿದ್ದನ್ನು ಹರಿಸಿಂಹದೇವನು ಸ್ವರ್ಗದಿಂದಲೆ ಕಂಡು ಆನಂದಪಟ್ಟನೆಂದು *ಕೃತ್ಯಚಿಂತಾಮಣಿಯ* ಆರಂಭಿಕ ಪದ್ಯಗಳಲ್ಲಿ ಕಂಡುಬರುತ್ತದೆ. ಇಲ್ಲಿರುವ ಅತ್ಯಂತ ಗಮನಾರ್ಹ ಅಂಶವೆಂದರೆ ಯಾವುದೆ ಜೀವಂತ ಅರಸನ ಉಲ್ಲೇಖವಿಲ್ಲ. ಅದರಲ್ಲಿ ವರ್ಣಿತ ವೈಭವಗಳು ಗತ ಇತಿಹಾಸಕ್ಕೆ ಸೇರಿದವುಗಳೆಂದು ತೋರುತ್ತದೆ. ಹರಿಸಿಂಹದೇವನ ನಿರ್ಗಮನಾನಂತರ ಮಿಥಿಲೆಯಲ್ಲಿ ಅರಾಜಕತೆಯಿದ್ದು ಅವನ ಉತ್ತರಾಧಿಕಾರಿಗಳು ತಿರಹತ್‌ನ ಪ್ರಭುತ್ವಕ್ಕಾಗಿ ಕಚ್ಚಾಟ ಮುಂದುವರಿಸಿದರೆಂದು ಊಹಿಸಬಹುದು. ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿ ಮಿಥಿಲೆಯಲ್ಲಿ ಕೆಲಕಾಲ ಅರಾಜಕತೆಯಿತ್ತೆಂದು ವಿದ್ಯಾಪತಿಯ *ಕೀರ್ತಿಲತಾ* ಸ್ಪಷ್ಟವಾಗಿ ಸೂಚಿಸುತ್ತದೆ. ಘಿಯಾಸುದ್ದೀನ ತುಘಲಕನ ನಿರ್ಗಮನಾನಂತರ ಹರಿಸಿಂಹದೇವನ ತಥಾಕಥಿತ ಆಗಮನವನ್ನು ನಾವು ಒಪ್ಪುವುದಾದರೂ ಅವನ ಅಲ್ಪಕಾಲಿಕ ಯಶಸ್ಸು, ದೀಪ ಆರುವ ಮುಂಚಿನ ಮಿಣುಕು ಮಾತ್ರವಾಗಿತ್ತು. ಕರ್ನಾಟರ ಮಹಾನತೆಯು ಈಗ ಗತಕಾಲಕ್ಕೆ ಸೇರಿತ್ತು.

ಕರ್ಣಾಟರು ಕ್ರಿ.ಶ. ೧೩೫೦ರ ವರೆಗೆ ತಿರಹತ್ ಹೇಳಹೆಸರಿಲ್ಲದ ಮೂಲೆಯೊಂದರಲ್ಲಿ ಆಯಿನ್ವಾರರ ಜೊತೆಗೂಡಿ ಆಳುತ್ತಿದ್ದರೂ ಹರಿಸಿಂಹದೇವನ ನಂತರ ತಿರಹತ್ ನ ಮುಖ್ಯ ಭಾಗದ ಮೇಲೆ ಕರ್ಣಾಟರ ಪ್ರಭುತ್ವ ಕೊನೆಗೊಂಡಿತು.

ಹಸ್ತಪ್ರತಿಯಲ್ಲಿ ನೃಸಿಂಹ ಮತ್ತು ರಾಮಸಿಂಹ ಎಂಬಿಬ್ಬರ ಹೆಸರುಗಳು ದೊರೆಯುತ್ತವೆ. ಅವರೀರ್ವರೂ ನಿಸ್ಸಂದೇಹವಾಗಿಯೂ ಮಿಥಿಲೆಯ ಕರ್ಣಾಟ ಅರಸರು.[5] ರಾಮದತ್ತನ ಪ್ರಕಾರ, ನೃಸಿಂಹನು ಕರ್ಣಾಟರ ಮಕುಟಮಣಿ ಹಾಗೂ ಮಿಥಿಲೆಯ ಪ್ರಖ್ಯಾತೀತ ಅರಸನಾಗಿದ್ದನು. ಅವನು ನಾನ್ಯದೇವನ ವಂಶದಲ್ಲಿ ಮೂರನೆಯ ವಂಶಜನಾದ ನರಸಿಂಹನಾಗಿರದೆ ಬೇರೆಯುವನೆಂದು ಗುರುತಿಸಬೇಕು. ರಾಮದತ್ತನು ಚಾಂದೇಶ್ವರನ ಭ್ರಾತ್ರೀಯನಾಗಿದ್ದು, ಕ್ರಿ.ಶ. ಹದಿನಾಲ್ಕನೆಯ ಶತಮಾನದಲ್ಲಿ ಪ್ರವರ್ಧಮಾನನಾಗಿದ್ದ ಸಂಭವವಿದೆ. ಈ ಅರಸ ನೃಸಿಂಹನನ್ನು ಇಮ್ಮಡಿ ನೃಸಿಂಹನೆಂದು ಮತ್ತು ಹರಿಸಿಂಹದೇವನ ವಂಶಜ ಹಾಗೂ ಸ್ಥಳೀಯ ಉತ್ತರಾಧಿಕಾರಿಯೆಂದು ಪರಿಗಣಿಸಬೇಕೆಂಬುದು ಕೆ.ಪಿ. ಜಯಸ್ವಾಲರ ಅಭಿಮತ.[6] ಈ ವಿಷಯದಲ್ಲಿ ಅವರು ಮನಮೋಹನ ಚಕ್ರವರ್ತಿಯವರಿಗಿಂತ ಭಿನ್ನ ಅಭಿಪ್ರಾಯ ಹೊಂದಿರುವುದು ಸರಿಯಾಗಿಯೆ ಇದೆ. ನರಸಿಂಹದೇವನ ಉತ್ತರಾಧಿಕಾರಿಗಳು ತಗ್ಗಿನ ಬಯಲುಪ್ರದೇಶಗಳನ್ನು ಮತ್ತು ಚಂಪಾರಣದ ಗಡಿಗಳಿಂದ ಪೂರ್ಣಿಯಾವರೆಗೂ ಹಬ್ಬಿದ್ದ ತಿರಹತ್‌ನ ತರ್‍ಯನ್ ಪ್ರದೇಶವನ್ನು ಆಳಿದಂತೆ ತೋರುತ್ತದೆ. ಅವರು ಕ್ರಿ.ಶ. ೧೩೫೦ರ ವರೆಗೆ ಕಾದಾಟ ಮುಂದುವರಿಸಿದರು. ಆಳುವ ವಂಶಜನೊಬ್ಬನನ್ನು ಮುಹಮ್ಮದ್ ಬಿನ್ ತುಘಲಕನು ದಿಲ್ಲಿಯ ಸುಲ್ತಾನನ ಕೈಕೆಳಗೆ ನಿಯಮಿಸಿದನು. ಸಾಮ್ರಾಜ್ಯದಲ್ಲಿ ತಲೆದೋರಿದ್ದ ಅವ್ಯವಸ್ಥೆತೆಯ ಲಾಭ ಪಡೆದು ನರಸಿಂಹದೇವನು ಅಥವಾ ಅವನ ಉತ್ತರಾಧಿಕಾರಿಯು ಸಲ್ತನತ್ತಿನ ನೊಗವನ್ನು ಕಿತ್ತೆಸೆಯಲು ಪ್ರಯತ್ನಿಸಿದನು. ಹಾಗಾಗಿ, ಫಿರೋಜ ತುಘಲಕನು ತಿರಹತ್‌ನ ಹಿಂದೂ ಅರಸನನ್ನಾಗಿ ಬೇರೆ ಮನೆತನದ ಒಬ್ಬನನ್ನು ಆಯ್ಕೆ ಮಾಡಿದನು.[7] ಕರ್ಣಾಟ ನರಸಿಂಹದೇವನ ಸಮಕಾಲೀನತೆಯ ಬಗೆಗೆ ಆರ್.ಸಿ.ಮಜುಮದಾರರು ಗ್ರಿಯರ್ಸನ್ ಮತ್ತು ಇತರರನ್ನು ಆಧರಿಸಿ ಮಾಡಿರುವ ಸೂಚನೆಯಾದರೊ ಅಸಮರ್ಥನೀಯವಾಗಿದ್ದು ಸ್ವೀಕರಿಸುವಂತಿಲ್ಲ. ತುಘಲಕರು ತಿರಹತ್ ಅನ್ನು ಸ್ವಾಧೀನಪಡಿಸಿಕೊಂಡುದನ್ನು ಕರ್ಣಾಟರು ಸುಮ್ಮನೆ ಕುಳಿತು ಸ್ವೀಕರಿಸಲಿಲ್ಲವೆಂಬುದು ನಿಜವಿದೆ ಮತ್ತು ಚಂಪಾರಣದಲ್ಲಿ ಆಳುತ್ತಿದ್ದ ಹರಿಸಿಂಹದೇವನ ವಂಶಜರು ಪ್ರತಿಭಟಿಸುವ ಸ್ಥಿತಿಯಲ್ಲಿರುವ ವರೆಗೂ ಪ್ರತಿಭಟಿಸಿದರು. ಆದುದರಿಂದ, ಈ ನೃಸಿಂಹದೇವನು ಹರಿಸಿಂಹದೇವನ ಅನಂತರದ - ಯಾವುದೆ ಪಕ್ಷದಲ್ಲೂ ಮುಂಚಿನವನಲ್ಲ - ಸ್ಥಳೀಯ ಕರ್ಣಾಟ ಅರಸನೆಂದು ಗ್ರಹಿಸಬೇಕು. ಲಕ್ಷ್ಮಣ ಸಂವತ್ ೨೧೨ರ ಹವಿದಿಯ ಶಾಸನವು ಬಹುಶಃ ಈ ಅರಸನಿಗೆ ಸಂಬಂಧಿಸಿದ್ದು,[8] ಕೆಲವು ವಿದ್ವಾಂಸರು ಸೂಚಿಸಿರುವಂತೆ ಮೂರನೆಯ ಕರ್ಣಾಟ ಅರಸ ನರಸಿಂಹದೇವನದಲ್ಲ ಎಂದು ಊಹಿಸುವುದು ಅತಿಶಯವೇನಲ್ಲ.

*ಸುಧೀಕಲ್ಪತರು* ಎಂಬ ಗ್ರಂಥದಲ್ಲಿ, ರಾಮಸಿಂಹದೇವನು ಕ್ರಿ.ಶ. ಜನವರಿ ೧, ೧೩೯೦ಕ್ಕೆ ಸರಿಹೊಂದುವ ಸಂವತ್ ೧೪೪೭ ರಲ್ಲಿ ಪುಷ್ಯ ಮಾಸದ ಶುಕ್ಲಪಕ್ಷದ ೧೪ ರಂದು (ಅಂದು ಶನಿವಾರ) ಮಿಥಿಲೆಯನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಈ ಪ್ರಮಾಣವನ್ನು ಆಧರಿಸಿ, ಕ್ರಿ.ಶ. ಹದಿನಾಲ್ಕನೆಯ ಶತಮಾನದ ದ್ವಿತೀಯಾರ್ಧದಲ್ಲಿ ರಾಮಸಿಂಹದೇವನೆಂಬವನು ಮಿಥಿಲೆಯ ಅರಸನಾಗಿದ್ದನೆಂದು ನಾವು ದೃಢವಾಗಿ ಹೇಳಬಹುದು. ಅವನು ನಾನ್ಯದೇವನಿಂದ ನಾಲ್ಕನೆಯವನಾಗಿ ಇಳಿದುಬಂದ ರಾಮಸಿಂಹದೇವನಲ್ಲ ಎಂದು ಗ್ರಹಿಸಬೇಕು. ಅಂತ್ಯಪ್ರಶಸ್ತಿಯಲ್ಲಿ ಕಂಡುಬರುವಂತೆ ಅವನು ಮಹಾನೃಪತಿಯಾಗಿದ್ದರೆ ಧರ್ಮಸ್ವಾಮಿ ಉಲ್ಲೇಖಿಸುವ ಅದೇ ಹೆಸರಿನವನನ್ನು ಪುಣ್ಯಾವಲೋಕ 'ಮಹಾರಾಜಾಧಿರಾಜ ಮಿಥಿಲಾಧಿಪತಿ' ಎಂದು ಕರೆಯಲಾಗಿದೆ.[9] ಇವೆಲ್ಲ ಪ್ರಮಾಣಗಳ ಸೂಕ್ಷ್ಮಾವಲೋಕನದಿಂದ ಅನಿಸುವುದೇನೆಂದರೆ, ಈ ಇಮ್ಮಡಿ ರಾಮಸಿಂಹದೇವನು (ನೋಡಿರಿ, *ಸುಧೀಕಲ್ಪತರು* ಹಸ್ತಪ್ರತಿ) ತಿರಹತ್‌ನ ಕೆಲವು ಭಾಗಗಳಲ್ಲಿ ಸ್ಥಳೀಯ ದೊರೆಯಾಗಿದ್ದು ಅವನು ಹರಿಸಿಂಹದೇವನ ನಂತರದವನಾಗಿದ್ದನಲ್ಲದೆ ಮುಂಚಿನವನಲ್ಲ. ಯು.ಠಾಕೂರರು ಕಾಲಾನುಕ್ರಮಣಿಯ ಬಗೆಗೆ ಗೊಂದಲ ಮಾಡಿಕೊಂಡಿದ್ದಾರೆ.[10] ಎಸ್.ಎಚ್.ಅಸ್ಕರಿ ಕಾಲವನ್ನು ಚರ್ಚಿಸಿಯೇ ಇಲ್ಲ.[11] ನರಸಿಂಹದೇವ ಅಥವಾ ಇಮ್ಮಡಿ ನೃಸಿಂಹದೇವನಂತೆಯೆ, ಈ ರಾಮಸಿಂಹದೇವನನ್ನು - ಈ ಹಸ್ತಪ್ರತಿಯಲ್ಲಿ ಸೂಚಿತವಾಗಿರುವ ದಿನಾಂಕಗಳನ್ನು ಗಮನಿಸದೆ - ಮೊದಲಿನ ರಾಮಸಿಂಹದೇವನೆಂದು ತಪ್ಪು ತಿಳಿಯಲಾಗಿದೆ. ಹರಿಸಿಂಹದೇವನ ಉತ್ತರಾಧಿಕಾರಿಗಳು ವೈರಿಗಳೊಂದಿಗೆ ಕ್ರಿ.ಶ. ೧೩೭೭-೭೮ರ ವರೆಗೆ ಕಾದಾಡುವಲ್ಲಿ ಯಶಸ್ವಿಯಾದರು ಮತ್ತು ನೃಸಿಂಹದೇವ ಮತ್ತು ರಾಮಸಿಂಹದೇವನಂಥ ಸ್ಥಳೀಯ ದೊರೆಗಳು ಬಹಳ ಸೀಮಿತ ಪ್ರದೇಶವನ್ನಾಳಿದರು.

ಮಧುಸೂದನ ಠಾಕೂರರ *ಕೂಟಕೋದ್ಧಾರ* ಹಸ್ತಪ್ರತಿಯು (ಲಕ್ಷ್ಮಣ ಸಂವತ್ ೪೯೧ರ, ಏಶಿಯಾಟಿಕ್ ಸೊಸೈಟಿಯ ನಂ. ೧೪೩೯ ಹಸ್ತಪ್ರತಿಯ ಪಾನು ನಂ. ೧೨೦ಎ - ಮಿಥಿಲೆಯ ವಿಕ್ರಮಪುರದಲ್ಲಿ ಪ್ರತಿ ಮಾಡಿದ್ದು) ಮತ್ತು ತಂಜಾವೂರಿನಲ್ಲಿರುವ ಅದರ ಎರಡು ಅವಶಿಷ್ಟಗಳು[12] ಕ್ರಿ.ಶ. ಹದಿಮೂರನೆಯ ಶತಮಾನದಲ್ಲಿ ಮಿಥಿಲೆಯಲ್ಲಿದ್ದ ಕರ್ನಾಟ ಅರಸನ ಬಗೆಗೆ ಮಹತ್ವದ ಮಾಹಿತಿ ನೀಡುತ್ತವೆ. ಕರ್ನಾಟ ಚಕ್ರವರ್ತಿ ಮತ್ತು ಭುಜಬಲ ಭೀಮ ಎಂದು ವರ್ಣಿಸಲಾದ ಮಹಾರಾಜಾಧಿರಾಜ ರಾಮರಾಜನ ಆಶ್ರಯದಲ್ಲಿದ್ದುಕೊಂಡು ಮಧುಸೂದನ ಠಾಕೂರನು ಈ ಭಾಷ್ಯವನ್ನು ಬರೆದನು. ಈ ವರ್ಣನೆಯು ಉತ್ಪ್ರೇಕ್ಷಾಪೂರ್ಣ ವೆಂದು ಭಾವಿಸಿದರೂ ರಾಮರಾಜನು ಬಲಶಾಲಿ ಕರ್ನಾಟ ರಾಜನಾಗಿದ್ದನೆಂಬುದನ್ನು ಅಲ್ಲಗಳೆಯಲಾಗದು. ಆರ್.ಕೆ.ಚೌಧರಿ ತಮ್ಮ ಪ್ರಬಂಧ *ದ ಲೇಟರ್ ಕರ್ನಾಟಾಜ್ ಆಫ್ ಮಿಥಿಲಾ*ದಲ್ಲಿ ರಾಮರಾಜನ ಶಾಸನವೊಂದರ ಅಸ್ತಿತ್ವವನ್ನು ಪ್ರಸ್ತಾಪಿಸಿರುವರು. ಆದರೆ, ತಥಾಕಥಿತ ಶಾಸನದಲ್ಲಿ ಹೆಸರಿಸಿದ ಅರಸನೇ ಹಸ್ತಪ್ರತಿಯಲ್ಲಿ ಹೆಸರಿಸಿದ ಅರಸನಾಗಿರುವುದು ಸಂದೇಹಾಸ್ಪದವಾಗಿದೆ. ಏಕೆಂದರೆ, ಇಲ್ಲಿ ಪ್ರಸ್ತಾಪಿಸಲಾದ ಶಾಸನ ಪ್ರಕಟಿತವಾಗಿಲ್ಲ.

ಹಾಗಾಗಿ, ಅದರ ಅಧಿಕೃತತೆ ಸಂದಿಗ್ಧವಾಗಿದೆ. ಮುದಿತಕುವಲಾಯಸ್ವದಲ್ಲಿ ಇನ್ನೊಬ್ಬ ಕರ್ನಾಟ ಅರಸ ಕರಮುಸಿಂಹದೇವನ ಉಲ್ಲೇಖವಿದೆ. ಆದರೆ, ಅವನಾರೆಂಬುದು ಅಸ್ಪಷ್ಟತೆಯಲ್ಲಿ ಹುದುಗಿದೆ. ಕ್ರಿ.ಶ. ಹದಿನೈದನೆಯ ಶತಮಾನದಲ್ಲಿ ನಾಲ್ಕು ಬೇರೆ ಬೇರೆ ರಾಜವಂಶಗಳು ಮಿಥಿಲೆಯನ್ನಾಳುತ್ತಿದ್ದುದು ಕಂಡುಬರುತ್ತದೆ. ಅವೆಂದರೆ:

೧. ರಾಜಾ ಪೃಥ್ವೀಸಿಂಹದೇವ ಅಥವಾ ಶಕ್ತಿಸಿಂಹದೇವ ಮತ್ತು ಮದನಸಿಂಹದೇವ ರಂಥ ಉತ್ತರಾಧಿಕಾರಿಗಳು ಚಂಪಾರಣವನ್ನಾಳುತ್ತಿದ್ದರು. ಮದನಸಿಂಹದೇವನು ತನ್ನ ಭೂಪ್ರದೇಶವನ್ನು ಗೋರಖಪುರದವರೆಗೆ ವಿಸ್ತರಿಸಿದನು ಮತ್ತು *ಮದನರತ್ನಪ್ರದೀಪದ* ಕರ್ತೃವಾಗಿದ್ದನು. ಈ ಅರಸರು ಹರಸಿಂಹದೇವನ ವಂಶಜರೆಂದು ಲೆವಿ ಪರಿಗಣಿಸುತ್ತಾರೆ.

೨. ಮಿಥಿಲೆಯ ಕೇಂದ್ರಭಾಗವು ಆಯಿನ್ವಾರರ ನೇರ ವಶದಲ್ಲಿತ್ತು. ಅವರು ಮುಜಫ್ಫರಪುರ ಜಿಲ್ಲೆಯ ಗ್ರಾಮವಾದ ಆಯಿನಿಯಿಂದ ಕನಿಷ್ಠ ಪಕ್ಷ ಸಹರ್ಸಾ ಜಿಲ್ಲೆಯ ಕಂದಹಾವರೆಗೆ ಆಳುತ್ತಿದ್ದರು. ಅಲ್ಲಿ ನರಸಿಂಹದೇವ ಆಯಿನ್ವಾರನ ಶಾಸನವೊಂದು ದೊರೆತಿದೆ.

೩. ಆಯಿನ್ವಾರರು ಗಂಡಕ ನದಿಯ ಉತ್ತರ ಭಾಗವನ್ನಾಳುತ್ತಿದ್ದರೆ ನದಿಯ ದಕ್ಷಿಣಕ್ಕಿರುವ ಪ್ರದೇಶವು ಬಂಗಾಲದ ಸುಲ್ತಾನನ ಅಧೀನದಲ್ಲಿತ್ತು. ಸುಲ್ತಾನನ ಕೇಂದ್ರಸ್ಥಳ ಹಾಜಿಪುರ ಆಗಿತ್ತು. ಮತ್ತು ಈ ವಿಶಿಷ್ಟ ಪ್ರದೇಶವನ್ನು ಪಶ್ಚಿಮದ ಮುಸ್ಲಿಮ ಅರಸರು ಆಗಾಗ್ಗೆ ಧ್ವಂಸ ಮಾಡುತ್ತಿದ್ದರು. ಸಹರ್ಸಾ - ಹಾಜಿಪುರ ಪ್ರದೇಶದಲ್ಲಿ ಬಂಗಾಲದ ಸುಲ್ತಾನರ ಬಹಳಷ್ಟು ನಾಣ್ಯಗಳನ್ನು ಶೋಧಿಸಲಾಗಿದೆ. ಕುರ್ಸಿಯೋನ್-ನಾದಿಯಾಮಿಯಲ್ಲಿ ಶೋಧಿಸಿದ ನಿಧಿಯು ನಮ್ಮ ಹೇಳಿಕೆಯನ್ನು ದೃಢಪಡಿಸುತ್ತದೆ. ಈ ನಿಧಿಯ ವಿವರನ್ನು ಹಸನ ನಿಶತ ಅನ್ಸಾರಿಯವರು ಪಾಟ್ನಾದ *ಇಂಡಿಯನ್ ನುಮಿಸ್ಮ್ಯಾಟಿಕ್ ಕ್ರಾನಿಕಲ್‌*ನಲ್ಲಿ ಇತ್ತೀಚಿಗೆ ಪ್ರಕಟಿಸಿದ್ದಾರೆ. ತಮ್ಮ ಅಸ್ತಿತ್ವ ಅಸ್ಥಿರವಾಗಿದ್ದರೂ ಆಯಿನ್ವಾರರು ತಮ್ಮ ಸ್ವಾತಂತ್ರ್ಯ ಕಾಪಾಡುವಲ್ಲಿ ಯಶಸ್ವಿಯಾದರು.

೪. ಕೊನೆಯದಾಗಿ, ಅಳಿದುಳಿದ ಕರ್ನಾಟರಿದ್ದರು. ಅವರು ಭೌರಾದ ಆಸುಪಾಸಿನಿಂದ ಸಹರ್ಸಾ ಜಿಲ್ಲೆಯ ಮಾಧೆಪುರ ಉಪವಿಭಾಗದ ಬರಂತಪುರ ಗಡಿಯವರೆಗೆ ವಿಸ್ತರಿಸಿದ್ದ ಮಿಥಿಲೆಯ ಈಶಾನ್ಯ ಅಂಚಿನಲ್ಲಿ ಆಳುತ್ತಿದ್ದರು. ಸರ್ವಸಿಂಹದೇವನ ಶಾಸನವೊಂದು ಅಲ್ಲಿ ದೊರೆತಿದೆ.

ಹೀಗೆ, ಕರ್ನಾಟರ ಪತನಾನಂತರ ಮಿಥಿಲೆಯಲ್ಲಿ ರಾಜಕೀಯ ಅಸ್ಥಿರತೆಯ ಕಾಲ ಆರಂಭವಾಯಿತು. ಪೂರ್ವ ಮತ್ತು ಪಶ್ಚಿಮದ ಮಹತ್ವಾಕಾಂಕ್ಷಿ ಶಕ್ತಿಗಳು ಕದಡಿದ ನೀರಿನ ಪ್ರಯೋಜನ ಪಡೆಯದೆ ಬಿಡಲಿಲ್ಲ. ಕರ್ನಾಟರ ಆಳ್ವಿಕೆಯಲ್ಲಿ ಇದ್ದ ಮಿಥಿಲೆಯ ವೈಭವ ಈಗ ಕಳೆದುಹೋಗಿತ್ತು. ಅದನ್ನು ಮರಳಿ ಸ್ಥಾಪಿಸಲು ಹರಿಸಿಂಹದೇವನ ಉತ್ತರಾಧಿಕಾರಿಗಳು

ಏನೇ ಪ್ರಯತ್ನ ಮಾಡಿದರೂ ಅದಕ್ಕಿಂತ ಮುಂಚೆ ಅಲ್ಲದಿದ್ದರೂ ಕ್ರಿ.ಶ. ಹದಿನಾರನೆಯ ಶತಮಾನದ ನಂತರ ಕರ್ನಾಟರು ಇತರೆಲ್ಲ ರಾಜವಂಶಗಳಂತೆಯೆ ಇತಿಹಾಸದಿಂದ ನಿರ್ಗಮಿಸಿದರು.

ಇಂತು, ಮಿಥಿಲೆಯಲ್ಲಿ ಎರಡೂಕಾಲು ಶತಮಾನ ಆಳಿದ ಹಾಗೂ ನೇಪಾಳ ಕೊಳ್ಳವನ್ನು ಸುಮಾರು ಒಂದು ಶತಮಾನ ಕಾಲ ನೇರವಾಗಿ ಆಳಿದ ಪ್ರಖ್ಯಾತ ಕರ್ನಾಟ ರಾಜವಂಶವು ಉತ್ತರ ಭಾರತದ ರಾಜಕೀಯ ರಂಗದಿಂದ ಹೀನಾಯವಾಗಿ ಮತ್ತು ದುರಂತಮಯವಾಗಿ ನಿರ್ಗಮಿಸಿತು. ಆದರೆ, ಈ ರಾಜವಂಶದ ಆಳ್ವಿಕೆಯು ಕಾಲನ ಮರಳಿನ ಮೇಲೆ ಅಳಿಸಲಾರದ ಹೆಜ್ಜೆಗುರುತುಗಳನ್ನು ಬಿಟ್ಟುಹೋಗಿದೆ.

ಕರ್ನಾಟರ ಪತನಾನಂತರವೂ, ನರಳುತ್ತಿರುವ ಅವಶೇಷಗಳು ಮತ್ತು ಪಾಳುಬಿದ್ದ ಅರಮನೆಗಳು "ಉತ್ತರ ಭಾರತದಲ್ಲಿ ಮುಸ್ಲಿಮ ಮತಾಂಧತೆ ಮತ್ತು ಹಿಂದೂ ಪ್ರತೀಕಾರಗಳ ಮಧ್ಯೆ ಜರುಗಿದ ಐದು ಶತಮಾನಗಳ ನಿರಂತರ ಹೋರಾಟದ" ಜೀವಂತ ಕತೆಗಳಾಗಿವೆ.

**ಟಿಪ್ಪಣಿಗಳು**

1. JASB IV p. 121.
2. Perceival London, *Nepal.* Vol. I pp. 37-39. Rahul Sankrityayana, *Nepal* (Unpublished) Cf. R.K. Choudhury, *Bihar and Nepal.* G.D. College Bulletin. No. 4. Also Cf. R.K. Choudhury, *History of Bihar,* p. 111 ff.
3. HCIP, Vol. VI p. 418; JBRS, Vol. LXVI pp. 16-26. Cf. (*The later Karnatas of Mithila and Nepal,* R.K. Choudhury).
4. Current Studies, 1954. p. 12-13. *N.K. Bhattasali Commemoration Volume,* pp. 199-204. *History of Muslim Rule in Tirhut,* Cf. R.K. Choudhury.
5. JIH, Vol. XXXIV p. 323.
6. RR, p. 20.
7. HCIP, Vol. VI p. 403.
8. *Inscriptions of Bihar,* p. 125.
9. Weber's Berlin Catalogue, p. 161.
10. U. Thakur TM, p. 268. ff.
11. CS, (1954), Op. cit.
12. *Tanjaore Catalogue,* pp. 433-37. Cf. ST, p. 147.

❑❑

# ೧೦

# ಕರ್ನಾಟರ ಆಳ್ವಿಕೆಯಲ್ಲಿ ಮಿಥಿಲೆಯ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆ

## ಆಡಳಿತ ವ್ಯವಸ್ಥೆ

ಮಿಥಿಲೆಯ ಇತಿಹಾಸದಲ್ಲಿ ಕರ್ನಾಟ ಕಾಲಘಟ್ಟವು ಸ್ಮರಣಾರ್ಹ ಯುಗವೆಂದು ಪರಿಗಣಿತವಾಗಿದೆ. ಈ ಕಾಲಘಟ್ಟದ ವಿವಿಧ ಅಂಶಗಳ ಸಂಪೂರ್ಣ ಇತಿಹಾಸ ರಚಿಸುವ ಪ್ರಯತ್ನದಲ್ಲಿ ಆಧಾರಸಾಮಗ್ರಿಯ ಕೊರತೆ ಅಡ್ಡಿಪಡಿಸುತ್ತದೆ. ಈ ಕಾಲಘಟ್ಟದ ಆಡಳಿತಾತ್ಮಕ ಇತಿಹಾಸದ ಬಗೆಗೂ ಇಂಥದೇ ತೊಂದರೆ ಎದುರಾಗುವುದು. ಕರ್ನಾಟ ಕಾಲಘಟ್ಟದ ಎರಡೇ ಎರಡು ಶಾಸನಗಳಿವೆ. ಆದರೆ, ಅವು ಕರ್ನಾಟರ ಆಡಳಿತ ವ್ಯವಸ್ಥೆಯ ಮೇಲೆ ಯಾವ ಬೆಳಕನ್ನೂ ಚೆಲ್ಲುವುದಿಲ್ಲ. ಕರ್ನಾಟರಿಗೆ ಏನೇನೂ ಸಂಬಂಧ ಹೊಂದಿರದಿದ್ದರೂ ಪಾಂಭೋಭ ತಾಮ್ರಪಟವು ಮಹತ್ವದ ಆಡಳಿತಾಧಿಕಾರಿಗಳ ವ್ಯಾಪಕ ಪಟ್ಟಿಯನ್ನು ನೀಡುತ್ತದೆ. ಈ ಅಂಶಗಳ ಬಗೆಗಿನ ಹೆಚ್ಚಿನ

ವಿವರಗಳಿಗೆ ನಾವು *ಸ್ಮೃತಿಗಳು* ಮತ್ತು *ನಿಬಂಧಗಳನ್ನೇ* - ಅಂದರೆ, ಲಕ್ಷ್ಮೀಧರ ಭಟ್ಟನ *ರಾಜನೀತಿ ಕಲ್ಪತರು*, ಗೋಪಾಲನ *ರಾಜನೀತಿ ಕಾಮಧೇನು* ಮತ್ತು ಚಾಂಡೇಶ್ವರನ ಹಲವು *ರತ್ನಾಕರಗಳು* - ಪೂರ್ತಿಯಾಗಿ ಅವಲಂಬಿಸಬೇಕಿದೆ. ಕರ್ನಾಟರ ಆಳ್ವಿಕೆಯಲ್ಲಿದ್ದ ಆಡಳಿತ ವ್ಯವಸ್ಥೆಯ ಸಂಪೂರ್ಣ ಮತ್ತು ವೈಜ್ಞಾನಿಕ ಅಧ್ಯಯನಕ್ಕೆ ಇವೇ ಮೂಲ ಆಕರಗಳು.

ಚಾಂಡೇಶ್ವರನ ಬೇರೆ ಬೇರೆ *ರತ್ನಾಕರಗಳು* ಈ ಕಾಲಘಟ್ಟದಲ್ಲಿದ್ದ ಜೀವನದ ನಾನಾ ಬಗೆಯ ಅಂಶಗಳನ್ನು ಬಣ್ಣಿಸುತ್ತವೆ. ಕರ್ನಾಟ ಅರಸರ ಆಳ್ವಿಕೆಯಲ್ಲಿ ಮಿಥಿಲೆಯಲ್ಲಿದ್ದ ವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಲಿಕ್ಕೂ ಚಾಂಡೇಶ್ವರನ *ರಾಜನೀತಿ ರತ್ನಾಕರವನ್ನೆ* ಹೆಚ್ಚಾಗಿ ಅವಲಂಬಿಸಬೇಕು. *ರಾಜನೀತಿ ರತ್ನಾಕರದ* ಅಂಶಗಳನ್ನೆಲ್ಲ ಸೂಕ್ಷ್ಮಾವಲೋಕಿಸಿದಾಗ ಆಡಳಿತದ ಇತರ ಅಂಶಗಳೂ ಅನುಸರಿಸಿ ಬರುತ್ತವೆ. ವಿದ್ಯಾಪತಿಯ ವಿವಿಧ ಗ್ರಂಥಗಳು ಸಹ - *ಪುರುಷಪರೀಕ್ಷ*, *ಲಿಖನಾವಲಿ* ಮತ್ತು *ಕೀರ್ತಿಲತಾ* - ಮಿಥಿಲೆಯ ಕರ್ನಾಟರ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯ ಮೇಲೆ ಸ್ವಾರಸ್ಯಕರ ಬೆಳಕು ಚೆಲ್ಲುತ್ತವೆ. ಚಾಂಡೇಶ್ವರನಂತೆಯೆ ವಿದ್ಯಾಪತಿಯೂ ಮಹತ್ವದ ವಿವರಗಳನ್ನು ಒದಗಿಸುವಲ್ಲಿ ಪಕ್ವ ವಿವೇಚನೆ ಮತ್ತು ಪರಿಣತಿ ತೋರಿದ್ದಾನೆ. ಆ ವಿವರಗಳು ಪ್ರಸಕ್ತ ಕಾಲಘಟ್ಟದ ಮಿಥಿಲೆಯ ಇತಿಹಾಸದ ಈ ಅಂಶವನ್ನು ಪುನಾರಚಿಸುವಲ್ಲಿ ಸಹಾಯಕವಾಗಿವೆ.

ಕರ್ನಾಟರ ಆಗಮನಕ್ಕಿಂತ ಹಿಂದೆ ಮಿಥಿಲೆಯು ಪಾಲ ಆಡಳಿತದ ಮಹತ್ವದ ಕೇಂದ್ರವಾಗಿತ್ತು. ತಿರಭುಕ್ತಿಯು ಪಾಲರ ಜಯಸ್ಕಂಧವಾರಗಳಲ್ಲೊಂದಾಗಿತ್ತು. ಸ್ಥಳೀಯ ಸ್ಥಿತಿಗಳು ಮತ್ತು ಸಂದರ್ಭಗಳನ್ನು ಅನುಲಕ್ಷಿಸಿ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಂಡರಾದರೂ ಕರ್ನಾಟರು ಪಾಲರ ಮತ್ತು ಸೇನರ ಮಾದರಿಯನ್ನನುಸರಿಸಿ ತಮ್ಮ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡುದು ಅಸಂಭವವೇನಲ್ಲ. ರಾಜಕೀಯ ವಿಚಾರಗಳು ಮತ್ತು ಚಿಂತನೆಗೆ ಚಾಂಡೇಶ್ವರನ ಕೊಡುಗೆಯನ್ನು ಮಿಥಿಲೆಯಲ್ಲಿ ಯಾರೂ ಅಲ್ಲಗಳೆಯಲಾರರು. ಅವನ *ರಾಜನೀತಿ ರತ್ನಾಕರದಲ್ಲಿ* ಹದಿನಾರು ಅಧ್ಯಾಯಗಳಿದ್ದು ಈ ಕೆಳಗಿನ ವಿಷಯಗಳನ್ನು ಸುದೀರ್ಘವಾಗಿ ಚರ್ಚಿಸಲಾಗಿದೆ: ಅರಸೊತ್ತಿಗೆ, ಮಂತ್ರಿಗಳು, ಧರ್ಮಮಂತ್ರಿಗಳು, ಪ್ರಧಾನ ನ್ಯಾಯಾಧೀಶ, ಸಭಾಸದರು, ಕೋಟೆ, ನೀತಿಯ ಚರ್ಚೆ, ಭಂಡಾರ, ಸೈನ್ಯ, ಮಹಾದಂಡನಾಯಕ, ರಾಯಭಾರಿಗಳು, ಆಡಳಿತ, ಕಾರ್ಯ ನಿರ್ವಹಣಾಧಿಕಾರ, ದಂಡನೆ, ಸಿಂಹಾಸನತ್ಯಾಗ, ಧರ್ಮ ಮಂತ್ರಿಯಿಂದ ಹೊಸ ಅರಸನ ನಿಯುಕ್ತಿ ಮತ್ತು ಪಟ್ಟಾಭಿಷೇಕ ಇತ್ಯಾದಿ. ಮೇಲ್ಕಾಣಿಸಿದ *ರಾಜನೀತಿ ರತ್ನಾಕರದ* ವಿಷಯಾನುಕ್ರಮಣಿಕೆಯು ಮಿಥಿಲೆಯ ಕರ್ನಾಟರ ಆಡಳಿತ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳಲು ಸಹಾಯಕವಾಗಿದೆ. ಚಾಂಡೇಶ್ವರನ *ರಾಜನೀತಿ ರತ್ನಾಕರವು* ಕರ್ನಾಟರ ಆಡಳಿತೇತಿಹಾಸವನ್ನು ವಿವರಿಸುವ ಆದಿಪರಿಶೋಧಕ ಗ್ರಂಥವಾಗಿರುವುದಾದರೂ ಜ್ಯೋತಿರೀಶ್ವರನ *ವರ್ಣನ ರತ್ನಾಕರವೂ* ಆಡಳಿತ ವ್ಯವಸ್ಥೆಯ ಇಣುಕುನೋಟ ಒದಗಿಸುತ್ತದೆ. *ವರ್ಣನರತ್ನಾಕರದಲ್ಲಿ* ಆಸ್ಥಾನ ಜೀವನದ ವಿವಿಧ ಅಂಶಗಳನ್ನು ವರ್ಣಿಸಲಾಗಿದೆ. ಅದರಲ್ಲಿ ಆಡಳಿತಾಧಿಕಾರಿಗಳ ವ್ಯಾಪಕ ಪಟ್ಟಿಯನ್ನೂ ಕೊಡಲಾಗಿದೆ.

*ವರ್ಣನರತ್ನಾಕರವು* ಅನೇಕ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತ ಕೆಳಕಂಡ ಅಧಿಕಾರಿಗಳನ್ನು ಪಟ್ಟಿಸುತ್ತದೆ: ಭೂಪಾಲ, ಮಾಂಡಲಿಕ, ಸಾಮಂತ, ಸೇನಾಪತಿ, ಪುರಪತಿ, ಮಂತ್ರಿ, ಪುರೋಹಿತ, ಧರ್ಮಾಧಿಕರಣ, ಸಂಧಿವಿಗ್ರಹಿಕ, ಮಹಾಮಟ್ಟಕ, ಪ್ರತಿಬಲ್ಲ ಕರಣಾಧ್ಯಕ್ಷ, ಶಾಂತಿಕರ್ಣಿಕ, ರಾಜಗುರು, ದುರ್ಗಪಾಲ ಮತ್ತಿತರ ಅನೇಕರು. *ವರ್ಣನರತ್ನಾಕರದಲ್ಲಿ* ಪಟ್ಟಾಭಿಷೇಕ ಸಮಾರಂಭವನ್ನು ಸವಿವರವಾಗಿ ಚರ್ಚಿಸಲಾಗಿದೆ. *ವರ್ಣನರತ್ನಾಕರದಲ್ಲಿ* ಕಂಡುಬರುವ ಅಧಿಕಾರಿಗಳು ಮತ್ತು ಆಸ್ಥಾನಿಕರ ಪಟ್ಟಿಯೂ ಅಂಥ ಯಾವುದೇ ಸಮಕಾಲೀನ ಪಟ್ಟಿಗಿಂತ ಉದ್ದವಾಗಿರುವುದನ್ನು ವಿದ್ವಾಂಸರು ಒಪ್ಪುವರು. ಹೀಗೆ, *ರಾಜನೀತಿ ರತ್ನಾಕರ* ಮತ್ತು *ವರ್ಣನರತ್ನಾಕರ* ಒಂದಕ್ಕೊಂದು ಪೂರಕವಾಗಿವೆ. ಈ ಕಾಲಾವಧಿಯಲ್ಲಿ ಹೆಸರುಗಳು ಮತ್ತು ಪದಪ್ರಯೋಗದಲ್ಲಿ ಬದಲಾವಣೆಯಾದುದು ಸ್ಪಷ್ಟವಿದೆ ಮತ್ತು ಇಲ್ಲಿ ಚಾಂದೇಶ್ವರನು 'ಅರ್ಥಶಾಸ್ತ್ರ' ಅಥವಾ 'ದಂಡನೀತಿ' ಯಂಥ ಪದಗಳ ಬದಲು 'ರಾಜನೀತಿ' ಪದವನ್ನು ಆಯ್ದುಕೊಂಡಿರುವನು. ರಾಜಕೀಯವನ್ನು ಚರ್ಚಿಸುವ ಗ್ರಂಥವೊಂದನ್ನು ನಾರದನಿಗೆ ಆರೋಪಿಸಲಾಗಿದೆ ಎಂಬ ಸಂಗತಿಯನ್ನು *ರಾಜನೀತಿ ರತ್ನಾಕರವು* ಮುಂದುವರಿದು ಸೂಚಿಸುತ್ತದೆ. *ರಾಜನೀತಿ* ಎಂಬ ಗ್ರಂಥದಿಂದ ಚಾಂದೇಶ್ವರನೂ ಪದೇಪದೇ ಉದ್ಧರಿಸುತ್ತಾನೆ. ಕೆ.ಪಿ. ಜಯಸ್ವಾಲರು ಹೀಗೆ ಸರಿಯಾಗಿಯೆ ಎತ್ತಿತೋರಿಸಿರುವರು: "ಹೀಗೆ, *ರತ್ನಾಕರವು ರಾಜಕೀಯ ಸಾಹಿತ್ಯದ* ಇತಿಹಾಸದಲ್ಲಿ ಬೆಲೆಯುಳ್ಳದ್ದಾಗಿದೆ ಮತ್ತು ಹಿಂದೂ ಕಾಲಘಟ್ಟದ ಅಂತ್ಯ ಮತ್ತು ಮಹಮ್ಮದೀಯ ಕಾಲಘಟ್ಟದ ಆರಂಭದಲ್ಲಿ ಪ್ರಚಲಿತವಿದ್ದ ಮಾದರಿಗಳೂ ಅಧಿಕ ಮಹತ್ವದವುಗಳಾಗಿವೆ... ಆಸಕ್ತಿಯ ಕೊರತೆಯಾಗಲಿ ಸಂಪೂರ್ಣ ವಿವೇಚನಾರಾಹಿತ್ಯವಾಗಲಿ ಕಂಡುಬರುವುದಿಲ್ಲ."[1] *ರಾಜನೀತಿ ರತ್ನಾಕರ* ಮತ್ತು *ವರ್ಣನ ರತ್ನಾಕರಗಳಲ್ಲಿ* ಲಭ್ಯವಿರುವ ಆಧಾರದ ಮೇಲೆ ಆ ಕಾಲಘಟ್ಟದ ಆಡಳಿತಾತ್ಮಕ, ಸಾಮಾಜಿಕ ಮತ್ತು ಆರ್ಥಿಕ ಇತಿಹಾಸದ ಕೆಲವು ಇಣುಕುನೋಟಗಳು ದೊರೆಯುತ್ತವೆಂಬುದನ್ನು ಇವೆಲ್ಲ ವಿವರಗಳು ಸಿದ್ಧಪಡಿಸುವವು. ಈ ದಸ್ತವೇಜುಗಳ ಆಧಾರ ಬಲದಿಂದ ಈ ಕಾಲಘಟ್ಟದ ಸಂಗತಿಗಳಾಧಾರಿತ ಸರಿಸುಮಾರು ಇತಿಹಾಸ ರಚಿಸಲು ಯತ್ನಿಸಬಹುದು. ಅಂದರೆ, ಕರ್ನಾಟ ಕಾಲಘಟ್ಟದ ಆಡಳಿತ ಮತ್ತು ಅದರ ಬೇರೆ ಬೇರೆ ಮಗ್ಗಲುಗಳ ವರ್ಣನೆಯನ್ನು ಹೀಗೆ ನೀಡಬಹುದು.

### ಅರಸ

ಅರಸನು ಆಡಳಿತದ ಶಿಖರವಾಗಿದ್ದನು. ಮನುವಿನ ಆಧಾರವನ್ನನುಸರಿಸಿ ರಾಜನ ದೈವತ್ವದ ಬಗೆಗೆ ಚಾಂದೇಶ್ವರನು ನಮ್ಮ ಗಮನ ಸೆಳೆದಿರುವನು. ರಾಜನು ಭೂಲೋಕದಲ್ಲಿ ದೇವರ ಅವತಾರವಾಗಿದ್ದನೆಂದು *ರಾಜನೀತಿ ರತ್ನಾಕರ* (ಪುಟ ೭೮) ಸಾರುತ್ತದೆ. ಸಂವೈಧಾನಿಕ ವಿಷಯಗಳಲ್ಲಿ ತನ್ನ ಅಭಿಪ್ರಾಯ ನೀಡುವ ಅಧಿಕಾರ ಧರ್ಮಮಂತ್ರಿಗಿತ್ತು. ರಾಜನ ಪಟ್ಟಾಭಿಷೇಕವನ್ನು ವೈದಿಕ ವಿಧಿಗಳನುಸಾರ ಮಾಡಲಾಗುತ್ತಿತ್ತು (ಪುಟ ೭೦ - ೭೪). ಪಟ್ಟಾಭಿಷೇಕದಲ್ಲಿ ಮಂತ್ರಿಗಳ ಪಾತ್ರ ಮಹತ್ವದ್ದಾಗಿತ್ತು. ದುರ್ಬಲ ಅಥವಾ ವೃದ್ಧ ಅರಸನು

ಅಧಿಕಾರ ತ್ಯಜಿಸಿ ವಿರಕ್ತ ಜೀವನ, ತಪಸ್ಸು ಮತ್ತು ಮೋಕ್ಷಗಳ ಗುರಿಯತ್ತ ಸಾಗಬೇಕೆಂಬ ವಿಚಾರವನ್ನು ಚಾಂದೇಶ್ವರನು ಪ್ರತಿಪಾದಿಸುತ್ತಾನೆ. ಚಾಂದೇಶ್ವರನು ಸೂಚಿಸಿರುವಂತೆ, ದೇಶವೆ ದೇವರೆಂದು ಪಟ್ಟಾಭಿಷೇಕ ಪ್ರತಿಜ್ಞೆ ವಿಧಿಸುತ್ತದೆ ಮತ್ತು ದೇಶವನ್ನು ಸಂರಕ್ಷಿಸಬೇಕಾದ ಅರಸನು ಅಂತೆಯೆ ಆ ಪ್ರತಿಜ್ಞೆಯನ್ನು ಪಾಲಿಸಬೇಕು. ಚಾಂದೇಶ್ವರನ ಪ್ರಕಾರ, ತನ್ನ ಪ್ರಜೆಗಳನ್ನು ಸಂರಕ್ಷಿಸುವವನೇ ರಾಜ (*ರಾಜನೀತಿ ರತ್ನಾಕರ,* ಪುಟ ೨). ರಾಜಧರ್ಮವೆಂದರೆ ''ಪ್ರಜೆಗಳ ಸಂರಕ್ಷಣೆ ಮತ್ತು ಹಿತಸಂವರ್ಧನೆ'' ಎಂದು ಅವನು ವ್ಯಾಖ್ಯಾನಿಸುತ್ತಾನೆ (*ರಾಜನೀತಿ ರತ್ನಾಕರ,* ಪುಟ ೧). ರಾಜ್ಯದ ಅಖಂಡತೆ ಅವನ ರಾಜನೀತಿಯ ಮೂಲ ತತ್ವಗಳಲ್ಲೊಂದು ಮತ್ತು ''ನಾಯಕತ್ವ ಒಡೆದರೆ ರಾಜ್ಯ ನಾಶವಾಗುವುದು'' ಎಂದು ಚಾಂದೇಶ್ವರ ಹೇಳುವುದು ಕಂಡುಬರುತ್ತದೆ (ಪುಟ ೭೨). ಅವನ ಅಭಿಪ್ರಾಯದಲ್ಲಿ, ರಾಜನ ಆಸ್ತಿಯೆಂದರೆ ಪ್ರಜೆಗಳ ಒಟ್ಟು ಆಸ್ತಿಯೆ (ಪುಟ ೭೨). ಚಾಂದೇಶ್ವರನು ಪ್ರಜಾಹಿತಕಾರಿ ಅರಸೊತ್ತಿಗೆಯ ತೀಕ್ಷ್ಣ ಸಮರ್ಥಕನಾಗಿದ್ದನು ಮತ್ತು ರಾಜನು ನ್ಯಾಯಬುದ್ಧಿಯವನೂ ಪ್ರಾಮಾಣಿಕನೂ ಸಾರ್ವಜನಿಕ ಟೀಕಾತೀತನೂ ಆಗಿರಬೇಕು ಎಂಬ ದೃಢಾಭಿಪ್ರಾಯವುಳ್ಳವನಾಗಿದ್ದನು. ರಾಜನು ತನ್ನಂತೆಯ ತನ್ನ ಪ್ರಜೆಗಳನ್ನು ಪ್ರೀತಿಸಬೇಕು. ಅವನು ತನ್ನ ಪ್ರಜೆಗಳನ್ನು ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ ಸಂರಕ್ಷಿಸಬೇಕು ಮತ್ತು ಸಂದಿಗ್ಧ ಪರಿಸ್ಥಿತಿಗಳಲ್ಲಿ ತನ್ನ ರಾಜ್ಯವನ್ನು ಕಾಪಾಡಲು ವಿವೇಕದಿಂದ ವರ್ತಿಸಬೇಕು. ಅವನು ಆಡಳಿತದ ಕೇವಲ ಒಂದೇ ಪ್ರಕಾರದಲ್ಲಿ ಪರಿಣತನಾಗಿರದೆ ಎಲ್ಲ ಪ್ರಕಾರಗಳಲ್ಲೂ ಪ್ರಭುತ್ವ ಹೊಂದಿರಬೇಕೆಂದು ಚಾಂದೇಶ್ವರ ಸೂಚಿಸುವನು.

ಹಾಗೆ ನೋಡಿದರೆ, ಚಾಂದೇಶ್ವರನ ಅಭಿಪ್ರಾಯದಲ್ಲಿ, ರಾಜನು ಅರವತ್ನಾಲ್ಕು ಕಲೆಗಳಲ್ಲೂ ಪಾರಂಗತನಾಗಿರಬೇಕು. ಅವನು ಆಡಳಿತದ ಪ್ರತಿ ರಂಗದಲ್ಲೂ ಪರಿಶ್ರಮವುಳ್ಳವನಾಗಿದ್ದು ರಾಜ್ಯದೊಳಗಡೆ ಮತ್ತು ಹೊರಗಡೆ ಯಾವುದೆ ಸನ್ನಿವೇಶವನ್ನು ಯಶಸ್ವಿಯಾಗಿ ನಿಭಾಯಿಸಬಲ್ಲ ಸಾಮರ್ಥ್ಯವುಳ್ಳವನಾಗಿರಬೇಕು.

ತನ್ನ ಆಡಳಿತ ದಕ್ಷತೆಯ ದೃಷ್ಟಿಯಿಂದ ರಾಜನ ದಿನಚರಿಯೂ ಮಹತ್ವದ್ದು. *ರಾಜನೀತಿ ರತ್ನಾಕರವು* ಅವನ ದೈನಂದಿನ ಚಟುವಟಿಕೆಗಳ ಸವಿವರ ನೋಟವನ್ನು ಒದಗಿಸುತ್ತದೆ: ''ತನ್ನ ದೈನಂದಿನ ವಿಧಿಗಳನ್ನು ಮುಗಿಸಿದ ಬಳಿಕ ಅವನು ಮಧ್ಯಾಹ್ನ ತನ್ನ ಅರಮನೆಗೆ ಹೋಗಬೇಕು. ತಿನ್ನುವ ಪದಾರ್ಥಗಳನ್ನು ತನ್ನ ಸಹಾಯಕರು ಪರೀಕ್ಷಿಸಿದ ಬಳಿಕ ಸೇವಿಸಬೇಕು. ಅಲ್ಪ ವಿಶ್ರಾಂತಿಯ ನಂತರ ತನ್ನ ಅಧಿಕೃತ ಕರ್ತವ್ಯಗಳನ್ನು ನೋಡಿಕೊಳ್ಳಬೇಕು. ಅವನು ಜಿತೇಂದ್ರಿಯನಾಗಿರಬೇಕು. ತನ್ನನ್ನು ದುರ್ಬಲ ಹಾಗೂ ಮೆದುಕನನ್ನಾಗಿಸುವ ವಸ್ತುಗಳನ್ನು ದಿಟ್ಟತನದಿಂದ ಪ್ರೋತ್ಸಾಹಿಸದಿರಬೇಕು. ಅಂದರೆ, ಅವನು ಮಾದಕಗಳು, ಕೋಪ ಮತ್ತು ದುಶ್ಚಟಗಳಿಂದ ದೂರವಿರಬೇಕು. ಅವನು ದಾಕ್ಷಿಣ್ಯಪರನೂ ವಿವೇಚನಾಶೀಲನೂ ಆಗಿರಬೇಕು. ತನ್ನ ಪ್ರಜೆಗಳ ಕಲ್ಯಾಣಕ್ಕಾಗಿ ತನ್ನೆಲ್ಲ ಶಕ್ತಿಯನ್ನು ಉಪಯೋಗಿಸಬೇಕು. ಸಂಪತ್ತು ಸಂಗ್ರಹಿಸುವಲ್ಲಿ ಬಕದ (ಬಾತುಗೋಳಿ) ಗುಣಗಳನ್ನು

ಹೊಂದಿರಬೇಕು. ಶಕ್ತಿ ಕಾಯ್ದುಕೊಳ್ಳುವಲ್ಲಿ ಸಿಂಹದಂತಿರಬೇಕು. ಮುತ್ಸದ್ದಿತನದಲ್ಲಿ ಮೊಲದಂತೆ ಬುದ್ಧಿವಂತನಾಗಿರಬೇಕು. ಮತ್ತು ವೈರಿಯೊಂದಿಗೆ ವ್ಯವಹರಿಸುವಲ್ಲಿ ಕುರಿಯಂತೆ ಪರಿಣಾಮಕಾರಿಯಾಗಿರಬೇಕು. ಕೋಟೆಗಳನ್ನು ಕಟ್ಟಿಸುವ ಮೂಲಕ ಅವನು ತನ್ನ ರಾಜ್ಯವನ್ನು ಸಂರಕ್ಷಿಸುವ ಸರ್ವಪ್ರಯತ್ನ ಮಾಡಬೇಕು. ತನ್ನ ಅಜಾಗರೂಕತೆ ಮತ್ತು ಕ್ಷಣಿಕ ಮೌಲ್ಯದ ವಸ್ತುಗಳ ವ್ಯಾಮೋಹದ ಕಾರಣ ರಾಜ್ಯವನ್ನು ಕಳೆದುಕೊಂಡರೆ ತನ್ನ ಮಿತ್ರರು ಮತ್ತು ಸಂಬಂಧಿಗಳ ಸಹಾಯದಿಂದ ವಂಚಿತನಾಗುವನು. ತನಗೆ ವಯಸ್ಸಾದಾಗ ಪ್ರಮುಖ ನಾಗರಿಕರೆಲ್ಲರ ಸಭೆ ಕರೆಯಬೇಕು ಮತ್ತು ರಾಜ್ಯದ ಏಳೂ ಪ್ರಮುಖ ಅಂಗಗಳ ಅಭಿಮತದಂತೆ ತನ್ನ ಜೇಷ್ಠ ಪುತ್ರನಿಗೆ ರಾಜ್ಯವನ್ನು ವಹಿಸಿಕೊಡಬೇಕು. ಪಾಪಿಷ್ಠ ಅರಸನಿಗೆ ಗೌರವ ತೋರಬಾರದೆಂದು ಚಾಂದೇಶ್ವರನು ನಿಸ್ಸಂದಿಗ್ಧವಾಗಿ ಹೇಳುತ್ತಾನೆ. ಅಗತ್ಯವಿರುವ ಸಮಯದಲ್ಲಿ ಅನಪೇಕ್ಷಣೀಯ ಅರಸನನ್ನೂ ನಡುನೀರಿನಲ್ಲಿ ಕೈಬಿಡಬಾರದೆಂದು ಆವನು ಒಂದೆಡೆ ಹೇಳಿರುವನು. ಅವನು ತನ್ನ ಅರಸನನ್ನು ಕಲ್ಪವೃಕ್ಷಕ್ಕೆ ಹೋಲಿಸಿರುವನು ಮತ್ತು ಇಂಥ ಅರಸನು ಎಲ್ಲ ಸದ್ಗುಣಗಳನ್ನು ಹೊಂದಿರುವುದರಿಂದ ಜನರು ಅವನ ಸೇವೆ ಮಾಡಬೇಕು. ಆಸ್ಥಾನ ನಡವಳಿಕೆಗಳ ಮತ್ತು ಶಿಷ್ಟಾಚಾರದ ಕೆಲವು ಕನಿಷ್ಠ ಮಾನದಂಡಗಳನ್ನೂ ಚಾಂದೇಶ್ವರನು ವಿಧಿಸುತ್ತಾನೆ. ಆಸ್ಥಾನದ ಸರದಾರರು ರಾಜನ ಚಲನವಲನಗಳ ಮೇಲೆ ನಿಗಾ ಇಡಬೇಕು"[2] ಮತ್ತು ಇತ್ಯಾದಿ.[3]

ಪರಮೇಶ್ವರ, ಪರಮಭಟ್ಟಾರಕ, ರಾಜಾಧಿರಾಜ, ಮಹಾನರಪತಿ, ಕ್ಷಿತಿಪಾಲ, ಭೂಪಾಲ, ಮಿಥಿಲಾಧಿಪತಿ, ಭುಜಬಲಭೀಮ, ಭೀಮಪರಾಕ್ರಮ, ಕರ್ನಾಟ ಚೂಡಾಮಣಿ, ದಶಮದೇವಾವತಾರ, ಕರ್ನಾಟಭೂಮಿಪತಿಮುಕ್ತಮಂಚ ಇತ್ಯಾದಿ ದೊಡ್ಡಸ್ತಿಕೆಯ ಬಿರುದುಗಳ ಧಾರಣೆಯಲ್ಲಿ ರಾಜನ ಅಧಿಕಗೊಳ್ಳುತ್ತಿದ್ದ ಅಧಿಕಾರ ಪ್ರತಿಫಲಿತಗೊಂಡಿದೆ. ಇವೆಲ್ಲ ಬಿರುದುಗಳು ಪಾಲ ಮತ್ತು ಸೇನರ ಮಾದರಿಯಾಧರಿಸಿದುದು ಸ್ಪಷ್ಟವಿದೆ. ಮಿಥಿಲೆಯಲ್ಲಿ ಕರ್ನಾಟ ಕಾಲಘಟ್ಟದಲ್ಲಿ ಪಾಲರ ಆಡಳಿತ ವ್ಯವಸ್ಥೆಯ ಪರಂಪರೆಯನ್ನೇ ಬಹುಮಟ್ಟಿಗೆ ಅನುಸರಿಸಲಾಯಿತು. ಅದೇ ರೀತಿ, ಕರ್ನಾಟರೂ ರಾಜ್ಯದ ವಿವಿಧ ಮಂತ್ರಿಗಳನ್ನೊಳಗೊಂಡು ಬೃಹತ್ ಆಡಳಿತ ಯಂತ್ರವನ್ನು ರೂಪಿಸಿದರು. ಮಂತ್ರಿಗಳ ಪಟ್ಟಿಯು *ರಾಜನೀತಿ ರತ್ನಾಕರ* ಮತ್ತು *ವರ್ಣನ ರತ್ನಾಕರ*ಗಳಲ್ಲಿ ಲಭ್ಯವಿದೆ. ಆವಶ್ಯಕವಾಗಿಯೆ ಸರಕಾರದ ಸ್ವರೂಪವು ರಾಜಪ್ರಭುತ್ವವಾಗಿದ್ದು ರಾಜಸಿಂಹಾಸನಕ್ಕೆ ಹಕ್ಕುದಾರಿಕೆ ಆನುವಂಶಿಕ ತತ್ವಗಳನ್ನು ಕಟ್ಟುನಿಟ್ಟಾಗಿ ಆಧರಿಸಿತ್ತು. ಇದಕ್ಕೊಂದು ಅಪವಾದವೆಂದರೆ ಮಲ್ಲದೇವ. ಅವನು ನಾನ್ಯದೇವನ ನಂತರ ಅಗ್ರಪಟ್ಟಾಧಿಕಾರಿಯಾಗಿದ್ದರೂ ಸಿಂಹಾಸನವೇರಿದಂತೆ ಕಾಣುವುದಿಲ್ಲ. ಇದು ನೇಪಾಳ ಶಾಸನದ ಮತ್ತು *ವಂಶಾವಳಿ*ಯ ಭೂಪಾಲಸಿಂಹದೇವ ಮತ್ತು ಕರಮಸಿಂಹದೇವರಿಗೂ ಅನ್ವಯಿಸುತ್ತದೆ. ಅವರ ಬಗೆಗೆ ಮತ್ತು ಅವರು ಮಿಥಿಲೆಯ ಸಿಂಹಾಸನವೇರಿದ ಬಗೆಗೆ ಖಚಿತವಾಗಿ ಏನೂ ಗೊತ್ತಿಲ್ಲ. ಈ ಕಾಲಘಟ್ಟದಲ್ಲಿ, ಕರ್ನಾಟ ಸಂವೈಧಾನಿಕ ಶ್ರೇಣಿಯಲ್ಲಿ ಯುವರಾಜನ ವಾಸ್ತವಿಕ ಸ್ಥಾನದ

ಬಗೆಗೆ ನಮಗೆ ಯಾವ ಮಾಹಿತಿಯೂ ದೊರೆತಿಲ್ಲ. ಆದರೆ, ಯುವರಾಜರು ಪ್ರಭಾವ ಮತ್ತು ಉನ್ನತ ಸ್ಥಾನಮಾನ ಹೊಂದಿದ್ದಿರಲು ಸಾಕು.

ಮಂತ್ರಿಗಳು

ಈ ವರ್ಗವು ಬ್ರಾಹ್ಮಣರು ಮತ್ತು ಕಾಯಸ್ಥರಿಂದ ಕೂಡಿದುದಾಗಿತ್ತು. ಕರ್ನಾಟ ರಾಜವಂಶದ ಆಳ್ವಿಕೆಯಲ್ಲಿ ಬ್ರಾಹ್ಮಣರು ಮತ್ತು ಕಾಯಸ್ಥರು ಬಲು ಮಹತ್ವದ ವರ್ಗಗಳಾಗಿದ್ದು ರಾಜರು ಅವರನ್ನು ಕಡೆಗಣಿಸುವಂತಿರಲಿಲ್ಲ. ಬ್ರಾಹ್ಮಣ ಮತ್ತು ಕಾಯಸ್ಥ ಮನೆತನಗಳು ಅರಸರೊಂದಿಗೆ ತಲೆತಲಾಂತರಗಳಿಂದ ನಿಕಟ ಸಂಬಂಧ ಹೊಂದಿದ್ದು ಮಂತ್ರಿಗಳ ನಿಯುಕ್ತಿಯಲ್ಲಿ ಅನುವಂಶಿಕ ತತ್ತ್ವವನ್ನು ಪಾಲಿಸಿದಂತೆ ತೋರುತ್ತದೆ. ಸಾಹಿತ್ಯಿಕ ಆಕರಗಳಲ್ಲಿ ಕಂಡುಬರುವ ಪ್ರಶಂಸಾತ್ಮಕ ಅಂಶವನ್ನು ಆಧರಿಸಿ ಹೇಳುವುದಾದರೆ, ಅದರಲ್ಲಿ ಸ್ಪಷ್ಟವಾದ ಸತ್ಯದ ಪ್ರಮಾಣವಿದ್ದು ರಾಜಾಸ್ಥಾನದಲ್ಲಿ ಬ್ರಾಹ್ಮಣರು ಪ್ರಭಾವಿ ಪಾತ್ರವಹಿಸಿದ್ದರೆಂದು ಎತ್ತಿತೋರಿಸಬಹುದು. ನಿಸ್ಸಂದೇಹವಾಗಿಯೂ ಇದಕ್ಕೆ ಕಾರಣವೆಂದರೆ ಅವರ ಬೌದ್ಧಿಕ ಗುಣಗಳು ಮತ್ತು ರಾಜಕೀಯ ವಿವೇಕ. ಅವುಗಳಿಂದಾಗಿ ಅವರಿಗೆ ಸಮಾಜದಲ್ಲಿ ಮತ್ತು ಆಸ್ಥಾನದಲ್ಲಿ ಉನ್ನತ ಸ್ಥಾನ ಪ್ರಾಪ್ತವಾಗಿತ್ತು. ಸಲಹೆಗೆ ಮತ್ತು ಕೆಲವೊಮ್ಮೆ ಆಡಳಿತ ನಿರ್ವಹಣೆಯಲ್ಲಿ ಮಾರ್ಗದರ್ಶನಕ್ಕಾಗಿ ರಾಜನು ಯಾವಾಗಲೂ ಅವರನ್ನು ಅವಲಂಬಿಸಿದ್ದನು. ಮಂತ್ರಿಗಳ ಸಲಹೆ ಮತ್ತು ಸಹಕಾರದಿಂದಲೆ ದಿನನಿತ್ಯದ ಆಡಳಿತ ನಡೆಸಲಾಗುತ್ತಿತ್ತು. ಕರ್ನಾಟ ಅರಸರಡಿ ಸೇವೆ ಸಲ್ಲಿಸುವ ಸುಯೋಗ ಹೊಂದಿದ ಅನೇಕ ಮಂತ್ರಿಗಳಿದ್ದರು. *ರಾಜನೀತಿ ರತ್ನಾಕರವು* ಒಂದು ಅಧ್ಯಾಯವನ್ನು ಮಂತ್ರಿಗಳ ಗುಣಗಳು ಮತ್ತು ವಿವಿಧ ಕರ್ತವ್ಯಗಳನ್ನು ವಿವರಿಸಲೋಸುಗವೆ ಮೀಸಲಿಟ್ಟಿದೆ (ಪುಟ ೧೦-೧೩). ರಾಜ್ಯದಲ್ಲಿ ರಾಜನ ಅಂತಸ್ತು ಅತ್ಯುಚ್ಚವಾಗಿದ್ದರೂ ಅವನಿಗೆ ಮಂತ್ರಿಗಳ ನಿಯುಕ್ತಿಯ ವಿಧಾನವನ್ನು ವಿವರಿಸಲು ಚಂಡೇಶ್ವರನು ತನ್ನ *ರಾಜನೀತಿ ರತ್ನಾಕರದಲ್ಲಿ* ಒಂದು ಪ್ರತ್ಯೇಕ ಅಧ್ಯಾಯವನ್ನೆ ಮೀಸಲಿಟ್ಟಿದ್ದಾನೆ. ಈ ಕಾಲಘಟ್ಟದಲ್ಲಿ ಪ್ರಧಾನ ಮಂತ್ರಿಯನ್ನು 'ಮಂತ್ರಿ' ಅಥವಾ 'ಮಹಾಮಂತ್ರಿ' ಎಂದು ಕರೆಯಲಾಗುತ್ತಿತ್ತು. 'ಮಂತ್ರಿ' ಎಂಬ ಪದವು ಪ್ರಧಾನ ಮಂತ್ರಿಯನ್ನೆ ಸೂಚಿಸುವುದನ್ನು ಅಂಧ್ರಥಾರ್ಹಿ ಮತ್ತು ಹದಿವಿಹ ಶಾಸನಗಳೆರಡೂ ಹೇಳುತ್ತವೆ.

ಶ್ರೀಧರದಾಸನು ನಾನ್ಯದೇವನ ಮತ್ತು ಅವನ ಉತ್ತರಾಧಿಕಾರಿ ಗಂಗದೇವನ ಮಹಾಮಂತ್ರಿಯಾಗಿ ಸೇವೆ ಸಲ್ಲಿಸಿದನೆಂದು ಹೇಳಲಾಗಿದ್ದರೆ ರತ್ನದೇವನು ನಾನ್ಯದೇವನ ಆಸ್ಥಾನದಲ್ಲಿ ಇನ್ನೊಬ್ಬ ಮಹತ್ವದ ಮಂತ್ರಿಯಾಗಿದ್ದನು. ಶ್ರೀಧರದಾಸನ ಮನೆತನದವರು ಸೇನರು ಮತ್ತು ಕರ್ನಾಟರಲ್ಲಿ ಸೇವೆ ಸಲ್ಲಿಸಿದ್ದರು ಮತ್ತು ಅವರನ್ನು 'ಮಹಾಮಾಂಡಲಿಕ' ಎಂಬ ಬಿರುದಿನಿಂದ ಅಲಂಕರಿಸಲಾಗಿತ್ತು. ರಾಮಾದಿತ್ಯ ಮತ್ತು ಕರ್ಮಾದಿತ್ಯರು ನರಸಿಂಹದೇವನಲ್ಲಿ ಮಂತ್ರಿಗಳಾಗಿದ್ದರೆ, ಕರ್ಮಾದಿತ್ಯನು ರಾಮಸಿಂಹದೇವನಲ್ಲಿಯೂ ಸೇವೆ ಮುಂದುವರಿಸಿದನು. ದೇವಾದಿತ್ಯನು ಶಕ್ತಿಸಿಂಹದೇವನಲ್ಲಿ ಮಂತ್ರಿಯಾಗಿದ್ದನು.

ಶಕ್ತಿಸಿಂಹದೇವನ ನಿರಂಕುಶ ಹಾಗೂ ದರ್ಪದ ವರ್ತನೆ ಸರದಾರರನ್ನು ಅಗೌರವಗೊಳಿಸಿದ್ದರಿಂದ ಅವರು ಕೋಪಗೊಂಡು ರಾಜನ ಅಧಿಕಾರಕ್ಕೆ ಕಡಿವಾಣ ಹಾಕಲು ಸಪ್ತ ವರಿಷ್ಠರ ಮಂಡಳಿಯನ್ನು ರಚಿಸಿಕೊಂಡದ್ದನ್ನು ಈ ಮೊದಲು ಚರ್ಚಿಸಿಯಾಗಿದೆ.

ಹರಿಸಿಂಹದೇವನ ಆಳ್ವಿಕೆಯಲ್ಲಿ ಚಾಂದೇಶ್ವರನು ಒಬ್ಬ ಪರಿಣತ ರಾಜಕಾರಣಿ ಮತ್ತು ಆಳವಾದ ಜ್ಞಾನ, ಅನುಭಗಳ ವ್ಯಕ್ತಿಯಾಗಿದ್ದನು. ಅವನು ಸಾಕಷ್ಟು ದೀರ್ಘಕಾಲ ಮಹಾಮಟ್ಟಕ ಮತ್ತು ಸಂಧಿವಿಗ್ರಹಿಕ ಹುದ್ದೆಯಲ್ಲಿದ್ದನು. ಶಕ್ತಿಸಿಂಹದೇವನ ಆಳ್ವಿಕೆಯಲ್ಲಿ ಜರುಗಿದ ಅರಮನೆ ಕ್ರಾಂತಿಯ ಹಿಂದಿದ್ದ ಮೆದುಳು ಅವನೇ ಎಂದು ಊಹಿಸಲಾಗಿದೆ. ಹರಿಸಿಂಹದೇವನು ಪ್ರಾಪ್ತವಯಸ್ಕನಾಗುವ ವರೆಗೂ ಚಾಂದೇಶ್ವರನು ಬಹಳ ಪ್ರಭಾವ ಹೊಂದಿದ್ದನು. ಹರಿಸಿಂಹದೇವನಡಿಯಲ್ಲಿ ಚಾಂದೇಶ್ವರನ ಮನೆತನದ ಮೂರು ತಲೆಮಾರುಗಳವರು - ದೇವಾದಿತ್ಯ, ಅವನ ಮಗ ವೀರೇಶ್ವರ ಮತ್ತು ವೀರೇಶ್ವರನ ಮಗ ಚಾಂದೇಶ್ವರ - ಅನುಕ್ರಮವಾಗಿ ಸಂಧಿವಿಗ್ರಹಿಕ, ಸಪ್ರಕೃತ್ಯ ಮಹಾವರ್ತಿಕ ನೈಬಂಧಿಕ, ಮಹಾಮಟ್ಟಕ - ಸಂಧಿ ವಿಗ್ರಹಿಕರಾಗಿ ಸೇವೆಗೈದರು. ಚಾಂದೇಶ್ವರನ ಸೋದರ ದೇವೇಶ್ವರನೂ ಹರಿಸಿಂಹದೇವನ ಮಂತ್ರಿಗಳಲ್ಲೊಬ್ಬನಾಗಿದ್ದನು. ಈ ಉನ್ನತ ಹುದ್ದೆಗಳು ಬ್ರಾಹ್ಮಣ ಮತ್ತು ಕಾಯಸ್ಥ ಮನೆತನಗಳವರಿಗೆ ಆನುವಂಶಿಕವಾಗಿ ಮೀಸಲಿದ್ದಂತೆ ತೋರುತ್ತದೆ. ಶ್ರೀಧರದಾಸ ಮತ್ತು ರತ್ನದೇವನ ವಂಶಜರು ಹರಿಸಿಂಹದೇವನ ಕಾಲದ ವರೆಗೂ ಮಂತ್ರಿಗಳಾಗಿ ಸೇವೆ ಮುಂದುವರಿಸಿದರು. ಹರಿಸಿಂಹದೇವನಡಿಯಲ್ಲಿ ಮಂತ್ರಿಯೂ ಶ್ರೀಧರದಾಸನ ವಂಶಜನೂ ಆಗಿದ್ದ ಸೂರ್ಯಕರ ಠಾಕೂರನು ಹರಿಸಿಂಹದೇವನ ಆಳ್ವಿಕೆಯ ಕಾಲಕ್ಕೆ ಸಾಮಾಜಿಕ ಸುಧಾರಣಾ ಉಪಕ್ರಮಗಳ ಹಿಂದಿದ್ದ ಚಾಲಕ ಶಕ್ತಿಯಾಗಿದ್ದನೆಂದು ಹೇಳಲಾಗಿದೆ. ಮಿಥಿಲೆಯ ಕಾಯಸ್ಥ ಪಂಜಿಕಾರರು ಕಾಯ್ದಿಟ್ಟಿರುವ ಪಂಜಿಯಲ್ಲಿ ರತ್ನದೇವನ ಮನೆತನದ ಸಂಪೂರ್ಣ ಪಟ್ಟಿ ಇಂದಿಗೂ ನೋಡಸಿಗುತ್ತದೆ.[1]

ಮಂತ್ರಿಗಳು ರಾಜ್ಯದಲ್ಲಿ ಅಪಾರ ಅಧಿಕಾರ ಚಲಾಯಿಸುತ್ತಿದ್ದರು. ಅವರು ಸಾಮಂತ, ಮಹಾಸಾಮಂತ, ಮಹಾರಾಜ, ಮಾಂಡಲಿಕ ಮತ್ತು ಮಹಾಮಾತ್ಯ ಇತ್ಯಾದಿ ಆಡಂಬರದ ಬಿರುದುಗಳನ್ನು ಬಳಸುತ್ತಿದ್ದರು. ಅವರು ಬಲಶಾಲಿ ಮಾಂಡಲಿಕ ದೊರೆಗಳಾಗಿದ್ದು ರಾಜನಿಗೆ ಕಾಣಿಕೆಗಳನ್ನು ನೀಡುತ್ತಿದ್ದರು ಮತ್ತು ಬೃಹತ್ ಧಾರ್ಮಿಕ ಕಟ್ಟಡಗಳನ್ನು ರಚಿಸಿದರು. ಶ್ರೀಧರದಾಸ, ಕರ್ಮಾದಿತ್ಯ, ದೇವಾದಿತ್ಯ, ವೀರೇಶ್ವರ, ಚಾಂದೇಶ್ವರ ಮತ್ತು ಗಣೇಶ್ವರರು ಗಮನಾರ್ಹ ಮಂತ್ರಿಯಾಗಿದ್ದರು. ಅವರು ಧಾರಾಳ ಕಾಣಿಕೆಗಳನ್ನು ಸಲ್ಲಿಸುತ್ತಿದ್ದರು ಮತ್ತು ಬೃಹತ್ ಧಾರ್ಮಿಕ ಕಟ್ಟಡಗಳನ್ನು ಕಟ್ಟಿಸಿದರೆಂದು ಹೇಳಲಾಗಿದೆ. ವೈರಿಯ ಕೋಟೆಗೆ ಲಗ್ಗೆ ಹಾಕಿದ ನಂತರ ವೀರೇಶ್ವರನು ಪ್ರಮುಖ ನಗರವಾದ ದಹಿವತದಲ್ಲಿ ಒಂದು ದೊಡ್ಡ ಕೆರೆಯನ್ನು ತೋಡಿಸಿದನು ಮತ್ತು ಬಲು ಸುಂದರ ಹಾಗೂ ಉನ್ನತ ಅರಮನೆಯನ್ನು ಕಟ್ಟಿಸಿದನೆಂದು ಕೃತ್ಯರತ್ನಾಕರದಿಂದ ತಿಳಿದುಬರುವುದು. ಅವನು ಅಲ್ಲಿ ಅನೇಕ ಬ್ರಾಹ್ಮಣರು ನೆಲಸುವಂತೆ ಮಾಡಿದನು ಮತ್ತು ಶ್ರೋತ್ರಿಯರಿಗೆ ರಾಮಪುರವನ್ನು ದತ್ತಿ ನೀಡಿದನು.

ನೇಪಾಳದ ಮೇಲೆ ತನ್ನ ಅದ್ಭುತ ವಿಜಯದ ನಂತರ ಚಾಂದೇಶ್ವರನು ತುಲಾಪುರುಷ ದಾನವನ್ನು ಮಾಡಿದನು. ಆದರೆ ಡಿ.ಆರ್.ರೆಗ್ಮಿ ಈ ಹೇಳಿಕೆಯ ಅಧಿಕೃತತೆಯನ್ನು ಪ್ರಶ್ನಿಸುತ್ತಾರೆ.[6] ವೀರೇಶ್ವರನು ಬಡವರು ಮತ್ತು ನಿರ್ಗತಿಕರಿಗೆ ಅನ್ನವನ್ನಿಕ್ಕುವಷ್ಟು ದಯಾಳುವೂ ಆಗಿದ್ದನು. ಯುದ್ಧ ಮತ್ತು ಶಾಂತಿಯಲ್ಲಿ ತಮ್ಮ ಶೌರ್ಯ ಪ್ರದರ್ಶಿಸಿದ್ದಲ್ಲದೆ ಅವರು ಬೇರೆ ಬೇರೆ ಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ಗ್ರಂಥಗಳನ್ನು ಬರೆಯುವಲ್ಲಿ ಮತ್ತು ಸಂಕಲಿಸುವಲ್ಲಿ ನಿರತರಾಗಿದ್ದರು ಕೂಡ. ಅದಕ್ಕಾಗಿ ಮುಂದಿನ ತಲೆಮಾರು ಅವರಿಗೆ ಸದಾ ಋಣಿಯಾಗಿರುವುದು.

ಶಕ್ತಿಸಿಂಹದೇವನ ಆಳ್ವಿಕೆಯು ಕುಖ್ಯಾತ ಅರಮನೆ ಕ್ರಾಂತಿಯನ್ನು ಕಂಡಿತು ಮತ್ತು ಅಂದಿನಿಂದ ಸಪ್ತ ವರಿಷ್ಠರ ಮಂಡಳಿ ಅಸ್ತಿತ್ವಕ್ಕೆ ಬಂತು. ಮಿಥಿಲೆಯ ಇತಿಹಾಸದಲ್ಲಿ ಇಂತಹ ಘಟನೆಗಳು ಮುಂದೆಂದೂ ಮರುಕಳಿಸದಂತೆ ನೋಡಿಕೊಳ್ಳುವ ದೃಷ್ಟಿಯಿಂದಲೆ ಮಂಡಳಿಯನ್ನು ಸ್ಥಾಪಿಸಲಾಯಿತು. ಪರಿಸ್ಥಿತಿಯು ಮಂಡಳಿಗೆ ಅನುಕೂಲವಾಗಿತ್ತು. ಏಕೆಂದರೆ, ಹರಿಸಿಂಹದೇವನು ಸಿಂಹಾಸನವೇರಿದಾಗ ಅಲ್ಪವಯಸ್ಕನಾಗಿದ್ದುದರಿಂದ ರಾಜ್ಯದಲ್ಲಿ ಅಧಿಕಾರವನ್ನು ಪ್ರಯೋಗಿಸಲು ಮಂಡಳಿಗೆ ಅವಕಾಶವೊದಗಿತ್ತು. ಮಹಾಸಂಧಿ ವಿಗ್ರಹಿಕ, ಮಹಾಮುದ್ರಾಧಿಕರ್ತ ಮತ್ತು ಮಹಸರ್ವಾಧಿಕರ್ತರ ಮಹತ್ವ ಅಪಾರವಾಗಿ ಹೆಚ್ಚಿತ್ತೆಂದು ಸಮಕಾಲೀನ ಸಾಹಿತ್ಯಿಕ ಮೂಲಗಳಿಂದ ತಿಳಿದುಬರುವುದು. 'ಮುದ್ರಾಧಿಕರ್ತ' ಪದದ ಚಾಲ್ತಿ ಅರ್ಥ ಸ್ಪಷ್ಟವಿಲ್ಲ. ಆದರೆ, ಅದು ಬಹುಶ: ರಾಜಮುದ್ರಾಧ್ಯಕ್ಷನ ಸ್ಥಾನಮಾನವಿರುವ ಅಧಿಕಾರಿಯನ್ನು ಸೂಚಿಸುತ್ತದೆಂದು ತರ್ಕಿಸಬಹುದು. ನ್ಯಾಯಾಂಗದ ಅಧ್ಯಕ್ಷವನ್ನು ಮಹಾಧರ್ಮಾಧ್ಯಕ್ಷ್ಯನೆಂದು ಸಂಬೋಧಿಸಲಾಗುತ್ತಿತ್ತು. ವರ್ಧಮಾನ ಉಪಾಧ್ಯಾಯನು ಗಂಗದೇವನ ಅಡಿಯಲ್ಲಿ ಧರ್ಮಾಧ್ಯಕ್ಷನಾಗಿದ್ದನೆಂದು ಹೇಳಲಾಗಿದೆ. ಹರಿಸಿಂಹದೇವನ ಆಳ್ವಿಕೆಯಲ್ಲಿ ಅವನ ಪ್ರಧಾನ ಮಂತ್ರಿ ಚಾಂದೇಶ್ವರನು ಸಂಧಿವಿಗ್ರಹಿಕ ಖಾತೆಯನ್ನು ಹೊಂದಿದ್ದಲ್ಲದೆ ಪ್ರಧಾನ ನ್ಯಾಯಾಧೀಶನ ಹುದ್ದೆ ಅಥವಾ ಮಿಥಿಲೆಯ ಪ್ರಾಡ್ವಿವೇಕವನ್ನೂ ನಿರ್ವಹಿಸುತ್ತಿದ್ದನು. ವಿವಾದ ರತ್ನಾಕರವು ಅವನನ್ನು ಬಹಳ ಜಾಣ ಮತ್ತು ವಿವೇಚನೆಯುಳ್ಳ ನ್ಯಾಯಾಧೀಶನೆಂದು ವರ್ಣಿಸಿರುವುದರಿಂದ ಅವನು ನ್ಯಾಯಾಲಯದ ಅಧ್ಯಕ್ಷನಾಗಿದ್ದನೆಂದು ತೋರುತ್ತದೆ. ಅವನ ಕಕ್ಕ ಗಣೇಶ್ವರನು ಮಿಥಿಲೆಯ ಸಾಮಂತಸಭೆಯ ಅಧ್ಯಕ್ಷನಾಗಿದ್ದನು. ಆ ಕಾರಣಕ್ಕಾಗಿ ಅವನು 'ಮಹಾರಾಜಾಧಿರಾಜ' ಬಿರುದು ಧರಿಸಿದನು. ಈ ಮಂತ್ರಿಗಳಲ್ಲದೆ, ಕೋಶಾಧ್ಯಕ್ಷನೆಂದು ಜತೇಶ್ವರನಿಗೆ, ನಿಯುಕ್ತಿ ಮತ್ತು ವರ್ಗಾವಣೆಯ ನಿರ್ವಾಹಕನೆಂದು ಹರದತ್ತನಿಗೆ ಮತ್ತು ಮುದ್ರಾರಕ್ಷಕನೆಂದು ಲಕ್ಷ್ಮೀದತ್ತನಿಗೆ ಅಸ್ಪಷ್ಟ ಪ್ರಸ್ತಾಪಗಳು ದೊರೆಯುತ್ತವೆ. ಅಧಿಕಾರಿಗಳ ವರ್ಗಾವಣೆಯ ವಿಚಾರದ ಮಹತ್ವವನ್ನು ಈ ಅರಸರು ಚೆನ್ನಾಗಿ ಅರಿತಿದ್ದರು ಮತ್ತು ಈ ವಿಷಯದಲ್ಲಿ ಅವರು ಶೇರಶಾಹನಿಗಿಂತ ಬಹಳ ಮುಂದೆ ಇದ್ದರು.

ಸರಕಾರದ ಅಧಿಕಾರ ಮತ್ತು ಜವಾಬ್ದಾರಿಗಳು ಮಂಡಳಿಯ ಕೈಯಲ್ಲಿದ್ದವು. ಅದು ರಾಜನ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ರಾಜ ಮತ್ತು ಮಂತ್ರಿಗಳಲ್ಲದೆ

ಅನೇಕ ಅಧಿಕಾರಿಗಳು ಮತ್ತು ಇಲಾಖಾ ಮುಖ್ಯಸ್ಥರಿದ್ದರು. ಆಡಳಿತದ ಕಟ್ಟುನಿಟ್ಟಿನ ನಿರ್ವಹಣೆಯ ಉದ್ದೇಶಕ್ಕಾಗಿ ತಿರಹತ್‌ನ (ಮಿಥಿಲೆಯ) ಒಟ್ಟು ಪ್ರದೇಶವನ್ನು ಹಲವಾರು ಘಟಕಗಳಾಗಿ ವಿಭಜಿಸಿದ್ದಂತೆ ತೋರುತ್ತದೆ. ಮೇಲ್ನೋಟಕ್ಕೆ ಅಧಿಕಾರ ವಿಕೇಂದ್ರೀಕೃತವಾಗಿತ್ತು. ಆದರೆ, ಪ್ರತ್ಯಕ್ಷವಾಗಿ ಅಧಿಕಾರವನ್ನು ರಾಜ ಮತ್ತು ಮಂತ್ರಿಗಳು ಮನ ಬಂದಂತೆ ಚಲಾಯಿಸುತ್ತಿದ್ದರು. ಒಳ್ಳೆಯ ಮಂತ್ರಿಗಳು ಆಡಳಿತದ ರಕ್ಷಣಾಕವಾಟವಾಗಿದ್ದರು ಮತ್ತು ಈ ಸದ್ಗುಣಕ್ಕಾಗಿ ಕೆಲವರನ್ನು ಗೌರವದಿಂದ ಕಾಣಲಾಗುತ್ತಿತ್ತು.

## ಗ್ರಾಮಾಡಳಿತ

ಆಡಳಿತ ಉದ್ದೇಶಕ್ಕಾಗಿ, ಅತ್ಯಂತ ಕೆಳಗಿನ ಘಟಕವಾದ ಗ್ರಾಮವು ಕೆಲವು ಅಧಿಕಾರಿಗಳ ಉಸ್ತುವಾರಿಯಲ್ಲಿತ್ತು. ಸಕಾಲಿಕ ಕಂದಾಯ ವಸೂಲಿ ಅವರ ಪ್ರಮುಖ ಕರ್ತವ್ಯವಾಗಿತ್ತು. ಗ್ರಾಮಪತಿ ಮತ್ತು ದಶಗ್ರಾಮಿಕರ ಮೂಲಕ ಕಂದಾಯ ವಸೂಲು ಮಾಡಲಾಗುತ್ತಿತ್ತು. ಚಾಂದೇಶ್ವರನ *ರಾಜನೀತಿ ರತ್ನಾಕರವು* ಗ್ರಾಮಾಡಳಿತ ನಿರ್ವಹಣೆಯ ಮೇಲೆ ಸ್ವಾರಸ್ಯಕರ ಬೆಳಕು ಚೆಲ್ಲುತ್ತದೆ. ಮೂರರಿಂದ ಐದು ಗ್ರಾಮಗಳನ್ನೊಳಗೊಂಡ 'ಗುಲ್ಮ'ದ ಬಗೆಗೆ, ಗ್ರಾಮಪತಿ ಅಥವಾ ಗ್ರಾಮಾಧಿಪತಿ, ದಶಗ್ರಾಮಪತಿ, ವಿಂಶತಿಗ್ರಾಮಪತಿ, ಸಹಸ್ರ ಗ್ರಾಮಪತಿ ಮತ್ತು ನೂರಾರು ಗ್ರಾಮಗಳುಳ್ಳ 'ರಾಷ್ಟ್ರ'ದ ಬಗೆಗೆ ಉಲ್ಲೇಖವೊಂದಿದೆ (*ರಾಜನೀತಿ ರತ್ನಾಕರ,* ಪುಟ ೬೦). ಪ್ರತಿಯೊಂದು ಗ್ರಾಮಕ್ಕೆ ಚುನಾಯಿತ ಮುಖ್ಯಸ್ಥನಿದ್ದನು. ಇವರನ್ನು ಅರ್ಹತೆ ಮತ್ತು ದಕ್ಷತೆಯ ಅನುಕ್ರಮದಲ್ಲಿ ನಿಯುಕ್ತಿಸಲಾಗುತ್ತಿತ್ತು (*ರಾಜನೀತಿ ರತ್ನಾಕರ,* ಪುಟ ೬೦). ಒಟ್ಟು ಆಡಳಿತ ವ್ಯವಸ್ಥೆಯು ಗ್ರಾಮಾಡಳಿತದ ಸ್ಥಿರತೆ ಮತ್ತು ಪ್ರಾಮಾಣಿಕತೆಯ ಮೇಲೆ ನಿಂತಿತ್ತು. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಕಾನೂನಿನ ವಿಷಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಗ್ರಾಮಸ್ಥರೇ ಇತ್ಯರ್ಥಪಡಿಸಿಕೊಳ್ಳುತ್ತಿದ್ದರು. ಮತ್ತು ಸಮಸ್ಯೆಗಳ ಪರಿಹಾರ ಸುಗಮ ಹಾಗೂ ತ್ವರಿತವಾಗಿತ್ತು.

ಎಲ್ಲ ತರಹದ ಭಿನ್ನಾಭಿಪ್ರಾಯಗಳನ್ನು ಮತ್ತು ವ್ಯಾಜ್ಯಗಳನ್ನು ಗ್ರಾಮದ ಮುಖ್ಯಸ್ಥನಿಗೆ ಒಪ್ಪಿಸಲಾಗುತ್ತಿತ್ತು. ತಾನು ಸಮಸ್ಯೆಯನ್ನು ಬಗೆಹರಿಸುವ ಸ್ಥಿತಿಯಲ್ಲಿರದಿದ್ದರೆ ಅದನ್ನು ಅವನು ತನ್ನ ಮೇಲಧಿಕಾರಿಗೆ ಒಪ್ಪಿಸುವುದು ಮುಖ್ಯಸ್ಥನ ಕರ್ತವ್ಯವಾಗಿತ್ತು. ಅತ್ಯುನ್ನತ ಅಧಿಕಾರಿಯನ್ನು ತಲುಪುವ ವರೆಗೆ ಅದೇ ವಿಧಾನವನ್ನು ಅನುಸರಿಸಲಾಗುತ್ತಿತ್ತು (*ರಾಜನೀತಿ ರತ್ನಾಕರ,* ಪುಟ ೬೦). ಇಂತು, ಮುಖ್ಯಸ್ಥ ಅತಿ ಕೆಳಮಟ್ಟದ ಆಡಳಿತ ಘಟಕದ ಹೃದಯವಾಗಿದ್ದನು.

ಗ್ರಾಮ ವ್ಯವಸ್ಥೆಯು ಮಿಥಿಲೆಯ ಒಟ್ಟು ರಾಜಕೀಯ ಸೌಧದ ತಳಬಂಡೆಯಾಗಿತ್ತು. ಮುಂದಿನ ಹಲವು ಶತಮಾನಗಳವರೆಗೂ ಈ ವ್ಯವಸ್ಥೆ ಅಬಾಧಿತವಾಗಿ ಮುಂದುವರಿಯಿತು. ಎಲ್ಲ ಪ್ರಕಾರಗಳ ಮುಖ್ಯಸ್ಥರಿಗೂ ಅರಸನು ವೇತನ ನೀಡುತ್ತಿದ್ದ. ವೇತನದ ಸ್ವರೂಪ ಮತ್ತು ಮೊತ್ತ ಅವರ ಶ್ರೇಣಿ ಮತ್ತು ಅಂತಸ್ತಿಗೆ ಅನುಗುಣವಾಗಿತ್ತು. ಗ್ರಾಮಸ್ಥರು ತಮ್ಮ ಕರಗಳನ್ನು ವಸ್ತುರೂಪದಲ್ಲಿ ಸಲ್ಲಿಸುತ್ತಿದ್ದರು ಮತ್ತು ಅದರಿಂದ ಮುಖ್ಯಸ್ಥನ ವೇತನವನ್ನು ನೀಡಲಾಗುತ್ತಿತ್ತು. ಬೇರೆ ಬೇರೆ ಮುಖ್ಯಸ್ಥರಿಗೆ ವೇತನ ನೀಡುವ ರೀತಿ ಇಂತಿತ್ತು:

ಅ. **ದಶೇಶ :** ಹತ್ತು ಗ್ರಾಮಗಳ ಮುಖ್ಯಸ್ಥನು ಒಂದು ನೇಗಿಲಿನಿಂದ ಸಾಗುವಳಿ ಮಾಡುವಷ್ಟು ಹೊಲವನ್ನು ಪಡೆಯುತ್ತಿದ್ದ.

ಆ. **ವಿಂಶತೀಶ :** ಇಪ್ಪತ್ತು ಗ್ರಾಮಗಳ ಮುಖ್ಯಸ್ಥನು ನಾಲ್ಕು ನೇಗಿಲುಗಳಿಂದ ಸಾಗುವಳಿ ಮಾಡುವಷ್ಟು ಹೊಲವನ್ನು ಪಡೆಯುತ್ತಿದ್ದ.

ಇ. **ಶತೇಶ :** ನೂರು ಗ್ರಾಮಗಳ ಮುಖ್ಯಸ್ಥನು ಒಂದು ಇಡಿ ಗ್ರಾಮವೊಂದನ್ನು ಪಡೆಯುತ್ತಿದ್ದ.

ಈ. **ಸಹಸ್ರಾಧಿಪತಿ :** ಸಹಸ್ರ ಗ್ರಾಮಗಳ ಮುಖ್ಯಸ್ಥನು ಒಂದು ಪಟ್ಟಣ ಯಾ ನಗರವನ್ನು ಪಡೆಯುತ್ತಿದ್ದ.

ಕೇಂದ್ರ ಸರಕಾರವು ನಿಯಮಿತ ಪತ್ರವ್ಯವಹಾರ ಮತ್ತು ಅಧಿಕಾರಿಗಳ ಮೂಲಕ ಗ್ರಾಮದ ಮುಖ್ಯಸ್ಥನೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿರುತ್ತಿತ್ತು. ಗ್ರಾಮಾಡಳಿತ ನೋಡಿಕೊಳ್ಳಲು ಕೇಂದ್ರ ಸರಕಾರದಲ್ಲಿ ಪ್ರತ್ಯೇಕ ಇಲಾಖೆಯಿತ್ತು. ಗ್ರಾಮಗಳ ಉಸ್ತುವಾರಿಯುಳ್ಳ ಮಂತ್ರಿಯನ್ನು 'ಸ್ನಿಗ್ಧ' ಎಂದು ಕರೆಯಲಾಗುತ್ತಿತ್ತು. ಏಕೆಂದರೆ, ಅವನು ರಾಜನಿಗೆ ಬಹಳ ನಿಕಟವರ್ತಿಯಾಗಿದ್ದನೆಂದು ಬಗೆಯಲಾಗಿದೆ.

'ಸ್ನಿಗ್ಧ' ಪದದ ಅರ್ಥ ಸ್ಪಷ್ಟವಿಲ್ಲ. ಅರಸನ ಕುಟುಂಬದವನೊಬ್ಬನನ್ನು ಬಹುಶ: ನಿಯಮಿಸಲಾಗುತ್ತಿತ್ತೆಂದು ಗ್ರಹಿಸಬಹುದು. ವಿವಿಧ ದರ್ಜೆಗಳ ಗ್ರಾಮಾಧಿಕಾರಿಗಳನ್ನು ನೋಡಿಕೊಳ್ಳುವುದು ಮತ್ತು ಅವರ ಕೆಲಸದ ಮೇಲ್ವಿಚಾರಣೆ ಮಾಡುವುದು ಅವನ ಮುಖ್ಯ ಕಾರ್ಯವಾಗಿತ್ತು. ಅರಸನ ನೀತಿಯನ್ನು ಗ್ರಾಮಗಳಿಗೆ ಘೋಷಿಸುವುದು ಮತ್ತು ಗ್ರಾಮಗಳಿಗೆ ಸಂಬಂಧಿಸಿದ ಸಮಾಚಾರವನ್ನು ಅರಸನ ಓಲಗದ ಗಮನಕ್ಕೆ ತರುವುದು ಅವನ ಕರ್ತವ್ಯವಾಗಿತ್ತು. ಮೌರ್ಯ ಕಾಲದ ತನ್ನ ಮೂಲ ಮಾದರಿಯಂತೆಯೆ, ಅವನು ಕೇಂದ್ರ ಸರಕಾರ ಮತ್ತು ಗ್ರಾಮಗಳ ಮಧ್ಯೆ ಸಂಪರ್ಕಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಅವನ ಕರ್ತವ್ಯಗಳ ಬಗೆಗೆ ಹೇಳುವುದಾದರೆ, ಅವು ಆಧುನಿಕ ಸ್ಥಳೀಯ ಸ್ವಯಮಾಡಳಿತವನ್ನು ಸಾಕಷ್ಟು ಹೋಲುತ್ತವೆ. ಒಬ್ಬ ಮಂತ್ರಿಯ ಉಸ್ತುವಾರಿಯಡಿ ಗ್ರಾಮೀಣ ವ್ಯವಹಾರಗಳ ಇಲಾಖೆಗೆ ಅವಕಾಶವಿದ್ದುದು ಚಾಂದೇಶ್ವರನ ರಾಜನೀತಿ ರತ್ನಾಕರದಿಂದ ಕಂಡುಬರುತ್ತವೆ. ಗ್ರಾಮಾಡಳಿತವನ್ನು ಕೇಂದ್ರಾಡಳಿತದೊಂದಿಗೆ ಸಂಯೋಜಿಸಿ ಗ್ರಾಮಗಳ ಅಗತ್ಯಗಳತ್ತ ಗಮನ ನೀಡುವುದೆ ಆ ಇಲಾಖೆಯ ಮುಖ್ಯ ಉದ್ದೇಶವಾಗಿತ್ತು (*ರಾಜನೀತಿ ರತ್ನಾಕರ*, ಪುಟ ೫೮). 'ತಂತ್ರಿತಃ' ಎಂಬ ಪದವು ಗ್ರಾಮೀಣ ವ್ಯವಹಾರಗಳ ಮಂತ್ರಿಗೆ ತನ್ನ ಕಾರ್ಯಕ್ಷೇತ್ರದಲ್ಲಿ ಸಂಪೂರ್ಣ ಅಧಿಕಾರವಿದ್ದುದನ್ನು ಸೂಚಿಸುತ್ತದೆ. ಪ್ರತಿಯೊಂದು ಪಟ್ಟಣ ಅಥವಾ ನಗರದಲ್ಲಿ ಸರ್ವಾರ್ಥಚಿಂತಕಾಮ ಎಂಬ ಅಧಿಕಾರಿಯಿರುತ್ತಿದ್ದನು. ಚಾಂದೇಶ್ವರನ ಮಾತಿನಲ್ಲಿ ಹೇಳುವುದಾದರೆ, ಆ ಗ್ರಾಮಗಳಿಗೆ ಸರ್ವಾರ್ಥಚಿಂತಕಾಮನು ಗ್ರಹಗಳಿಗೆ ರಾಹುವಿನಂತೆ ಇದ್ದನು. ಚಾಂದೇಶ್ವರನ ಈ ಸ್ಪಷ್ಟ ಅಭಿಮತದ ಹಿನ್ನೆಲೆಯಲ್ಲಿ, ಆ ಅಧಿಕಾರಿಯು "ಆಧುನಿಕ ಕಾಲದ ಶಾಸನಕರ್ತ ಯಾ ನ್ಯಾಯಾಧಿಕಾರಿ"[7] ಯಂತಿದ್ದನೆಂಬ ಯು.ಠಾಕೂರರ

ಸೂಚನೆಯನ್ನು ಒಪ್ಪಲು ಸಾಧ್ಯವಿಲ್ಲ. ವಾಸ್ತವಿಕವಾಗಿ, "ಅವನ ಉಪಸ್ಥಿತಿ ತಪ್ಪಿತಸ್ಥರ ಹೃದಯದಲ್ಲಿ ಭೀತಿ ಹುಟ್ಟಿಸುತ್ತಿತ್ತು." ಆದರೆ, ಅದನ್ನು ಬೇರೆ ರೀತಿಯಲ್ಲಿ ಅರ್ಥೈಸಬೇಕು.

ಸರ್ವಾರ್ಥಚಿಂತಕಾಮನು ಒಬ್ಬ ಶಕ್ತಿಶಾಲಿ ಕಲ್ಯಾಣಾಧಿಕಾರಿಯಾಗಿದ್ದು ಆ ಪ್ರದೇಶದ ಜನರ ಸಾಮಾನ್ಯ ಹಿತವನ್ನು ನೋಡಿಕೊಳ್ಳಲೋಸುಗವೆ ಇದ್ದನು. ಎಲ್ಲರಿಗೂ ಹಿತಕರವೆಂದು ಪರಿಗಣಿಸಿದ ಹಕ್ಕು ಮತ್ತು ಕರ್ತವ್ಯಗಳ ಆಚರಣೆಯ ಮೇಲ್ವಿಚಾರಣೆ ಅವನದಾಗಿತ್ತು. ಧರ್ಮ, ಅರ್ಥ, ಕಾಮ, ಮೋಕ್ಷಗಳು ವ್ಯಕ್ತಿಯ ಸರ್ವಾರ್ಥವಾಗಿದ್ದಂತೆ ರಾಜ್ಯದ ಸರ್ವಾರ್ಥವೂ ಆಗಿದ್ದವು. ಉಪಕಾರಬುದ್ಧಿಯ ಅರಸರೆಲ್ಲರೂ ಈ ವಿರಳ ಮೂಲಾಂಶಗಳನ್ನು ಸಾಧಿಸುವ ಗುರಿ ಹೊಂದಿದ್ದರು. ಸಾಮಾಜಿಕ ಹಕ್ಕುಗಳ ಪಾಲನೆಯ ಮೇಲ್ವಿಚಾರಣೆ ನೋಡಿಕೊಳ್ಳಲು ಇಂಥ ಅಧಿಕಾರಿಯನ್ನು ರಾಮಸಿಂಹದೇವನ ಆಳ್ವಿಕೆಯಲ್ಲಿ ನಿಯಮಿಸಲಾಯಿತು. ಸರ್ವಾರ್ಥಚಿಂತಕಾಮನ ಹುದ್ದೆ ಬಹಳ ಮಹತ್ವದ್ದಾಗಿದ್ದುದರಿಂದ ಖಚಿತವಾದ ಪ್ರಾಮಾಣಿಕತೆ, ಚಾರಿತ್ರ್ಯ ಮತ್ತು ನಿಷ್ಠೆಯುಳ್ಳ ವ್ಯಕ್ತಿಯನ್ನು ಮಾತ್ರ ನಿಯಮಿಸಲಾಗುತ್ತಿತ್ತು. ಅವನು ತನ್ನ ಕರ್ತವ್ಯ ಪಾಲನೆಯಲ್ಲಿ ಬಲು ಕಠಿಣವಾಗಿದ್ದುದು ಸ್ಪಷ್ಟವಿದೆ. ಮತ್ತು ಜನರು ಅವನ ಬಗೆಗೆ ಎಷ್ಟೊಂದು ಭಯಭೀತರಾಗಿರುತ್ತಿದ್ದರೆಂದರೆ ಅವನನ್ನು ಭಯಂಕರ ಗ್ರಹವಾದ ಕೇತುವಿಗೆ ಹೋಲಿಸುತ್ತಿದ್ದರು. ಪ್ರತಿಯೊಂದು ನಗರ ಮತ್ತು ಗ್ರಾಮಕ್ಕೆ ಈ ದರ್ಜೆಯ ಅಧಿಕಾರವನ್ನು ಒದಗಿಸಲಾಗುತ್ತಿತ್ತು. ಅವನು ಅಗಾಧ ಅಧಿಕಾರ ಹೊಂದಿದ್ದನೆಂದು *ರಾಜನೀತಿ ರತ್ನಾಕರ*ದಲ್ಲಿ (ಪುಟ ೬೧) ವರ್ಣಿಸಲಾಗಿದೆ. ಮಧ್ಯಯುಗೀನ ಸಂದರ್ಭದಲ್ಲಿ ಇದನ್ನು ವಿಶ್ಲೇಷಿಸಲಾಗಿ, ಗ್ರಾಮಾಡಳಿತವನ್ನು ಆದ್ಯಂತವಾಗಿ ಮತ್ತು ಅತ್ಯುತ್ತಮವಾಗಿ ಸಂಘಟಿಸಲಾಗಿತ್ತೆಂದು ಇವೆಲ್ಲ ಸಂಗತಿಗಳು ವಿಪುಲವಾಗಿ ತೋರ್ಪಡಿಸುತ್ತವೆ. ಮೇಲಾಗಿ, *ರಾಜನೀತಿ ರತ್ನಾಕರ*ದಲ್ಲಿ ಹೇಳಲಾಗಿರುವ ಗ್ರಾಮಾಡಳಿತದ ದಕ್ಷ ನಿರ್ವಹಣೆಯಲ್ಲಿ ರಾಜನು ತೀವ್ರ ಆಸಕ್ತಿ ಹೊಂದಿದ್ದನೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

## ಕಂದಾಯ ಆಡಳಿತ

ಕಂದಾಯ ಆಡಳಿತ ದೃಷ್ಟಿಯಿಂದ ಕೂಡ ಗ್ರಾಮವು ಅತಿ ಚಿಕ್ಕ ಘಟಕವಾಗಿತ್ತು. ಕಂದಾಯ ಇಲಾಖೆಯ ದಕ್ಷ ಆಡಳಿತ ನಿರ್ವಹಣೆಗಾಗಿ ಇಡಿ ರಾಜ್ಯವನ್ನು ಪರಗಣ, ತೊಪ್ಪ ಮತ್ತು ಗ್ರಾಮ ಎಂಬ ಹಲವಾರು ಆರ್ಥಿಕ ವಲಯಗಳಾಗಿ ವಿಭಜಿಸಲಾಗಿತ್ತು. ಈ ಪ್ರತಿಯೊಂದು ಘಟಕದಲ್ಲಿ ಕಂದಾಯ ವಸೂಲು ಮಾಡಲು ಒಬ್ಬ ಮುಖ್ಯಸ್ಥ ಅಥವಾ ಚೌಧರಿಯನ್ನು ನಿಯಮಿಸಲಾಗಿತ್ತು ಮತ್ತು ಗ್ರಾಮದ ಕಂದಾಯ ಅಧಿಕಾರಿಯನ್ನು ಪಟವಾರಿ ಎಂದು ಕರೆಯಲಾಗುತ್ತಿತ್ತು. ಕಂದಾಯವನ್ನು ನಿಯಮಿತವಾಗಿ ಸಂದಾಯಿಸುತ್ತಿರುವ ವರೆಗೆ ಜನರಿಗೆ ಏನೂ ತೊಂದರೆಯಿರಲಿಲ್ಲ. ಗ್ರಾಮದ ಲೆಕ್ಕಪತ್ರಗಳನ್ನು ಸಂಪೂರ್ಣ ನಿಕೃಷ್ಟತೆಯಿಂದ ಇಡಲಾಗುತ್ತಿತ್ತು. ಪಟವಾರಿಗಳು ಗ್ರಾಮಲೆಕ್ಕಿಗರೂ ಆಗಿದ್ದರು.[೮] ಅವರ ವೇತನವನ್ನು ಗ್ರಾಮನಿಧಿಯಿಂದ ನಿಗದಿಪಡಿಸಿದ ದರದಲ್ಲಿ ಕೊಡಲಾಗುತ್ತಿತ್ತು.[೯] ಗ್ರಾಮಾಧಿಕಾರಿಗಳು ಗೊತ್ತುಪಡಿಸಿದ ಪೋಲಿಸ ಅಧಿಕಾರಿಗಳನ್ನು ಎಲ್ಲೆಡೆ ನಿಯಮಿಸಲಾಗಿತ್ತು. ಗ್ರಾಮೀಣ

ಪೋಲಿಸರು ಗ್ರಾಮದ ದೈನಂದಿನ ವ್ಯವಹಾರಗಳನ್ನು ಮುಖ್ಯಸ್ಥ ಅಥವಾ ಚೌಧರಿಗೆ ವ್ಯಾಪಕವಾಗಿ ವರದಿ ಮಾಡುವುದು ಕಡ್ಡಾಯವಾಗಿತ್ತು. ಸಂದಾಯದ ರೀತಿ ಸೂಚಿಸುವಂತೆ, ಆಡಳಿತ ವ್ಯವಸ್ಥೆಯಲ್ಲಿ ಊಳಿಗಮಾನ್ಯ ಪದ್ಧತಿಯ ಅಂಶ ಬಹಳಷ್ಟಿತ್ತು. ಮಿಥಿಲೆಯ ಬಗೆಗೆ ಅಧಿಕಾರವಾಣಿಯುಳ್ಳ ಪ್ರಖ್ಯಾತ ಇತಿಹಾಸಕಾರರೊಬ್ಬರು ಸೂಚಿಸಿರುವಂತೆ, ಗ್ರಾಮದ ಮುಖ್ಯಸ್ಥನಿಗೆ ಜಹಗೀರು ಕೊಡಲಾಗುತ್ತಿದ್ದರೂ ಅದು ಮಹಾ ಮೊಗಲರ ಮನಸಬದಾರಿ ವ್ಯವಸ್ಥೆಯನ್ನು ಹೋಲುತ್ತಿತ್ತೆಂಬ ತೀರ್ಮಾನಕ್ಕೆ ಬಂದರೆ ತಪ್ಪಾಗುವುದು.[17] ಈ ಕಾಲಘಟ್ಟ ದಲ್ಲಿ ದತ್ತಿ ನೀಡಲು ಸರಕಾರದ ಮನ್ನಣೆಯನ್ನು ಕೆಳಸ್ತರದ ಸಾಮಾಜಿಕ ಗುಂಪುಗಳಿಂದ ಹಿಂತೆಗೆದುಕೊಂಡು ಭೂಒಡೆಯರಾಗಿದ್ದ ಬ್ರಾಹ್ಮಣರಿಗೆ ನೀಡಿದ್ದನ್ನು ಕಾಣುತ್ತೇವೆ. ಗ್ರಾಮದ ಜನರಿಗೆ ವಿತರಣೆ ಮಾಡಲು ಇದು ಒಂದು ಆರ್ಥಿಕ ಆಧಾರವನ್ನು ಒದಗಿಸಿತು. ಭೂದತ್ತಿ ನೀಡುವುದು ಬ್ರಾಹ್ಮಣ ಮಂತ್ರಿಗಳ ಕರ್ತವ್ಯವಾಗಿತ್ತು. ಉದ್ಯೋಗಾಧಾರಿತ ಸಮಾಜದ ವ್ಯವಸ್ಥೆ ಅಂದು ಅಸ್ತಿತ್ವದಲ್ಲಿರಲಿಲ್ಲ. ಕರ್ನಾಟರ ಆಳ್ವಿಕೆ ಕಾಲದಲ್ಲಿ ಮತ್ತು ನಂತರದ ಕಾಲಗಳಲ್ಲಿ ಊಳಿಗಮಾನ್ಯ ಪದ್ಧತಿಯೆ ಮಿಥಿಲೆಯ ಎಲ್ಲ ಸಾಮಾಜಿಕ ಮತ್ತು ರಾಜಕೀಯ ಸಂಘಟನೆಗಳಿಗೆ ಆಧಾರವಾಗಿತ್ತೆಂದು ಬೇರೆ ಹೇಳಬೇಕಿಲ್ಲ.

ಈ ಕಾಲಘಟ್ಟದಲ್ಲಿ ಶ್ರೀಮಂತ ಭೂಒಡೆಯರ ಕೈಯಲ್ಲಿ ಅಪಾರ ಅಧಿಕಾರವಿತ್ತು. ಸಾಮಾನ್ಯ ಜನರಿಗೆ ಅವರ ವಿರುದ್ಧ ಏನನ್ನೂ ಮಾಡುವುದಾಗಲಿ ಸಾಧಿಸುವುದಾಗಲಿ ಕಠಿಣವಾಗಿತ್ತು. ಯಥಾಸ್ಥಿತಿಯನ್ನು ಕದಲಿಸಬಯಸಿದ ಜನಕ್ಕೆ ಸರ್ವಾರ್ಥಚಿಂತಕಾಮನು ಭಯಂಕರ ಗ್ರಹದಂತಿದ್ದನು.

ಗ್ರಾಮಾಡಳಿತಕ್ಕೆ ಪಂಚಾಯತ ವ್ಯವಸ್ಥೆ ಮಾದರಿಯಾಗಿತ್ತು. ಪಂಚಾಯತವಿಲ್ಲದ ಗ್ರಾಮವಿರಲಿಲ್ಲ ಮತ್ತು 'ಪಂಚಪರಮೇಶ್ವರ' ಪದ ಪ್ರಾಚೀನ ಪದ್ಧತಿಯನ್ನು ನೆನಪಿಸುತ್ತದೆ. ಯಾವುದೆ ಹಸ್ತಕ್ಷೇಪವಿಲ್ಲದೆ ಪಂಚಾಯತವು ಕಾರ್ಯಾಂಗ ಮತ್ತು ನ್ಯಾಯಾಂಗಗಳ ಎಲ್ಲ ಸ್ಥಳೀಯ ಅಧಿಕಾರಿಗಳನ್ನು ನಿಯಂತ್ರಿಸುತ್ತಿತ್ತು. ಪಂಚಾಯತವು ತನ್ನದೆ ಕಾನೂನುಸೂತ್ರವನ್ನು ಹೊಂದಿತ್ತು. ಬಹುತೇಕ ವ್ಯಾಜ್ಯಗಳನ್ನು ಸ್ಥಳೀಯವಾಗಿಯೆ ಬಗೆಹರಿಸಲಾಗುತ್ತಿತ್ತು. 'ಗುಲ್ಮ' ಮತ್ತು 'ರಾಷ್ಟ್ರ'ಗಳನ್ನೊಳಗೊಂಡ ವಿಶಿಷ್ಟ ಸ್ಥಳೀಯ ಮತ್ತು ಗ್ರಾಮೀಣ ಆಡಳಿತವನ್ನು ಮಿಥಿಲೆ ಹೊಂದಿತ್ತು. ಗ್ರಾಮದ ಮುಖ್ಯಸ್ಥನಿಗೆ ಸಂದಾಯ ಮಾಡಬೇಕಾದ ದರಗಳು ಗ್ರಾಮಗಳ ವರ್ಗಗಳನ್ನನುಸರಿಸಿ ಬೇರೆಬೇರೆಯಾಗಿದ್ದವು. ಸಾಮಾನ್ಯವಾಗಿ ಗ್ರಾಮಸ್ಥರು ಶಾಂತಿ ಸಮಾಧಾನಗಳ ಜೀವನ ನಡೆಸುತ್ತಿದ್ದರು. ಪ್ರತಿಯೊಂದು ಗ್ರಾಮದಲ್ಲಿ ಗ್ರಾಮದ ಮುಖ್ಯಸ್ಥ, ಕಾವಲುಗಾರ ಮತ್ತು ಪಟವಾರಿ ಇದ್ದೇ ಇರುತ್ತಿದ್ದರು. ಆಯಾ ಪ್ರದೇಶದ ಶಿಕ್ಷಣ ಮತ್ತು ನೈರ್ಮಲ್ಯಗಳನ್ನು ವ್ಯವಸ್ಥೆಗೊಳಿಸುವುದು ಅವರ ಹೊಣೆಯಾಗಿತ್ತು. ಗ್ರಾಮದ ಮುಖ್ಯಸ್ಥನು ಶಿಕ್ಷೆ ವಿಧಿಸುವ ಹಾಗೂ ವಿಚಾರಣೆ ನಡೆಸುವ ನ್ಯಾಯಾಧೀಶನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಚಾಂಡೇಶ್ವರನ ಪ್ರಕಾರ, ಬಗೆಹರಿಯದ ವ್ಯಾಜ್ಯಗಳನ್ನು ಅಂತಿಮ ತೀರ್ಮಾನಕ್ಕಾಗಿ ಮೇಲಧಿಕಾರಿಗಳಿಗೆ ಕಳಿಸಲಾಗುತ್ತಿತ್ತು. ಪಂಚಾಯತಗಳು ಪ್ರಜಾಪ್ರಭುತ್ವದ

ತಳಹದಿಯ ಮೇಲೆ ರಚಿಸಲ್ಪಟ್ಟಿದ್ದವೆಂಬುದು ಸಂತೋಷದಾಯಕ ಸಂಗತಿ. ಈ ವ್ಯವಸ್ಥೆ ಬಹುಕಾಲ ಮುಂದುವರಿಯಿತು ಮತ್ತು ಬ್ರಿಟಿಷರ ಆಗಮನದೊಂದಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯ ಸೌಧ ನಾಶಹೊಂದಿತು.

ಎಲ್ಲೆಲ್ಲೂ ಶಾಂತಿ ಸಮೃದ್ಧಿ ನೆಲೆಸುವಂತೆ ನೋಡಿಕೊಳ್ಳುವುದು ಪಂಚಾಯತ ಅಧಿಕಾರಿಗಳ ನೈತಿಕ ಹೊಣೆಯಾಗಿತ್ತು. ಪಂಚಾಯತದ ಅಧಿಕಾರವ್ಯಾಪ್ತಿಯು ಜಾತ್ಯಾತೀತ, ನೈತಿಕ ಮತ್ತು ಧಾರ್ಮಿಕ ವ್ಯವಹಾರಗಳವರೆಗೆ ವಿಸ್ತರಗೊಂಡಿತ್ತು. ಧಾರ್ಮಿಕ ವಿಧಿಗಳನ್ನು ಸಂರಕ್ಷಿಸಲೋಸುಗ ಪವಿತ್ರ ಗ್ರಂಥಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿತ್ತು. ಜನರ ನೀತಿ ನಡತೆಗಳ ಮೇಲ್ವಿಚಾರಣೆ ಮಾಡಲು ಒಬ್ಬ ಅಧಿಕಾರಿಯಿರುತ್ತಿದ್ದ. ಪ್ರಜೆಗಳ ಜೀವನದ ಪ್ರತಿಯೊಂದು ಅಂಶವೂ ರಾಜ್ಯದ ಅವಗಾಹನೆಗೆ ಒಳಪಟ್ಟಿತ್ತು. ಅದರಿಂದಾಗಿ ಎಲ್ಲೆಲ್ಲೂ ಸಮೃದ್ಧಿಯನ್ನು ಕಾಣಬಹುದಿತ್ತು.

ಕರ್ನಾಟ ಕಾಲಘಟ್ಟದಲ್ಲಿ ಗ್ರಾಮೀಣ ಮತ್ತು ಕಂದಾಯ ಆಡಳಿತ ಅಪಾರ ರಾಜಕೀಯ ಮಹತ್ವ ಪಡೆದುದು ಸಂದೇಹಾತೀತವಾಗಿ ಸ್ಥಾಪಿತಗೊಂಡಿದೆ. ಚಾಂದೇಶ್ವರನು ಗ್ರಾಮೀಣ ವ್ಯವಹಾರಗಳಿಗೆಂದೇ ವಿಶೇಷ ಮಂತ್ರಿ ಇಲಾಖೆ ಇತ್ತೆಂದು ಹೇಳಿರುವುದು ಆ ಮಾತನ್ನು ಇನ್ನೂ ಹೆಚ್ಚು ಸಮರ್ಥಿಸುತ್ತದೆ. ಈ ಕಾಲಘಟ್ಟದಲ್ಲಿ ಭೂಸಾಗುವಳಿದಾರರನ್ನು ದುರ್ಬಲಗೊಳಿಸಲಾಯಿತು ಮತ್ತು ಅವರಿಗೆ ಭೂ ಆಸ್ತಿಯ ಮೇಲೆ ಅಧಿಕಾರವಿರಲಿಲ್ಲ. ಆದರೆ, ಸಮಾಜದ ಒಟ್ಟು ಚಿತ್ರ ಖಂಡಿತವಾಗಿಯೂ ಶೋಚನೀಯವಾಗಿರಲಿಲ್ಲ.

## ರಾಯಭಾರ, ದೂತ ಮತ್ತು ನೀತಿ ತತ್ವಗಳು

ನಮ್ಮ ಚಿಂತಕರು ರಾಯಭಾರದ ತತ್ವಗಳನ್ನು ನಿರೂಪಿಸಿರುವರು ಮತ್ತು ಈ ಮಹತ್ವದ ಅಂಶದ ಬಗೆಗೆ ಕೆಲವು ಶಬ್ದಗಳನ್ನು ಹೇಳುವುದು ಅಪ್ರಸ್ತುತವಾಗಲಾರದು. ಅದು ಸಾಮಂತರ ಶಾಸನಬದ್ಧ ಸ್ಥಾನಮಾನವನ್ನು ವಿವರಿಸುತ್ತದೆ. ರಾಜ್ಯದ ದೈವವು ನಿಸ್ಸಂದೇಹವಾಗಿಯೂ ರಾಜನೊಂದಿಗೆ ಸಂಬಂಧಿತವಾಗಿತ್ತು. ರಾಜ್ಯದಲ್ಲಿ ಒಳ್ಳೆಯ ಆಡಳಿತವನ್ನು ಮತ್ತು ಯುದ್ಧರಂಗದಲ್ಲಿ ವಿಜಯಗಳನ್ನು ನಿಶ್ಚಿತಗೊಳಿಸಲು ಶಕ್ತಿಶಾಲಿ ಅರಸನ ಅಗತ್ಯವಿತ್ತು. ಋಜುತ್ವವು ಅರಸೊತ್ತಿಗೆಯ ತಳಪಾಯವೆಂದೇ ಪರಿಗಣಿಸಲಾಗಿತ್ತು.[11] ಪ್ರಾಚೀನ ಭಾರತೀಯ ಪರಂಪರೆಗಳಿಗನುಗುಣವಾಗಿ ವಿದ್ಯಾಪತಿಯು ರಾಯಭಾರ ಮತ್ತು ರಾಜ್ಯತಂತ್ರದ ಕೆಲವು ಮೂಲಭೂತ ತತ್ವಗಳನ್ನು ಚರ್ಚಿಸಿರುವನು.

ಅವನ ಪ್ರಕಾರ, ರಾಜ್ಯದ ವ್ಯವಹಾರಗಳ ಬಗೆಗೆ ಸಂಪೂರ್ಣ ಗೋಪ್ಯತೆ ಅತ್ಯಾವಶ್ಯಕವಾಗಿತ್ತು ಮತ್ತು ವೈರಿಯ ಬಲದ ಖಚಿತ ಜ್ಞಾನವೂ ಆವಶ್ಯಕವಾಗಿತ್ತು. ವೈರಿಗಳು, ನಿಂದಕರು ಮತ್ತು ರೋಗಗಳು ಅಪಾಯದ ಪ್ರಾಕೃತಿಕ ವ್ಯಾಪಾರಿಗಳಾಗಿದ್ದು ಅವುಗಳ ಬಗೆಗೆ ಕಟ್ಟುನಿಟ್ಟಿನ ಎಚ್ಚರದಿಂದಿರಬೇಕು. ಮೇಲಾಗಿ, ರಾಜನು ವೈರಿಯನ್ನು ಧೈರ್ಯ ನಿರ್ಧಾರಗಳಿಂದ ಎದುರಿಸುವಂತೆ ಉಪದೇಶಿಸಲಾಗಿದೆ. ಅವನು ವಿನಾಶಕಾರಿಯಾದ ನಿರಾಶೆ ಹಾಗೂ ಗೊಂದಲ ಸ್ಥಿತಿಯಲ್ಲಿ ಒಂದು ಕ್ಷಣವನ್ನು ಕೂಡ ಕಳೆಯಬಾರದು. ಎಲ್ಲ ಕಡೆಗಳಿಂದಲೂ ಅಪಾಯದ

ಅಲೆಯಿರುವಾಗ ಕುಲಜನ ಮೈತ್ರಿಯ ಬಗೆಗೆ ವಿದ್ಯಾಪತಿಯು ಸಾಕಷ್ಟು ಗಮನ ನೀಡಿದ್ದಾನೆ. ದುರ್ಬಲ ರಾಜನು ಬಲಶಾಲಿ ವೈರಿಯ ಕೈಯಲ್ಲಿ ಸೋತಾಗ, ವೈರಿಯ ಬಿಡಾರದಲ್ಲಿ ಒಡಕು ಹುಟ್ಟಿಸುವ ಪರಿಣತ ಕಾರ್ಯಭಾರಿಗಳನ್ನು ಕಳಿಸಬೇಕು. ಪ್ರಭುತ್ವ ಹೊಂದಿರದ ವ್ಯಕ್ತಿಯೊಂದಿಗಿನ ಮೈತ್ರಿಯು ಅರ್ಥವಿಲ್ಲದ್ದೆಂದು ಸ್ಪಷ್ಟವಾಗಿ ಹೇಳಲಾಗಿದೆ. ಸೈನ್ಯದ ಎಲ್ಲ ಅಂಗಗಳನ್ನು ಸುಸ್ಥಿತಿಯಲ್ಲಿಡುವಲ್ಲಿಯೆ ರಾಜನ ಬಲ ಅಡಗಿದೆ. ಸಮಾನ ಅಂತಸ್ತಿನ ರಾಜರ ಮಧ್ಯೆ ಯುದ್ಧವಿರಬೇಕು. ಆದರೆ, ಯುದ್ಧಭೂಮಿಯಲ್ಲಿ ವಿಜಯ ಬಹಳ ಅನಿಶ್ಚಿತವಾದುದು. ಶುಕ್ರ ಮತ್ತು ಕೌಟಿಲ್ಯರು ಸೂಚಿಸಿರುವಂತೆ, ಶೂರತನವಿಲ್ಲದ ರಾಯಭಾರವು ಹೇಡಿತನವಲ್ಲದೆ ಬೇರೆಯಲ್ಲ. ಚಾಣಾಕ್ಷತನವಿಲ್ಲದ ಶೌರ್ಯವು ಪಶುಗಳ ನಡತೆಯಿದ್ದಂತೆ. ಸಾಮಾನ್ಯವಾಗಿ ಯಶಸ್ಸು ಪ್ರಾಪ್ತವಾಗುವುದು ಇವೆಲ್ಲ ಅಂಶಗಳು ಒಟ್ಟುಕೂಡಿದಾಗ ಮತ್ತು ವೈರಿಯ ಭೇದ್ಯ ಜಾಗದಲ್ಲಿ ಹೊಡೆತ ಕೊಟ್ಟಾಗ.[12] ಗೋಪ್ಯತೆಯು ರಾಯಭಾರ ಚಟುವಟಿಕೆಗಳ ತಳಪಾಯವೇ ಆಗಿದೆ. ವೈರಿಯನ್ನು ಸದೆಬಡೆಯುವ ಈ ನಾಲ್ಕು ತತ್ವಗಳನ್ನು ನಿರೂಪಿಸುವಲ್ಲಿ ಚಾಂದೇಶ್ವರ ಮತ್ತು ವಿದ್ಯಾಪತಿಯರಲ್ಲಿ ಸಹಮತವಿದೆ.

ನಿಜವಾದ ಮುತ್ಸದ್ದಿ ತನ್ನ ಮಿತ್ರರ ಸಂಖ್ಯೆ ಹೆಚ್ಚಿಸಿಕೊಳ್ಳುವ ಗುರಿ ಹೊಂದಿರುತ್ತಾನೆ. ಆಕ್ರಮಣ ಮಾಡುವ ಮುನ್ನ ತನ್ನ ವೈರಿಯ ಬಲವನ್ನು ಅರಿತಿರಬೇಕು. ಚಾಂದೇಶ್ವರನು ಈ ಉದ್ದೇಶಕ್ಕಾಗಿ ದೂತರ ಕರ್ತವ್ಯಗಳು, ಕಾರ್ಯಾಚರಣೆಗಳು ಮತ್ತು ಅಧಿಕಾರಗಳನ್ನು ವಿವರಿಸುತ್ತಾನೆ.[13] ದೂತರು ರಾಜನನ್ನು ಯಾವಾಗಲೂ ಏಕಾಂತದಲ್ಲಿ ಭೆಟ್ಟಿಯಾಗಿ ಅವನಿಗೆ ಎಲ್ಲವನ್ನೂ ಗುಟ್ಟಾಗಿ ಹೇಳಬೇಕು. ಸಿಕ್ಕಸಿಕ್ಕವರಿಗೆಲ್ಲ ದೂತನ ಗುರುತು ಇರಕೂಡದು. ನಿಷ್ಠ ದೂತರಿಗೆ ಗೌರವ ತೋರಬೇಕು. ರಾಜ್ಯಕ್ಕೆ ತೋರುವ ಅಖಂಡ ನಿಷ್ಠಭಾವನೆ ದೂತನ ಮುಖ್ಯ ಅರ್ಹತೆ. ಈ ಹುದ್ದೆಗೆ ಉನ್ನತ ಪರಿಣತಿಯುಳ್ಳ, ಚಾಣಾಕ್ಷತೆಯುಳ್ಳ ಮತ್ತು ಅನುಭವವುಳ್ಳ ವ್ಯಕ್ತಿಗಳನ್ನೆ ನಿಯಮಿಸಬೇಕು. ನಿಷ್ಠ ದೂತನಲ್ಲಿ ದಕ್ಷತೆ, ಸಹದ್ರತ, ಧೃಢತ, ಕ್ಷಂತಿ, ಕ್ಲೇಶ, ಸಹಿಷ್ಣುತೆ, ಶೀಲ ಮತ್ತು ಉತ್ಸಾಹಗಳಿರಬೇಕು.[14] ಐತಿಹ್ಯ ಮೂಲಗಳನ್ನು ಅವಲಂಬಿಸುವುದಾದರೆ, ಕರ್ನಾಟ ರಾಜವಂಶದ ಹರಿಸಿಂಹದೇವನು ದೇವಗಿರಿಯ ಯಾದವ ಅರಸ ರಾಮದೇವನೊಂದಿಗೆ ಮೈತ್ರಿ ಹೊಂದಿದ್ದನು ಮತ್ತು ಗೋರಖಪುರದ ರಾಜನೊಂದಿಗೂ ರಾಯಭಾರ ಸಂಬಂಧ ಹೊಂದಿದ್ದನು. ದೂತರನ್ನು ಸಂಧಾನದ ಉದ್ದೇಶಕ್ಕಾಗಿ ಕಳಿಸಲಾಗುತ್ತಿತ್ತು.[15] ರಾಯಭಾರ ಮತ್ತು ದೂತರಿಗೆ ಸಂಬಂಧಿಸಿದ ಮೂಲಭೂತ ತತ್ವಗಳನ್ನು *ಪ್ರಾಕೃತಪೈಂಗಲ*ದಲ್ಲಿ ಚೆನ್ನಾಗಿ ಹಿಡಿದಿಡಲಾಗಿದೆ. ಆಂತರಿಕ ಆಡಳಿತ ಮತ್ತು ಬಾಹ್ಯ ಸಂಬಂಧಗಳಲ್ಲಿ ರಾಜನ ಯಶಸ್ಸು ದೂತರನ್ನೆ ಅವಲಂಬಿಸಿತ್ತು.

ವೈರಿಯ ಕಣ್ಣಲ್ಲಿ ಮಣ್ಣೆರಚುವುದು ರಾಯಭಾರದ ಮಹತ್ವದ ಅಂಶಗಳಲ್ಲೊಂದು. ಆದರೆ, ಬುದ್ಧಿವಂತ ರಾಜನು ವಾಸ್ತವಿಕ ರೀತಿಯಲ್ಲಿ ಪರಿಸ್ಥಿತಿಯ ಲೆಕ್ಕಾಚಾರ ಹಾಕಬೇಕು. ಆಗುಹೋಗುಗಳನ್ನು ಮುಂದಾಲೋಚಿಸದಿದ್ದವನು ಕೊನೆಗೆ ತೊಂದರೆಯಲ್ಲಿ ಸಿಗಹಾಕಿಕೊಂಡು ಅನಂತರ ಪರಿತಪಿಸಬೇಕಾಗುತ್ತದೆ. ಕಬ್ಬಿಣ ಮತ್ತು ಚಿನ್ನಗಳ ವ್ಯತ್ಯಾಸ

ಬಲ್ಲವನೆ ಬುದ್ಧಿವಂತನು. ನೀರಿನ ಗತಿಯನ್ನು ತಡೆಗಟ್ಟುವುದು ಮತ್ತು ಕೊಡಮಾಡಿದ ದಾನವನ್ನು ಕಿತ್ತುಕೊಳ್ಳುವುದು ಬುದ್ಧಿವಂತಿಕೆಯಲ್ಲ. ವಚನಪಾಲನೆ ಯಾವನೊಬ್ಬನ ನೀತಿಯ ಮಹತ್ವದ ಅಂಶ. ಸಕಾಲಿಕ ಕ್ರಮಕ್ಕೆ ಬೆಲೆಯುಂಟು (ಸಕಾಲದಲ್ಲಿ ಹಾಕಿದ ಹೊಲಿಗೆ ಒಂಭತ್ತು ಹೊಲಿಗೆಗಳನ್ನು ಉಳಿಸುವುದು). ಬುದ್ಧಿವಂತನ ಮಾತುಗಳೆಂದರೆ ಕಲ್ಲಿನಲ್ಲಿ ಕೆತ್ತಿದ ಅಕ್ಷರಗಳಿದ್ದಂತೆ. ಪ್ರಭುವೆ ತಪ್ಪೆಸಗಿದರೆ ಅದಕ್ಕೆ ಉಪಾಯವಿಲ್ಲ. ಸಂಭಾಷಣೆಯಲ್ಲಿ ಇತರರನ್ನು ನೋಯಿಸದಂತೆ ಮಾತುಗಳು ನಾಜೂಕಾಗಿರಬೇಕು. ಸಂಪತ್ತಿಗೆ ಬಹಳ ಮಹತ್ವವಿದ್ದು ಯಾರೂ ಬಡವರು ಮತ್ತು ದಲಿತರ ಬಗೆಗೆ ಕಾಳಜಿ ಮಾಡುವುದಿಲ್ಲ. ಕೆಲವೊಮ್ಮೆ ಸಂಕಟಗಳು ಬರುತ್ತವೆ ಮತ್ತು ಜೀವನವನ್ನು ಕಷ್ಟಕರವಾಗಿಸುತ್ತದೆ. ಆದರೆ, ಸಮಾಧಾನ ಮತ್ತು ದೂರದೃಷ್ಟಿಯುಳ್ಳವನು ಶ್ರೀಮಂತಿಕೆ ಮತ್ತು ವಿಪತ್ತುಗಳೆರಡನ್ನೂ ಸ್ವಾಗತಿಸುತ್ತಾನೆ. ಮೇಲೆ ವಿವರಿಸಲಾಗಿರುವಂತೆ, ತಾನು ಮಾಡಿದ್ದನ್ನು ತಾನೇ ಉಣ್ಣಬೇಕೆಂದು ನೀತಿಯು ಸ್ಪಷ್ಟಪಡಿಸುತ್ತದೆ. ಏಕೆಂದರೆ, ಯಾವ ಪರಿಸ್ಥಿತಿಯಲ್ಲೂ ವಿಧಿಯು ಅದನ್ನು ತಡೆಯದು.

ಚಾಂಡೇಶ್ವರನು ತನ್ನ *ರಾಜನೀತಿ ರತ್ನಾಕರ*ದಲ್ಲಿ ಸಾಮಂತರ ಶಾಸನಬದ್ಧ, ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವನ್ನು ಸಾದ್ಯಂತವಾಗಿ ಚರ್ಚಿಸಿರುವನು. ಆ ದಿನಗಳ ರಾಜಕೀಯ ವ್ಯವಹಾರಗಳಲ್ಲಿ ಸ್ವತ: ತಾನೆ ಮಹತ್ವದ ಪಾತ್ರ ವಹಿಸಿದ್ದನಾದ್ದರಿಂದ ಅವನು ಎಲ್ಲವನ್ನೂ ಸ್ವಾನುಭವದಿಂದ ಬರೆದಿರುವನು. ಸಾಮಂತರ ನಿಷ್ಠೆಯು ಕರ್ನಾಟ ಕಾಲಘಟ್ಟದ ಅವನತಿಯ ನಂತರವೂ ಮುಂದುವರಿಯಿತು.

## ಇತರ ಆಡಳಿತಾತ್ಮಕ ಮುಖಗಳು

ಮಂತ್ರಿಮಂಡಳದ ಕೆಳಗೆ ಅನೇಕ ಆಡಳಿತ ವಿಭಾಗಗಳಿದ್ದವು. ಆ ವಿಭಾಗಗಳು ಅವುಗಳ ಮಂತ್ರಿಗಳ ಮೇಲ್ವಿಚಾರಣೆಯಲ್ಲಿದ್ದವು. ವಿಭಾಗಗಳ ಮೂಲವನ್ನು ಗುಪ್ತ ಯುಗದಲ್ಲಿ ಗುರುತಿಸಬಹುದು. ಸಂಧಿವಿಗ್ರಹಿಕನು ರಾಜನ ದತ್ತಿಗಳನ್ನು ನೀಡಬಲ್ಲವನಾಗಿದ್ದನು. ಈ ಕಾಲಘಟ್ಟದಲ್ಲಿ, ಈ ಹುದ್ದೆಯ ಮಹತ್ವದಲ್ಲಿ ತೀರ ಬದಲಾವಣೆಯಾಗಲಿಲ್ಲ ಮತ್ತು ಅದರ ವ್ಯಾಪ್ತಿ ಕಡಿಮೆಯಾಗಲಿಲ್ಲ. ಸ್ವತಃ ಚಾಂಡೇಶ್ವರನು ಈ ಇಲಾಖೆಯ ಉಸ್ತುವಾರಿ ಹೊಂದಿದ್ದನು. ಅವನ ತಂದೆ, ಅಜ್ಜ ಕೂಡ ಹೊಂದಿದ್ದರು. ಅವನು ನ್ಯಾಯಾಂಗದ ಹೊಣೆ ಕೂಡ ಹೊತ್ತಿದ್ದನು. ಮತ್ತು ಪ್ರಧಾನ ನ್ಯಾಯಾಧೀಶನಾಗಿ ಕಾರ್ಯ ನಿರ್ವಹಿಸುತ್ತಿದ್ದನು.[16] ಅಪ್ಪಟ ಪ್ರಾಮಾಣಿಕತೆ ಮತ್ತು ಬುದ್ಧಿಮತ್ತೆಯುಳ್ಳ ವ್ಯಕ್ತಿಗಳನ್ನು ಈ ಉನ್ನತ ಹುದ್ದೆಗೆ ನಿಯಮಿಸಲಾಗುತ್ತಿತ್ತು. ಪ್ರಾಡ್ವಿವೇಕನ ನೇರ ನಿಯಂತ್ರಣದಲ್ಲಿದ್ದ ಇನ್ನೊಂದು ಇಲಾಖೆ ಯೆಂದರೆ ಕಾನೂನು ಮತ್ತು ನ್ಯಾಯ ಇಲಾಖೆ.[17] ಧರ್ಮಾಧಿಕರಣನು ನ್ಯಾಯಾಧೀಶನಿಗೆ ಸರಿಸಮಾನನಾಗಿದ್ದನು. ಈ ಕಾಲದ ಪ್ರಧಾನ ನ್ಯಾಯಾಧೀಶ ಮತ್ತು ನ್ಯಾಯಧೀಶರ ದೀರ್ಘ ಪಟ್ಟಿಯನ್ನು ನೋಡಿದರೆ ಕೇವಲ ಬ್ರಾಹ್ಮಣರನ್ನೆ ಪ್ರಧಾನ ನ್ಯಾಯಾಧೀಶ ಹುದ್ದೆಗೆ ನಿಯಮಿಸುತ್ತಿದ್ದುದು ಕಂಡುಬರುತ್ತದೆ. ಮಿಥಿಲೆಯ ಆಡಳಿತ ಇತಿಹಾಸ ಕ್ಷೇತ್ರದಲ್ಲಿ

ವಾಚಸ್ಪತಿಯ *ವಿವಾದ ಚಿಂತಾಮಣಿಯೂ* ಮಹತ್ವದ್ದಾಗಿದೆ. ಅತ್ಯುನ್ನತ ಸ್ವರೂಪದ ಆಧುನಿಕ ನ್ಯಾಯಾಲಯಗಳು ಈ ಗ್ರಂಥವನ್ನು ಪರಮ ಮಹತ್ವದ್ದೆಂದು ಸ್ವೀಕರಿಸಿವೆ. ವಾಚಸ್ಪತಿಯ ಇನ್ನೊಂದು ಗಮನಾರ್ಹ ಸ್ವರೂಪದ ಗ್ರಂಥವೆಂದರೆ *ವ್ಯವಹಾರಚಿಂತಾಮಣಿ.*[18] ಚಾಂದೇಶ್ವರ ಮತ್ತು ವಾಚಸ್ಪತಿಯರನ್ನು ಮಿಥಿಲೆಯ ಈರ್ವರು ನ್ಯಾಯಸಂಹಿತೆಗಾರರೆಂದು ಅಭಿನಂದಿಸಬಹುದು. ಅವರು ಸ್ವತಂತ್ರ ಹಾಗೂ ಸಮಗ್ರ ಕಾನೂನುಗಳ ಕಟ್ಟನ್ನು ಮಂಡಿಸಿದ್ದಾರೆ.

ಎಲ್ಲ ತರಹದ ನಾಗರಿಕ ವ್ಯಾಜ್ಯಗಳು ಆಸೆಬುರುಕುತನ ಮತ್ತು ಅಜ್ಞಾನದಿಂದಲೆ ಉದಯಿಸುತ್ತವೆಂದು ಸರಿಯಾಗಿಯೆ ಗುರುತಿಸಲಾಗಿದೆ.[19] ಶಿಕ್ಷೆ ವಿಧಿಸುವುದು ಅಪರಾಧಿಗಳನ್ನು ನಿಗ್ರಹಿಸಲೋಸುಗ. ಸೌಮ್ಯ ಶಿಕ್ಷೆ ಪರಿಣಾಮ ಬೀರದಿದ್ದರೆ ಅಪರಾಧಿಗಳನ್ನು ಕಠೋರವಾಗಿ ಶಿಕ್ಷಿಸಲಾಗುತ್ತಿತ್ತು.[20] ಈ ಕಾಲಘಟ್ಟದಲ್ಲಿ ಐದು ತರಹದ ಶಿಕ್ಷೆಗಳು ಪ್ರಚಲಿತದಲ್ಲಿದ್ದವು. ಮೊದಲ ವರ್ಗವೆಂದರೆ ಬೋಧಕರು, ಕಾರ್ಯನಿರತ ಪುರೋಹಿತರು, ಬ್ರಹ್ಮಚಾರಿಗಳು, ಅರಸರು, ಮಕ್ಕಳು, ವೃದ್ಧರು ಮತ್ತು ಮತಿಭ್ರಷ್ಟರು. ಅವರಿಗೆ ಸಂಪೂರ್ಣ ವಿನಾಯಿತಿಯಿತ್ತು. ಬ್ರಾಹ್ಮಣರಿಗೆ ದೈಹಿಕ ಹಿಂಸೆ, ಅಂಗಗಳನ್ನು ಕತ್ತರಿಸುವುದು ಮತ್ತು ಮರಣಶಿಕ್ಷೆಯಿಂದ ವಿಮುಕ್ತಿ ಇತ್ತು. ಅವರು ಕೆಲವೊಂದು ವಿಶೇಷ ಹಕ್ಕುಗಳನ್ನೂ ಪಡೆದಿದ್ದರು: ಅವರು ಹಾದುಹೋಗುವಾಗ ಅವರಿಗೆ ದಾರಿ ಬಿಡಬೇಕಿತ್ತು. ಭಿಕ್ಷೆಗಾಗಿ ಇನ್ನೊಬ್ಬರ ಮನೆ ಪ್ರವೇಶಿಸುವ ಹಕ್ಕು ಅವರಿಗಿತ್ತು; ಇನ್ನೊಬ್ಬನ ಅಂಗಳದಿಂದ ಉರುವಲು ಕಟ್ಟಿಗೆ ತೆಗೆದುಕೊಳ್ಳುವ, ಹೂಗಳನ್ನು ಹರಿದುಕೊಳ್ಳುವ, ಕುಶ ದರ್ಭೆಯನ್ನು ಕಿತ್ತುಕೊಳ್ಳುವ ಹಕ್ಕಿತ್ತು; ಕೊನೆಯಲ್ಲಿ, ಅವರು ಅನ್ಯರ ಮಡದಿಯರೊಂದಿಗೆ ಮಾತಾಡಿದರೆ ಅವರ ಚಾರಿತ್ರ್ಯಕ್ಕೆ ಕುಂದು ಇರಲಿಲ್ಲ.

ಹೀಗೆ ಅನೇಕ ಪಾರಂಪರಿಕ ಹಕ್ಕುಗಳ ವಿವರಗಳನ್ನು ಕೊಡಲಾಗಿದೆ. ನ್ಯಾಯಾಲಯ ನಿಂದನೆಗೆ ಶಿಕ್ಷೆ ನೀಡಲು ಅವಕಾಶವಿತ್ತು. ಪ್ರಜೆಗಳನ್ನು ಪ್ರಚೋದಿಸಿದರೆ ಅದು ಗಂಭೀರ ಅಪರಾಧವೆಂದು ಪರಿಗಣಿಸಲಾಗುತ್ತಿತ್ತು. ನ್ಯಾಯಾಧೀಶನು ಪ್ರಾಮಾಣಿಕನೂ ವಿಚಾರವಂತನೂ ನಿಷ್ಪಕ್ಷಪಾತಿಯೂ ವಿವೇಚನೆಯುಳ್ಳವನೂ ಲೋಭರಹಿತನೂ ಆಗಿರಬೇಕಾದುದು ಆವಶ್ಯಕವಾಗಿತ್ತು. ಈ ಕಾಲಘಟ್ಟದಲ್ಲಿ ಊಳಿಗಮಾನ್ಯ ವ್ಯವಸ್ಥೆ ತನ್ನ ಛಾಯೆ ಚೆಲ್ಲಿತ್ತು. ಜನರಲ್ಲಿ ಅಪಾರ ಅಸಮಾಧಾನ ಮತ್ತು ಹೃದಯವೇದನೆ ಇದ್ದಿತ್ತಾದ್ದರಿಂದ ಅನೇಕ ಅಪರಾಧಗಳು ಜರುಗುತ್ತಿದ್ದವು. ನಿಜವಾಗಿಯೂ, ಅಪರಾಧವು ನಿರ್ದಿಷ್ಟ ಸಾಮಾಜಿಕ ಪರಿಸ್ಥಿತಿಗಳ ಫಲ. ಈ ಅಭಿಪ್ರಾಯಕ್ಕೆ ವರ್ಧಮಾನನ ಸಹಮತವಿದೆ. ಸಾಮಾಜಿಕ ಆಗುಹೋಗುಗಳು, ಆಹಾರದ ಕೊರತೆ, ನ್ಯಾಯ ದೊರಕದಿದ್ದಾಗ ಉಂಟಾಗುವ ಹತಾಶೆ ಮತ್ತು, ಅಂತಿಮವಾಗಿ, ಸಮಾಜಶ್ರೇಷ್ಠರ ದುರಹಂಕಾರಗಳೂ ಅಪರಾಧಕ್ಕೆ ಕಾರಣಗಳಾಗಿರುತ್ತವೆ. *ದಂಡವಿವೇಕವೂ* ಈ ಸಾರ್ವಕಾಲಿಕ ಸತ್ಯವನ್ನು ದೃಢಪಡಿಸುತ್ತದೆ. ತಂತ್ರಜ್ಞರು ಮತ್ತು ಕುಶಲಕರ್ಮಿಗಳನ್ನೊಳಗೊಂಡ ಇತರ ಜನವರ್ಗಗಳಿಗೆ ಬೇರೆ ರೀತಿಯ

ಶಿಕ್ಷೆಗಳನ್ನು ನಿರ್ದಿಷ್ಟಪಡಿಸಲಾಗಿತ್ತು. ದಂಡಗಳನ್ನು ವಿಧಿಸಲಾಗುತ್ತಿತ್ತು ಮತ್ತು ಕೆಲವೊಮ್ಮೆ ದಂಡ ತೆರದ ತಪ್ಪಿತಸ್ಥರಿಗೆ ಸೆರೆಮನೆ ಶಿಕ್ಷೆ ವಿಧಿಸಲಾಗುತ್ತಿತ್ತು. ಬ್ರಾಹ್ಮಣರು ಕಂತುಗಳಲ್ಲಿ ದಂಡದ ಹಣ ಸಲ್ಲಿಸಲು ಅನುಮತಿಯಿತ್ತು.

ಚಾಂದೇಶ್ವರನು ತನ್ನ *ರಾಜನೀತಿ ರತ್ನಾಕರದಲ್ಲಿ* ಈ ಅಂಶವನ್ನು ವಿವರಿಸಿರುವನು ಮತ್ತು ರಾಜನಲ್ಲಿರಬೇಕಾದ ಗುಣಗಳನ್ನು ವಿಶದಪಡಿಸಿರುವನು. *ರಾಜನೀತಿ ರತ್ನಾಕರದ* 'ದಂಡ' ಅಧ್ಯಾಯವು ಅನೇಕ ದೃಷ್ಟಿಗಳಿಂದ ಶ್ರೇಷ್ಠವಾಗಿದೆ. ಪ್ರಜೆಗಳು ನಿಯಮಪಾಲಕರಾಗಿರುವಂತೆ ನಿರೋಧಕ ಶಿಕ್ಷೆಯನ್ನು ನಿಯಮನಗೊಳಿಸಿರುವನು. ಅದು ಹೊಣೆಗೇಡಿ ನಾಗರಿಕರನ್ನು ತಿದ್ದಲೂ ಸಹಾಯಕವಾಗಿತ್ತು.

ಕಾನೂನು ಮತ್ತು ನ್ಯಾಯ ಆಡಳಿತವನ್ನು ಪ್ರತ್ಯೇಕ ಇಲಾಖೆಯಡಿ ಸುಸಂಘಟಿಸಲಾಗಿತ್ತು. ಈ ವಿಚಾರವು *ಸ್ಮೃತಿಗಳ* ಅಧ್ಯಯನದಿಂದ ವಿಪುಲವಾಗಿ ತೋರ್ಪಡುತ್ತದೆ. ಮತ್ತು ಮಿಥಿಲೆಯಲ್ಲಿ ಸುಸಂಘಟಿತ ಕಾನೂನು ವ್ಯವಸ್ಥೆ ಇದ್ದುದನ್ನು ನಿಬಂಧಸಾಹಿತ್ಯದ ಆಧಿಕ್ಯವು ಪ್ರಮಾಣೀಕರಿಸುತ್ತದೆ. ಈ ಶಿಕ್ಷಾತತ್ವಗಳನ್ನು ಸಮಕಾಲೀನ ಮುಸ್ಲಿಮ ತಾತ್ವಿಕ ಮೀಮಾಂಸಕರು ಅನುಮೋದಿಸಿರುವರು. ಎಲ್ಲ ಅಂಶಗಳನ್ನು ಪರಿಗಣಿಸುತ್ತ ರಾಜನು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಬದ್ಧನಾಗಿದ್ದನು.[21] ಈ ತತ್ವಗಳನ್ನು ನಿರ್ದಾಕ್ಷಿಣ್ಯವಾಗಿ ಪಾಲಿಸದಿದ್ದರೆ ಯಾವ ರಾಜನೂ ಯಶಸ್ಸು ಕಾಣಲು ಸಾಧ್ಯವಿರಲಿಲ್ಲ. ಈ ತತ್ವಗಳು ಮತ್ತು ಧೋರಣೆಗಳಿಗೆ *ವೇದಗಳ, ಸ್ಮೃತಿಗಳ* ಮತ್ತು ಐತಿಹ್ಯಗಳ ಅಂಗೀಕಾರ ಮುದ್ರೆಯಿದ್ದುದರಿಂದ ಯಾವ ರಾಜನೂ ಜನಸಾಮಾನ್ಯರ ಅಸಂತೋಷಕ್ಕೆ ಈಡಾಗಬಯಸುತ್ತಿರಲಿಲ್ಲ. ನ್ಯಾಯಾಂಗದ ಪರಮಾಧಿಕಾರ ಹೊಂದಿದ್ದ ರಾಜನು ತನ್ನ ಕರ್ತವ್ಯಗಳನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಲು ಸಹಾಯಕವಾದ ಧಾರ್ಮಿಕ ದಂಡಶಕ್ತಿಗಳೂ ಅಸ್ತಿತ್ವದಲ್ಲಿದ್ದವು.

ಅವಲೋಕನಕ್ಕೊಳಪಟ್ಟಿರುವ ಕಾಲಘಟ್ಟದಲ್ಲಿ ಪೋಲಿಸ ಇಲಾಖೆಯನ್ನು ಅದ್ಭುತವಾಗಿ ಸಂಘಟಿಸಲಾಗಿತ್ತು. ಈ ಇಲಾಖೆಯ ಮುಖ್ಯಸ್ಥನನ್ನು "ಇತರರ ನಡತೆಯ ಮೇಲ್ವಿಚಾರಕ" ಎಂದು ಕರೆಯಲಾಗುತ್ತಿತ್ತು. ರಾಜ್ಯದ ಉದ್ದಗಲಕ್ಕೂ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವುದೆ ಈ ಇಲಾಖೆಯ ಗುರಿಯಾಗಿತ್ತು. ಮಿಥಿಲೆಯಲ್ಲಿ ಪೋಲಿಸ ಇಲಾಖೆಯನ್ನು ಸ್ಥಾಪಿಸಿದ ಶ್ರೇಯಸ್ಸು *ಕರ್ನಾಟ ರಾಜವಂಶದ* ರಾಮಸಿಂಹದೇವನದೆಂದು ಹೇಳಲಾಗಿದೆ. ಈ ವ್ಯವಸ್ಥೆ ಆಯಿನ್ವಾರರ ಕಾಲದವರೆಗೂ ಮುಂದುವರಿಯಿತು. ಪ್ರತಿಯೊಂದು ಗ್ರಾಮದಲ್ಲೂ ಒಬ್ಬ ಪೋಲಿಸ ಅಧಿಕಾರಿಯಿದ್ದನು. ಗ್ರಾಮಪ್ರಮುಖನು ಅವನಿಂದ ನಿತ್ಯ ವರದಿ ಪಡೆಯುತ್ತಿದ್ದನು. *ಗೂಢಚಾರ* ವ್ಯವಸ್ಥೆಯೂ ಅಸ್ತಿತ್ವದಲ್ಲಿತ್ತು. ಎಲ್ಲದರ ಮೇಲೂ ಕಣ್ಣಿಡುವುದು ಮತ್ತು ರಾಜನಿಗೆ ವರದಿ ಮಾಡುವುದು *ಗೂಢಚಾರನ* ಕರ್ತವ್ಯವಾಗಿತ್ತು. ಈ ಮಾಹಿತಿಯನ್ನಾಧರಿಸಿ, ರಾಜನು ಸ್ವತಃ ಇಲ್ಲವೆ ಆ ಉದ್ದೇಶಕ್ಕಾಗಿಯೆ ವಿಶೇಷವಾಗಿ ರಚಿಸಿದ ನ್ಯಾಯಪೀಠದ ಮುಖಾಂತರ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸುತ್ತಿದ್ದನು.

ಕೊತವಾಲನ ಮುಖ್ಯ ಕರ್ತವ್ಯ ತನ್ನ ಪ್ರದೇಶದಲ್ಲಿ ಶಾಂತಿ ಪಾಲನೆಯಾಗಿತ್ತು. ಸಂಸ್ಕೃತ ವ್ಯುತ್ಪತ್ತಿ ಹೊಂದಿರುವ 'ಕೊತ್ತಪಾಲ' ಶಬ್ದದ ಅರ್ಥವೆಂದರೆ "ಕೋಟೆಯ ಪಾಲಕ ಯಾ

ರಕ್ಷಕ." ಆದರೆ ಕಾಲ ಗತಿಸಿದಂತೆ ಅವನ ಕರ್ತವ್ಯಸ್ವರೂಪ ಬದಲಾಯಿತು. ಕರ್ನಾಟ ಕಾಲಘಟ್ಟದಲ್ಲಿ ಪೋಲಿಸ ಇಲಾಖೆಯ ದಿನನಿತ್ಯದ ಕರ್ತವ್ಯಗಳನ್ನು ಕೊತವಾಲನೆ ಮಾಡುತ್ತಿದ್ದ. ಅವನ ಮಂದಿ ರಾತ್ರಿ ನಗರದಲ್ಲಿ ಗಸ್ತು ತಿರುಗುತ್ತಿದ್ದರು. ಮತ್ತು ರಹದಾರಿಗಳನ್ನು ಕಾಯುತ್ತಿದ್ದರು. ಅವನು ನಿವಾಸಿಗಳ ಸಹಕಾರದೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದನು. ಹೊಸದಾಗಿ ಬಂದ ಮತ್ತು ನಿರ್ಗಮಿಸಿದ ಪ್ರತಿಯೊಬ್ಬನ ಮೇಲೂ ಅವನು ಕಣ್ಣಿಟ್ಟಿರುತ್ತಿದ್ದ. ವಿದ್ಯಾಪತಿ ಮಾಡಿರುವ ಕೊತವಾಲನ ವರ್ಣನೆಯು ಮುಸ್ಲಿಮ ವೃತ್ತಾಂತಗಳೊಂದಿಗೆ ಸರಿಹೋಲುತ್ತದೆ. ಕಳ್ಳರು, ಕಿಸೆಗಳ್ಳರು, ಜೂಜುಕೋರರು, ವ್ಯಭಿಚಾರಿಗಳು, ಬಹಿಷ್ಕೃತರು, ಭಿಕ್ಷುಕರು, ಅಲೆಮಾರಿಗಳು ಮತ್ತು ಯೋಗಿಗಳಿಂದ ಆ ಕಾಲದ ಪಟ್ಟಣಗಳು, ನಗರಗಳು ಮತ್ತು ಗ್ರಾಮಗಳು ತುಂಬಿರುತ್ತಿದ್ದುದರಿಂದ ಕೊತವಾಲನು ಆ ಕಾಲದ ರಾಜ್ಯವ್ಯವಸ್ಥೆಯಲ್ಲಿ ಬಹಳ ಮಹತ್ವದ ಪಾತ್ರ ವಹಿಸುತ್ತಿದ್ದನೆಂದು ಸಿದ್ಧಪಡಿಸಲು ಸಾಕಷ್ಟು ಪ್ರಮಾಣಸಾಮಗ್ರಿಯಿದೆ. ಆ ಕಾಲಘಟ್ಟದ ಅನೇಕ ಜನರು ಅಭಾವದಲ್ಲಿ ಬದುಕುತ್ತಿದ್ದರು. ಅಪರಾಧವು ಅಭಾವದ ತೀವ್ರತೆಯ ಪರಿಣಾಮವಾಗಿತ್ತು. ಒಮ್ಮೆ ಫಿರೂಜಶಾಹನು ಎಲ್ಲ ನಿರುದ್ಯೋಗಿಗಳನ್ನು ತನ್ನೆದುರು ತಂದು ನಿಲ್ಲಿಸುವಂತೆ ತನ್ನ ಕೊತವಾಲನಿಗೆ ಆಜ್ಞಾಪಿಸಲಾಗಿ ಆಜ್ಞೆಯನ್ನು ಕೂಡಲೆ ಪಾಲಿಸಲಾಯಿತು.[22] ಸಂಪತ್ತು ಕೆಲವರ ಕೈಯಲ್ಲಿಯೆ ಕೂಡಿಬೀಳುತ್ತ ಹೋದಂತೆ ಆಡಳಿತಯಂತ್ರ ಶಿಥಿಲವಾಯಿತು, ವಿಪರೀತ ನಮ್ಯವಾಯಿತು ಮತ್ತು ರಾಜರು ಕೂಡ ಉದಾಸೀನ ಮತ್ತು ಅಲಕ್ಷ್ಯ ತೋರಲಾರಂಭಿಸಿದ ಬಗೆಗೆ ಸಮಕಾಲೀನ ಸಾಹಿತ್ಯದಲ್ಲಿ ಪ್ರಮಾಣ ದೊರೆಯುವುದು. ಕೊತವಾಲರು ಇದರ ಪ್ರಯೋಜನ ಪಡೆದು ಮಿಕ್ಕವರಂತೆಯೆ ವ್ಯವಹರಿಸಿದರು.[23] ಆರ್ಥಿಕ ಅಸಮಾನತೆಯು ಅಪರಾಧಗಳ ಪ್ರಮಾಣವನ್ನು ಹೆಚ್ಚಿಸಿತು. ಮತ್ತು ದಂಡಸಂಹಿತೆ ಕುರಿತು ದೊಡ್ಡ ಗ್ರಂಥವನ್ನು ಸಂಕಲಿಸಲಾಯಿತು. ರಾತ್ರಿ ಕಾವಲುದಾರರೂ ಆಲಸಿಗಳಾದರು ಮತ್ತು ರಾತ್ರಿಗಳ್ಳರ ದಾಳಿಗಳು ಹೆಚ್ಚಾದವು.

ಉಳಿಗಮಾನ್ಯ ಪದ್ಧತಿಯೆ ಸಾಮಾಜಿಕ ಮತ್ತು ರಾಜಕೀಯ ಸಂಘಟನೆಯ ತಳಹದಿಯಾಗಿದ್ದುದರಿಂದ ಯಾವನೊಬ್ಬನ ಅಂತಸ್ತು ಅವನು ಹೊಂದಿದ್ದ ಭೂಮಿಯ ಪ್ರಮಾಣವನ್ನು ಅವಲಂಬಿಸಿತ್ತು. ಆದುದರಿಂದ, ಆನುವಂಶಿಕ ಸೈನಿಕ ಪದ್ಧತಿಯು ವಾಸ್ತವವಾಗಿ ಸ್ಥಾಪಿತವಾಗಿತ್ತು. ಕೌಟಿಲ್ಯನ ಕಾಲದಿಂದಲೂ ಮತ್ತು ತದನಂತರದ ರಾಜಕೀಯ ಚಿಂತಕರ ಬರವಣಿಗೆಗಳಲ್ಲೂ ಈ ರೀತಿಯ ಸೈನ್ಯದ ಉಲ್ಲೇಖ ದೊರೆಯುತ್ತದೆ.[24] ಚಾಂದೇಶ್ವರನು ಸಹ ಈ ತರಹದ ವಿಚಾರವನ್ನು ಅನುಮೋದಿಸುವನು. ಕಾಣೆ ಅವರ ಅಭಿಪ್ರಾಯದಲ್ಲಿ, ಸೈನಿಕ ಸ್ವರೂಪದ ಸೇವೆಗಳಿಗೆ ಬದಲಾಗಿ ತಮ್ಮ ಪೂರ್ವಜರು ಕರರಹಿತ ಭೂಮಿ ಪಡೆದಿದ್ದವರೇ ಬಹುಶಃ ಮೌಲಾ ಆಗಿದ್ದರು.[25] ಚಾಂದೇಶ್ವರನಿಗೆ ಶ್ರೇಣಿಬಲದವರಲ್ಲಿ ಪ್ರೀತಿಯಿರಲಿಲ್ಲ. ಏಕೆಂದರೆ, ಅವರು ಗಂಡಾಂತರ ಎದುರಾದಾಗ ರಣಭೂಮಿಯಿಂದ ಓಡಿಹೋಗುತ್ತಿದ್ದರು. ಇಂಥ ಸೈನಿಕರಲ್ಲಿ ವಿಶ್ವಾಸ ಇಡಬಾರದೆಂದು ಅವನು ರಾಜನಿಗೆ ಸಲಹೆಯಿತ್ತನು.[26] ಮನುವಿನಿಂದ ಸ್ಫೂರ್ತಿ ಪಡೆದು ಕುರುಕ್ಷೇತ್ರ, ಮತ್ಸ್ಯ, ಸುರಸೇನ ಮತ್ತು

ಪಾಂಚಾಲಗಳ ಸೈನಿಕರನ್ನು ಒಳ್ಳೆಯವರೆಂದು ಪ್ರಶಂಸಿಸಿ, ಅವರು ಶೌರ್ಯಕ್ಕಾಗಿ ಹೆಸರುವಾಸಿಯಾಗಿದ್ದುದರಿಂದ ಅವರನ್ನು ಸೈನ್ಯಪಡೆಯ ಮುಂಚೂಣಿಯಲ್ಲಿ ಇರಿಸುತ್ತಾನೆ.[27] ನೌಕಾಯುದ್ಧದಲ್ಲೂ ಪರಿಣತರಾಗಿದ್ದ ಮಿಥಿಲೆಯ ಯೋಧರ ಸಮವಸ್ತ್ರ, ಶಸ್ತ್ರಗಳು ಮತ್ತು ಸ್ವಭಾವಗಳ ಅದ್ಭುತ ವರ್ಣನೆಯನ್ನು ಸೋಮದೇವನು ತನ್ನ ಯಶಸ್ತಿಲಕದಲ್ಲಿ ಕೊಟ್ಟಿರುವನು.[28]

ಸೈನ್ಯದಲ್ಲಿ ಅನೇಕ ಅಂಗಗಳಿದ್ದವು. ಸೈನ್ಯದಲ್ಲಿ ಅನೇಕ ಹೇರುಪ್ರಾಣಿಗಳಿದ್ದವು. ಮತ್ತು ಜೊತೆಜೊತೆಗೇ ಯೋಧರಲ್ಲಿ ಮನರಂಜನೆ ನೀಡುವ ಬಾಬುಗಳನ್ನು ಒದಗಿಸಲಾಗುತ್ತಿತ್ತು.[29] ಉತ್ಕೃಷ್ಟ ಗುಣಮಟ್ಟದ ಕುದುರೆಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು.[30] ಈ ಕಾಲಘಟ್ಟದಲ್ಲಿ ಕೂಡ ಈಗ ಮಧ್ಯಪ್ರಾಚ್ಯ ಎಂದು ಕರೆಯಲಾಗುವ ದೇಶಗಳೊಂದಿಗೆ ಸಂಬಂಧವಿದ್ದುದನ್ನು ಇದು ಸಿದ್ಧಪಡಿಸುತ್ತದೆ. ಚಾಂದೇಶ್ವರನು ಸೈನ್ಯ ಸಂಘಟನೆಯ ಮತ್ತು ರಣರಂಗದಲ್ಲಿ ಸೈನ್ಯದ ವ್ಯೂಹದ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಒದಗಿಸಿರುವನು. ಹಿಂದೂ ನಂಬಿಕೆಯ ಪ್ರಕಾರ, ಆಕ್ರಮಣವೇ ಅತ್ಯುತ್ತಮ ಸಂರಕ್ಷಣೆಯಾಗಿತ್ತು ಮತ್ತು ಖಡ್ಗವು ಥಾಲಿಗಿಂತ ಉತ್ತಮವಾಗಿತ್ತು.[31]

ಸೇನಾಪಡೆಯ ಏರ್ಪಾಡು ಸೇನಾಪತಿಯ ನೇರ ನಿಯಂತ್ರಣದಲ್ಲಿತ್ತು. ಅವನು ಸೇನಾಪಡೆಯ ಮುಂದಾಳಾಗಿದ್ದನು. ಅವನು ಬಿಲ್ಲುಬಾಣ ಮುಂತಾದ ಯುದ್ಧೋಪಕರಣಗಳನ್ನು ಪರೀಕ್ಷಿಸುತ್ತಿದ್ದನು. ರಾಜ್ಯದ ಸಂರಕ್ಷಣೆಯ ದೃಷ್ಟಿಯಿಂದ ಸಂಧಿ, ವಿಗ್ರಹ, ಯಾನ, ಅಸಮ, ದ್ವೈಧೀಭಾವ ಮತ್ತು ಸಂಶ್ರಯಗಳನ್ನು ಪ್ರಯೋಗಿಸಿ ವೈರಿಯನ್ನು ನಿಯಂತ್ರಣಕ್ಕೆ ತರುವುದು ರಾಜನ ಕರ್ತವ್ಯವಾಗಿತ್ತು. ವೈರಿಯು ಒಪ್ಪಂದಕ್ಕೆ ಬರದಿದ್ದರೆ ರಾಜನು ನಿರ್ಧಾರದಿಂದ ಮತ್ತು ಅಳುಕದೆ ಯುದ್ಧ ಸಾರಬೇಕು.[32] ಯುದ್ಧ ಸಾರುವ ಮೊದಲು ರಾಜನು ಪರಿಸ್ಥಿತಿಯ ಎಲ್ಲ ಸಾಧಕಬಾಧಕಗಳನ್ನು ಪರೀಕ್ಷಿಸಬೇಕು. ವೈರಿಸೈನ್ಯದ ಮಧ್ಯದಲ್ಲೂ ರಾಜನು ಮೋಲದ ತಂತ್ರವನ್ನು ಅನುಸರಿಸುವುದೆ ಯೋಗ್ಯ. ಅಪಾಯದ ಸಮಯದಲ್ಲಿ ವೈರಿಯ ಕಣ್ಣಲ್ಲಿ ಮಣ್ಣೆರಚುವುದೆ ರಾಜನು ಅನುಸರಿಸಬೇಕಾದ ವಿಶೇಷ ಉಪಾಯ. ಒಕ್ಕಲಿಗನು ಅನಾವಶ್ಯಕ ತೃಣಮೂಲಗಳನ್ನು ಕಿತ್ತೆಸೆಯುವಂತೆ ರಾಜನು ವಿರೋಧಿಗಳನ್ನು ತನ್ನ ನಾಡಿನಿಂದ ಕಿತ್ತೆಸೆಯಬೇಕು.

ರಣತಂತ್ರಗಳನ್ನು ವಿಶದವಾಗಿ ಚರ್ಚಿಸಲಾಗಿದೆ. ಆಕ್ರಮಣ ಮಾಡಲು ಅನುಕೂಲಕರ ಸ್ಥಳದಲ್ಲಿ ವೈರಿಯನ್ನು ತಡೆದು ನಿಲ್ಲಿಸಬೇಕು. ವೈರಿದಳದ ಆಹಾರ ಮತ್ತು ಉಪಕರಣಗಳನ್ನು ನಾಶಮಾಡಬೇಕು. ವೈರಿಗಳ ಕೋಟೆಗಳನ್ನು ಕೆಡವಬೇಕು ಮತ್ತು ಆಕ್ರಮಣಗಳನ್ನು ರಾತ್ರಿಯಲ್ಲಿ ನಡೆಸಬೇಕು. ಸಾಧ್ಯವಿದ್ದಷ್ಟೂ ವೈರಿಯನ್ನು ಪ್ರತ್ಯೇಕಿಸಲು ಪ್ರಯತ್ನಿಸಬೇಕು.[34] ವಿಜಯಾನಂತರ ದೇವತೆಗಳಿಗೆ ಮತ್ತು ಬ್ರಾಹ್ಮಣರಿಗೆ ಪ್ರಾರ್ಥನೆ ಸಲ್ಲಿಸಬೇಕು. ಅಂಥ ಸಂದರ್ಭಗಳಲ್ಲಿ ಕರಗಳನ್ನು ಮನ್ನಾ ಮಾಡಬೇಕು, ಸೆರೆಯಾಳುಗಳನ್ನು ಬಿಡುಗಡೆ ಮಾಡಬೇಕು. ಮಂತ್ರಿಗಳ, ಸೇನಾಪತಿಯ ಮತ್ತು ವೈರಿಯ ಇಚ್ಛೆಯನ್ನು ಕೂಡ ಪೂರ್ತಿಗೊಳಿಸಬೇಕು.[35]

ಸೈನಿಕ ಆಡಳಿತವು ಸಂಧಿವಿಗ್ರಹಿಕನ ಹೊಣೆಯಾಗಿತ್ತು. ಆ ಇಲಾಖೆ ಸೇನಾಪತಿಯ ನಿಯಂತ್ರಣದಲ್ಲಿತ್ತು ಮತ್ತು ಸೈನ್ಯದ ಚತುರಂಗಗಳನ್ನು ನೋಡಿಕೊಳ್ಳಲು ಅವನ ಕೆಳಗೆ ಅಧಿಕಾರಿಗಳಿದ್ದರು. ಸೈನಿಕ ಹಾಗೂ ನಾಗರಿಕ ಕರ್ತವ್ಯಗಳು ಬೇರೆ ಬೇರೆಯಾಗಿದ್ದವೊ ಇಲ್ಲವೊ ಹೇಳುವುದು ಕಠಿಣ. ಏಕೆಂದರೆ, ಯುದ್ಧ ಹಾಗೂ ಶೌರ್ಯಗಳ ಮನೋಭಾವದ ವಾತಾವರಣವಿತ್ತು. ಕಣ್ಣಿಗೆ ಕಟ್ಟುವಂಥ ಯುದ್ಧವರ್ಣನೆಗಳಿವೆ ಮತ್ತು ತಮ್ಮ ಶೌರ್ಯ ಪ್ರದರ್ಶಿಸಿದುದಕ್ಕೆ ಅನೇಕ ವೀರರನ್ನು ಕೊಂಡಾಡಿದ್ದಿದೆ. ವೈರಿಗಳ ದಾಳಿಗಳ ಅಪಾಯದಿಂದ ರಾಜ್ಯವನ್ನು ಸಂರಕ್ಷಿಸಲೋಸುಗ ಸಾಧ್ಯವಿದ್ದ ಎಲ್ಲ ತರಹದ ಕ್ರಮಗಳನ್ನು ಆಲೋಚಿಸಲಾಗುತ್ತಿತ್ತೆಂದು ಸೈನಿಕ ಇಲಾಖೆಗಳ ಪರೀಕ್ಷಣದಿಂದ ತಿಳಿದುಬರುತ್ತದೆ.

ಭಂಡಾರವು ಯಾವುದೊಂದು ರಾಜ್ಯದ ಮಹತ್ವದ ಅಂಗವೆಂದು ಪರಿಗಣಿತವಾಗಿದೆ. ಚಾಂದೇಶ್ವರನ ವಿಚಾರವೆಂದರೆ, ರಾಜನು ಭಂಡಾರವನ್ನು ನೈತಿಕ ಹಾಗೂ ಕಾನೂನಿನ ರೀತ್ಯಾ ಭರಿಸಿಟ್ಟಿರಬೇಕು. ಯಾವುದೆ ವ್ಯಕ್ತಿಗತ ಪರಿಗಣನೆ ಅದಕ್ಕೆ ಅಡ್ಡಿಯಾಗಬಾರದು. ರಾಜ್ಯದ ಜೀವಾಳವಾದ ಭಂಡಾರವನ್ನು ನೋಡಿಕೊಳ್ಳಲು ದಕ್ಷ ಹಾಗೂ ಪ್ರಾಮಾಣಿಕ ವ್ಯಕ್ತಿಗಳಿರಬೇಕು. ಕರ್ನಾಟರ ಆಳ್ವಿಕೆಯಲ್ಲಿ ಜತೇಶ್ವರನು ಭಂಡಾರಿಯಾಗಿದ್ದನು. ಮುದ್ರಾಹಸ್ತಕನು ಅದಕ್ಕೆ ಸಂಬಂಧಿಸಿದ ಮಹತ್ವದ ಅಧಿಕಾರಿಯಾಗಿದ್ದನು. ಕರ್ನಾಟ ರಾಜವಂಶದ ದುರ್ದಿನಗಳಲ್ಲಿ ಕೆಲವು ಅರಸರು, *ರಾಜನೀತಿ ರತ್ನಾಕರ* ಹೇಳುವಂತೆ, ಭಂಡಾರವನ್ನು ಭರಿಸಲು ಗೈರಕಾನೂನಿ ಕ್ರಮಗಳನ್ನು ಕೈಕೊಂಡರು. ಈ ಕಾಲಘಟ್ಟವು ಅಪಸಾಮಾನ್ಯವಾಗಿದ್ದುದರಿಂದ 'ಸದಾಭಾಗ'ವು ಅಲಂಕಾರಿಕ ಪದ ಮಾತ್ರವೆಂದು ಚಾಂದೇಶ್ವರನು ವಿವರಿಸುವಂತಾಯಿತು. ಸರಕಾರ ಅಗತ್ಯಕ್ಕನುಗುಣವಾಗಿ ಇಂಥ ಕರಗಳನ್ನು ಆಕರಣೆ ಮಾಡಬೇಕೆಂದು ಚಾಂದೇಶ್ವರನು ಶಿಫಾರಸು ಮಾಡಿರುವನು. ಯಾವುದೆ ನೆಪವೊಡ್ಡಿ ಮಾಡುವ ಬಲವಂತದ ಕರಾಕರಣೆಗೆ ಅವನು ವಿರೋಧಿಯಾಗಿದ್ದನು.[36] ಕೆ.ಪಿ.ಜಯಸ್ವಾಲರು ಯೋಗ್ಯವಾಗಿಯೆ ಎತ್ತಿತೋರಿಸಿರುವಂತೆ, *ರಾಜನೀತಿ ರತ್ನಾಕರ*ದಲ್ಲಿ ಆಸಕ್ತಿಯ ಕೊರತೆಯಾಗಲಿ ಬುದ್ಧಿಶೂನ್ಯತೆಯಾಗಲಿ ಇಲ್ಲ.[37]

ಕರ್ನಾಟ ಅರಸರು ರಕ್ಷಣೆ ಮತ್ತು ಕೋಟೆ ನಿರ್ಮಾಣದ ಸಮಸ್ಯೆಗೆ ತಕ್ಕ ಮಹತ್ವ ಕೊಟ್ಟರು. ರಾಜ್ಯದ ಹುಟ್ಟಿನಿಂದಲೂ ರಾಜರಿಗೆ ರಕ್ಷಣೆಯ ಸಮಸ್ಯೆ ಮಹತ್ವದ್ದಾಗಿತ್ತು. ಎಲ್ಲ ನಿಟ್ಟಿನಲ್ಲೂ ವೈರಿಗಳಿಂದ ಸುತ್ತುವರಿಯಲ್ಪಟ್ಟಿದ್ದರಿಂದ ಅವರು ಜಾಗರೂಕರಾಗಿರಬೇಕಿತ್ತು. ಅವರು ರಾಜ್ಯದ ಬೇರೆ ಬೇರೆಡೆಗಳಲ್ಲಿ ಕೋಟೆ ನಿರ್ಮಾಣಕ್ಕೆ ವಿಶೇಷ ಗಮನ ನೀಡಬೇಕಿತ್ತು. ನಾನ್ಯದೇವನು ಸಿಮರಾಂವಗಡದಲ್ಲಿ ಕಲ್ಲುಕಂಬಗಳ ಮೇಲೆ ನಿಂತ ಭದ್ರ ಕೋಟೆಯನ್ನು ಕಟ್ಟಿದನು. ಆ ವಂಶದ ತರುವಾಯದ ಅರಸರು ಅದನ್ನು ಇನ್ನಷ್ಟು ಭದ್ರಗೊಳಿಸಿದರು.

ರಾಮಸಿಂಹದೇವನ ಆಳ್ವಿಕೆಯಲ್ಲಿ ತಿಬೆಟ ಪ್ರವಾಸಿ ಧರ್ಮಸ್ವಾಮಿ ಮಿಥಿಲೆಗೆ ಕ್ರಿ.ಶ. ೧೨೩೬ ರಲ್ಲಿ ಭೆಟ್ಟಿ ಕೊಟ್ಟಾಗ ಆ ಕಾಲದ ಕೋಟೆ ನಿರ್ಮಾಣದ ಸ್ಥಿತಿಯಿಂದ ತುಂಬಾ

ಪ್ರಭಾವಿತನಾಗಿದ್ದ.[38] ಅವನು ಮಿಥಿಲೆಯ ಕೋಟೆ ನಿರ್ಮಾಣದ ಸ್ಪಷ್ಟ ವೃತ್ತಾಂತವನ್ನು ಈ ಶಬ್ದಗಳಲ್ಲಿ ಬಿಟ್ಟುಹೋಗಿರುವನು : "ಪಾಟಾ ಎಂಬ ನಗರವೊಂದಿತ್ತು. ಅದರಲ್ಲಿ ಆರು ಲಕ್ಷ ಮನೆಗಳಿದ್ದವು ಮತ್ತು ಅದರ ಸುತ್ತ ಏಳು ಸುತ್ತಿನ ಗೋಡೆಗಳಿದ್ದವು. ಈ ಗೋಡೆಗಳ ಎತ್ತರ ಸುಮಾರಾಗಿ ಟಿಬೆಟಿ ಕೋಟೆಯ ಎತ್ತರದಷ್ಟಿತ್ತು. ನಗರದಾಚೆ ರಾಜನ ಅರಮನೆಯಿತ್ತು. ಅದಕ್ಕೆ ಹನ್ನೊಂದು ಮಹಾದ್ವಾರಗಳಿದ್ದವು. ಅದರ ಸುತ್ತಲೂ ನೀರಿನಿಂದ ತುಂಬಿದ ಇಪ್ಪತ್ತೊಂದು ಕಂದಕಗಳು ಮತ್ತು ಅಡಿವೆಗಳಿದ್ದವು. ಪೂರ್ವ, ಪಶ್ಚಿಮ ಮತ್ತು ದಕ್ಷಿಣ ದಿಕ್ಕಿಗೆ ಒಂದೊಂದು ಮತ್ತು ಉತ್ತರಕ್ಕೆ ಎರಡು ದ್ವಾರಗಳಿದ್ದವು. ಉತ್ತರದ ಎರಡು ದ್ವಾರಗಳನ್ನು ನಾನು ನೋಡಲಿಲ್ಲ. ಆದರೆ, ಮಿಕ್ಕವುಗಳ ಮುಂದೆ ಸೇತುವೆಗಳಿದ್ದವು. ಸೇತುವೆಯ ಮುಂದೆ ಕಾವಲುಗಾರರಿದ್ದರು ಮತ್ತು ಪ್ರತಿಯೊಂದು ಸೇತುವೆಯಲ್ಲಿ ಹತ್ತಕ್ಕೂ ಹೆಚ್ಚು ಬಿಲ್ಲುಗಾರರಿದ್ದರು. ತುರುಷ್ಕರ ಭೀತಿಯಿಂದ ಈ ರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು." ಮೂವರು ಕತ್ತಿವರಸೆ ಪ್ರವೀಣರೂ ಇದ್ದರೆಂದು ಹೇಳಲಾಗಿದೆ.[39] ಮುಸ್ಲಿಮ ದಾಳಿಗಳು ಮೇಲಿಂದ ಮೇಲೆ ಜರುಗುತ್ತಿದ್ದುದರಿಂದ ಹೀಗೆ ಮಾಡಲಾಗಿತ್ತು. ಭೀತಭಗವಾನಪುರದ ಅವಶೇಷಗಳು ಕೋಟೆಯ ಅಸ್ತಿತ್ವವನ್ನು ಸೂಚಿಸುತ್ತವೆ. ಹಾಗೆಯೆ, ಭೀತಭಿಗವಾನಪುರದ ಕೋಟೆಯನ್ನು ಮಲ್ಲದೇವನಿಗೆ ಆರೋಪಿಸಲಾಗಿದೆ. ಗಂಗದೇವನು ಅಂಧ್ರಥಾರ್ಹಿಯಲ್ಲಿ ದೊಡ್ಡ ಕೋಟೆಯನ್ನು ಕಟ್ಟಿದನೆಂದು ಮಿಥಿಲಾ ಐತಿಹ್ಯ ನಂಬುತ್ತದೆ. ಕೋಟೆಯು ಈಗ ಆ ಗ್ರಾಮದಲ್ಲಿ ಹೂತುಹೋಗಿದೆ. ಆ ಗ್ರಾಮದಲ್ಲಿ ಕಲ್ಲುಬಂಡೆಗಳ ಕೆಲವು ತುಣುಕುಗಳು ಮತ್ತು ಶಾರ್ದೂಲವಿಕ್ರೀಡಿತ ಛಂದಸ್ಸಿನಲ್ಲಿ ರಚಿತವಾಗಿರುವ ಕೆಲವು ಶ್ಲೋಕಗಳು ದೊರೆತಿರುವ ಸಂಗತಿ ಈ ವಿಚಾರಧಾರೆಯನ್ನು ಇನ್ನಷ್ಟು ದೃಢಪಡಿಸುತ್ತದೆ. ಕರ್ನಾಟ ಅರಸರು ದ್ವಿತೀಯ ರಕ್ಷಣಾ ಘಟ್ಟವಾಗಿ ಎರಡನೆಯ ರಾಜಧಾನಿಯನ್ನು ಸದಾ ಇಟ್ಟುಕೊಂಡಿದ್ದರು. ಸಿಮರಾಂವಗಡವು ಪ್ರಧಾನ ರಾಜಧಾನಿಯಾಗಿದ್ದರೆ ಗಂಗಾಪುರ ರಜನಿ, ದರ್ಭಾಂಗಾ, ನಾನಪುರ, ಭೀತಭಿಗವಾನಪುರ, ಅಂಧ್ರಥಾರ್ಹಿ, ಹವಿದಿಹ, ಹರಿಸಿಂಹಪುರ ಮತ್ತು ಮಲಹಾಡಗಳು ಕೆಲವು ಮಹತ್ವದ ಹೊರಠಾಣೆಗಳಾಗಿದ್ದು ಆಪತ್ಕಾಲದಲ್ಲಿ ಎರಡನೆಯ ರಾಜಧಾನಿಯಾಗಿ ಉಪಯೋಗ ಬೀಳುತ್ತಿದ್ದವು.

ಸಕೂರಿಯನ್ನು ವ್ಯೂಹಯುಕ್ತಿಯ ಮಹತ್ವದ ಸ್ಥಳವೆಂದು ಪರಿಗಣಿಸಿ ಶಕ್ರಸಿಂಹದೇವನು ಅಲ್ಲೊಂದು ಕೋಟೆಯನ್ನು ಸ್ಥಾಪಿಸಿದನು. ಗಂಗದೇವನಂತೆಯೆ ನರಸಿಂಹದೇವ ಮತ್ತು ರಾಮಸಿಂಹದೇವರೂ ತಮ್ಮ ನಾಡುಗಳನ್ನು ಪುನರ್ಘಟಿಸಿ ಕೋಟೆಗಳನ್ನು ಕಟ್ಟಿದರು. ಮಿಥಿಲೆಯ ಅರಸನ ಕೋಟೆಯ ಸುತ್ತಲೂ ನೀರು ತುಂಬಿದ ಏಳು ಕಂದಕಗಳು ಮತ್ತು ಎತ್ತರವಾದ ಗೋಡೆ ಇದ್ದವೆಂದು ಫೆರಿಸ್ತಾ ಹೇಳುತ್ತಾನೆ. ಆ ಕೋಟೆಯನ್ನು ನಾಶಗೊಳಿಸಲು ತುಘಲಕ ಅರಸನಿಗೆ ಮೂರು ವಾರ ಬೇಕಾಯಿತು. ಮಿಥಿಲೆಯಲ್ಲಿ ಭದ್ರ ಕೋಟೆ ಇದ್ದುದನ್ನು ಈಗ ಬ್ರಿಟಿಷ್ ಮತ್ತು ಲೆನಿನ್‌ಗ್ರಾಡ್ ವಸ್ತುಸಂಗ್ರಹಾಲಯಗಳಲ್ಲಿ ಕಾಯ್ದಿಟ್ಟಿರುವ *ಬಸಾತಿನ್-ಉಲ್-ಉಂಶ್* ದ ಕರ್ತೃ ಇನ್ನಷ್ಟು ದೃಢಪಡಿಸುತ್ತಾನೆ. ಸಿಮರಾಂವಗಡದ ಮುಖ್ಯ

ಕೋಟೆಯಲ್ಲದೆ ಇತರ ಮಹತ್ವದ ಸ್ಥಳಗಳಲ್ಲಿ ತಾತ್ಕಾಲಿಕ ರಾಜಧಾನಿಗಳಾಗಿ ಉಪಯೋಗ ಬೀಳುವ ಕೋಟೆಗಳಿದ್ದವು. ಇವುಗಳಲ್ಲಿ ಬಹುತೇಕ ಕೋಟೆಗಳು ಕೋಸಿ, ಕಾಮಲಾ ಮತ್ತು ಬಾಲನ್‌ಗಳ ನೆರೆಹಾವಳಿಗಳಿಂದ ನಾಶಗೊಂಡಿವೆ.

*ಬೃಹದ್‌ವಿಷ್ಣುಪುರಾಣದ ಮಿಥಿಲಾಮಹಾತ* ಖಂಡವು ಕೂಡ ಕೋಟೆಗಳ ನಿರ್ಮಾಣವನ್ನು ಉಲ್ಲೇಖಿಸುತ್ತವೆ.[40] ಜ್ಯೋತಿರೀಶ್ವರನು ತನ್ನ *ದುರ್ಗವರ್ಣನ*ದಲ್ಲಿ ಕೋಟೆಯ ಸುತ್ತುಮುತ್ತುಗಳ ಸವಿವರವಾದ ವೃತ್ತಾಂತವನ್ನು ನೀಡಿರುವನು.[41] *ವರ್ಣನರತ್ನಾಕರ*ಮತ್ತು ವಿದ್ಯಾಪತಿ ಕೂಡ ಕೋಟೆ, ಕೋಟೆ ನಿರ್ಮಾಣಗಳು, ಪುರರಕ್ಷಕ, ಪುರಪತಿ ಮತ್ತು ದುರ್ಗಪಾಲರನ್ನು ಬಹಳಷ್ಟು ಉಲ್ಲೇಖಿಸುತ್ತಾರೆ.[42] ಇದರಲ್ಲಿ ಚಾಂದೇಶ್ವರನೂ ಹಿಂದೆ ಬಿದ್ದಿಲ್ಲ. ಅವನು ದುರ್ಗದ ಮಹತ್ವವನ್ನು ನಿಸ್ಸಂದಿಗ್ಧವಾಗಿ ಸಾರಿಹೇಳುತ್ತಾನೆ.[43] ಅವನ ಪ್ರಕಾರ, ರಾಜನು ತನ್ನ ರಾಜ್ಯವನ್ನು ಕೋಟೆಗಳಿಂದ ಬಲಪಡಿಸಬೇಕು. ಮತ್ತು ತನ್ನ ಕೋಶವನ್ನು ದುರ್ಗೀಕೃತ ಪ್ರದೇಶದಲ್ಲಿಯೆ ಇಡಬೇಕು. ಸುತ್ತಲೂ ನೀರು ಮತ್ತು ಹುಲ್ಲುಗಾವಲು ಇರುವ ಸ್ಥಳದಲ್ಲಿ ಕೋಟೆಯನ್ನು ಕಟ್ಟಬೇಕು ಮತ್ತು ರಾಜನ ಅರಮನೆ ಕೋಟೆಯೊಳಗೇ ಇರಬೇಕು.

ಚಾಂದೇಶ್ವರನು ಇವುಗಳನ್ನು ಹೆಸರಿಸುತ್ತಾನೆ: (ಅ) ಧನದುರ್ಗ .(ಆ) ಮಹಿದುರ್ಗ (ಇ) ಜಲದುರ್ಗ (ಈ) ಮತ್ಸ್ಯದುರ್ಗ (ಉ) ನೃದುರ್ಗ (ಊ) ಗಿರಿದುರ್ಗ ಮತ್ತು ಇವೆಲ್ಲ ಕೋಟೆಗಳ ಮಧ್ಯದಲ್ಲಿ ರಾಜನ ವಾಸಕ್ಕಾಗಿ ಒಂದು ವಿಶೇಷ ಕೋಟೆಯನ್ನು ಕಟ್ಟಬೇಕು.[44] ಸಾಕುಪ್ರಾಣಿಗಳು ಮತ್ತು ಕಾಡುಪ್ರಾಣಿಗಳು ರಾಜನ ರಕ್ಷಣಾ ಯೋಜನೆಯ ಮಹತ್ವದ ಅಂಗವಾದ್ದರಿಂದ ಅವುಗಳಿಗೆ ಈ ಕೋಟೆಗಳಲ್ಲಿ ವಿಶೇಷ ಸ್ಥಳಾವಕಾಶವಿರಬೇಕು.[45] ಅಲ್ಲಿ ಆಹಾರ, ಶಸ್ತ್ರಾಸ್ತ್ರಗಳು, ದಂಡು ಮತ್ತು ಪಂಡಿತರು ಇರಬೇಕು. ಮುಂದಿನ ಭಾಗದಲ್ಲಿ ಬೇರೆ ಬೇರೆ ತರಹದ ಕೋಟೆಗಳನ್ನು ನಿರ್ಮಿಸುವ ಮತ್ತು ಜೋಪಾನವಾಗಿರಿಸುವ ಗಟ್ಟಿ ಸೂಚನೆಯಿದೆ.

ಕರ್ನಾಟ ಅರಸರಿಗೆ ಒಳ್ಳೆಯ ಕೋಟೆಗಳ ಅಗತ್ಯ ಸರಿಸುಮಾರಾಗಿ ಯಾವಾಗಲೂ ಇತ್ತು. ಏಕೆಂದರೆ, ಅವರಿಗೆ ಎಲ್ಲ ನಿಟ್ಟಿನಿಂದಲೂ ವೈರಿ ಆಕ್ರಮಣದ ಅಪಾಯವಿತ್ತು. ಬಹೇರಾದಲ್ಲಿ ನಡೆಸಿದ ಇತ್ತೀಚಿನ ಅವೈಜ್ಞಾನಿಕ ಉತ್ಖನನಗಳು ಈ ಸಂಗತಿಗೆ ಸಾಕ್ಷಿ ಒದಗಿಸುತ್ತವೆ. *ವರ್ಣನರತ್ನಾಕರ*ದ ಪುರಪತಿಗಳು ಅಥವಾ *ಪ್ರಾಕೃತ ಪೈಂಗಲ*ದ ದುರ್ಗಪಾಲರು ಕೋಟೆಗಳು ಮತ್ತು ಕೋಟೆ ನಿರ್ಮಾಣಗಳಿಗೆ ಜವಾಬ್ದಾರರಾಗಿದ್ದ ಅಧಿಕಾರಿಗಳಾಗಿದ್ದರು. ಈ ಸಂದರ್ಭದಲ್ಲಿ, *ಕೃತ್ಯರತ್ನಾಕರ* ತಿಳಿಸುವಂತೆ, ವೀರೇಶ್ವರನು ವೈರಿ ಕೋಟೆಗೆ ಲಗ್ಗೆ ಹಾಕಿದ ಮೇಲೆ ಉನ್ನತ ಅರಮನೆಯೊಂದನ್ನು ನಿರ್ಮಿಸಿದನು. ಅಂಕೆಯಿಲ್ಲದ ನದಿಗಳಿಂದಾಗಿ ಇಲ್ಲವೆ ಕೃಷಿಕರು ಜಮೀನು ಸಮತಟ್ಟು ಮಾಡಿದುದರಿಂದಾಗಿ ಕೋಟೆಗಳ ಬಹಳಷ್ಟು ಅವಶೇಷಗಳು ಈಗ ಕಾಣದಂತಾಗಿವೆ.

ಸರಕಾರದ ವ್ಯಾಪ್ತಿ ಸರ್ವವ್ಯಾಪಿಯಾಗಿತ್ತೆಂದು ಕರ್ನಾಟರ ಇತಿಹಾಸ ಮತ್ತು ಸಂಸ್ಥೆಗಳಿಂದ ಕಂಡುಬರುತ್ತದೆ. ಈ ಬಗೆಯ ಮಿಥಿಲೆಯ ಪ್ರಾಚೀನ ಪರಂಪರೆಯನ್ನು ಕಟ್ಟುನಿಟ್ಟಾಗಿ ಪರಿಪಾಲಿಸಲಾಗಿತ್ತೆಂದು ಕಂಡುಬರುತ್ತದೆ. ರಾಜಕೀಯ ಸಂಘಟನೆಗೆ ಊಳಿಗಮಾನ್ಯ ಪದ್ಧತಿಯೆ ತಳಹದಿಯಾಗಿತ್ತೆಂದು ಮಿಥಿಲೆಯ ರಾಜ್ಯವ್ಯವಸ್ಥೆಯ ಅಧ್ಯಯನ ತೋರ್ಪಡಿಸುತ್ತದೆ. ಮತ್ತು ಮಂತ್ರಿಗಳ ಬಿರುದುಗಳನ್ನು ಕೂಲಂಕುಷವಾಗಿ ಪರಿಕಿಸಿದರೆ ಊಳಿಗಮಾನ್ಯ ರಚನೆ ಸ್ಪಷ್ಟವಾಗುವುದು. ರಾಜನು ಆಡಳಿತದ ಶಿಖರದಲ್ಲಿದ್ದನಾಗಿದ್ದರೂ ಸಾಮಂತರು ವಾಸ್ತವಿಕ ನಿಯಂತ್ರಣ ಹೊಂದಿದ್ದರೆಂದು ತೋರುತ್ತದೆ. ಮತ್ತು ಆಡಳಿತ ರಂಗಗಳಲ್ಲಿ ಉನ್ನತ ಮಂಡಳಿಯ ಮಾತು ಹೆಚ್ಚು ನಡೆಯುತ್ತಿತ್ತು. ಮಂತ್ರಿ ಮಟ್ಟದ ಎಲ್ಲ ಹುದ್ದೆಗಳು ಅವರ ಸ್ವತ್ತಾಗಿದ್ದವು. ಅವರು ರಾಜನ ಆಪ್ತಸಹಾಯಕರಾಗಿಯೂ ಕೆಲಸ ಮಾಡುತ್ತಿದ್ದರು. ಜ್ಯೋತಿರೀಶ್ವರನು 'ರಾಜಬ(ವ)ಲ್ಲಭ' ಎಂಬ ಪದವನ್ನು ಬಳಸಿರುವುದು ಮತ್ತು ದೇವಾದಿತ್ಯನ ಸೋದರನಾದ ಭವಾದಿತ್ಯನು ರಾಜಬಲ್ಲಭನಾಗಿ ಕಾರ್ಯನಿರ್ವಹಿಸಿದುದು ಕಂಡುಬರುತ್ತದೆ. ಕೆಲವೊಮ್ಮೆ ವಾಸ್ತವಿಕ ನಿಯಂತ್ರಣ ಈ ಉನ್ನತ ವರ್ಗದ ಕೈಯಲ್ಲಿದ್ದು ರಾಜನು ಸೂತ್ರದ ಬೊಂಬೆಯಾಗಿದ್ದನು. ಚಾಂದೇಶ್ವರನ ಪ್ರಕಾರ, ರಾಜಕಾರಣದಲ್ಲಿ ಜಾತಿಗೆ ಅರ್ಥವಿರಲಿಲ್ಲ. ಪ್ರಭುವು ಯಾವ ಜಾತಿಯವನೇ ಇರಲಿ, ಪ್ರಜೆಗಳನ್ನು ಪವಿತ್ರ ವಿಧಿಗಳನ್ವಯ ಸಂರಕ್ಷಿಸುವುದು ಅವನ ಆದ್ಯ ಕರ್ತವ್ಯವಾಗಿತ್ತು. ಉಚ್ಚ ವರ್ಗದ ಹಿಡಿತವನ್ನು ಬಲಪಡಿಸಲೋಸುಗ ಧಾರ್ಮಿಕ ಮಂತ್ರಿಖಾತೆಗೆ ಅವಕಾಶವಿತ್ತು ಮತ್ತು ರಾಜನ ನಿಯುಕ್ತಿಯನ್ನು ಮಂತ್ರಿಮಂಡಲ ಸ್ಥಿರಪಡಿಸಬೇಕಿತ್ತು. ರಾಜಕಾರಣದ ಮೇಲೆ ಧರ್ಮದ ಪ್ರಭಾವ ನಿಜವಾದುದಾಗಿತ್ತೆಂದು ತೋರುವುದು.[೨] ರಾಜ್ಯದ ನೀತಿಯಲ್ಲಿ ಕ್ರಾಂತಿಕಾರಿ ಬದಲಾವಣೆಯಾದಂತೆ ತೋರುವುದಿಲ್ಲ. ಮತ್ತು ರಾಜರು ಪ್ರಾಚೀನ ಕಾಲದಿಂದಲೂ ನಡೆದುಬಂದ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದರು. ಪ್ರಜೆಗಳ ಧಾರ್ಮಿಕ ವ ಸಾಮಾಜಿಕ ಆಚರಣೆಗಳಿಗೆ ಮಾರ್ಗದರ್ಶಕ ನಿಯಮಗಳನ್ನು ರಚಿಸಲಾಗಿತ್ತು. ಉನ್ನತ ವರ್ಗದವರು ಯಾವನೊಬ್ಬ ಅಧಿಕಾರಿಯನ್ನೂ ಒಂದೇ ಸ್ಥಳದಲ್ಲಿ ಬಹುಕಾಲ ಇಡಬಯಸಿರಲಿಲ್ಲವಾದ್ದರಿಂದ ಹದಿನಾಲ್ಕನೆಯ ಶತಮಾನದ ಆದಿಯಲ್ಲಿ ಅಧಿಕಾರಿಗಳ ವರ್ಗಾವಣೆ ವ್ಯವಸ್ಥೆಯ ಉಲ್ಲೇಖವಿದೆ. ಈ ದಿಶೆಯಲ್ಲಿ ಮಿಥಿಲೆಯು ಶೇರಶಾಹನಿಗಿಂತ ಮೊದಲೇ ವಿಚಾರಮಾಡಿತ್ತು. ಪುರುಷಪರೀಕ್ಷ ಮತ್ತಿತರ ಸಮಕಾಲೀನ ಗ್ರಂಥಗಳಲ್ಲಿ ಗೂಢಚಾರ ವ್ಯವಸ್ಥೆಯ ಉಲ್ಲೇಖವೂ ಇದೆ. ಕರ್ನಾಟರ ಆಳ್ವಿಕೆಯಲ್ಲಿ ಮಿಥಿಲೆಯ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ದಸ್ತೆವಜುಗಳನ್ನು ನಿರುಕಿಸುವಾಗ ಕೆಳಕಂಡ ಅಧಿಕಾರಿಗಳ ಮತ್ತು ಆಡಳಿತ ಪದಗಳ ದೀರ್ಘ ಪಟ್ಟಿ ನೋಡಸಿಗುತ್ತದೆ:

೧. ಭೂಪಾಲ - ವ.ರ. ಭೂಮಿಯ ಪಾಲಕ

೨. ಮಾಂಡಲಿಕ - ವ.ರ. ಮಂಡಲದ ಹೊಣೆ ಇದ್ದ ಅಧಿಕಾರಿ (ಪಾಂಚೋಭೆ ತಾ.ಪ.)

೩. ಸಾಮಂತ - ವ.ರ. ಮತ್ತು ರಾ.ರ., ಇತರ ಹಸ್ತಪ್ರತಿಗಳಲ್ಲಿ ಕೂಡ

೪. ಸೇನಾಪತಿ - ವ.ರ. ಮತ್ತು ರಾ.ರ., ಲಿಖಿನಾವಲಿ ಮತ್ತು ಪು.ಪ.

೫. ಪುರಪತಿ - ವ.ರ., ರಾ.ರ., ಪು.ಪ.

೬. ಮಂತ್ರಿ - ವ.ರ., ರಾ.ರ., ಧೂರ್ತಸಮಾಗಮನಾಟಕ

೭. ಪುರೋಹಿತ - ವ.ರ., ರಾ.ರ., ಪು.ಪ.

೮. ಧರ್ಮಾಧಿಕರ್ಣ - ವ.ರ.

೯. ಸಂಧಿವಿಗ್ರಹಿಕ - ವ.ರ., ರಾ.ರ., ಲಿಖಿನಾವಲಿ ಮತ್ತಿತರ ಹಸ್ತಪ್ರತಿಗಳು

೧೦. ಮಹಾಮಟ್ಟ - ವ.ರ., ಲಿಖಿನಾವಲಿ

(ಮಿಥಿಲೆಯ ಕಾಯಸ್ಥರು ನೋಡಿಕೊಳ್ಳುತ್ತಿದ್ದು)

೧೧. ಪ್ರತಿಬಲಕರ್ಣಾಧ್ಯಕ್ಷ -

೧೨. ಶಾಂತಿಕರ್ಣಿಕೊ - ವ.ರ., ಲಿಖಿನಾವಲಿ

೧೩. ರಾಜಗುರು - ವ.ರ.

೧೪. ದುರ್ಗಪಾಲ - ವ.ರ.

೧೫. ಠಕ್ಕುರ - ಹಸ್ತಪ್ರತಿ ಮತ್ತು ಅರ್ಥಶಾಸ್ತ್ರ

೧೬. ಸ್ನಿಗ್ಧ - ರಾ.ರ.

೧೭. ಸರ್ವಾರ್ಥಚಿಂತಕಾಮ - ರಾ.ರ.

೧೮. ದೂತ - ರಾ.ರ.

೧೯. ಗುಲ್ಮ - ರಾ.ರ. (ಸಾಮಾನ್ಯ ಅರ್ಥದಲ್ಲಿ 'ಕಟ್ಟಿಗೆಯ ಕೋಟೆ' ಮತ್ತು 'ಆರಕ್ಷಕ ಠಾಣೆ')

ಫ್ಲೀಟರು 'ಗುಲ್ಮಿಕ' ಪದವನ್ನು ಕಟ್ಟಿಗೆ ಮತ್ತು ಅರಣ್ಯಗಳ ಅಧೀಕ್ಷಕ ಎಂದು ಅನುವಾದಿಸಿರುವರು. ಆದರೆ, ಯು.ಎನ್.ಘೋಸಲ್‌ರು 'ಗುಲ್ಮಿಕ' ಎಂದರೆ ಸುಂಕ ವಸೂಲುಗಾರನೆಂದು ಅರ್ಥೈಸಿ ತಮ್ಮ ವಿಚಾರದ ಸಮರ್ಥನೆಗೆ ಅರ್ಥಶಾಸ್ತ್ರದಲ್ಲಿರುವ 'ಗುಲ್ಮದೇಯ'ವನ್ನು ಉಲ್ಲೇಖಿಸುವರು.[47] 'ಗುಲ್ಮ' ಎಂದರೆ ಮೂರರಿಂದ ಐದು ಗ್ರಾಮಗಳ ಗುಂಪು ಎಂದು ಚಾಂದೇಶ್ವರ ಗ್ರಹಿಸಿರುವನು. ಕರ್ನಾಟ ಕಾಲಘಟ್ಟದ ಮಿಥಿಲೆಯಲ್ಲಿ 'ಗುಲ್ಮ'ವು ಮೂರರಿಂದ ಐದು ಗ್ರಾಮಗಳ ಒಂದು ಚಿಕ್ಕ ಆಡಳಿತ ಕೇಂದ್ರವಾಗಿದ್ದಂತೆ ತೋರುವುದು; ಅಥವಾ ಪೋಲಿಸ ಠಾಣೆಯಾಗಿದ್ದಿರಬಹುದು. 'ಗುಲ್ಮಪತಿ' ಎಂದರೆ ಒಂದು 'ಗುಲ್ಮ' ದಳದ ಮುಖ್ಯಾಧಿಕಾರಿ ಎಂಬರ್ಥ ಸೂಚಿಸುವ ಉಲ್ಲೇಖ ಪಾಂಚೋಭ ತಾಮ್ರಪಟದಲ್ಲಿ ದೊರೆಯುತ್ತದೆ.

೨೦. ಮಹಾಪೀಲುಪತಿ - ಪಾಂಚೋಭ ತಾ.ಪ. (ಆನೆಗಳ ತರಬೇತುದಾರ)

೨೧. ಮಹಾಸಾಧನಿಕ - ಪಾಂಚೋಭ ತಾ.ಪ.

(ದಂಡಿಗೆ ಸಾಮಗ್ರಿ ಪೂರೈಸುವ ಅಧೀಕ್ಷಕ)

೨೨. ಮಹಾಕ್ಷಪತಲಿಕ - ಪಾಂಚೋಭ ತಾ.ಪ.
(ದಸ್ತೈವಜುಗಳ ಮತ್ತು ಲೆಕ್ಕಪತ್ರಗಳ ಹೊಣೆಗಾರ)

೨೩. ಮಹಾಧರ್ಮಾಧಿಕರ್ಣಿಕ - ಪಾಂಚೋಭ ತಾ.ಪ. (ಮುಖ್ಯ ನ್ಯಾಯಾಧೀಶ)

೨೪. ಮಹಾಕರ್ಣಾಧ್ಯಕ್ಷ - ಪಾಂಚೋಭ ತಾ.ಪ.
(ಕಾರ್ಯದರ್ಶಿ ಕಚೇರಿಯ ಮುಖ್ಯಸ್ಥ)

೨೫. ವರ್ತಿನ್ಯೆಬಂಧಿಕ - ಪಾಂಚೋಭ ತಾ.ಪ. (ಸಂಹಿತೆ ಲೇಖಕರು)

೨೬. ಮಹಾವರ್ತಿನ್ಯೆಬಂಧಿಕ - ಲಿಖಿನಾವಲಿ

೨೭. ಮಹೌಥಿಥಹಾಸನಿಕ - ಪಾಂಚೋಭ ತಾ.ಪ. (ಅರ್ಥ ಇನ್ನೂ ತಿಳಿದಿಲ್ಲ)

೨೮. ಮಹಾದಂಡನಾಯಕ - ಪಾಂಚೋಭ ತಾ.ಪ. ಮತ್ತು
ಡಿವಿ ಮತ್ತಿತರ ಹಸ್ತಪ್ರತಿಗಳು

೨೯. ಮಹಾಸಾಮಂತರಂಕ - ಪಾಂಚೋಭ ತಾ.ಪ.

೩೦. ಖಂಡಪಾಲ - ಪಾಂಚೋಭ ತಾ.ಪ.

(ಯು.ಎನ್.ಘೋಸಲ್ ಇದನ್ನು ಸೈನಿಕ ಅಧಿಕಾರಿ ಎಂದು ಪರಿಗಣಿಸುತ್ತಾರೆ. ಬೇರೆ ವಿದ್ವಾಂಸರು ಸುಂಕ ಪರೀಕ್ಷಾಧಿಕಾರಿ ಅಥವಾ ಆರಕ್ಷಕ ಅಧೀಕ್ಷಕ ಅಥವಾ ನಗರಸಭೆಯ ಶಸ್ತ್ರಾಸ್ತ್ರಗಳ ಅಧೀಕ್ಷಕ ಎಂದೂ ಪರಿಗಣಿಸುತ್ತಾರೆ)

೩೧. ಮಹಾವ್ಯೂಹಪತಿ - ಪಾಂಚೋಭ ತಾ.ಪ.
(ದಂಡಿನ ವ್ಯೂಹರಚನಾ ಮುಖ್ಯಾಧಿಕಾರಿ)

೩೨. ಮಹಾಧಿಕಾರಿಕ - ಪಾಂಚೋಭ ತಾ.ಪ. (ಕಚೇರಿಗಳ ಮುಖ್ಯ ಅಧೀಕ್ಷಕ)

೩೩. ಮಹಾಮುದ್ರಾಧಿಕಾರಿ - ಪಾಂಚೋಭ ತಾ.ಪ. (ರಾಜಮುದ್ರಾ ಪಾಲಕ)

೩೪. ಘಟ್ಟಪಾಲ - ಪಾಂಚೋಭ ತಾ.ಪ. (ಕಣಿವೆ ಪಾಲಕ)

೩೫. ಮುಂದ್ರಹಸ್ತಕ - ಲಿಖಿನಾವಲಿ

ಪೂರ್ವ ಭಾರತದ ವಿಶಾಲ ಪ್ರದೇಶದಲ್ಲಿ ಸ್ಥಾಪಿತವಾದ ಕರ್ನಾಟ ರಾಜ್ಯಕ್ಕೆ ಉತ್ತಮ ಆಡಳಿತ ವ್ಯವಸ್ಥೆ ಅಗತ್ಯವಾಗಿತ್ತು. ಮಿಥಿಲೆಯು ಪಾಲರ ಪ್ರಾಂತೀಯ ಆಡಳಿತ ಕೇಂದ್ರವಾಗಿದ್ದರೂ ಹೊಸ ಪರಿಸ್ಥಿತಿಗಳಿಗೆ ತಕ್ಕಂತೆ ಪಾರಂಪರಿಕ ಆಡಳಿತ ರಚನೆಗಳನ್ನು ಮಾರ್ಪಡಿಸಲಾಯಿತು. ಮಾಂಡಲಿಕ ಉಚ್ಚರಿಂದೊಡಗೂಡಿದ ಜ್ಯೇಷ್ಠರ ಮಂಡಲಿಯು ರಾಜನ ನಿರಂಕುಶಾಧಿಕಾರವನ್ನು ನಿಯಂತ್ರಿಸುತ್ತಿತ್ತು. ಅವರಿಗೆ ಅಪಾರ ಅಧಿಕಾರವಿತ್ತು. ಮಂತ್ರಿಗಳ ಸಲಹೆಯ ಮೇರೆಗೆ ರಾಜನು ಆಡಳಿತ ನಡೆಸುತ್ತಿದ್ದ. ಮಂತ್ರಿಗಳು ಸಾಮಂತ ಸರದಾರರಾಗಿದ್ದು ಅವರನ್ನು ಮಹಾಮಾಂಡಲಿಕ, ಮಹಾಮಾತ್ಯ, ಮಂತ್ರಿ ಮತ್ತು ಸಂಧಿವಿಗ್ರಹಿಕ ಇತ್ಯಾದಿಯಾಗಿ ಕರೆಯುತ್ತಿದ್ದರು. ಚಾಂದೇಶ್ವರನು ಮುಖ್ಯ ನ್ಯಾಯಾಧೀಶನ ಅಧಿಕಾರವನ್ನು ತನ್ನಲ್ಲಿಯೆ ಇರಿಸಿಕೊಂಡಿದ್ದನು. ಗಣೇಶ್ವರನು ಸಾಮಂತರಸರ ಮಂಡಲಿಯ

ಅಧ್ಯಕ್ಷತೆ ವಹಿಸಿದ್ದನು. ನಾನ್ಯದೇವನು ಕರ್ನಾಟ ಆಡಳಿತ ವ್ಯವಸ್ಥೆಯ ತಳಪಾಯ ಹಾಕಿದರೆ ಗಂಗದೇವನು ಅದನ್ನು ಭದ್ರವಾಗಿ ಸಂಘಟಿಸಿದನು ಮತ್ತು ರಾಮಸಿಂಹದೇವನು ಆಡಳಿತ ಕಕ್ಷೆಯಲ್ಲಿ ಸಾಮಾಜಿಕ, ಧಾರ್ಮಿಕ ವಿಷಯಗಳನ್ನು ಅಳವಡಿಸಿದನು. ಅವಲೋಕನ ಕ್ಕೊಳಪಟ್ಟಿರುವ ಕಾಲಘಟ್ಟದಲ್ಲಿ, ಸಾಕಷ್ಟು ಶಾಂತಿ ನೆಲೆಸಿತ್ತಾದ್ದರಿಂದ ಮಿಥಿಲೆಗೆ ಶ್ರೇಷ್ಠ ವಿದ್ವಾಂಸರನ್ನು ಮತ್ತು ಪರಿಣಿತ ಆಡಳಿತಗಾರರನ್ನು ಸೃಷ್ಟಿಸಲು ಸಾಧ್ಯವಾಯಿತು.

## ಸಾಮಾಜಿಕ ಮತ್ತು ಆರ್ಥಿಕ ಜೀವನ

ಕರ್ನಾಟ ಕಾಲಘಟ್ಟದಲ್ಲಿ ಮಿಥಿಲೆಯು, ಸಂಪೂರ್ಣವಾಗಿ ಪಾಶ್ಚಿಮಾತ್ಯ ಮಾದರಿಯದಲ್ಲದಿದ್ದರೂ, ಪ್ರಾಮುಖ್ಯವಾಗಿ ಊಳಿಗಮಾನ್ಯ ರಾಜ್ಯವಾಗಿತ್ತು. ಭೂಒಡೆಯ ವರ್ಗ ಅತ್ಯಂತ ಪ್ರಭಾವಶಾಲಿಯಾಗಿತ್ತು ಮತ್ತು ರಾಜನ ಸ್ಥಾನಮಾನ ಹಾಗೂ ಅಂತಸ್ತು ಬಹಳ ಉನ್ನತವಾಗಿತ್ತು. ಸಮಾಜದ ಜನರ ಮೇಲೆ ದಬ್ಬಾಳಿಕೆ ಮಾಡುವ ಎಲ್ಲ ಸಾಧನಗಳನ್ನು ರಾಜನೂ ಮಂಡಲಿಕರೂ ಹೊಂದಿದ್ದರು. ಭೂಒಡೆಯರು ರೈತಾಪಿ ಜನರನ್ನು ತುಳಿದು ಏಳ್ಗೆ ಹೊಂದಿದ್ದರು.[48] ಶ್ರೀಧರದಾಸನು ತನ್ನ *ಸದುಕ್ತಿ ಕರ್ಣಾಮೃತ* ಸಂಕಲನದಲ್ಲಿ ಈ ಕಾಲಘಟ್ಟದ ಮಿಥಿಲೆಯ ಜೀವನದ ಈ ವಿಶಿಷ್ಟ ಅಂಶಕ್ಕೆ ಸಂಬಂಧಿಸಿದ ಕೆಲವು ಕವನಗಳನ್ನು ಪಟ್ಟಿಸಿರುವನು. ಮತ್ತು ಜನರ ಚಿಂತಾಜನಕ ಸ್ಥಿತಿಯನ್ನು ವಿವರವಾಗಿ ಹೇಳಿರುವನು.[49] ಉಚ್ಚ ವರ್ಗದವರ ದಬ್ಬಾಳಿಕೆಯಲ್ಲಿ ಬದುಕಬೇಕಾಗಿದ್ದ ಜನರ ದಾರುಣ ಚಿತ್ರವನ್ನು ಡಿ.ಡಿ.ಕೋಸಾಂಬಿ ಕೂಡ ನೀಡಿರುವರು. ಅವರ ಅಭಿಪ್ರಾಯದಲ್ಲಿ, ಜನರು ಬಹುಮಟ್ಟಿಗೆ ಉಪವಾಸ ಎದುರಿಸಿದ್ದರು ಮತ್ತು ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಅವರ ಪ್ರಗತಿ ನಿಲುಗಡೆಗೆ ಬರುವಂತಾಯಿತು.[50]

ಜಾತಿ ವ್ಯವಸ್ಥೆಯು ಮಿಥಿಲೆಯಾದ್ಯಂತ ಪ್ರಚಲಿತವಿತ್ತು. ಅದು ಸಾಮಾನ್ಯ ಬಂಧವನ್ನು ಹೊಸೆಯುವಲ್ಲಿ ಬಲು ಸಹಾಯಕವಾಯಿತು. ತತ್ಫಲವಾಗಿ ಸುಸಂಬದ್ಧ ಸಮಾಜ ರಚಿತವಾಯಿತು. ಕುಲೀನರು ತಮ್ಮ ತಮ್ಮ ಶಸ್ತ್ರಸಜ್ಜಿತ ಅನುಚರರನ್ನು ಹೊಂದಿದ್ದರಿಂದ ವರ್ಗ ವಿನ್ಯಾಸವನ್ನು ಕಾಪಾಡಿಕೊಂಡು ಬರಲಾಯಿತು. ಪ್ರತಿಯೊಬ್ಬನೂ ತನ್ನ ಜಾತಿಯನ್ವಯ ಹೊಟ್ಟೆಪಾಡನ್ನು ಕಂಡುಕೊಳ್ಳಬೇಕಿತ್ತೆಂಬುದು ಅಂದಿನ ಕಾಲದಲ್ಲಿ ಸರ್ವೆಸಾಮಾನ್ಯ ಗ್ರಹಿಕೆಯಾಗಿತ್ತು.[51] ಜಾತಿ ಸಂರಚನೆಯ ಅತಿರೇಕಗಳನ್ನು ನಿರ್ಮೂಲಿಸಬೇಕೆಂಬ ಸಮಾಜ ಸುಧಾರಕರ ಸಲಹೆ ಫಲ ನೀಡಲಿಲ್ಲ. ಅಹಿಂಸೆ ಮತ್ತು ಭಕ್ತಿಯಂಥ ವಿವಿಧ ಭಾವನಾತ್ಮಕ ಮೊರೆಗಳ ಮೂಲಕ ಆಂತರಿಕ ಭಾವನೆಗಳನ್ನು ಜಾಗೃತಗೊಳಿಸಲು ಮತ್ತು ಪ್ರೇರಿಸಲು ಬುದ್ಧನಿಂದ ಚೈತನ್ಯನವರೆಗಿನ ಸುಧಾರಕರು ಹೆಣಗಿದರು. ಆದರೆ, ಜನರ ಸಮಾಜೊ - ಆರ್ಥಿಕ ಜೀವನವನ್ನು ಬದಲಾಯಿಸುವಲ್ಲಿ ಯಶಸ್ಸು ಕಾಣಲಿಲ್ಲ. ಜಾತಿ ಅಡ್ಡಗಟ್ಟುಗಳನ್ನು ತೆಗೆದುಹಾಕಲು ಚೈತನ್ಯನು ಏನೂ ಮಾಡಲಿಲ್ಲ. ಆರಂಭದಲ್ಲಿ ಭಕ್ತಿ ಆಂದೋಲನಗಳು ಅನೇಕ ಜನರನ್ನು ಆಕರ್ಷಿಸಿದವು. ಅವರು ಸಂಕೀರ್ಣ ಸಾಮಾಜಿಕ ವ್ಯವಸ್ಥೆಯ ಸಂಕೋಲೆಗಳನ್ನು ಒಡೆದು ಹೊಸ ಮತವನ್ನು ಉತ್ಸಾಹದಿಂದ ಸ್ವೀಕರಿಸುವತ್ತ

ಆಕರ್ಷಿತರಾಗಿದ್ದರು. ಆದರೆ, ಹೊಸ ಮತಗಳ ಪ್ರತಿಪಾದಕರು ಸಹ ತಾವು ಬೋಧಿಸಿದ್ದನ್ನು ಆಚರಿಸುತ್ತಿಲ್ಲವೆಂದು ಮನವರಿಕೆಯಾದಾಗ ಜನರು ತಮ್ಮ ಮೂಲ ವಿಚಾರಧಾರೆಗೆ ಮರಳಿದರು. ಈ ಕಾಲಘಟ್ಟದಲ್ಲಿ ಮಿಥಿಲೆಯು ದೇಶದ ಎಲ್ಲೆಡೆಗಳಿಂದ ಓಡಿಬಂದ ವಿದ್ವಾಂಸರಿಗೆ ಆಶ್ರಯತಾಣವಾಗಿತ್ತು. ಅದು ಸರಯೂ ನದಿಯ ಈಶಾನ್ಯ ಪ್ರದೇಶಗಳ ಮಾನ್ಯತೆ ಪಡೆದ ಚೂಣಿಯಾಗಿ ಹೊರಹೊಮ್ಮಿತು ಮತ್ತು ಪೂರ್ವದಲ್ಲಿ ಸಂಸ್ಕೃತ ಕಲಿಕೆಯ ಪ್ರತಿಷ್ಠಿತ ಕೇಂದ್ರವಾಯಿತು.[32]

ವಿವಿಧ ಗ್ರಂಥಗಳು, ನಿಬಂಧಗಳು ಮತ್ತು ಬರೆಹಗಳಿದ್ದಾಗ್ಯೂ ಕ್ರಿ.ಶ. ಹನ್ನೊಂದು, ಹನ್ನೆರಡು ಮತ್ತು ಹದಿಮೂರನೆಯ ಶತಮಾನಗಳಲ್ಲಿ ಯಾವುದೆ ಕ್ರಾಂತಿ, ಹೊಸ ಯಾ ಅಸಾಮಾನ್ಯ ಬದಲಾವಣೆಗಳು ಕಂಡುಬರಲಿಲ್ಲ. ಸಾಂಪ್ರದಾಯಿಕತೆ ಮತ್ತು ಕರ್ಮಠತನ ರಾರಾಜಿಸುತ್ತಿದ್ದವು. ಅದಕ್ಕಿಂತ ಮುಂಚಿನಿಂದಲೂ ಮಿಥಿಲೆಯಲ್ಲಿ ಅಸ್ತಿತ್ವದಲ್ಲಿದ್ದ ವಿಲಕ್ಷಣ ಸ್ವರೂಪಗಳಲ್ಲಿ ಬಾಹ್ಯ ಆಕ್ರಮಣಗಳು ಯಾ ದಾಳಿಗಳು ಯಾವುದೆ ಬದಲಾವಣೆ ತರಲಿಲ್ಲ. ಬಂಡೆಯಾಗಿ ನಿಂತ ಸಮಾಜವು ಎಲ್ಲ ವಿಪತ್ತುಗಳಿಗೆ ಎದೆಯೊಡ್ಡಿತು. ಆದರೆ, ಹದಿನಾಲ್ಕನೆಯ ಶತಮಾನದೊಂದಿಗೆ ಮಿಥಿಲೆಯ ಇತಿಹಾಸದಲ್ಲಿ ಒಂದು ಮಹತ್ವದ ಹೆಗ್ಗುರುತು ಕಾಲಿಟ್ಟಿತು. ಅದು ಸಮಾಜದ ಅಡಿಪಾಯಗಳನ್ನು ಅಲ್ಲಾಡಿಸಿದ್ದರಿಂದ ಅತಿ ಮಹತ್ವಪೂರ್ಣವಾಗಿತ್ತು. ಕುಲೀನತಾ ವ್ಯವಸ್ಥೆಯ ಆರಂಭವೇ ಈ ಬದಲಾವಣೆ. ಈ ವ್ಯವಸ್ಥೆಯು ಮಿಥಿಲೆಗೆ ಹೇಗೆ ಬಂತೆಂಬುದು ತಿಳಿಯದು. ಈ ಪದ್ಧತಿಯನ್ನು ಆರಂಭಿಸಿದ ಶ್ರೇಯಸ್ಸು ಕರ್ನಾಟ ರಾಜವಂಶದ ಕೊನೆಯ ಅರಸ ಹರಿಸಿಂಹದೇವನದೆಂದು ಮಿಥಿಲಾ ಐತಿಹ್ಯ ಹೇಳುತ್ತದೆ. ಮುಸ್ಲಿಮರ ಆಗಮನ ಮತ್ತು ಅದರ ಪರಿಣಾಮಗಳು ಜಾತಿ ನಿಯಮಗಳ ಕಠಿಣಗೊಳ್ಳುವಿಕೆಯನ್ನು ಅಗತ್ಯವಾಗಿಸಿತು. ಭೌಗೋಲಿಕ ಕಾರಣಗಳಿಂದಾಗಿಯೂ ಮೈಥಿಲರು ಕೆಲ ಸಂಕುಚಿತ ಗುಣಲಕ್ಷಣಗಳನ್ನು ಪಡೆದುಕೊಂಡರು. ಅವರು ತಮ್ಮನ್ನು ಪ್ರತ್ಯೇಕವಾಗಿ ಇರಿಸಿಕೊಂಡರು. ಸ್ಮೃತಿಗಳ ಅಧ್ಯಯನಕ್ಕೆ ಕೊಡಲಾದ ಅತಿ ಒತ್ತು ಅವರ ಸಾಂಪ್ರದಾಯಿಕ ಮನೋಭಾವವನ್ನು ಗಟ್ಟಿಗೊಳಿಸುವಲ್ಲಿ ಸಹಾಯಕ ವಾಯಿತು. ಈ ಸಾಮಾಜಿಕ ಪುನರ್ಘಟನೆಯ ಏಕೈಕ ಉದ್ದೇಶವೆಂದರೆ ಶುದ್ಧತೆಯನ್ನು ಕಾಪಾಡಿಕೊಂಡು ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳನ್ನು ಎತ್ತಿಹಿಡಿಯುವುದೆ ಆಗಿತ್ತು. ತತ್ಫಲವಾಗಿ ಹೊಸ ಸಾಮಾಜಿಕ ಮೌಲ್ಯಗಳು ಸ್ಥಾಪಿತಗೊಂಡವು. ಕುಲಶುದ್ಧತೆಗೆ ಪ್ರಾಧಾನ್ಯ ನೀಡುವ ಮೂಲಕ ಹುಟ್ಟು, ಸಾಧನೆ ಮತ್ತು ಚಾರಿತ್ರ್ಯಗಳಿಗೆ ಪ್ರಾಮುಖ್ಯತೆ ಬಂತು. ಹರಿಸಿಂಹದೇವನು 'ಪಂಜಿ'ಗಳನ್ನು ಸಂಕಲನ ಮಾಡಿಸಿ ವ್ಯವಸ್ಥೀಕರಿಸಿದನು. 'ಪಂಜಿ'ಗಳ ಬೇರುಗಳು ಆಗಲೆ ಅಸ್ತಿತ್ವದಲ್ಲಿದ್ದವು. ಮಿಥಿಲೆಯ ಕುಲೀನತೆಯ ಇತಿಹಾಸವಿನ್ನೂ ಅಶೋಧಿತ ಕ್ಷೇತ್ರವಾಗಿದ್ದು ಅದನ್ನು ಹೆಚ್ಚು ವಿವರವಾಗಿ ವಿಶ್ಲೇಷಿಸುವುದೊಳಿತು.[33]

ಉತ್ತರ ಬಿಹಾರದ ಸ್ಥಳೀಯ ಬ್ರಾಹ್ಮಣರು ಪಂಡಿತ ಬ್ರಾಹ್ಮಣರ ಅತ್ಯಂತ ಪ್ರಸಿದ್ಧ ಒಳಪಂಗಡವಾಗಿದ್ದ ಕೋಲಂಚ ಬ್ರಾಹ್ಮಣರಿಗೆ ಅತಿ ಮಹತ್ವ ನೀಡುತ್ತಿದ್ದುದನ್ನು ಡಿ.ಸಿ.

ಸರಕಾರ ಸಂಪಾದಿಸಿದ ಬಂಗಾವ್ ತಾಮ್ರಪಟ[೫೪] ಸ್ಪಷ್ಟಪಡಿಸುತ್ತದೆ. "ಅದರಷ್ಟೆ ಸ್ವಾರಸ್ಯಕರ ಸಂಗತಿಯೆಂದರೆ ಕೋಲಂಚ ಬ್ರಾಹ್ಮಣರಿಗಾಗಿ ಪೂರ್ವ ಭಾರತೀಯ ಬ್ರಾಹ್ಮಣರಿಗಿದ್ದ ಪೂಜ್ಯ ಭಾವನೆ. ಈ ಭಾವನೆಯು ಉತ್ತರ ಬಿಹಾರ ಮತ್ತು ಬಂಗಾಲಗಳಲ್ಲಿ ಕುಲೀನತೆ ಎಂದು ಕರೆಯಲಾದ ವಿಲಕ್ಷಣ ಸಾಮಾಜಿಕ ಪದ್ಧತಿಯ ಬೆಳವಣಿಗೆಗೆ ಮಹತ್ವಪೂರ್ಣ ಅಂಶವಾಗಿದ್ದಂತೆ ತೋರುತ್ತದೆ."[೫೫] ಮಿಥಿಲೆಯ ಕೇಂದ್ರಭಾಗದಲ್ಲಿ ಕಂಡುಹಿಡಿದ ಬಂಗಾವ್ ತಾಮ್ರಪಟವನ್ನು ಪಾಂಚೋಭ ತಾಮ್ರಪಟ[೫೬] ಸಮರ್ಥಿಸುತ್ತದೆ. ಆದಿಸುರನೆಂಬ ಅರಸನು ವೇದಗಳಲ್ಲಿ ಪಾರಂಗತರಾದ ಅನೇಕ ಬ್ರಾಹ್ಮಣರನ್ನು ಆಮಂತ್ರಿಸಿದನೆಂದು ನಂಬಲಾಗಿದೆ. ಬಂಗಾಲ ಆಕರಗಳಿಂದ ಆದಿಸುರನೆಂಬ ನಿಜವಾದ ಅರಸನು ಇದ್ದುದು ತಿಳಿದುಬರುವುದಿಲ್ಲವೆಂದು ಡಿ.ಸಿ.ಸರಕಾರ ಅಭಿಪ್ರಾಯಪಡುತ್ತಾರೆ.[೫೭] ಕ್ರಿ.ಶ. ಒಂಬತ್ತನೆಯ ಶತಮಾನದ ಮಧ್ಯಕಾಲದಲ್ಲಿ ಉಚ್ಛ್ರಾಯಿಸಿದ ಅರಸ ಆದಿಸುರನನ್ನು ವಾಚಸ್ಪತಿ ಮಿಶ್ರಾ ಉಲ್ಲೇಖಿಸಿರುವರು.[೫೮] ಡಿ.ಸಿ.ಸರಕಾರರ ಪ್ರಕಾರ, ಈ ಆದಿಸುರನು ಬಂಗಾಲದಲ್ಲಿ ಕೋಲಂಚ ಬ್ರಾಹ್ಮಣರು ನೆಲೆಸಿದ ಬಗೆಗಿನ ಐತಿಹ್ಯಗಳಲ್ಲಿ ಪ್ರಸಿದ್ಧಿ ಪಡೆದನು ಮತ್ತು ಕುಲೀನತಾ ಪದ್ಧತಿಯನ್ನು ಉತ್ತರ ಬಿಹಾರದಿಂದ ಎರವಲು ತರಲಾಯಿತು.[೫೯]

ಕೋಲಂಚದಿಂದ ಬರಮಾಡಿಕೊಂಡ ಐವರು ಬ್ರಾಹ್ಮಣರ ಐತಿಹ್ಯವೆ ಪೂರ್ವ ಭಾರತದಲ್ಲಿ ಕುಲೀನತಾ ಪದ್ಧತಿಗೆ ನಾಂದಿಯಾಯಿತು. ಮಿಥಿಲೆಗೆ ಸಂಬಂಧಿಸಿದಂತೆ, ಆ ಬ್ರಾಹ್ಮಣರು ತಮ್ಮದೇ ಒಂದು ವರ್ಗ ನಿರ್ಮಿಸಿಕೊಂಡರು. ಮಿಥಿಲೆಯಲ್ಲಿ ಬೌದ್ಧರ ಪ್ರಾಬಲ್ಯದಿಂದ ಬಹುಶಃ ಕುಪಿತರಾದ ಆ ಬ್ರಾಹ್ಮಣರು ಪೂರ್ಣಿಯಾ ಮತ್ತು ಆಸಾಮಗಳಿಗೆ ವಲಸೆ ಹೋದರು. ಆಸಾಮದಲ್ಲಿ ನೆಲೆಸಿದ ಪ್ರಾಚೀನತಮ ವೈದಿಕ ಸಾಂಪ್ರದಾಯಿಕ ಬ್ರಾಹ್ಮಣರು ಮಿಥಿಲೆಯಿಂದ ವಲಸೆ ಬಂದವರೆಂದು ಹೇಳಲಾಗಿದೆ. ಬಂಗಾಲ ಪಂಥಕ್ಕೆ ಬದಲಾಗಿ ಮಿಥಿಲಾ ಪಂಥದ ಸ್ಮೃತಿ ಕಟ್ಟಳೆಗಳನ್ನು ಇವರು ಇಂದಿಗೂ ಪಾಲಿಸುತ್ತಿದ್ದಾರೆ. ತಾನು ಕೈಕೊಂಡ ಯಜ್ಞನೆರವೇರಿಸಲು ನೆರವಾಗಲೆಂದು ತ್ರಿಪುರಾದ ಅರಸನು ಈ ಐವರು ಬ್ರಾಹ್ಮಣರನ್ನು ಮಿಥಿಲೆಯಿಂದ ಕರೆತಂದನೆಂದು ಸಾಂಪ್ರದಾಯಿಕ ವೃತ್ತಾಂತಗಳು ಸಾಧಿಸುತ್ತವೆ.[೬೦]

ಮಿಥಿಲೆಯ ಬ್ರಾಹ್ಮಣರು ಜಾತಿಗಳ ಕರ್ಮಠ ಸಂಪ್ರದಾಯವನ್ನು ಜೀವಂತವಾಗಿರಿಸಿದರು, ತಮ್ಮ ಶುದ್ಧತೆಯ ಬಗೆಗೆ ಅಭಿಮಾನಪಟ್ಟರು ಮತ್ತು ಬೌದ್ಧ ಪ್ರಭಾವದಿಂದ ತಮ್ಮನ್ನು ದೂರವಿಟ್ಟುಕೊಂಡಿರುವುದಾಗಿ ಸಾಧಿಸಿದರು. ಅವರು ಮಗಧದ ಜನರು ಅಶುದ್ಧರೆಂದು ಭಾವಿಸಿದರು. ಮಗಧದ ಕೆಲವು ಸಾಮಾಜಿಕ ಪದ್ಧತಿಗಳು ಒಳನುಸುಳಿದಾಗ ಮಿಥಿಲೆಯಲ್ಲೆಲ್ಲೊ ಆಳುತ್ತಿದ್ದನೆಂದು ಹೇಳಲಾದ ಆದಿಸುರನು ಕೋಲಂಚದಿಂದ ಬ್ರಾಹ್ಮಣರನ್ನು ಕರೆಸಿ ಬ್ರಾಹ್ಮಣಿಕೆಯ ರಕ್ಷಣೆಗಾಗಿ ಕಠಿಣ ನಿಯಮಗಳನ್ನು ರಚಿಸಿದಂತಿದೆ. ಗಂಗಾನದಿ ತೀರ್ಥಯಾತ್ರೆಯೊಂದನ್ನುಳಿದು ಮಿಕ್ಕ ಪ್ರಸಂಗಗಳಲ್ಲಿ ಪುನರ್ದೀಕ್ಷೆ ಆವಶ್ಯಕವೆಂದು ಭಾವಿಸಲಾಗಿತ್ತು. ಕುಲೀನತಾ ಪದ್ಧತಿಯನ್ನು ಸಂಸ್ಥಾಪಿಸಿದ ತರುವಾಯ ಆದಿಸುರನು ಕೋಲಂಚದಿಂದ ಬಂದ ಬ್ರಾಹ್ಮಣರಿಗೆ ಅಥವಾ ಅವರ ಸಂಬಂಧಿಕರಿಗೆ ಭೂದತ್ತಿ ನೀಡಿದನು.

ಕುಲೀನತಾ ಪದ್ಧತಿಯು ಆದಿಸುರನದೆಂದು ಗುರುತಿಸಬಹುದು. ಅದನ್ನು ವ್ಯವಸ್ಥಿತಗೊಳಿಸಿದ ಶ್ರೇಯಸ್ಸು ಮಿಥಿಲೆಯ ಕರ್ನಾಟ ಅರಸರಿಗೆ ಮತ್ತು ಬಂಗಾಲದ ಸೇನರಿಗೆ ಸಲ್ಲುವುದು.

ವರ್ಣಾಶ್ರಮ ಧರ್ಮ ರೂಢಿಗತವಾಗಿತ್ತು. ಆರಂಭಿಕ ಕಾಲದ ನಮ್ಯತೆಯು ಈ ಕಾಲಘಟ್ಟ ದಲ್ಲಿ ಹರಳುಗಟ್ಟಿತು. ಜಾತಿ ವ್ಯವಸ್ಥೆಯ ಕಾಠಿಣ್ಯದ ವಿರುದ್ಧ ಪುನರಪಿ ಎಚ್ಚರಿಕೆಗಳು ಮತ್ತು ಸಂತತ ಆಂದೋಲನಗಳಿಗೂ ಜಗ್ಗದೆ ವರ್ಣವ್ಯವಸ್ಥೆ ಮತ್ತು ಪುರೋಹಿತಶಾಹಿ ಬೇರೂರಿತ್ತು. ಜೈನ, ಬೌದ್ಧ ಮತ್ತು ವೈಷ್ಣವ ಧರ್ಮಗಳು ಹುಟ್ಟಿ ಬೆಳೆದವಾದರೂ ವರ್ಣವ್ಯವಸ್ಥೆಯ ಅನಿಷ್ಟಗಳು ಅವನ್ನು ಅದುಮಿಟ್ಟವು. ಮಿಥಿಲಾ ಸಮಾಜದಲ್ಲಿಯ ಈ ಸಂಗತಿಯ ಉದಯ ಮತ್ತು ಬೆಳವಣಿಗೆಗೆ ಕಾಲಕಾಲಕ್ಕೂ ಮುಂದುವರಿದಿರುವ ಆರ್ಥಿಕ ಅಸಮಾನತೆಗಳೆ ಕಾರಣವೆಂದು ಹೇಳಬಹುದು. ಮಿಥಿಲಾ ಮಾತ್ರವಲ್ಲದೆ ಬಂಗಾಲ, ಆಸಾಮು ಮತ್ತು ಒರಿಸಾ ಕೂಡ ತಮ್ಮದೇ ಕುಲೀನತಾ ಪದ್ಧತಿಯನ್ನು ಹೊಂದಿವೆ. ಮಧ್ಯಯುಗದಲ್ಲಿ ಬಹುಕಾಲದ ವರೆಗೆ ಈ ರಾಜ್ಯಗಳು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಒಂದುಗೂಡಿದ್ದವು. ಇವೆಲ್ಲ ರಾಜ್ಯಗಳಲ್ಲಿ ಪಂಜಿ ಪದ್ಧತಿ ಇಂದಿಗೂ ಪ್ರಚಲಿತವಿದೆ. ಮಿಥಿಲೆಯ ಬ್ರಾಹ್ಮಣರು ಗೋತ್ರ ಮತ್ತು ಪ್ರವರಗಳ ಆಧಾರದ ಮೇಲೆ ಆಗಲೆ ವರ್ಗೀಕೃತಗೊಂಡಿದ್ದರು. ಮತ್ತು ಆದಿಸೂರನು ವರ್ಣವ್ಯವಸ್ಥೆಯನ್ನು ಸುಸಂಘಟಿಸಿದ ನಂತರ ಸ್ಥೂಲರೂಪದ ವಂಶಾವಳಿಯನ್ನು ಕಾಪಾಡಿಕೊಂಡು ಬರಲಾಯಿತು. ಅತಿ ಹಳೆಯ ಪಂಜಿಗಳು ನಾನ್ಯದೇವನ ಕಾಲದವು. ಬಂಗಾಲದ ಬಲ್ಲಾಳಸೇನ ಮತ್ತು ಮಿಥಿಲೆಯ ಹರಿಸಿಂಹದೇವರಿಗೆ ವರ್ಣವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಸಂಘಟಿಸಿದ ಶ್ರೇಯಸ್ಸನ್ನು ನೀಡಲಾಗಿದೆ.[೬೧] ಹರಿಸಿಂಹದೇವನು ಬ್ರಾಹ್ಮಣರ ಮಿಥಿಲಾ ಒಳಜಾತಿಯ ಮೂರು ಪಂಗಡಗಳ ಶ್ರೇಣಿಗಳನ್ನು ಅನುಕ್ರಮವಾಗಿ ನೆಲೆಗೊಳಿಸಿ ಅವರಿಗಾಗಿ ವಿವಾಹ ನಿಯಮಗಳನ್ನು ವಿಧಿಸಿದನು.[೬೨] ತನ್ನ ನಾಡಿನ ಜನರಲ್ಲಿ ಧಾರ್ಮಿಕಾಚರಣೆಗಳನ್ನು ಕ್ರಮಬದ್ಧಗೊಳಿಸಿ ಪ್ರೋತ್ಸಾಹಿಸುವುದು ಮತ್ತು ಶಾಸ್ತ್ರಗಳ ಕಟ್ಟಳೆಗಳಿಗನುಗುಣವಾಗಿ ನಿಷೇಧಿತ ಸಂಬಂಧ ಮತ್ತು ವಿವಾಹಗಳನ್ನು ತೊರೆದು ರಕ್ತ ಪರಿಶುದ್ಧತೆಯನ್ನು ಕಾಪಾಡುವುದೆ ಹರಿಸಿಂಹದೇವನ ಮುಖ್ಯ ಉದ್ದೇಶವಾಗಿತ್ತು. ಬ್ರಾಹ್ಮಣರನ್ನು ನಾಲ್ಕು ಉಪವರ್ಣಗಳಲ್ಲಿ ವಿಭಜಿಸಲಾಗಿತ್ತು: (ಅ) ಶ್ರೋತ್ರಿಯರು, ಅಂದರೆ ಯಜ್ಞಗಳನ್ನು ಮಾಡುವ ಮತ್ತು ಬೆಳಗಿನಿಂದ ಸಂಜೆಯವರೆಗೆ ತಮ್ಮ ಸಮಯವನ್ನು ಧಾರ್ಮಿಕ ಪೂಜೆಗೆ ಮೀಸಲಿಟ್ಟ ಬ್ರಾಹ್ಮಣರು. ಕುಲೀನತಾ ವ್ಯವಸ್ಥೆಯಲ್ಲಿ ಅವರಿಗೆ ಪ್ರಥಮ ಸ್ಥಾನ ನೀಡಲಾಗಿತ್ತು; (ಆ) ಶ್ರೋತ್ರಿಯರ ನಂತರದ ಯೋಗ್ಯರನ್ನು ಎರಡನೆಯ ವರ್ಗದಲ್ಲಿ ಇರಿಸಲಾಗಿತ್ತು; (ಇ) ಯೋಗ್ಯರ ನಂತರದ ಪಂಜಿಬದ್ಧರನ್ನು ಮೂರನೆಯ ವರ್ಗದಲ್ಲಿ ಇರಿಸಲಾಗಿತ್ತು; (ಈ) ಪಂಜಿಬದ್ಧರ ನಂತರದ ಜೈಬರರದು ನಾಲ್ಕನೆಯ ವರ್ಗ.[೬೩]

ಹುಟ್ಟು, ಸಾಧನೆ ಮತ್ತು ಚಾರಿತ್ರ್ಯಗಳು ಮಾತ್ರವೆ ಸಾಮಾಜಿಕ ಅಂತಸ್ತನ್ನು ನಿರ್ಧರಿಸುವ ಅಂಶಗಳಾಗಿದ್ದವು. ಅವರಿಗೆ ಗೊತ್ತುಪಡಿಸಲಾದ ಅನುಮೋದಿತ ವೃತ್ತಿಗಳ ಆಧಾರದ ಮೇಲೆ

ಮೈಥಿಲಿ ಬ್ರಾಹ್ಮಣರ ಸ್ಥಾನಮಾನಗಳನ್ನು ಸಮಾಜವು ನಿರ್ಧರಿಸುತ್ತಿತ್ತು. ಹರಿಸಿಂಹದೇವನು ಸಮಾಜವನ್ನು ಪುನರ್ಘಟಿಸಿದ ಕೊನೆಯ ಶ್ರೇಷ್ಠ ಕರ್ನಾಟ ಅರಸನು. ಲೇಖಿ ಎಂದು ಕರೆಯಲಾಗುತ್ತಿದ್ದ ತನ್ನ ಮಂತ್ರಿ ಸೂರ್ಯಕರ ಠಾಕೂರನ ನೆರವಿನಿಂದ ಮೈಥಿಲಿ ಕುಲೀನತೆಯ ಅಡಿಪಾಯ ಹಾಕಿದ ಶ್ರೇಯಸ್ಸನ್ನು ಈ ಹರಿಸಿಂಹದೇವನಿಗೆ ನೀಡಲಾಗಿದೆ. ಕುಲೀನತಾ ಪದ್ಧತಿ ಬಹಳ ಪ್ರಾಚೀನವೆಂದು ಹೇಳಲಾದರೂ ಅದನ್ನು ಸಾಮಾನ್ಯವಾಗಿ ಬಂಗಾಲದ ಸೇನರಿಗೆ ಮತ್ತು ಮಿಥಿಲೆಯ ಕರ್ನಾಟ ಅರಸರಿಗೆ ಆರೋಪಿಸಲಾಗಿದೆ. ಮತ್ತು ಮುಸ್ಲಿಮರು ಭಾರತದ ಈ ಪೂರ್ವಭಾಗಗಳಲ್ಲಿ ಭದ್ರ ನೆಲೆ ಕಂಡುಕೊಳ್ಳುವ ಮೊದಲು ಕುಲೀನತಾ ಪದ್ಧತಿ ಉಚ್ಛ್ರಾಯ ಹೊಂದಿತ್ತು. ಮಿಥಿಲೆಯ ಬ್ರಾಹ್ಮಣರು ಕರ್ಮಠ ಜಾತಿಸಂಪ್ರದಾಯಗಳನ್ನು ಜೀವಂತವಾಗಿಟ್ಟರೆಂದು ಹೇಳಲಾಗಿದೆ. ಮೊಗಲಪೂರ್ವ ಭಾರತದಲ್ಲಿ ಸಹ ಅವರು ನೇರವಾಗಿ ಮುಸ್ಲಿಮ ಆಳ್ವಿಕೆಗೆ ಒಳಪಟ್ಟಿರಲಿಲ್ಲ. ಬಹುತೇಕ ಬ್ರಾಹ್ಮಣರೇ ಆಗಿದ್ದ ತಮ್ಮ ರಾಜರು ಮತ್ತು ದೊರೆಗಳನ್ನು ಅವರು ಹೊಂದಿದ್ದರು. ಮಧ್ಯಯುಗೀನ ಮಿಥಿಲಾ ಸಮಾಜವು ಬೌದ್ಧ ಪ್ರಭಾವದಿಂದ ಗಮನಾರ್ಹವಾಗಿ ಮುಕ್ತವಾಗಿತ್ತು. ಬಹುಶಃ ಮಿಥಿಲೆಯ ಬ್ರಾಹ್ಮಣರು ಮಗಧ ಮತ್ತು ಬೇರೆಡೆಗಳಲ್ಲಿ ಬೌದ್ಧರ ಮೇಲುಗೈ ಕಾಲದಲ್ಲಿ ನುಸುಳಿದ್ದ ಕೆಲವು ಸಾಮಾಜಿಕ ಪದ್ಧತಿಗಳನ್ನು ತೆಗೆದೊಗೆಯಲು ಉದ್ದೇಶಪೂರ್ವಕವಾಗಿ ಯತ್ನಿಸಿದರು. ಬೌದ್ಧಧರ್ಮವು ಮೈಥಿಲನಿಗೆ ನಿಷಿದ್ಧವಾಗಿತ್ತು. ದೈನಂದಿನ ಕರ್ತವ್ಯಗಳಿಗೆ ಸಂಬಂಧಿಸಿದ ವಿವರವಾದ ನಿಯಮಗಳುಳ್ಳ ಸ್ಮೃತಿಯಾಧಾರಿತ ವಿವಿಧ ಶಬ್ದಕೋಶಗಳನ್ನು ಬ್ರಾಹ್ಮಣ ಶಾಸಕರು ರಚಿಸಿದರು.

ಕುಲೀನತಾ ಪದ್ಧತಿಯು ಒಂದು ಹೊಸ ಪಂಜಿಕಾರರ ಅರ್ಥಾತ್ ವಿವಾಹ ದಲ್ಲಾಳಿಗಳ ವರ್ಗವನ್ನು ಸೃಷ್ಟಿಸಿತು. ವಿವಾಹಾಪೇಕ್ಷಿ ಪಕ್ಷಗಳು ನಿರ್ಬಂಧಿತ ರಕ್ತಸಂಬಂಧ ಗಡಿಯನ್ನು ಮೀರಿಲ್ಲವೆಂಬ ಪ್ರಮಾಣಪತ್ರ ನೀಡುವ ಅಧಿಕಾರವನ್ನು ಪಂಜಿಕಾರರು ಹೊಂದಿದ್ದರು. ಹಾಗಾಗಿ, ರಕ್ತಶುದ್ಧತೆಯನ್ನು ಕಾಪಾಡುವ ಹೊಣೆ ಅವರ ಮೇಲಿದ್ದುದರಿಂದ ಪಂಜಿಕಾರರು ಮಿಥಿಲೆಯ ಸಮಾಜದಲ್ಲಿ ಬಹಳ ಮಹತ್ವ ಪಡೆದರು. ಅವರು ಸಂಪೂರ್ಣ ಮತ್ತು ಸಮಗ್ರ ವಂಶಾವಳಿ ದಾಖಲೆಗಳನ್ನು ಬರೆದಿಡುತ್ತಿದ್ದರು. ಬ್ರಾಹ್ಮಣರಂತೆಯೆ, ಕಾಯಸ್ಥರನ್ನು (ಮುಖ್ಯತಃ ಕರ್ಣ ಕಾಯಸ್ಥರನ್ನು) ಎರಡು ಮುಖ್ಯ ವರ್ಗಗಳಲ್ಲಿ ವಿಭಜಿಸಲಾಗಿತ್ತು: ಭಲಾಮಾನುಸ ಅಥವಾ ಕುಲೀನ ಮತ್ತು ಗೃಹಸ್ಥ ಅಂದರೆ ಸಾಮಾನ್ಯ ಕುಲಜಾತ. ಕಾಯಸ್ಥ ಪಂಜಿಕಾರರಿಗೂ ಬ್ರಾಹ್ಮಣ ಪಂಜಿಕಾರರಿಗಿದ್ದ ಹಕ್ಕುಬಾಧ್ಯತೆಗಳಿದ್ದವು. ಕ್ಷತ್ರಿಯ ಮತ್ತು ವೈಶ್ಯ ಮುಂತಾದ ಇತರ ಜಾತಿಗಳೂ ಪಂಜಿ ಪದ್ಧತಿಯನ್ನು ಅಂಗೀಕರಿಸಿದ್ದರೆಂದು ನಂಬಲಾಗಿದೆ. ಆದರೆ, ಅವರು ಅದನ್ನು ಕಾಲಕ್ರಮೇಣ ಅಲಕ್ಷಿಸಿದಂತಿದೆ. ತತ್ಪರಿಣಾಮವಾಗಿ ಅವರ ಪಂಜಿಗಳು ಸಮಕಾಲೀನ ಮತ್ತು ವೈಜ್ಞಾನಿಕವಾಗಿಲ್ಲ. ಕ್ರಿ.ಶ. ಒಂಬತ್ತನೆಯ ಶತಮಾನದಲ್ಲೂ ಸಹರ್ಸಾ ಜಿಲ್ಲೆಯ ರಹದಾರಿಯಲ್ಲಿ ಇಂಥ ಪಂಜಿಗಳಿದ್ದುದನ್ನು ರಿಸ್ಲೆ ಗಮನಿಸಿದ್ದರು. ಮೈಥಿಲಿ ಬ್ರಾಹ್ಮಣರು ಮತ್ತು ಕರ್ಣ ಕಾಯಸ್ಥರು ಇವತ್ತಿಗೂ ಈ ಪದ್ಧತಿಗೆ

ಅಂಟಿಕೊಂಡಿರುವವರು ಮತ್ತು ಈ ತಾಂತ್ರೀಯತೆಗಳನ್ನು ಅನುಸರಿಸದೆ ಯಾವುದೆ ಸಮಾರಂಭವಾಗಲಿ ಆಚರಣೆಯಾಗಲಿ ನಡೆಯುತ್ತಿಲ್ಲ.

ಅಂದಿನ ಕಾಲದಲ್ಲಿ ಈ ಸಾಮಾಜಿಕ ಸುಧಾರಣೆಗಳ ಪ್ರವರ್ತಕರ ಉದ್ದೇಶವೇನೇ ಇದ್ದಿರಬಹುದಾದರೂ ಮೈಥಿಲಿ ಸಮಾಜದ ಮೇಲೆ ಅದರ ಪರಿಣಾಮ ಅನರ್ಥಕಾರಿಯಾಗಿತ್ತು. ಅದು ವರ್ಣದೊಳಗೊಂದು ವರ್ಣವನ್ನು ಸೃಷ್ಟಿಸಿತು ಮತ್ತು ಸಾಮಾಜಿಕ ಜೀವನದಲ್ಲಿ ಪರಸ್ಪರ ಈರ್ಷೆ ದ್ವೇಷಗಳನ್ನು ಹುಟ್ಟುಹಾಕಿತು. ಅದು 'ಬಿಕೌಆಗಳ' ಪದ್ಧತಿಯ ಬೆಳವಣಿಗೆಗೆ ಕಾರಣವಾಗಿ ವಿವಾಹ ಸಂಬಂಧವು ಧನ ಸಂಬಂಧವಾಗಿ ಕುಲಗೆಟ್ಟಿತು. ಅತಿ ಕೆಟ್ಟ ರೀತಿಯ ಬಹುಪತ್ನಿತ್ವವು ಈ ಪದ್ಧತಿಯ ಪರಿಣಾಮವಾಗಿದ್ದು ಕೆಲ ವೇಳೆ ಒಬ್ಬನೇ ನಲವತ್ತರಿಂದ ಐವತ್ತು ಹೆಂಗಸರನ್ನು ಮದುವೆಯಾಗುತ್ತಿದ್ದ. ಮೇಲಾಗಿ, ಅದು ಸ್ತ್ರೀಯರ ಸ್ಥಾನಮಾನದ ಅವನತಿಗೆ ಎಡೆಮಾಡಿತು. ಅವರು ಅನೇಕ ಮಾನಸಿಕ ಮತ್ತು ದೈಹಿಕ ಪೀಡನೆಗಳಿಗೆ ಗುರಿಯಾಗಿದ್ದರು. ಪುತ್ರಿಯರನ್ನು ಸಹ ಹಣಕ್ಕೆ ಮಾರಲಾಗುತ್ತಿತ್ತು. ಉನ್ನತ ಕುಲದಲ್ಲಿ ಜನಿಸಿದುದಕ್ಕೆ ಅತಿರೇಕದ ಮಹತ್ವ ಪ್ರಾಪ್ತವಾಗಿ ಸ್ತ್ರೀಯರನ್ನು ಬಹುಮಟ್ಟಿಗೆ ಪದಾರ್ಥಗಳಂತೆ ನಡೆಸಿಕೊಳ್ಳುವ, ಮನಬಂದಂತೆ ಮಾರುವ ವ ಕೊಳ್ಳುವ ಪದ್ಧತಿಗೆ ಅವಕಾಶ ಮಾಡಿಕೊಟ್ಟಿತು. ತಥಾಕಥಿತ ರಕ್ತಶುದ್ಧತೆ ಕಾಪಾಡಿಕೊಳ್ಳುವ ನೆಪದಲ್ಲಿ ಇದನ್ನು ಮಾಡಲಾಗುತ್ತಿತ್ತು. ಈ ಪದ್ಧತಿಯು ಸಾಮಾಜಿಕ ಸಂಘಟನೆಯ ಬುಡಕ್ಕೇ ಕೊಡಲಿಯೇಟು ಹಾಕಿತು. ಮತ್ತು ಒಂದು ವರ್ಗದವರು ಇನ್ನೊಂದು ವರ್ಗದವರೊಂದಿಗೆ ಬೆಳೆಸುತ್ತ ಸಾಗಿದ ವೈಷಮ್ಯದಿಂದಾಗಿ ಸಮಾಜವು ಅತಿಶಯವಾಗಿ ನೀತಿಗೆಡಲು ಕಾರಣವಾಯಿತು. ಇದರಿಂದ ಉತ್ತೇಜಿತವಾದ ಬಾಲವಿವಾಹವು ಕಾಲಕ್ರಮೇಣ ದೊಡ್ಡ ಶಾಪವಾಗಿ ಪರಿಣಮಿಸಿತು. ಹಾಗಾಗಿ, ಮಿಥಿಲೆಯಾದ್ಯಂತ ವೈಧವ್ಯ ಸರ್ವೇಸಾಮಾನ್ಯವಾಯಿತು. ಶೂದ್ರರು ಮತ್ತು ಸ್ತ್ರೀಯರು ಒಂದೇ ತರಗತಿಯಲ್ಲಿದ್ದು ಅವರ ಸ್ಥಿತಿ ಗುಲಾಮರ ಸ್ಥಿತಿಗಿಂತ ಭಿನ್ನವಾಗಿರಲಿಲ್ಲ. ಸ್ತ್ರೀಯರು ಐಷಾರಾಮದ, ಸುಖದ ಮತ್ತು ಲೈಂಗಿಕ ತೃಪ್ತಿಯ ವಸ್ತು ಎಂದು ಭಾವಿಸಲಾಗುತ್ತಿತ್ತು. ತಮ್ಮ ಕುಲದ ಆದಿಮ ಪರಿಶುದ್ಧತೆ ಕಾಪಾಡಿಕೊಳ್ಳುವುದಕ್ಕೆ ಮತ್ತು ಸಮಾಜವನ್ನು ಭದ್ರ ತಳಹದಿಯ ಮೇಲೆ ಸಂಘಟಿಸುವುದಕ್ಕೆ ಮುಸ್ಲಿಮ ಆಕ್ರಮಣವು ಮೂಲ ಕಾರಣವಾಗಿತ್ತು. ನಿಜಕ್ಕೂ ಇದು ಮಿಥಿಲೆಯ ಸಾಮಾಜಿಕ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲಾಯಿತು. ಸಾಮಾಜಿಕ ಮೌಲ್ಯಗಳ ಹೊಸ ಮಾನದಂಡ ಸ್ಥಾಪಿತವಾಯಿತು. ಸಾಮಾಜಿಕ ವ್ಯವಸ್ಥೆಯನ್ನು ಬಿಗಿಗೊಳಿಸಲೋಸುಗ ಬ್ರಾಹ್ಮಣರು ಮತ್ತು ನ್ಯಾಯಸಂಹಿತೆಗಾರರು ವರ್ಣ, ಆಹಾರ, ಉಡುಗೆ, ವಿವಾಹ, ಪಿತ್ರಾರ್ಜಿತ, ಶುದ್ಧೀಕರಣ ವಿಧಿಗಳು ಇತ್ಯಾದಿಗಳನ್ನು ಕುರಿತ ಸ್ಮೃತಿಗಳನ್ನು ರಚಿಸಿದರು. ವರ್ಣ ಮತ್ತು ಸಾಮಾಜಿಕ ಗುಂಪುಗಳ ನಡುವಣ ಸಂಬಂಧಗಳು ಸ್ವಗೋತ್ರ ವಿವಾಹ ನಿಯಮಗಳಿಂದ ನಿಯಂತ್ರಿತವಾಗಿದ್ದವು. ತಮ್ಮ ವರ್ಣಗುಂಪುಗಳಾಚೆ ಬೇಯಿಸಿದ ಆಹಾರ ಸೇವಿಸುವುದು ಬಹಿಷ್ಕೃತವಾಗಿತ್ತು. ಅನುವಂಶಿಕ ವೃತ್ತಿಯನ್ನೆ ಅನುಸರಿಸುವುದು ಕಡ್ಡಾಯವಾಗಿತ್ತು. ಭಿನ್ನ ವರ್ಗಗಳು ಸಹವಾಸ ಮಾಡದಂತೆ ಪ್ರೋತ್ಸಾಹಿಸಲಾಗುತ್ತಿತ್ತು. ಈ ಕಾಲಘಟ್ಟದಲ್ಲಿ ಕೆಟ್ಟ ಸ್ತ್ರೀಯರು ಅಥವಾ ವೇಶ್ಯೆಯರು

ಇದ್ದುದನ್ನು ಪುಷ್ಟೀಕರಿಸುವ ಅನೇಕ ನಿದರ್ಶನಗಳುಂಟು. ಕೆಲವು ಬ್ರಾಹ್ಮಣರು ಮತ್ತು ಕ್ಷತ್ರಿಯರು ಉಪಪತ್ನಿಯರನ್ನು ಇಟ್ಟುಕೊಳ್ಳಲು ಸಂತೋಷಪಡುತ್ತಿದ್ದರು. ಕೆಳಸ್ತರದ ಜನರಲ್ಲಿ ಕೂಡ ವೇಶ್ಯಾಗಮನ ರೂಢಿಯಲ್ಲಿತ್ತು. ಆ ಕಾಲದ ಬರಹಗಾರರು ಸಹ ಆನಂದಗೃಹಗಳಿಗೆ ಮೇಲಿಂದ ಮೇಲೆ ಹೋಗುತ್ತಿದ್ದರೆಂದು ಹೇಳಲಾಗಿದೆ. ಜ್ಯೋತಿರೀಶ್ವರ ಮತ್ತು ವಿದ್ಯಾಪತಿ ಇಬ್ಬರೂ ತಮ್ಮ ಬರವಣಿಗೆಗಳಲ್ಲಿ ವೇಶ್ಯೆಯರು ಮತ್ತು ದುರ್ನಡತೆಯುಳ್ಳ ಸ್ತ್ರೀಯರನ್ನು ವರ್ಣಿಸಿರುವರು. ಮುಸ್ಲಿಮರ ಆಕ್ರಮಣ ಮತ್ತು ತತ್ಪರಿಣಾಮವಾಗಿ ಉಂಟಾದ ಮಿಥಿಲೆಯ ರಾಜಕೀಯ ಸ್ಥಿತಿಯ ಮೇಲೆ ಅವರ ಹಿಡಿತಗಳಿಂದಾಗಿ ಹಿಂದೂ ಸ್ತ್ರೀಯರ ಮಾನ ಮತ್ತು ಘನತೆಗೆ ಅಪಾಯ ಒದಗಿತು. ವಿವಾಹಯೋಗ್ಯ ವಯಸ್ಸಿನ ಸುಲಕ್ಷಣ ಹುಡುಗಿಯರನ್ನು ಮುಸುಕು ಧರಿಸದೆ ಮನೆಯಾಚೆ ಕಾಲಿಡಲು ಬಿಡುತ್ತಿರಲಿಲ್ಲ. ಅಂದಿನಿಂದ ಪರ್ದಾ ಪದ್ಧತಿ ಮೈಥಿಲಿ ಸಮಾಜದಲ್ಲಿ ಪ್ರಚಲಿತವಾಯಿತು.

ಮಿಥಿಲೆಯಲ್ಲಿ ಆಸ್ತಿಯ ಹಂಚಿಕೆ ಅಸಮಾನವಾಗಿತ್ತೆಂದು ಜ್ಯೋತಿರೀಶ್ವರ ಮತ್ತು ಇನ್ನಿತರ ಸಮಕಾಲೀನ ಮೂಲಗಳಿಂದ ತಿಳಿದುಬರುತ್ತದೆ. ಆ ಕಾಲದ ವಿವಿಧ ಸಾಹಿತ್ಯಿಕ ಗ್ರಂಥ ಮತ್ತು ಟೀಕಾ ಗ್ರಂಥಗಳಲ್ಲೂ ಜನಸಾಮಾನ್ಯರ ಚಿಂತಾಜನಕ ಸ್ಥಿತಿಯ ಬಗೆಗೆ ಅಸಂಖ್ಯ ಉಲ್ಲೇಖಗಳಿವೆ. ನಗರದಲ್ಲಿ ಅಲೆದಾಡುತ್ತಿದ್ದ ಭಿಕ್ಷುಕರ ನಿದರ್ಶನಗಳಿವೆ. ಈ ವರ್ಗದಲ್ಲಿ ಶೂದ್ರರ ಪ್ರಮಾಣ ಬಹಳಿತ್ತು. ಭಿಕ್ಷುಕರು ನಗರಕ್ಕೆ ಬರುತ್ತಿದ್ದುದು ಗುಪ್ತ ಕಾಲಘಟ್ಟವನ್ನು ನೆನಪಿಸುತ್ತದೆ. ಅಭಾವದ ತೀವ್ರತೆಯಿಂದಾಗಿ ಕೆಲ ವೇಳೆ ಬಿಕ್ಷುಕರು ಕಳ್ಳತನದಲ್ಲಿ ತೊಡುಗುತ್ತಿದ್ದರು. ಮತ್ತು ಕಾಲಕ್ರಮೇಣ ಇದು ಸ್ಥಳೀಯ ಚೌಧರಿಗೆ ಸಮಸ್ಯೆಯಾಗ ತೊಡಗಿತು. ಈ ಕಾಲಘಟ್ಟದಲ್ಲಿ ಜಾತಿಗಳು ಮತ್ತು ವಿವಿಧ ಸಾಮಾಜಿಕ ಗುಂಪುಗಳು ಬೆಳೆಯುತ್ತಿದ್ದುದು ಅತಿ ವಾಸ್ತವವಾಗಿತ್ತು ಮತ್ತು ವರ್ಣನರತ್ನಾಕರದಲ್ಲಿ ಸಾಮಾಜಿಕ ಗುಂಪುಗಳು, ಅಧಿಕಾರಿಗಳು ಬಹುಸಂಖ್ಯೆಯಲ್ಲಿ ಕಾಣಸಿಗುತ್ತಾರೆ.

ಕೃಷಿಯು ಜನರ ಮುಖ್ಯಾಧಾರವಾಗಿತ್ತು. ಮಿಥಿಲೆಯಲ್ಲಿ ಉತ್ಕೃಷ್ಟ ಗುಣಮಟ್ಟದ ಭತ್ತ ಬೆಳೆಯಲಾಗುತ್ತಿತ್ತು. ಕಬ್ಬನ್ನು ಕೂಡ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದರು. ಕಬ್ಬು ಮತ್ತು ನೀಲಿ ಜನಪ್ರಿಯ ಉತ್ಪತ್ತಿಗಳೆಂಬುದನ್ನು ಕಂಡ ಧರ್ಮಸ್ವಾಮಿಯು ಬಿಹಾರದಿಂದ ಸಕ್ಕರೆ ಮತ್ತು ಬಣ್ಣಗಳ ಹೊರೆಗಳನ್ನೆ ಒಯ್ದನು. ಮಿಥಿಲೆಯಲ್ಲಿ ನಾವೆಗಳು ಮತ್ತು ಮೀನುಗಾರರು ತೀರಾ ಸಾಮಾನ್ಯವಾಗಿದ್ದವು ಮತ್ತು ಒಂದು ನಾವೆಯಲ್ಲಿ ಮುನ್ನೂರರಷ್ಟು ಪಯಣಿಗರಿಗೆ ಸ್ಥಳಾವಕಾಶವಿತ್ತೆಂದು ಧರ್ಮಸ್ವಾಮಿಯಿಂದ ತಿಳಿದುಬರುತ್ತದೆ. ಚೀನ, ತಿರಹತ್, ನೇಪಾಳ ಮತ್ತು ಆಗ್ನೇಯ ಏಶಿಯಾದ ದೇಶಗಳೊಂದಿಗಿನ ನಿಯಮಿತ ಸಂಪರ್ಕದಿಂದ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂವಹನಕ್ಕೆ ಅನುಕೂಲವಾಯಿತು ಮತ್ತು ವಿದೇಶಿ ವ್ಯಾಪಾರದಲ್ಲಿ ಹೆಚ್ಚಳವಾಯಿತು.

ಗ್ರಾಮೀಣ ಅರ್ಥವ್ಯವಸ್ಥೆ ಹೆಚ್ಚುಕಡಿಮೆ ಸ್ವಾವಲಂಬನೆಯದು ಮತ್ತು ಏಕಪ್ರಕಾರದ್ದಾಗಿತ್ತು. ಮಿಥಿಲೆಯಲ್ಲಿ ಬೇಸಾಯವು ವೈಶ್ಯರ ಮತ್ತು ಕೆಳಸ್ತರದ ಜನರ ಉದ್ಯೋಗವಾಗಿತ್ತು. ಬ್ರಾಹ್ಮಣರು ಕೂಡ ಬೇಸಾಯ ಕೈಕೊಂಡುದನ್ನು ದೃಢೀಕರಿಸುವ ನಿದರ್ಶನಗಳಿವೆ.

*ವರ್ಣನರತ್ನಾಕರವು* ಮಿಥಿಲೆಯಲ್ಲಿ ದಿನನಿತ್ಯ ಬಳಸುತ್ತಿದ್ದ ಪದಾರ್ಥಗಳ ಒಳ್ಳೆಯ ವಿವರಣೆಯನ್ನು ನೀಡುತ್ತದೆ. ಮತ್ತು ಚುರಾ, ಫಾರ್ಹಿ, ದಹಿ ಇತ್ಯಾದಿಗಳನ್ನು ವಿಶೇಷವಾಗಿ ಹೆಸರಿಸಿದೆ. ಮಿಥಿಲೆಯು ಹಾಲು ಮತ್ತು ಮೊಸರು ಉತ್ಪನ್ನಗಳಿಗೆ ಪ್ರಸಿದ್ಧವಿತ್ತು. ಸಮಕಾಲೀನ ಸಾಹಿತ್ಯದಲ್ಲಿ ಮಾವು, ದಾಳಿಂಬ, ಅಂಜೂರ, ನಿಂಬೆ, ಕಲ್ಲಂಗಡಿ ಮತ್ತು ಬಾಳೆ ಮುಂತಾದ ಮಹತ್ವದ ಹಣ್ಣುಗಳನ್ನು ಹೆಸರಿಸಲಾಗಿದೆ. ಸಕ್ಕರೆಯು ರಫ್ತಿನ ಒಂದು ಪ್ರಮುಖ ಪದಾರ್ಥವಾಗಿತ್ತು. ದೇವಾಲಯಗಳಲ್ಲಿ ಜೇನುತುಪ್ಪವನ್ನು ಬಳಸಲಾಗುತ್ತಿತ್ತು. ಮಿಥಿಲೆಯಲ್ಲಿ ಅಡಕೆ ಉದ್ಯಮ ಬಹಳ ಅಭಿವೃದ್ಧಿ ಹೊಂದಿತ್ತು. ಮಿಥಿಲೆಯ ಜನರಿಗೆ ವೀಳ್ಯದಲೆ ಬಲು ಇಷ್ಟವಾಗಿತ್ತು. ಧರ್ಮಸ್ವಾಮಿ ಮತ್ತು *ವರ್ಣನರತ್ನಾಕರ* ಎರಡೂ ಅದನ್ನು ಉಲ್ಲೇಖಿಸಿವೆ. *ವರ್ಣನರತ್ನಾಕರವು* ಇನ್ನೂ ಮುಂದುವರೆಯುತ್ತ ಸುಮಾರು ಮೂವತ್ತು ವಿಧದ ಬಟ್ಟೆ ಮತ್ತು ಬೇರೆ ಬೇರೆ ಧಾತುಗಳ ಪದಾರ್ಥಗಳನ್ನು ಉಲ್ಲೇಖಿಸುತ್ತದೆ. ಮೇಣೆಯು ಪಯಣದ ಸಾಮಾನ್ಯ ಸಾಧನವಾಗಿತ್ತು. *ವರ್ಣನರತ್ನಾಕರದಲ್ಲಿ* ಮೂವತ್ತಾರು ಬಗೆಯ ಶಸ್ತ್ರಾಸ್ತ್ರಗಳು ಮತ್ತು ಯುದ್ಧಕವಚಗಳನ್ನು ಹೆಸರಿಸಲಾಗಿದೆ.

ವೃತ್ತಿಸಂಘಗಳು ಮತ್ತು ವೃತ್ತಿಜಾತಿಗಳು ಗ್ರಾಮಗಳಲ್ಲಿ ಕಾರ್ಯನಿರತವಾಗುತ್ತ ಸಾಗಿದವು. ಈ ಕಾಲಘಟ್ಟದಲ್ಲಿ ಮಿಥಿಲೆಯಲ್ಲಿದ್ದ ಉದ್ಯೋಗ ವಿಚಾರವನ್ನು *ವರ್ಣನರತ್ನಾಕರದಿಂದ* ಕಂಡುಕೊಳ್ಳಬಹುದು. ಅದರಲ್ಲಿ ಗ್ರಂಥಕರ್ತನು ಕೆಳಜಾತಿಗಳು ಮತ್ತು ದಲಿತ ವರ್ಗಗಳ ಪಟ್ಟಿಯನ್ನೇ ನೀಡಿರುವನು. ಅವರು ಸಮಾಜದಲ್ಲಿ ತುಳಿತಕ್ಕೊಳಗಾದವರಿದ್ದು ಬಹುತೇಕ ನಿದರ್ಶನಗಳಲ್ಲಿ ಆನುವಂಶಿಕ ಸ್ವರೂಪದ ದುಡಿಮೆಗಳನ್ನು ಪ್ರತಿನಿಧಿಸುತ್ತಿದ್ದರು. ಕೆಲಸದ ಉಪಕರಣಗಳು ಮತ್ತು ಪದ್ಧತಿಗಳು ಒರಟಾಗಿದ್ದವು. ಗ್ರಾಮೀಣ ಕಸಬುದಾರರ ಸಾಮಾಜಿಕ ಸ್ಥಾನಮಾನವು ಅವರು ಒಂದು ಮಿತಿಯಾಚೆ ಪ್ರಗತಿ ಸಾಧಿಸದಂತೆ ನಿರುತ್ಸಾಹಗೊಳಿಸಿತ್ತು. ವೃತ್ತಿಸಂಘಗಳ ಮತ್ತು ಕಸಬುಗಳ ಪರಂಪರೆಯು ಒಂದು ಅನನ್ಯ ಪ್ರತ್ಯೇಕತೆಯನ್ನು ಸೃಷ್ಟಿಸಿತು. ಆದರೆ ಕೆಲ ವೇಳೆ ತಾಂತ್ರಿಕ ರಹಸ್ಯಗಳು ಕಸಬುದಾರನೊಂದಿಗೆಯೆ ಅಂತ್ಯಗೊಂಡು ಮುಂದಿನ ಪೀಳಿಗೆಗೆ ಇಲ್ಲದಂತಾಯಿತು. ವ್ಯಾಪಾರ ಹುಲುಸಾಗಿ ಬೆಳೆಯಿತು. ತಂಜಾವೂರು, ಸಿಲ್ಹೆಟ, ಅಜಮೀರ, ಕಂಚಿ, ಕಾಮರೂಪ ಮತ್ತು ಬಂಗಾಲಗಳಿಂದ ಮಿಥಿಲೆಯು ಬಟ್ಟೆಯನ್ನು ಆಮದು ಮಾಡಿಕೊಳ್ಳುತ್ತಿತ್ತೆಂದು *ವರ್ಣನರತ್ನಾಕರದಿಂದ* ತಿಳಿದುಬರುತ್ತದೆ. ಆದರ್ಶ ವ್ಯಾಪಾರಿಯೆಂದರೆ ದೂರದೂರದ ಊರುಗಳ ಬೇರೆ ಬೇರೆ ಜನರನ್ನು ಚೆನ್ನಾಗಿ ಬಲ್ಲವನು ಎಂದು *ವರ್ಣನರತ್ನಾಕರ* ವರ್ಣಿಸುತ್ತದೆ.

ಗ್ರಾಮೀಣ ಆರ್ಥಿಕ ಜೀವನದ ಗುಣಮಟ್ಟ ಬಹಳ ಎತ್ತರವಾಗಿರಲಿಲ್ಲ. ರೈತನು ಕಷ್ಟಪಟ್ಟು ದುಡಿದರೂ ಅವನ ಸ್ಥಿತಿ ಸುಖಮಯವಾಗಿರಲಿಲ್ಲ. ಶ್ರೀಮಂತರು ಸಮೃದ್ಧಿಯಲ್ಲಿ ಹೊರಳಾಡಿದರೆ ಬಡವರು ಚಿಂತಾಜನಕ ಜೀವನದಲ್ಲಿ ತೊಳಲಾಡುತ್ತಿದ್ದರು. ಅಮೀರ ಖುಸ್ರೊ ಹೇಳುವಂತೆ "ರಾಜನ ಕಿರೀಟದಲ್ಲಿನ ಪ್ರತಿಯೊಂದು ಮುತ್ತು ಬಡ ರೈತನ ಕಣ್ಣುಗಳಿಂದ ಸುರಿದ ಹರಳುಗಟ್ಟಿದ ರಕ್ತದ ಕಣವೇ ಆಗಿತ್ತು." ಸಾವಿರಾರು ಸೇವಿಕೆಯರು

ಮತ್ತು ಗುಲಾಮ ಕನ್ಯೆಯರು ಸುತ್ತುವರಿದಿದ್ದ ಸುಂದರ ಯುವತಿಯರಿಂದ ಅರಮನೆಗಳು ತುಂಬಿತುಳುಕುತ್ತಿದ್ದರೆ ಹೊಟ್ಟೆಗಿಲ್ಲದ ಭಿಕ್ಷುಕರು ದಂಡಿಯಾಗಿ ಬೀದಿಗಳಲ್ಲಿ ಬಿದ್ದಿರುತ್ತಿದ್ದರು. ಎಲ್ಲಾ ಅನಿಷ್ಟಗಳಿಂದೊಡಗೂಡಿದ ಐಷಾರಾಮವು ತಾಂಡವವಾಡುತ್ತಿತ್ತು. ತನ್ನ *ಧೂರ್ತಸಮಾಗಮನಾಟಕದಲ್ಲಿ* ಜ್ಯೋತಿರೀಶ್ವರನು ಶ್ರೀಮಂತ ರೈತನೊಬ್ಬನ ಮನೆಯ ವರ್ಣನೆಯನ್ನು ಕೊಡುತ್ತಾನೆ. ಆದರೆ, ಶ್ರೀಮಂತ ರೈತರ ಸಂಖ್ಯೆ ದೊಡ್ಡದಿರಲಿಲ್ಲ.

ವಿವಿಧ ಕಸಬುಗಳು ಮತ್ತು ವೃತ್ತಿಸಂಘಗಳು ಪ್ರಗತಿ ಸಾಧಿಸಿದಾಗ್ಯೂ ವರ್ಣಾಶ್ರಮ ಪದ್ಧತಿ ಬೇರೂರಿತ್ತು. ಸಾಮಾಜಿಕ ಭೇದಗಳು ರೂಢಿಗತವಾಗಿದ್ದವು. ಕರ್ನಾಟರು ಆ ವ್ಯವಸ್ಥೆಯನ್ನು ಭದ್ರಗೊಳಿಸುವಲ್ಲಿ ನೆರವಾದರು. ಬಡ ಜನರು ಪ್ರಾಮಾಣಿಕರೂ ಪರಿಶ್ರಮಿಗಳೂ ಆಗಿದ್ದರು. ಆದರೆ, ಪಾತಕ ವರ್ಗಗಳ ದೊಡ್ಡ ಪಟ್ಟಿಯೂ ಇತ್ತು. ಸ್ತ್ರೀಯರು ಅನುಭವಿಸುತ್ತಿದ್ದ ವಿಶೇಷಾಧಿಕಾರಗಳೂ ಕಡಿಮೆಯಿದ್ದವು. ವಿವಾಹಿತ ಸ್ತ್ರೀಯರು ಕೆಲ ವೇಳೆ ನೂಲುವುದು, ನೇಯುವುದು ಅಥವಾ ಬೇರೆ ಕೆಲಸ ಮಾಡುವ ಮೂಲಕ ಗಂಡಂದಿರ ಸಂಪಾದನೆಗೆ ನೆರವಾಗುತ್ತಿದ್ದರು. ಅಕ್ಕಿ, ಮೀನು, ಮಾಂಸ, ಹಣ್ಣು, ಹಾಲು ಮುಂತಾದವು ಮುಖ್ಯ ಆಹಾರವಾಗಿದ್ದವು. ಗ್ರಾಮೀಣ ಜನರು ಸರಳ ಜೀವನ ಸಾಗಿಸುತ್ತಿದ್ದರು. ಭೂಮಿಯು ಪ್ರಧಾನ ಆದಾಯಮೂಲವಾಗಿತ್ತು. ಅದನ್ನು ಪವಿತ್ರ ಉದ್ದೇಶಗಳಿಗೆ ದತ್ತಿ ನೀಡಲಾಗುತ್ತಿತ್ತು. ಗುಲಾಮಗಿರಿ ಅಪರಿಚಿತವಾಗಿರಲಿಲ್ಲ. ಚಿಕ್ಕ ವಯಸ್ಸಿನಲ್ಲಿಯೆ ಮದುವೆ ಮಾಡಿಕೊಳ್ಳುವ ಪದ್ಧತಿಯಿತ್ತು ಮತ್ತು ಪರ್ದಾ ಪದ್ಧತಿ ನೆಲೆಗೊಂಡಿತ್ತು. ಕೆಲ ವರ್ಗಗಳಲ್ಲಿ ಸತಿ ಪದ್ಧತಿಯೂ ಪ್ರಚಲಿತವಾಗಿತ್ತು. ಆದರೆ, ಅದು ತೀರಾ ಸಾಮಾನ್ಯವಾಗಿರಲಿಲ್ಲ. ಅದು ಮಿಥಿಲೆಯಲ್ಲಿ ಮುಸ್ಲಿಮರ ಆಗಮನದ ನಂತರ ಹೆಚ್ಚಾಯಿತು.

### ಶಿಕ್ಷಣ ಮತ್ತು ಸಂಸ್ಕೃತಿ

"ಮಿಥಿಲೆಯ ಇತಿಹಾಸವು ಸಾಹಿತ್ಯ ಮತ್ತು ಪಾಂಡಿತ್ಯಗಳ ಸುಖಕರವಾದ ಅನುಭವದಲ್ಲಿ ತೊಡಗಿದ ಆಸ್ಥಾನದ ಸುತ್ತ ಕೇಂದ್ರಿತವಾಗಿದೆ" ಎಂದು ಒ ಮ್ಯಾಲಿ ದೃಢವಾಗಿ ಹೇಳಿರುವುದು ಯೋಗ್ಯವೇ ಆಗಿದೆ. ರಾಜಕೀಯ ಸ್ಥಿರತೆ ಮತ್ತು ರಾಜ್ಯದಲ್ಲಿ ನೆಲೆಸಿದ್ದ ಶಾಂತಿ ಸಮಾಧಾನಗಳು ವಿದ್ಯೆ ಮತ್ತು ವಿದ್ವತ್ತುಗಳ ಪ್ರಸಾರಕ್ಕೆ ಕಾರಣವಾಗಿದ್ದಂತಿದೆ. ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ಕೂಡ ವಿದ್ವಾಂಸರ ಮತ್ತು ಪ್ರಖ್ಯಾತ ಗ್ರಂಥಕರ್ತರ ಪಡೆಯ ಸೃಷ್ಟಿಗೆ ಭದ್ರ ನೆಲೆ ಒದಗಿಸಿದವು. ಮಿಥಿಲೆಯ ಫಲವತ್ತಾದ ಮಣ್ಣಿನಲ್ಲಿ ವೇದಾಂತ, ನ್ಯಾಯ, ಮೀಮಾಂಸೆ ಮತ್ತು ಸಾಂಖ್ಯ ಪದ್ಧತಿಗಳು ತಮ್ಮ ಪ್ರಾರಂಭಗಳನ್ನು ಕಂಡವು. ಮಿಥಿಲೆಯು ಬ್ರಾಹ್ಮಣ ಸಂಸ್ಕೃತಿಯ ಕೇಂದ್ರವಾಗಿತ್ತು ಮತ್ತು ಕರ್ಮಠ ಹಾಗೂ ಸಾಂಪ್ರದಾಯಿಕ ಚಿಂತನೆಯನ್ನು ದೊಡ್ಡ ಪ್ರಮಾಣದಲ್ಲಿ ಸಮರ್ಥನೆ ಮಾಡುವುದಾಗಿತ್ತು. ಮಿಥಿಲೆಯು ನ್ಯಾಯ ಮತ್ತು ಪೂರ್ವ ಮೀಮಾಂಸೆಯ ವಿಕಸನಕ್ಕೆ ದಾರಿ ತೋರಿತು. ಶತಶತಮಾನಗಳ ವರೆಗೆ ಅದು ದೊಡ್ಡ ವಿದ್ವತ್ ಕೇಂದ್ರವಾಗಿದ್ದು ದೇಶದ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ತಮ್ಮ ಜಿಜ್ಞಾಸೆಯನ್ನು ತಣಿಸಲು ಅಲ್ಲಿಗೆ ಹಿಂಡುಹಿಂಡಾಗಿ ಬರುತ್ತಿದ್ದರು. ಪರಿಸ್ಥಿತಿಗಳ

ಒತ್ತಡಗಳಿಂದಾಗಿ ನಾಲಂದಾ ಮತ್ತು ವಿಕ್ರಮಶಿಲಾಗಳನ್ನು ಬಿಡಬೇಕಾಗಿ ಬಂದ ವಿದ್ವಾಂಸರಿಗೆ ಮಿಥಿಲೆಯು ಆಶ್ರಯ ನೀಡಿತು. ವಿದ್ವಾಂಸರು ಬಿಟ್ಟು ಬರಬೇಕಾಗಿ ಬಂದುದು ಮುಖ್ಯವಾಗಿ ಮುಸ್ಲಿಮ ಆಕ್ರಮಣದಿಂದಾಗಿ. ನಿಜ ಸಂಗತಿಯೆಂದರೆ, ಮಿಥಿಲೆಯು ವಿದೇಶಿ ಆಕ್ರಮಣ ಗಳಿಂದ ಸಂಪೂರ್ಣವಾಗಿ ಮುಕ್ತವಾಗಿದ್ದುದರಿಂದ ಅಕ್ಕಪಕ್ಕದ ಪ್ರದೇಶಗಳಿಂದ ಬಂದ ಅನೇಕ ವಿದ್ವಾಂಸರು ಮತ್ತು ಗ್ರಂಥಕರ್ತರಿಗೆ ರಕ್ಷಣೆ ನೀಡುವ ಸ್ಥಿತಿಯಲ್ಲಿತ್ತು. ಡಿ.ಸಿ.ಸೇನರ ಅಭಿಪ್ರಾಯದಲ್ಲಿ, ಮಗಧವು ಪೂರ್ವ ಪ್ರದೇಶಕ್ಕೆ ಬೆಳಕು ತೋರುವುದನ್ನು ನಿಲ್ಲಿಸಿದಾಗ ಬಂಗಾಲದ ಸಂಸ್ಕೃತಿ ಮಿಥಿಲೆಯಿಂದ ಬಂತು. ಈ ಹೇಳಿಕೆಯಿಂದ, ಅವಲೋಕನಕ್ಕೊಳ ಪಟ್ಟಿರುವ ಕಾಲಘಟ್ಟದಲ್ಲಿ ಮಿಥಿಲೆಯಲ್ಲಿ ಉನ್ನತ ಮಟ್ಟದ ಸಂಸ್ಕೃತಿ ಇತ್ತೆಂದು ಪೂರ್ವ ಸೂಚಿತವಾಗುತ್ತದೆ.

ಕರ್ನಾಟರು ಶಿಕ್ಷಣ ಮತ್ತು ಸಂಸ್ಕೃತಿಯ ಮೇಲೆ ತಮ್ಮ ಮುದ್ರೆಯೊತ್ತಿರುವರು. ಈ ಕಾಲಘಟ್ಟದಲ್ಲಿ ಬಹುತೇಕ ಎಲ್ಲ ಸಾಹಿತ್ಯಶಾಖೆಗಳಲ್ಲಿ ಗ್ರಂಥಗಳನ್ನು ಮತ್ತು ಭಾಷ್ಯಗಳನ್ನು ಬರೆಯಲಾಯಿತು. ಪ್ರಾಚೀನ *ಸ್ಮೃತಿಗಳ* ಮೇಲೆ ಮಹತ್ವದ ಭಾಷ್ಯಗಳನ್ನು ರಚಿಸಲಾಯಿತು. ಇಲ್ಲವೆ ಸಂಕಲಿಸಲಾಯಿತು. ಪದ್ಮನಾಭ ದತ್ತನು 'ಸುಪದ್ಮ' ಎಂಬ ತನ್ನ ಹೊಸ ವ್ಯಾಕರಣ ಶಾಖೆಯನ್ನು ತೆರೆದನು. ಭಾನುದತ್ತ ಮಿಶ್ರನು ಅಲಂಕಾರಶಾಸ್ತ್ರ ಮತ್ತು ಶೃಂಗಾರಶಾಸ್ತ್ರ ಕುರಿತು ಬರೆದನು. ರತ್ನೇಶ್ವರನು *ಸರಸ್ವತಿಕಂಠಾವರಣದ* ಮೇಲೆ ಭಾಷ್ಯ ಬರೆದನು. ಜ್ಯೋತಿರೀಶ್ವರನು ತನ್ನ ಸುಪ್ರಸಿದ್ಧ *ವರ್ಣನರತ್ನಾಕರ* ಮತ್ತು *ಧೂರ್ತಸಮಾಗಮನಾಟಕ* ಗಳಲ್ಲದೆ *ಪಾಂಚಶಯಕ* ಮತ್ತು *ರಂಗಶೇಖರ*ಗಳನ್ನು ಬರೆದನು. *ನೈಷಧೀಯಚರಿತಮ್*ನ ಮೇಲೆ ಭಾವದತ್ತನು ಬರೆದ ಭಾಷ್ಯವನ್ನು ಇಂದಿಗೂ ಆಸಕ್ತಿ ಮತ್ತು ಆನಂದದಿಂದ ಅಧ್ಯಯನ ಮಾಡುತ್ತಾರೆ. ಮೃಚ್ಛಕಟಿಕ ನಾಟಕದ ಮೇಲೆ ಪೃಥ್ವೀಧರ ಆಚಾರ್ಯ ಬರೆದ ಭಾಷ್ಯವು ಅವನ ಆಳ ಜ್ಞಾನ ಮತ್ತು ವಿದ್ವತ್ತಿಗೆ ಉದಾಹರಣೆಯಾಗಿದೆ. *ಅಮರಕೋಶ* ಕುರಿತು ಶ್ರೀಧರ ಆಚಾರ್ಯ ಬರೆದ ಭಾಷ್ಯವು ಸಂಸ್ಕೃತ ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆಯಾಗಿದೆ.

ಚಾಂದೇಶ್ವರ ಮತ್ತು ಅವನ ಕುಟುಂಬದವರು ಸ್ಮೃತಿ ಅಧ್ಯಯನ ಪತಾಕೆಯನ್ನು ಎತ್ತರಕ್ಕೆ ಹಾರಿಸಿದರು. ಶ್ರೀದತ್ತ ಉಪಾಧ್ಯಾಯ, ಇಂದ್ರಪತಿ, ಭಾವಶರ್ಮನ್ ಮತ್ತಿತರರು *ಸ್ಮೃತಿ* ಶಾಖೆಯ ಸಾಹಿತ್ಯದ ಬೆಳವಣಿಗೆಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಶ್ರೀಧರದಾಸನ *ಸದುಕ್ತಿಕರ್ಣಾಮೃತ* ಈ ಕಾಲಘಟ್ಟದ ಮಹತ್ವದ ಸಂಸ್ಕೃತ ಸಂಗ್ರಹ. ಕರ್ನಾಟ ಕಾಲಘಟ್ಟವು *ನ್ಯಾಯ* ಮತ್ತು *ವೈಶೇಷಿಕ*ಗಳ ಸಂಯೋಗವಾಗಿದೆ. ಕರ್ನಾಟರ ಆಳ್ವಿಕೆಯಲ್ಲಿ ಈ ದರ್ಶನ ಪದ್ಧತಿ ಹೆಚ್ಚೆಚ್ಚು ಪ್ರಾಶಸ್ತ್ಯ ಪಡೆದುದರ ಪರಿಣಾಮವಾಗಿ ಮಿಥಿಲೆಯು ವಿಶ್ವ ತತ್ವಜ್ಞಾನದ ಪ್ರಮುಖ ಕೇಂದ್ರವಾಯಿತು. ಅವರ ಮತಧರ್ಮಶಾಸ್ತ್ರ ವಿಕಸಿತವಾದುದಾಗಿತ್ತೆಂದು ಉದಯನಾಚಾರ್ಯನ *ಕುಸುಮಾಂಜಲಿ*ಯಿಂದ ತಿಳಿದುಬರುತ್ತದೆ. ಮಿಥಿಲೆಯು ಸಂಪ್ರ ದಾಯಬದ್ಧ ವಿಚಾರಗಳ ಕೇಂದ್ರವಾಗಿದ್ದ ಪರಿಣಾಮವಾಗಿ ಬೇರೆ ಬೇರೆ ವಿದ್ಯಾಶಾಖೆಗಳಲ್ಲಿ

ಸಂಸ್ಕೃತದಲ್ಲಿ ವಿವಿಧ ಗ್ರಂಥಗಳು ರಚಿತಗೊಂಡವು. ಕನೌಜ, ಮಗಧ ಮತ್ತು ಗೌಡಗಳ ಬ್ರಾಹ್ಮಣರು ತಿರಹತ್‌ನಲ್ಲಿ ಆಶ್ರಯ ಪಡೆದರು. ಅಲ್ಲಿಯ ಶಾಂತ ವಾತಾವರಣ ಅವರಿಗೆ ತಮ್ಮ ಸಾಹಿತ್ಯಿಕ ಚಟುವಟಿಕೆಗಳನ್ನು ಅನುಸರಿಸಲು ಸಾಧ್ಯವಾಗಿಸಿತು.

ಪ್ರಸ್ತುತ ಕಾಲಘಟ್ಟದಲ್ಲಿ ಮೈಥಿಲಿ ಭಾಷೆ ಮತ್ತು ಸಾಹಿತ್ಯಗಳ ಅಭಿವೃದ್ಧಿಯೂ ಅಷ್ಟೇ ಎದ್ದುಕಾಣುತ್ತಿತ್ತು. ಅದರ ಮೇಲೆ ಸಂಸ್ಕೃತದ ನೇರ ಪ್ರಭಾವ ಸ್ಪಷ್ಟವಿದ್ದರೂ ಅದು ಹುಟ್ಟಿದ್ದು ಮೈಥಿಲಿ ಅಪಭ್ರಂಶದಿಂದ. ಈ ಕಾಲಘಟ್ಟದಲ್ಲಿ ಮೈಥಿಲಿ ಭಾಷೆಯು ರೂಪ ಮತ್ತು ಪುನಶ್ಚೇತನ್ಯ ಶಕ್ತಿಯಲ್ಲಿ ವಿಕಾಸ ಕಂಡಿತು. ಪ್ರಾಚೀನತಮ ಮೈಥಿಲಿ ಗದ್ಯದ ಅತ್ಯುತ್ತಮ ಉದಾಹರಣೆಯೆಂದರೆ ಜ್ಯೋತಿರೀಶ್ವರ ಠಾಕೂರನ *ವರ್ಣನರತ್ನಾಕರ*. ಆ ಭಾಷೆಯು ನಿಜಕ್ಕೂ ಪ್ರೌಢಿಮೆ ಪಡೆದಿದ್ದು ಸರಳ ರೂಪಗಳ ಸಹಾಯದಿಂದ ಸೂಕ್ಷ್ಮ ವಿಚಾರ ಮತ್ತು ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವ ಸಾಮರ್ಥ್ಯ ಹೊಂದಿತ್ತೆಂಬುದನ್ನು *ವರ್ಣನರತ್ನಾಕರ* ತೋರ್ಪಡಿಸುವುದು. ಈ ಗ್ರಂಥ ಯಾವುದೆ ಉತ್ತರ ಭಾರತೀಯ ಭಾಷೆಗಳಲ್ಲಿ ಅತಿ ಪ್ರಾಚೀನ ಗದ್ಯವಾಗಿರುವ ಜೊತೆಗೆ ಸಾಹಿತ್ಯಿಕ ಆನಂದದ ಆಗರವೂ ಆಗಿದೆ. ಅದು ಹೇರಳ ಪ್ರಮಾಣದಲ್ಲಿ ತನ್ನ ಕರ್ತೃವಿನ ಸಾಹಿತ್ಯಿಕ ಪ್ರತಿಭೆಯನ್ನು ಪ್ರದರ್ಶಿಸುತ್ತದೆ. ಅವನ *ಧೂರ್ತಸಮಾಗಮನಾಟಕ*ದಲ್ಲಿ ಕೆಲವು ಪ್ರಾಚೀನತಮ ಮೈಥಿಲಿ ಹಾಡುಗಳಿದ್ದರೆ ಉಮಾಪತಿಯ *ಪಾರಿಜಾತಹರಣನಾಟಕ*ದಲ್ಲಿ ಇಪ್ಪತ್ತೊಂದು ಶ್ರೇಷ್ಠ ಮೈಥಿಲಿ ಹಾಡುಗಳಿವೆ.

*ಪ್ರಾಕೃತಪೈಂಗಲ*ದಲ್ಲಿ ಹಳೆಯ ಮೈಥಿಲಿ ಭಾಷೆಯಲ್ಲಿರುವ ಅನೇಕ ಪದ್ಯಗಳಿದ್ದು ಅವುಗಳಲ್ಲಿ ಕೆಲವು ಜನಪ್ರಿಯ ಭಾವಗೀತೆಗಳ ನಿದರ್ಶನಗಳಾಗಿವೆ. ಕೆಲವು ಪದ್ಯಗಳು ಗ್ರಾಮೀಣ ಜನರ ಬದುಕನ್ನು ಚಿತ್ರಿಸುತ್ತವೆ. ಆಡುಭಾಷೆಯನ್ನು ಸಾಮಾನ್ಯ ಸಾಹಿತ್ಯದಲ್ಲಿ ಬಳಸಲಾಗುತ್ತಿದ್ದು ಜಾನಪದ ಕಾವ್ಯವೂ ವಿಪುಲವಾಗಿತ್ತು. ಮೈಥಿಲಿ ಭಾಷೆಯಲ್ಲಿರುವ ಲೊರಿಕಾ ಗೀತೆಗಳ ಪರಂಪರೆಯು ಆ ತರಹದ ಜಾನಪದ ಸಾಹಿತ್ಯದ ಉದಾಹರಣೆಯಾಗಿದೆ. ಆ ಅರ್ಥದಲ್ಲಿ ಮೈಥಿಲಿಯು ವಿಕಸಿತ ಇಂಡೋ-ಆರ್ಯನ್ ಭಾಷೆಗಳಲ್ಲಿಯೆ ಅತ್ಯಂತ ಪ್ರಾಚೀನವಾದುದು. ಮೈಥಿಲಿ ಭಾಷೆಯು ತನ್ನದೆ ಲಿಪಿ ಹೊಂದಿತ್ತು ಮತ್ತು ಧರ್ಮ ಸ್ವಾಮಿಯು ಉಲ್ಲೇಖಿಸುವ ವೈವರ್ತಕ ಲಿಪಿಯು ಆಗಿನ ಮೈಥಿಲಿ ಲಿಪಿಯೆಂದೇ ಎ.ಎಸ್. ಆಲ್ಟೇಕರ ಗುರುತಿಸುತ್ತಾರೆ. ಡಾಕಾ ಮತ್ತು ಘಾಘಾರ ಬರವಣಿಗೆಗಳು ಮೈಥಿಲಿಯ ಪ್ರಾಚೀನತಮ ಹಂತಗಳಲ್ಲೊಂದಕ್ಕೆ ಸೇರಿವೆ. ಯುಗದಿಂದ ಯುಗಕ್ಕೆ ಆ ಭಾಷೆಯು ವಿವಿಧ ಸ್ಥಿತ್ಯಂತರಗಳಿಗೆ ಒಳಪಟ್ಟರೂ ಈ ಅನಾಮಧೇಯ ಗ್ರಂಥಕರ್ತರು ತಮ್ಮ ಕೃಷಿಸೂತ್ರಗಳನ್ನು ಮಿಥಿಳೆಯ ಜನಭಾಷೆಯಲ್ಲಿಯೆ ರಚಿಸಿದ್ದರು. ಅದು ಆ ಭಾಷೆಯ ಬೆಳವಣಿಗೆಗೆ ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಸಹಾಯಕವಾಗಿದ್ದುದು ನಿಜ ಸಂಗತಿಯಾಗಿದೆ. ವಿದ್ಯಾಪತಿಯ ಯುಗದಲ್ಲಿ ಮೈಥಿಲಿ ಭಾಷೆಯು ಶಿಖರವನ್ನು ತಲುಪಿತ್ತು. ಅನೇಕ ವಿದ್ವಾಂಸರು ಮಿಥಿಲೆಯ ಸಾಹಿತ್ಯಿಕ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಬಂದರು ಮತ್ತು ಉಜ್ವಲಗೊಳಿಸಿದರು. ಈ ಕಾಲಘಟ್ಟ ಮತ್ತು ಹಿಂದಿನ ಕಾಲಘಟ್ಟಗಳ ನಡುವೆ ವ್ಯತ್ಯಾಸವಿದೆ. ಅದೇನೆಂದರೆ,

ಸ್ಥಳೀಯ ಸಾಹಿತ್ಯದ ಬೆಳವಣಿಗೆಗಾಗಿ ಮಾಡಿದ ಪ್ರಥಮ ಗಂಭೀರ ಪ್ರಯತ್ನದ ಮೂಲಕ ಸಂಸ್ಕೃತ ಜ್ಞಾನದ ಕ್ರಮೇಣ ಪ್ರಸರಣ.[೮] ಕರ್ಣಾಟರು ನೇಪಾಳವನ್ನು ಗೆದ್ದುದು ಮಿಥಿಲಾ ಮತ್ತು ನೇಪಾಳಗಳ ನಡುವೆ ಬೆಳೆಯುತ್ತಿದ್ದ ಸಾಂಸ್ಕೃತಿಕ ಸಂಬಂಧಗಳಿಗೆ ಉತ್ತೇಜನ ನೀಡಿತು. ನೇಪಾಳದಲ್ಲಿ ದೊರಕಿದ ಅನೇಕ ಹಸ್ತಪ್ರತಿಗಳು ನೇಪಾಳದಲ್ಲಿ ನೆಲೆಸಿದ್ದ ಮೈಥಿಲಿ ಲೇಖಕರು ಬರೆದವುಗಳಾಗಿದ್ದವು. ಮಿಥಿಲೆಯ ಕರ್ಣಾಟರ ಚೆಲ್ಲುವರಿದಿದ್ದ ಕತೆಗಳನ್ನು ಸಂಯೋಜಿಸಿದ ಮತ್ತು ಇತರ ಮಾಹಿತಿ ಹೊರಡಿಸಿದ ಅವರ ಬರಹಗಳನ್ನು ಮುಂದಿನ ಪೀಳಿಗೆ ಕೃತಜ್ಞತಾ ಪೂರ್ವಕವಾಗಿ ಸ್ಮರಿಸಿದೆ.

ಧರ್ಮದ ವಿಷಯದಲ್ಲಿ ಮಿಥಿಲೆಯ ಜನರು ತೀರಾ ಸಾಂಪ್ರದಾಯಿಕರಾಗಿದ್ದು ಉಚ್ಚ ಪುರೋಹಿತಶಾಹಿಯು ಪ್ರಭಾವಿ ಪಾತ್ರ ವಹಿಸಿತ್ತು. ಧಾರ್ಮಿಕ ವಿಧಿ ಮತ್ತು ದತ್ತಿಗಳನ್ನು ಕುರಿತು ವಿಶದವಾದ ಪ್ರಕರಣಗ್ರಂಥಗಳನ್ನು ಬರೆಯಲಾಯಿತು ಮತ್ತು ಸಂಕಲಿಸಲಾಯಿತು. ಶಿವ, ಶಕ್ತಿ ಮತ್ತು ವಿಷ್ಣು ಮಿಥಿಲೆಯಲ್ಲಿ ಜನಪ್ರಿಯರಾಗಿದ್ದರು. 'ತಂತ್ರ'ವೂ ಜನಜೀವನವನ್ನು ಪ್ರಭಾವಿಸಿತ್ತು. ಮಿಥಿಲೆಯ ಜನರ ಜೀವನ ಮತ್ತು ಸಂಸ್ಕೃತಿಯ ಪ್ರತಿಯೊಂದು ಅಂಶದ ಮೇಲೆ ತಾಂತ್ರಿಕ ಪ್ರಭಾವವಿತ್ತು. ಈ ಕಾಲಘಟ್ಟದ ಮಿಥಿಲೆಯ ಧಾರ್ಮಿಕ ಜೀವನದ ಮುಖ್ಯ ಲಕ್ಷಣಗಳೆಂದರೆ ಮಾತೃಕಪೂಜೆ, ನಾನಾ ರೂಪಗಳಲ್ಲಿ ದೇವಿ ಮಾತೆಯ ಪೂಜೆ ಮತ್ತು ಪ್ರಕೃತಿ ಪೂಜೆ. ಭಾಗವತ, ಹರಿವಂಶ ಮತ್ತು ಬ್ರಹ್ಮವೈವರ್ತನ ಪುರಾಣಗಳ ಪರಿಣಾಮವು ವೈಷ್ಣವ ವಿಚಾರಧಾರೆ ಮಾಡಿದ ಬೃಹತ್ ಪ್ರಭಾವವನ್ನು ಸಿದ್ಧಪಡಿಸುತ್ತದೆ. ಶಿವ ಮತ್ತು ಶಕ್ತಿ, ಮೈಥಿಲಿ ಮನೋಭಾವದ ಪ್ರಬಲ ಭಕ್ತಿ ಪ್ರೇರಣೆಗಳಾಗಿದ್ದವು. ವರ್ಣ ರತ್ನಾಕರದಲ್ಲಿ ವಿವಿಧ ಧಾರ್ಮಿಕ ಪಂಗಡಗಳನ್ನು ಹೆಸರಿಸಲಾಗಿದೆ. ಮಿಥಿಲೆಯಲ್ಲಿ ಬೌದ್ಧಮತ ಜನಪ್ರಿಯವಾಗಿರಲಿಲ್ಲ ಎಂಬುದಕ್ಕೆ ಧರ್ಮಸ್ವಾಮಿ ಸಾಕ್ಷ್ಯ ಒದಗಿಸುವನು. ಕರ್ಣಾಟ ಅರಸ ರಾಮಸಿಂಹದೇವನು ಉದಾರ ಮನೋಭಾವದ ಅರಸನಾಗಿದ್ದಂತೆ ತೋರುತ್ತದೆ. ಏಕೆಂದರೆ, ಅವನು ಟಿಬೆಟಿ ಬೌದ್ಧನಾದ ಧರ್ಮಸ್ವಾಮಿಗೆ ಪ್ರಧಾನ ಪುರೋಹಿತ ಹುದ್ದೆಯನ್ನು ನೀಡಿದನು. ಅಂತಾಗಿಯೂ ಬ್ರಾಹ್ಮಣರು ಬೌದ್ಧರನ್ನು ತಮ್ಮ ವೈರಿಗಳೆಂದೆ ಪರಿಗಣಿಸಿದರು. ಮಿಥಿಲೆಯ ಧಾರ್ಮಿಕ ಜೀವನದ ವಿನ್ಯಾಸದಲ್ಲಿ ದೇವದೇವಿಯರ ವೈವಿಧ್ಯ ಅಡಕವಾಗಿತ್ತು. ಜ್ಯೋತಿರೀಶ್ವರನು ನಾಥ ಪಂಥಗಳ ಅಸ್ತಿತ್ವವನ್ನು ವರ್ಣಿಸಿರುವನು. ಈ ಪಂಥಗಳು ಬಲು ಜನಪ್ರಿಯವಾಗಿದ್ದು ಅವುಗಳನ್ನು ಕುರಿತು ಆ ಕಾಲದ ಪರ್ಶಿಯನ್ ಮತ್ತು ಹಿಂದಿ ಬರಹಗಳಲ್ಲಿ ಪದೇಪದೇ ಬರುವ ಉಲ್ಲೇಖಗಳು ಅದಕ್ಕೆ ಪುಷ್ಟಿ ಒದಗಿಸುತ್ತವೆ.

ಕಲೆಯನ್ನೂ ಬಹಳ ಉತ್ಸಾಹದಿಂದ ಅಭ್ಯಸಿಸಲಾಗುತ್ತಿತ್ತು. ಈ ಕಾಲಘಟ್ಟದಲ್ಲಿ ವಾಸ್ತು, ಚಿತ್ರಕಲೆ, ಸಂಗೀತ ಮತ್ತಿತರ ಲಲಿತ ಕಲೆಗಳು ವಿಕಸಿತಗೊಂಡವು. ವ್ಯವಸ್ಥಿತ ಪ್ರಾಕ್ತನಶಾಸ್ತ್ರೀಯ ಉತ್ಖನನ ಮತ್ತು ಶೋಧನೆಗಳ ಅಭಾವದಿಂದಾಗಿ ಈ ಕಾಲದ ಕೆಲವೇ ಕಲಾಮಾದರಿಗಳು ದೊರೆಯುತ್ತವೆ. ಆದರೆ, ಈ ಕ್ಷೇತ್ರದಲ್ಲಿ ಇತ್ತೀಚೆಗೆ ಸಾಧಿಸಿದುದರ ಆಧಾರದ ಮೇಲೆ ಒಂದು ಚಿತ್ರವನ್ನು ನೀಡಬಹುದು. ನಾನ್ಯದೇವನು ಕಲೆ ಮತ್ತು

ಸಾಹಿತ್ಯಗಳಿಗೆ ಮಹಾ ಆಶ್ರಯದಾತನಾಗಿದ್ದನು. ಅವನು ಸಂಗೀತದ ಮೇಲೆ ಪ್ರಮುಖ ಲೇಖಕನಾಗಿದ್ದನು. ಅವನು *ಸರಸ್ವತಿ ಹೃದಯಾಲಂಕಾರದ* ಕರ್ತೃವಾಗಿದ್ದನು. ಅನೇಕ ಹೊಸ ರಾಗಗಳನ್ನು ಮತ್ತು ಜತಿಗಳನ್ನು ಅವನು ಪರಿಚಯಿಸಿದನು. ಅವನು ಒಂದುನೂರೈವತ್ತು ರಾಗಗಳ ಬಗೆಗೆ ದೀರ್ಘವಾಗಿ ವಿವೇಚಿಸಿರುವನು. ಆ ಪರಂಪರೆಯನ್ನು ಅವನ ಉತ್ತರಾಧಿಕಾರಿಗಳು ಮುಂದುವರಿಸಿದರು. ಹರಿಸಿಂಹದೇವನು ಕಲೆ ಮತ್ತು ಸಂಗೀತಗಳಿಗೆ ಮಹಾ ಆಶ್ರಯದಾತನಾಗಿದ್ದನೆಂದು ವಿದ್ಯಾಪತಿ ತಿಳಿಸುತ್ತಾನೆ. ಸಂಗೀತದ ಅಭಿವೃದ್ಧಿಯು ಪ್ರಾಚೀನ ಭಾವಗೀತಾ ಕ್ಷೇತ್ರದಲ್ಲಿ ಮಿಥಿಲೆ ಮತ್ತು ಅದರ ಸಾಹಿತ್ಯವನ್ನು ಶ್ರೀಮಂತಗೊಳಿಸಿತು.

ಕರ್ನಾಟ ಅರಸರು ದೇವಾಲಯಗಳನ್ನು ಕಟ್ಟಿಸಿದರು. ಕೆರೆಗಳನ್ನು ತೋಡಿಸಿದರು ಮತ್ತು ಬೃಹತ್ ಕಟ್ಟಡಗಳನ್ನು ನಿರ್ಮಿಸಿದರು. ಅವುಗಳಲ್ಲಿ ಬಹಳಷ್ಟು ಇವತ್ತು ಪ್ರವಾಹದಲ್ಲಿ ಕೊಚ್ಚಿಹೋಗಿವೆ. ಸ್ಪೂನರ್‌ರ ಅಭಿಪ್ರಾಯದಲ್ಲಿ, 'ಶಿರಹತ್ ಮಾದರಿ' ಎಂಬ ಪ್ರತ್ಯೇಕ ದೇವಾಲಯ ವಾಸ್ತುಪ್ರಕಾರವೆ ಅಸ್ತಿತ್ವದಲ್ಲಿತ್ತು. ಚಂಪಾರಣ, ಮುಜಫ್ಫರಪುರ, ದರ್ಭಾಂಗಾ ಮತ್ತು ಸಹರ್ಷ ಜಿಲ್ಲೆಗಳಲ್ಲಿಯ ಬೇರೆ ಬೇರೆ ಊರುಗಳಲ್ಲಿರುವ ವಿವಿಧ ಹಳೆಯ ದೇವಾಲಯಗಳು ಈ ಮಹತ್ವಪೂರ್ಣ ಶೈಲಿಯ ವಿಕಸನದ ಭಿನ್ನ ಭಿನ್ನ ಪ್ರಕ್ರಿಯೆಗಳನ್ನು ಉದಾಹರಿಸುತ್ತವೆ. ಸಿಮರಾಂವಗಡದ ಅವಶೇಷಗಳು ಬೃಹತ್ ಕಟ್ಟಡಗಳ ಕತೆ ಹೇಳುತ್ತವೆ. ಧರ್ಮಸ್ವಾಮಿಯು ಅದರ ಕೋಟೆಯ ಸೌಂದರ್ಯವನ್ನು ವರ್ಣಿಸಿರುವನು. ಈ ಅವಶೇಷಗಳ ಶಿಲ್ಪ ವೈಭವವು ಪುರಾತನ ಕಟ್ಟಡಗಳ ಮತ್ತು ವಿನ್ಯಾಸಗಳ ಭವ್ಯತೆಯನ್ನು ತೋರಿಸುತ್ತವೆ. ಮೇಲ್ಕಟ್ಟಡಗಳಿದ್ದ ಅರಮನೆಯ ಅವಶೇಷಗಳು ಅತ್ಯಂತ ಸುಂದರವಾಗಿದ್ದು ಕರ್ನಾಟರ ಆಳ್ವಿಕೆಯಲ್ಲಿ ಮಿಥಿಲೆಯು ಹೊಂದಿದ್ದ ವೈಭವವನ್ನು ನೆನಪಿಸುತ್ತವೆ. ದೇವ ದೇವಿಯರನ್ನು ಪ್ರತಿನಿಧಿಸುವ ಆಕೃತಿಗಳು ಅಂಧ್ರಥಾರ್ಹಿ ಮತ್ತು ಭೀತಭಗವಾನಪುರ (ದರ್ಭಂಗಾ) ದಲ್ಲಿರುವ ದೇವಾಲಯಗಳ ಭಿತ್ತಿಗಳ ಮೇಲೆ ಕಾಣಸಿಗುತ್ತವೆ. ಭಿನ್ನ ಭಿನ್ನ ಅಲಂಕಾರ ಮತ್ತು ಉಬ್ಬುಚಿತ್ರಗಳುಳ್ಳ ಬೇರೆ ಬೇರೆ ಪ್ರಕಾರಗಳ ಅಲಂಕೃತ ಬೃಹತ್ ಬಂಡೆಗಳು ಮಿಥಿಲೆಯ ವಿವಿಧೆಡೆಗಳಲ್ಲಿ ಬೆಳಕಿಗೆ ಬಂದಿವೆ. ಕಲೆಯ ದೃಷ್ಟಿಯಿಂದ, ಭೀತಭಗವಾನಪುರ ದಲ್ಲಿ ದೊರೆತ ಕೆಲವೇ ವಸ್ತುಗಳು ಬಹಳ ಮಹತ್ವಪೂರ್ಣವಾಗಿದ್ದು ಈ ಕ್ಷೇತ್ರದಲ್ಲಿ ಮಿಥಿಲೆಯು ಸಾಧಿಸಿದ ಮುನ್ನಡೆಯ ಕಲ್ಪನೆಯನ್ನು ನೀಡುತ್ತವೆ.

ಡಬ್ಲ್ಯೂ.ಜಿ. ಆರ್ಚರ್ ಮಿಥಿಲೆಯ ಭಿತ್ತಿಚಿತ್ರಗಳ ಕಡೆಗೆ ನಮ್ಮ ಗಮನ ಸೆಳೆದುದು ಯಥಾಯೋಗ್ಯವಾಗಿದೆ. ವಿವಾಹ, ಉಪನಯನ ಮತ್ತಿತರ ಇಂಥ ಆಚರಣೆಗಳ ಶುಭ ಸಂದರ್ಭಗಳಲ್ಲಿ ಕೆಲವೊಮ್ಮೆ ಕಾಗದದ ಮೇಲೆ ಚಿತ್ರ ಬಿಡಿಸುತ್ತಿದ್ದರು. ಮಡಕೆ, ಬೀಸಣಿಕೆ ಮತ್ತು ಮಣ್ಣಿನ ತಟ್ಟೆಗಳ ಮೇಲೂ ಚಿತ್ರ ಬಿಡಿಸುತ್ತಿದ್ದರು. ಕೆಲವು ಚಿತ್ರಗಳು ಭೋಗಾಸಕ್ತಿಯನ್ನು ಸೂಚಿಸುತ್ತವೆ. ಈ ಚಿತ್ರಕಲೆಯನ್ನು ಅನಾದಿ ಕಾಲದಿಂದಲೂ ನಡೆಸಿಕೊಂಡು ಬರಲಾಗಿತ್ತು. ಚಿತ್ರಗಳನ್ನು ಸ್ತ್ರೀಯರು ಬಿಡಿಸುತ್ತಿದ್ದು ಅವು ಸಂಸಾರದ ಮತ್ತು ಮತಾಚರಣೆಯ ಸಂಪ್ರದಾಯಗಳಿಗೆ ಸಂಬಂಧಿಸಿವೆ. ಈ ಚಿತ್ರಗಳು ದುರ್ಗಾ, ಕಾಳಿ,

ರಾಮ, ಸೀತಾ, ರಾಧಾ , ಕೃಷ್ಣ ಮತ್ತಿತರ ದೇವತೆಗಳನ್ನು ಮತ್ತು ಅನೇಕ ಬಗೆಯ ಪ್ರಾಣಿಗಳು, ಮೀನು, ಬಿದಿರು ಇತ್ಯಾದಿಗಳನ್ನು ಬಿಂಬಿಸುತ್ತವೆ. ಬಿದಿರು ಮರ ಮತ್ತು ಕಮಲಗಳ ಉಂಗುರಗಳು ಜನನೇಂದ್ರಿಯಗಳ ಆಕೃತಿಯನ್ನು ಬಿಂಬಿಸುತ್ತವೆ. ಆರ್ಚರ್‌ರ ಅಭಿಪ್ರಾಯ ದಲ್ಲಿ, ಕಾಯಸ್ಥ ಚಿತ್ರಕಲೆಯ ಅತ್ಯಂತ ಮಹತ್ವದ ಗುಣಲಕ್ಷಣವಾದ ಲಯವು ಬ್ರಾಹ್ಮಣ ಚಿತ್ರಗಳಲ್ಲಿ ಆಕಸ್ಮಿಕವಾಗಿದೆ.

ಮಿಥಿಲೆಯು ಬಿಹಾರದ ಬೇರೆ ಬೇರೆ ದಿಕ್ಕುಗಳಲ್ಲಿ ಸಂಗೀತ ಮತ್ತು ನೃತ್ಯಕಲೆಯ ಬೆಳಕನ್ನು ಚೆಲ್ಲುವ ಕೇಂದ್ರವಾಗಿತ್ತು. *ವರ್ಣನ ರತ್ನಾಕರವು* ವಿವಿಧ ನೃತ್ಯಶೈಲಿಗಳು, ತಾಳವಾದ್ಯಗಾರರ ಹತ್ತು ಗುಣಗಳು, ತಾಲಸಂಗೀತದ ಹತ್ತು ಬಗೆಗಳು, ದಶರಸಗಳು, ಮೂವತ್ತು ಭಾವಗಳು, ವೀಣೆಯ ಇಪ್ಪತ್ತು ಬಗೆಗಳು ಮತ್ತು ಮೃದಂಗದ ಭಿನ್ನ ರೂಪಗಳನ್ನು ವರ್ಣಿಸುತ್ತದೆ. ಮೈಥಿಲೀ ಸಂಗೀತಗಾರರಿಗೆ ಮಿಥಿಲೆಯ ಹೊರಗಿನ ಅನೇಕ ಆಸ್ಥಾನಗಳಲ್ಲೂ ಗೌರವ ನೀಡಲಾಗುತ್ತಿತ್ತು. ಅವರು ನೇಪಾಳ ಮತ್ತು ಬಂಗಾಲಗಳ ಸಂಗೀತ ಪರಂಪರೆಗಳನ್ನು ಶ್ರೀಮಂತಗೊಳಿಸಿದರು. ಮಿಥಿಲೆಯ ಸಂಗೀತಗಾರರನ್ನು ತ್ರಿಪುರಾ ಆಸ್ಥಾನಕ್ಕೂ ಆಹ್ವಾನಿಸಲಾಗುತ್ತಿತ್ತು.

ಕರ್ನಾಟರು ಮಿಥಿಲೆಯನ್ನು ಈಶಾನ್ಯ ಭಾರತದ ಇತಿಹಾಸದಲ್ಲಿ ಪ್ರಮುಖ ಸ್ಥಾನಕ್ಕೆ ಏರಿಸಿದರು ಮತ್ತು ನೆರೆರಾಜ್ಯಗಳೊಂದಿಗೆ ಸಾಂಸ್ಕೃತಿಕ ಸಂಬಂಧವನ್ನು ಉಳಿಸಿಕೊಂಡು ಬಂದರು. ಮಿಥಿಲೆಯಲ್ಲಿ ಮತ್ತು ಇತರೆಡೆಗಳಲ್ಲಿ ಧರ್ಮ ಮತ್ತು ಸಂಸ್ಕೃತಿಗಳನ್ನು ಪೋಷಿಸುವಲ್ಲಿ ಅವರು ಯಾವ ಪ್ರಯತ್ನವನ್ನೂ ಮಾಡದಿರಲಿಲ್ಲ. ಇದರಿಂದಾಗಿ ಮಿಥಿಲೆಯು ಮಹತ್ವದ ವಿದ್ಯಾಕೇಂದ್ರವಾಯಿತು. ಕರ್ನಾಟರು ಜನರ ನೈತಿಕ ಹಾಗೂ ಸಾಂಸ್ಕೃತಿಕ ಮಟ್ಟ ವನ್ನು ಎತ್ತರಿಸಲು ಸರ್ವಪ್ರಯತ್ನ ಮಾಡಿದರು. ಹಿಂದೂಗಳಿಗೆ ಅವರ ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳಿಗೆ ಮಾರ್ಗದರ್ಶಕವಾಗಲು ನಿಯಮಗಳನ್ನು ರಚಿಸಲಾಯಿತು. ಈ ಹೊಸ ಸೂತ್ರಗಳ ಜಾರಿಯಲ್ಲಿ ಉದ್ಭವಿಸುವ ಎಲ್ಲ ಪ್ರಶ್ನೆಗಳನ್ನು ತೀರ್ಮಾನಿಸಲು ಅಧಿಕಾರಿಯೊಬ್ಬನನ್ನು ನಿಯಮಿಸಲಾಗಿತ್ತು. ರಾಜ್ಯದ ಖರ್ಚಿನಲ್ಲಿ ಅನೇಕ ದೇವಾಲಯ ಗಳನ್ನು ಕಟ್ಟಲಾಗಿತ್ತುಮತ್ತು ಕೆರೆಬಾವಿಗಳನ್ನು ತೋಡಿಸಲಾಗಿತ್ತು. ಶಿಕ್ಷಣ ಸಂಸ್ಥೆಗಳಿಗೆ ಸರಕಾರಿ ದತ್ತಿಗಳನ್ನು ನೀಡಲಾಗುತ್ತಿತ್ತು. ಆಸ್ಥಾನದಲ್ಲಿ ಬ್ರಾಹ್ಮಣರನ್ನು ಯಾವಾಗಲೂ ಗೌರವಿಸಲಾಗುತ್ತಿತ್ತು ಮತ್ತು ಸತ್ಕರಿಸಲಾಗುತ್ತಿತ್ತು. ಕಲೆ ಮತ್ತು ವಾಸ್ತುಗಳಿಗೆ ರಾಜಾಶ್ರಯ ವಿತ್ತು ಮತ್ತು ಮಹೇಶ್ವರ ಶಾಸನದಲ್ಲಿರುವ ಸಂಗತಿಗಳನ್ನು ನಂಬುವುದಾದರೆ, ತಿರಹತ್ ಬಳಿ ಫಿರೋಜ್ ಐತಿಗಿನ್‌ನು ಭದ್ರಕೋಟೆಯನ್ನು ನಿರ್ಮಿಸಿದನು. ಕರ್ನಾಟರ ಆಳ್ವಿಕೆಯಲ್ಲಿ ಕಪ್ಪುಶಿಲೆ ಬಳಕೆಯಲ್ಲಿತ್ತು. ಭೀತಭಗವಾನಪುರ ಅವಶೇಷಗಳು ಮತ್ತು ಅಂದ್ರಥಾರ್ಹಿ ಮೂರ್ತಿಗಳು ಕರ್ನಾಟ ಶಿಲ್ಪದ ಅತ್ಯುತ್ತಮ ನಮೂನೆಗಳು. ಅಪ್ಪುಗೆಯಲ್ಲಿರುವ ಸ್ತ್ರೀಪುರುಷರ ಎರಡು ಚಿತ್ರಗಳು ಭೀತಭಗವಾನಪುರದ ಬಾಗಿಲ ಚೌಕಟ್ಟುಗಳ ಮೇಲಿದ್ದು ಅವುಗಳನ್ನು ಸೂಕ್ಷ್ಮವಾಗಿ ಕೆತ್ತಲಾಗಿದೆ. ಧಾರ್ಮಿಕ ವಿಷಯವಸ್ತುಗಳನ್ನು ಸಾಂಸಾರಿಕ

ತಿಳಿವಿನಲ್ಲಿ ಒಡಮೂಡಿಸಲಾಗಿದೆ ಮತ್ತು ಪ್ರತಿಮಾ ನಿರೂಪಣೆಗಳು ಸುಸ್ಪಷ್ಟವಾಗಿದ್ದು ಅದರ ಪ್ರತಿರೂಪ ವಿದ್ಯಾಪತಿಯ ಬರಹಗಳಲ್ಲಿ ದೊರೆಯುತ್ತದೆ. ಪಿ.ವಿ.ಕಾಣೆ ಅವರು ಸರಿಯಾಗಿಯೆ ಗಮನಿಸಿರುವಂತೆ "ಯಾಜ್ಞವಲ್ಕ್ಯಸ್ಮೃತಿಯ ದಿನಗಳಿಂದ ಆಧುನಿಕ ಕಾಲದ ವರೆಗೂ ಮಿಥಿಲಾ ನಾಡು ಪ್ರಖ್ಯಾತ ಲೇಖಕರನ್ನು ಸೃಷ್ಟಿಸಿದೆ." ಮಿಥಿಲೆಯ ಮೇಲ್ಕಂಡ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನದಿಂದ ಕಂಡುಬರುವುದೇನೆಂದರೆ, ಈ ಕಾಲಘಟ್ಟವು ತನ್ನ ದೀರ್ಘ ಮತ್ತು ವೈವಿಧ್ಯಮಯ ಇತಿಹಾಸದಲ್ಲಿ ಮಿಥಿಲೆಯು ಕಂಡ ಅತ್ಯುತ್ತಮ ಕಾಲಘಟ್ಟಗಳಲ್ಲೊಂದು ಎಂಬುದು ನಿಜ.

ಟಿಪ್ಪಣಿಗಳು

1. K.P. Jayaswal : *Introduction to Rajniti Ratnakara,* p. 29.
2. Cf. K.P. Jayaswal : *Introduction to Rajniti Ratnakara,* (pp. 46, 51, 54, 60 & 98).
3. R.K. Choudhury, *Mithila in the Age of Vidyapati,* p. 46.
4. CIB, pp. 124-25.
5. Cf. R.K. Choudhury, *Mithiala ka Ranjnaitika Itihasa.*
6. D.R. Regmi, *Medieval Nepal,* p. 273.
7. U. Thakur, TM, p. 354.
8. ST, p. 62.
9. Ibid., p. 62.
10. U. Thakur, TM, p. 353.
11. PP, (G) Tale 29, pp. 6-38.
12. Cf. *Commentary on Raghuvamsama,* XI p. 55.
13. K.P. Jayaswal : *Introduction to Rajniti Ratnakara,* pp. 42-43.
14. Ibid, p. 47.
15. Pathak (pp), pp. 15, 27.
16. Cf. Mitra, Notice, VI p. 66.
17. Cf. Manu; VII pp. 9. IX, pp. 234, Yaj, p. 11. *Katyayana,* p. 67. Suka, IV pp. 5, 14.
18. Edited by Ludo Rocher.
19. DV, p. 32.
20. Ibid.
21. PIHC, VI, pp. 236-37. Among the important duties of a king were (i) to establish towns, bridges and frontier walls, (ii) to establish safety of the roads and (iii) to remove wants of saints and beggars.
22. Afif, TFS. pp. 334-36.
23. MM.
24. AS, IX p. 2.
25. HDC, III p. 200.

26. RR. p. 35.
27. Ibid., 35.
28. Cf. Hadiqui, *Yasasatilaka and Indian Culture*, p. 60.
29. BTA, p. 406.
30. VR, p. 30 Cf. Song No. 71. of Umapati's *Parijataharananataka*.
31. R.C. Chakravarti, *Art of War in Ancient India*, p. 195.
32. *Rajaniti Ratnaakara*, p. 59.
33. Ibid., p. 60.
34. Ibid., p. 38.
35. Ibid., p. 38.
36. Ibid., p. 55.
37. Ibid., p. 29.
38. G. Roerich, *Biography of Dharmaswami*.
39. Ibid., p. 58.
40. *Mithilamahatmya*, pp. 70-75; Cf. R.K. Chaudhury, *Mithila as gleaned through Mithila Mahatmya*.
41. VR, pp. 66-67.
42. PP, (Pathak) p. 25, 31, 49, 50, 51, 95 and 211.
43. RR, p. 24.
44. Ibid., p. 25.
45. Ibid., p. 26.
46. Ibid., pp. 70-74.
47. U.N. Ghoshal, *Hindu Revenue System*, p. 292.
48. Cf. Jack Lindsay, *Byzantium in Europe*, pp. 453-54. Cf. R.S. Sharma.
49. *Saduktikarnamrita*, Verses 48-53, p. 309.
50. HOS XLIII p. 42, Subhasitaratna.
51. Cf. Visnupura, pp. 230-244.
52. Cf. K.P. Jayswal, *Mithila*, MSS Vol. I, Introduction, p. 8.
53. Cf. Thakur, TM., p. 278.
54. EI pp. 52-54.
55. Ibid., pp. 52-54.
56. Cf. R.K. Choudhury, *Select Inscriptions of Bihar*.
57. D.C. Sircar, op. cit.
58. Vachaspati Mishra, *Nyayakarita* p. 250.
59. D.C. Sircar, op. cit., Cf. PIHRC 1942. Cf. Risley, *People of India*, p. 215. Cf. N.N. Basu, *Social History of Kamarupa*.
60. Cf. R.K. Choudhury, *A Critical Evaluation of Nidhantapur Copper Plates*, PHIC, XXII p. 493. ff.
61. Cf. MDI, p. 64. MTV, pp. 136-43, MDJ, p. 148, N.N. Basu op.cit. II pp. 162-63. Hutton, *Caste in India*.

62. Indian Caste Customs, p. 54; Wilson, *Indian Caste* p. 206. Cf. Risley, *Castes and Tribes of Bengal.*
63. Cf. Ghatakrai, p. 17.
64. JASB, 1915, p. 432.
65. JBORS, II p. 121.
66. JASB, IV pp. 122-23.
67. *Marga*, Vol. III No.3 p. 25 ff.

□□

# ಉಪಸಂಹಾರ

ಪುಸ್ತಕಗಳು ಕೊನೆಗೊಂಡಾವು. ಆದರೆ, ಅವುಗಳಲ್ಲಿ ಅಂತರ್ಗತವಾಗಿರುವ ಸಮಸ್ಯೆಗಳ ಆಹ್ವಾನ ಕೊನೆಗೊಳ್ಳದು. ಶ್ರೀಮಂತ ಸಮಾಜೊ - ಸಾಂಸ್ಕೃತಿಕ ಬಳುವಳಿ ಹಾಗೂ ವಿಶೇಷ ಘಟನೆಗಳುಳ್ಳ ಇತಿಹಾಸ ಹೊಂದಿದ್ದ ಮಿಥಿಲೆಯು ವಿದ್ವಾಂಸರನ್ನು ಮತ್ತು ಇತಿಹಾಸಕಾರರನ್ನು ದಿಗ್ಭ್ರಮೆಗೊಳಿಸು ತ್ತಲೆ ಇದೆ. ಅದರ ಪುರಾತನ ಸಂಸ್ಕೃತಿಯು ಮುಸ್ಲಿಮ ಆಕ್ರಮಣ ಗಳಿಂದಾಗಿ ನಾಶವಾಗಲಿಲ್ಲ. ಮುಸ್ಲಿಮ ಆಳ್ವಿಕೆಯು ಹಿಂಸಿಸತೊಡಗಿತು, ದೇವಾಲಯಗಳನ್ನು ನೆಲಸಮ ಮಾಡಿತು ಮತ್ತು ಬ್ರಾಹ್ಮಣರನ್ನು ಮರಣಕ್ಕೆ ಗುರಿಪಡಿಸಿತು. ಆದರೆ, ಮುಸ್ಲಿಮರು ಹಿತಮಿತವಾಗಿ ಸಹನಶೀಲರಾಗಿದ್ದರು. ಮತ್ತು ಎಲ್ಲ ಕಾಲಕ್ಕೂ ಹಿಂದೂ ದೊರೆಗಳು ತಮ್ಮ ಮುಸ್ಲಿಮ ಪ್ರಭುಗಳಿಗೆ ಕಪ್ಪಗಳನ್ನು ಕೊಡುತ್ತ ದೇಶದ ಹೊರಪ್ರಾಂತಗಳಲ್ಲಿ ಆಳುತ್ತ ಸಾಗಿದರು. ಇಸ್ಲಾಮಿಗೆ ಮತಾಂತರಿಸುವುದು ವ್ಯಾಪಕವಾಗಿತ್ತು ಮತ್ತು ಕೆಲವು ಪ್ರದೇಶಗಳಲ್ಲಿ ಮುಸ್ಲಿಮ ಮತ ಸ್ವೀಕರಿಸುವಂತೆ ಹಿಂದೂಗಳನ್ನು ಬಲವಂತಪಡಿಸಲಾಗುತ್ತಿತ್ತು. ಪರಸ್ಪರ ಪ್ರಭಾವ ಅನಿವಾರ್ಯ ವಾಗಿತ್ತು. ಮಿಥಿಲೆಯ ಇತಿಹಾಸದ ಈ ಅಂಶವನ್ನು ವೈಜ್ಞಾನಿಕ

ವಾಗಿ ಇನ್ನೂ ಅಧ್ಯಯನಿಸಬೇಕು. ಮತ್ತು ವಿಶ್ಲೇಷಿಸಬೇಕಿದೆ. ವಿದ್ಯಾಪತಿ, ಚೈತನ್ಯ, ಕಬೀರ ಮತ್ತು ಗುರುನಾನಕರು ಮುಂದೆ ರಾಷ್ಟ್ರೀಯ ಮಟ್ಟದಲ್ಲಿ ಉಚ್ಛ್ರಾಯ ಹೊಂದಲು ಅನುಕೂಲವಾದ ಸೂಕ್ತ ಭೂಮಿಕೆಯನ್ನು ಸಿದ್ಧಪಡಿಸಲು ಈ ಸಂಪರ್ಕ ಬಹುಮಟ್ಟಿಗೆ ಕಾರಣವಾಗಿದ್ದುದಂತೂ ಖಚಿತವಿದೆ. ಪ್ರಾಚೀನ ಭಾರತೀಯ ಪರಂಪರೆ ಮತ್ತು ಸಂಸ್ಕೃತಿಯಲ್ಲಿ ನಿರುಪಕ್ತವಾದುದು ಬಹಳಷ್ಟು ನಾಶವಾಯಿತು. ಹಾಗೆ ನೋಡಿದರೆ, ಭಾರತದ ಮುಖವೆಲ್ಲ ತ್ವರಿತ ಬದಲಾವಣೆ ಹೊಂದುತ್ತಿರುವುದಾದರೂ ಮಿಥಿಲೆಯ ಸಾಂಸ್ಕೃತಿಕ ಪರಂಪರೆ ಮುಂದುವರಿದಿದ್ದು ಅದೆಂದಿಗೂ ಕಣ್ಮರೆಯಾಗದು. ಪ್ರಸಕ್ತ ಅಧ್ಯಯನವು ಕರ್ನಾಟರ ನಿಷ್ಪಕ್ಷ ಚಿತ್ರಣ ನೀಡುವ ಸೋಗು ಹಾಕುವುದಿಲ್ಲ. ಹೆಚ್ಚೆಂದರೆ, ಅದು ಆ ವಿಷಯ ಕುರಿತ ತುಲನಾತ್ಮಕವಾಗಿ ಅಧಿಕ ಒಳಹೊಕ್ಕು ನೋಡುವ ಮತ್ತು ವ್ಯಾಪಕವಾದ ಬರೆಹ. ಮಿಥಿಲೆಯು ಬೇರೆ ಬೇರೆ ಅಧ್ಯಯನಶಿಸ್ತುಗಳಿಗೆ ಸೇರಿದ ವಿದ್ವಾಂಸರ ಸೂಕ್ಷ್ಮದರ್ಶನಕ್ಕೊಳಪಟ್ಟಿರುವುದು ಸಂತೋಷಕರ ಸಂಗತಿ. ಬಹುಶಿಸ್ತೀಯ ವಿದ್ವತ್ತಿನ ಸಂಗಮವು ಮುಂಬರುವ ಕಾಲದಲ್ಲಿ ಸಮೃದ್ಧ ಫಲ ನೀಡಿಯೆ ತೀರುತ್ತದೆ. ಮಿಥಿಲೆಯ ಇತಿಹಾಸದ ಮಹತ್ವದ ಭಾಗದಿಂದ ಅಸ್ಪಷ್ಟತೆಯ ಜೇಡಬಲೆಯನ್ನು ಸರಿಸಲು ಆಶೆ ಚಿಗುರಿಸುವಂಥದು ಮತ್ತು ಶುಭ ಹೇಳುವಂಥದು ಬಹಳಷ್ಟಿದೆ. ಹೊಸ ಹಾದಿ ತುಳಿಯುವುದಕ್ಕೆ ಶ್ರೇಯಸ್ಸು ನೀಡಬಲ್ಲ ಗಟ್ಟಿ ಸಾಧನೆಯ ರೀತಿಯದು ದಾಖಲೆಗೊಂಡಿರುವುದು ಕಡಿಮೆ. ಆದರೆ, ಕೆಲವು ಇತ್ತೀಚಿನ ಯತ್ನಗಳನ್ನು ಹೆಸರಿಸಬಹುದು. ಇತ್ತೀಚಿಗೆ ರಾಜಕೀಯ ಶಾಸ್ತ್ರಜ್ಞರು ಚಾಂದೇಶ್ವರನನ್ನು ಚರ್ವಿತಚರ್ವಣ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ವಿದ್ಯಾಪತಿಯ ಗೀತೆಗಳನ್ನು ಅವು ಹೊರಸೂಸುವ ಸೌಂದರ್ಯಾತ್ಮಕ ಆನಂದಕ್ಕೆ ಮಾತ್ರವಲ್ಲದೆ ಇತಿಹಾಸವನ್ನು ಪುನಾರಚಿಸಲು ಸಮೃದ್ಧ ಆಕರಸಾಮಗ್ರಿಯಾಗಿ ಅವುಗಳ ಆಂತರಿಕ ಮೌಲ್ಯಕ್ಕಾಗಿಯೂ ವಿಶ್ಲೇಷಿಸಲಾಗುತ್ತಿದೆ. ಉಪೇಂದ್ರ ಠಾಕೂರರ ಪರಿಷ್ಕೃತ ಹಿಸ್ಟರಿ ಆಫ್ ಮಿಥಿಲಾ ಕರ್ನಾಟರನ್ನು ಹೆಚ್ಚು ವ್ಯಾಪಕವಾಗಿ ವಿವರಿಸಿದೆ. ಆದರೆ, ಅದು ಕಾಲಾನುಕ್ರಮಣಿಯ ಮೇಲೆ ಹೊಸ ಬೆಳಕು ಚೆಲ್ಲುವುದಿಲ್ಲ. ಕಾಲಾನುಕ್ರಮಣಿಯನ್ನು ಸ್ಥಾಪಿಸುವ ಸಮಸ್ಯೆ ಹೊಸದೇನೂ ಅಲ್ಲ. ಆದರೆ, ಅದು ಇಂದು ಕೆಲವು ಪಾಶ್ಚಿಮಾತ್ಯ ವಿದ್ವಾಂಸರು ಎತ್ತಿರುವ ಗಂಭೀರ ಅನುಮಾನಗಳ ಹಿನ್ನೆಲೆಯಲ್ಲಿ ಹೆಚ್ಚಿನ ಆಯಾಮವೊಂದನ್ನು ಪಡೆದುಕೊಂಡಿದೆ. ಈ ಪುಸ್ತಕ ರೂಪಿಸುವಾಗ ಕಾಲಾನುಕ್ರಮಣಿಯು ನನಗೆ ಕೇಂದ್ರಕಾಳಜಿಯ ವಿಷಯವಾಗಿತ್ತು ಮತ್ತು ನಾನು ಎಚ್ಚರಿಕೆಯಿಂದ ಹೆಜ್ಜೆಯಿಟ್ಟಿರುವೆ.

ಸಂಶೋಧನೆಯ ಈ ಫಲಪ್ರದ ಕ್ಷೇತ್ರದ ಕತ್ತಲಾವರಿಸಿರುವ ಮೂಲೆಗಳನ್ನು ಬೆಳಗಿಸುವ ಸಾಮರ್ಥ್ಯವನ್ನು ಸಂಶೋಧಕರು ಶೀಘ್ರವೆ ಹೊಂದುವರೆಂಬ ಆಶಾಭಾವನೆ ಇಟ್ಟುಕೊಳ್ಳುತ್ತಲೆ, ನನ್ನ ಪುಸ್ತಕ ಆ ದಿಶೆಯಲ್ಲಿ ಒಂದು ಪುಟ್ಟ ಹೆಜ್ಜೆಯೆಂದು ಸೌಜನ್ಯದಿಂದಲೆ ಭಾವಿಸುತ್ತೇನೆ. ಕ್ರಿ.ಶ. ೧೦೯೭ ರಿಂದ ೧೩೨೫ ರವರೆಗೆ ಊರ್ಜಿತಾವಸ್ಥೆಯಲ್ಲಿದ್ದ ರಾಜವಂಶದ ಸಮಗ್ರ ಇತಿಹಾಸ ಬರೆಯುವ, ಈ ಪ್ರದೇಶದಲ್ಲಿ ಮುಸ್ಲಿಮ ವಿಸ್ತರಣೆಯ ವಿವಿಧ ಗತಿಗಳನ್ನು

ಗುರುತಿಸುವ ಮತ್ತು ಆ ಕಾಲಘಟ್ಟದ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮಾಹಿತಿಯನ್ನು ಶೋಧಿಸುವ ವ್ಯವಸ್ಥಿತ ಪ್ರಯತ್ನ ಮಾಡಿರುವೆ. ಪ್ರಾಚೀನ ಮತ್ತು ಮಧ್ಯಯುಗೀನ ಕಾಲಗಳ ಮಂಜು ಮುಸುಕಿದ ಭೂಪ್ರದೇಶ ಮತ್ತು ಇವತ್ತಿನ ಅಧಿಕೃತತೆ ಮತ್ತು ಖಚಿತತೆಯ ಉಜ್ವಲ ಹಾದಿಯ ನಡುವೆ ನನ್ನ ಪ್ರಯತ್ನವು ಸೇತುವೆಯಾದರೆ ನನಗೆ ಫಲ ದೊರೆಯಿತೆಂದು ಭಾವಿಸುವೆ. ಏತನ್ಮಧ್ಯೆ, ಉಳಿದ ಗಂಟುಗಳನ್ನು ಬಿಡಿಸುವ ಸಂಕೀರ್ಣ ಮತ್ತು ಪ್ರತಿಫಲಕಾರಿ ಕೆಲಸಕ್ಕೆ ಇಂದಿನ ಮತ್ತು ನಾಳೆಯ ಇತಿಹಾಸಕಾರನು ಹೇಗೆ ತೊಡಗಿಸಿಕೊಂಡಾನೆಂದು ಕಾದುನೋಡೋಣ.

□□

# Select Bibliography


| | | |
|---|---|---|
| 1. | A.L.Basham | The Wonder that was India, London, 1953. |
| 2. | J. Allan | Catalogue of Indian Coins, london, 1914. |
| 3. | A.S.Altekar | Rastrakutas and their Times, Poona, 1934. |
| | | State Government in Ancient India, Banaras, 1949. |
| 5. | Aitareya Brahmana, Ed. | The Aufrecht, Bonn, 1879. |
| 6. | A.A. Macdonell & A.B. Keith | Vedic Index of Names and Subjects, Vol I & II, London, 1912. |
| 7. | A.B. Keith | A History of Sanskrit Literature, London, 1928. |
| 8. | Beni Prasad | The State in Ancient India, Allahabad, 1928. |
| 9. | B.K. Ghosh | Eng. Trans. of Jolly's Hindu Law and Custom, Calcutta, 1928. |
| 10. | C.V.Vaidva | History of Medieval Hindu India, Vol. I, Poona, 1921 |
| | | History of Medieval Hindu India, Vol. II, Poona, 1924 |
| | | History of Medieval Hindu India, Vol. III, Poona, 1926 |
| 13. | "Dinkar" | Sanskriti Ke Char Adhyaya, Delhi, 1956. |
| 14. | D.C.Sircar | Select Inscriptions, Calcutta, 1942. |
| 15. | D.C. Sen | History of Bengali Language and Literature, Calcutta, 1911. |

| | | |
|---|---|---|
| 16. | D.C. Ganguli | The History of the Paramaras of Malwa, Dacca, 1933. |
| 17. | D.S. Trivedi | Pre-Mauryan History of Bihar, Patna, 1956. |
| 18. | E.J. Rapson | Catalogue of Indian Coins, London, 1908. |
| 19. | E.C. Sachau | Alberuni's India, London, 1908. |
| 20. | Edward A. Pires | The Maukharies, Madras, 1934. |
| 21. | G. Roerich | Life of Dharmaswami, Patna, 1958. |
| 22. | Ganapati Shastri | Manjusrimulakalpa (ed.), Trivandrum, 1925. |
| 23. | Girindra Mohan Sarkar | Early History of Bengal, Calcutta, 1936. |
| 24. | G.T. Date | The Art of War in Ancient India, London, 1929. |
| 25. | H.H. Wilson | Visnu Purana, Calcutta, 1890. |
| 26. | Houlton | Bihar, The Heart of India, Calcutta, 1940. |
| 27. | H.N. Apte | Brahma Purana, Poona, 1895. |
| 28. | J. Vidyalankar | Bharatiya Itihasa Ki Ruprekha, Delhi, 1954. |
| 29. | J. Jolly | Hindu Law and Custom (tr.), Calcutta, 1928. |
| 30. | Jivanand Vidyasagar | Bana's *Harsacacarita*, Calcutta, 1882. |
| 31. | J. Eggeling | The Satapatha Brahmana, V Volumes, Oxford, 1882. |
| 32. | K. Mishra & B.B. Muzumdar | Vidyapati, Calcutta, 1940. |
| 33. | K.M. Ashraf | Life and Condition of the People of Hidustan, Delhi, 1958 |
| 34. | K.K. Basu | Tarikh-e-Ferozeshahi (tr.), Calcutta, 1943. |
| 35. | L.D. Barnett | Antiquities of India, London, 1913. |
| | | The Heart of India, London, 1908. |
| 37. | L. Renou | Religions of Ancient India, London, 1953. |
| 38. | Lewis | Karnata Sabdanusasana, Patna, 1960. |
| 39. | Monier Williams | Sanskrit-English Dictionary, London, 1908. |
| 40. | Mulla Taqia | Bayaz, (tr.), Patna, 1954. |
| 41. | Manusmriti | (Hindi Pustak Agency), Calcutta, 1928. |
| 42. | N.L. Dey | Geographical Dictionary of Ancient India, Calcutta, 1927. |
| 43. | Nerurkar | Vidyapati's *Prursapariksa*, Bombay, 1914.. |
| 44. | N.N. Basu | Social History of Kamarupa, Calcutta, 1936. |
| 45. | N.R. Ray | Bangalir Itihasa, Calcutta, 1944. |
| 46. | N.S. Bose | The Chandelas, Calcutta, 1966. |
| 47. | O'Malley | District Gazetteer of Darbhanga, Calcutta, 1908. |
| 48. | Prithwi Singh | Bihar Ka Aithihasika Digdarsana, patna, 1937. |
| 49. | P.C. Roy | Balmiki Ramayana, Calcutta, 1881. |
| | | Mahabharata, Calcutta, 1882 |

51. P.V. Kane — History of Dharmasastras, V Volumes, Poona, 1930.

52. R.S. Sharma — Indian Feudalism, Calcutta, 1965.

53. R.C. Muzumdar — The Gupta-Vakataka Age, Lahore, 1946.
History of Bengal, Vol. I, Dacca, 1943.
Ancient India, Banaras, 1952.
History and Culture of the Indian people, Vol. I & II, Bombay, 1951.

57. R.S. Tripathi — History of Kanauj, Banaras, 1937.

58. R.L. Mitra — Agni Purana, Calcutta, 1879.

59. Rama Niyogi — The Gahadawalas, Delhi, 1958.

60. R.G. Basak — History of North-Eastern India, Calcutta, 1929.

61. R. Shamasastry — Kautilya's *Arthasastra*, Mysore, 1929.

62. R.K. Choudhury — Mithila Ka Rajnitika Itihasa, Patna, 1960.
Mithila ka Sankritic Itihasa, Patna, 1961.
Mithila During the Age of Vidyapati, Banaras, 1974
A Short History of Muslim Rule in Tirhut, Banaras, 1969

66. R.K. Mukherjee — The Gupta Empire, Bombay, 1947.
Harsha, London, 1926.

68. S.N. Pradhan — Chronology in Ancient India, Calcutta, 1640.

69. Sivadutta — Naisadhiyacarita, Bombay, 1919.

70. S.N. Muzumdar — Cunningham's Ancient Geography, Calcutta, 1924.

71. Sister Nivedita (Margaret E. Noble) — Footfalls of Indian History, Calcutta, 1924.

72. U.N. Ghoshal — The Beginnings of Indian Historiography and other Essays, Calcutta, 1944
Contributions to the History of the Hindu Revenue System, Calcutta, 1929.
The Agrarian System in Ancient India, Calcutta, 1930.
History of Hindu Political Theories, Oxford, 1927.
History of Hindu Public Life, Calcutta, 1945.

77. U. Thakur — Studies in Jainism and Buddhism in Mithila, Delhi, 1970

78. V.R.R. Dikshitar — War in Ancient India, Madras, 1948.

79. Wolsley Haige — Cambridge History of India (Ed.), Cambridge, 1928.

80. Yogendra Mishra — Homage to Vaisali, Patna, 1954.
The Lichhavis of Vaisali and Videha, Patna, 1962.

## Commemoration Volumes

1. Ojha Commemoration Volume.
2. Ganganath Jha Commemoration Volume.
3. Bhandarkar Commemoration Volume.
4. B.C. Law Commemoration Volume.
5. Shree Krishna Abhinandan Grantha.
6. R.K. Mukherjee Commemoration Volume, *Bharat Kaumudi*.

□□

# Select Articles

1. Some Inscriptions from Bihar, D.C. Sircar, JBRS - 1951.
2. Madanpala and Govindapala, R.C. Mazumdar, JASB (L).
3. Sanskrit Inscriptions from Bihar, J.R. Ballantrye, JRASB.
4. Account of a Visit to the ruins of Simaraon, once the Capital of Mithila, B.H. Hodgson, JRASB-JL.
5. Place of Videha in Ancient Medieval India, G.N. Sinha, JDI.
6. Wang-Hiuan-Tso's Indian Campaign, R.C. Muzumdar, JASB (L).
7. Dating in Laksamanasena Era, K.P. Jayaswal, JBORS.
8. The Laksamanasena Era, R.K. Choudhury, I.H.C. 1963.
9. An important date in the Chronology of the Palas, D.C. Sircar, JASB (L).
10. King Nanyadeva of Mithila, R.C. Muzumdar, IHQ.
11. Janibigha Inscription, K.P. Jayaswal, JBORS.
12. Janibigha Inscription, H. Pandey, JBORS.
13. Panchobh Copperplate of Sangramagupta, J.N. Sarkar & A. Thakur, JBOCS.
14. Maner Copperplate of Govidachandra, R. Sharma, JBORS.
15. Nepal, Tirhut and Tibet, V.A. Smith, JBGRS.
16. Eastern Expansion of Gurjara Domination, A. Banerjee, PIHC.
17. Nagbhatta's Operation against Dharmapala, B.C. Sen, PIHC.
18. Bilingual Seals from Vaisali, Sankaranand, PIHC.
19. Early History of Bengal, G.M. Sarkar, JDL.
20. Laksmanasena Era, A.T. Commemoration - Vol. VI.
21. Early History of Mithila, R.K. Chaudhary, JBRS.
22. Political History of Mithila (C.7th Century to 11th Century. Ed.), R.K. Choudhury, PIHC.
23. Some Aspects of Socio-Economic History of North-Eastern India on the basis of epigraphical evidences, R.K. Choudhury, Spark. 1952.
24. The Karnatas of Mithila, R.K. Choudhury, AIOC 1953.

25. Nanyadeva & his Contemaporaries, R.K. Charudhury, G.D. College Bulletin.
26. Lakhisarai Inscription, R.K. Charudhury, G.D. College Bulletin.
27. Naulagarha Inscription, R.K. Charudhury, G.D. College Bulletin.
28. Naulagarha Inscription, R.K. Charudhury, G.D. College Bulletin.
29. Some Aspects of Literary Colophons and their bearing on the history of chronology of Mithila (C. 1097-1324 A.D.), R.K. Charudhury, JBH.
30. Contributions to the history of Mithila, K.P. Jayaswal JBORS.
31. Terracotta plate of Vigrahapala, A Banerjee Sastri, JBORS.
32. Pala Chronology, R.D. Banerjee, JBORS.
33. New facts of the reign of Vigrahapala, D.C. Sircar, JUG.
34. Bangaon Copperplate of Vigrahapala III, D.C. Sircar.
35. Jaynagar Inscription of Palapala, D.C. Sircar, JASB.
36. New facts about the Senas, D.C.Sircar, IHQ.
37. Kanauj after Harsa's death, S. Chattopadhyaya, IHQ.
38. Bihar and Nepal, R.K. Choudhury, G.D. College Bulletin.
39. An 15th Century Sufi Saint of North Bihar, S.H. Askari, JBRS.
40. The Malfuzar and Maktubar of a 14th Centruy Saint in Bihar, S.h. Askari, JBRS.
41. Kandaha Inscriptions of Mithila k.P. Jayaswal, JBORs.
42. The House of Tughluqs, K.K. basu, JASb (NS).
43. The Social life and institutions with special reference to the Hindus in the days of Muhammed Tughlaq, Mahdi Hussain, PIHC.
44. Original Sources of Later Bengal History, J.N. Sarkar, JASB (L).
45. Varnana Ratnakara, L. Jha, JBORS.
46. A unrewarded Mohammadan invasion of Nepal, K.P. Jayaswal, JBORS.
47. The Deed of Umapati, G.A. Grierson, JBORS.
48. Hindu Concept of Dharma in the 14th Century, B. Bhattacharya, IC.
49. The Oinwaras of Mithila, R.K. Chaudhary, JBORS.
50. Contributions to the History of Smritis in Bengal and Mithila, M. Chakravarty, JASB.
51. Mithila in the Pre-Moghul Period, M. Chakravarty, JASB.
52. Historical Significance of Islamic Mysticism in Medieval Bihar, S.H. Askari, Historical Misc. Patna.
53. Bihar's Old Industries, J.N. Sarkar, Historical Mis, Patna.
54. Date of Bukhtiyar's Raid on Nadia, A.H. Dani, IHQ.
55. Bihar During Turko-Afghan Period, S.A. Askari, Current Studies, Patna.
56. Traces of Slavery in Medieval Mithila, R.K.Chaudhury, Spark, 1955.
57. Some Aspects of Slavery in Medieval, Mithila, C.P.N. Sinha, PIHC.

□□